“ಬ್ರಹ್ಮಸ್ವರೂಪ ಧಾರಣಮಾಡಿದಂಥ ಸಾಧುಗಳಿಗೆ ಕನ್ಯೆಯನ್ನು ಉಚಿತವಾಗಿ ಕೊಡುವಾಗ ಆತನ ಕುಲಶೀಲವನ್ನು ಯಾವ ರೀತಿಯಿಂದಲೂ ನೋಡತಕ್ಕದ್ದಲ್ಲ. ಗೋಸಾವಿಯು ಕನ್ಯಾದಲ್ಲಿ ರಮಣನಾಗಿ ಮಕ್ಕಳನ್ನು ಹೆತ್ತರೂ, ಆತನು ಇಂದ್ರಿಯನಿಗ್ರಹಮಾಡುವಂಥವನೂ, ಪಂಚೇಂದ್ರಿಯಗಳನ್ನು ಜಯಿಸಿದಂಥವನೂ ಎಂದೇ ತಿಳಿಯತಕ್ಕದ್ದು. ಅನ್ಯಥಾ ಕಲ್ಪನೆಯನ್ನು ಮಾಡತಕ್ಕದ್ದೇ ಅಲ್ಲ. ಅಗ್ನಿಸಾಕ್ಷಿಯಾದರೂ, ಮದಿಗೆಯು ಸಾಧುವಿನ ಹೆಂಡತಿ ಎಂದು ತಿಳಿಯತಕ್ಕದ್ದಲ್ಲ. ಏಕೆಂದರೆ- ಮದಿವೆಯಾಗಿ ಫಲಶೋಭನವಾದರೂ, ಆಕೆಯು ಪವಿತ್ರ ದೇಹಧಾರಿಯಾದ, ಎಜ್ಜಮಾಡದ ಮೀಸಲಾದ ಕುಮಾರಿ ಎಂದೇ ಭಾವಿಸಬೇಕು. ಮಕ್ಕಳಾದರೂ ಅವಳು ಸಂಭೋಗ ಸಂಬಂಧವಿಲ್ಲದ ಕುಮಾರಿಯೇ? ಸಾಧುವಿನ ಸಹವಾಸದಿಂದ ಇವಳ ಆತ್ಮಶುದ್ಧಿಯಾಗಿ, ಬಿದ್ದ ಬೀಜದ, ಮಾಸದ ಮೀಸಲು ಮುರಿಯದ ಸ್ತ್ರೀಯೋ ಆಗುವಳು?

೨೦ ನೇ ಶತಮಾನದ ಸುಧಾರಣೆಯಲ್ಲಿ ಮೇಲಿನ ಭಾಗಗಳಂತೆ ನಡೆಯುವಂಥ ಮೂರ್ಖ ಮನುಜರು ಹುಟ್ಟುವದು ಲೋಕಾದ್ಭುತವಾದ ಚಮತ್ಕಾರವೇ ಸರಿ. ಕರ್ನಾಟಕದಲ್ಲಿ ಇಂಥ ಹುಚ್ಚ ಪೀರರಿರುವದಿಲ್ಲೆಂಬುದು ಸಂತೋಷದ ಸಂಗತಿಯು.

ಮುಂಬಯಿ ವಾಲೇಸ ಕಂಪನಿಯಲ್ಲಿ ಮ್ಯಾನೇಜರರಾಗಿದ್ದ ಡಾಕ್ಟರ ಮುರೇಸಾಹೇಬರು ಹಿಂದೂ ಆಗಿ ಅಮರನಾಥ ಆರ್ಯನೆಂಬ ಹೆಸರಿಟ್ಟುಕೊಂಡಿದ್ದಾರಷ್ಟೇ; ಇವರು ಸ್ವದೇಶಿ ಉದ್ಯೋಗಗಳ ಅಭಿವೃದ್ಧಿಗಾಗಿ ಮುಂಬಯಿಯಲ್ಲಿ ಹತ್ತು ಲಕ್ಷ ಬಂಡವಲದ ಒಂ[illegible]ಕಂಪನಿ ತೆಗೆದಿದ್ದಾರೆ.

ಹಿಂದೂ ವಿಧವೆಯರಿಗೆ ದತ್ತಕ ಸಂಬಂಧವಾಗಿ ವಿಶೇಷ ಹಕ್ಕುಗಳನ್ನು ಕೊಡಬೇಕೆಂದು ನ್ಯಾಯಮಂತ್ರಿ ಜಾಧವರಾಯರು ತಮಗೆ ಬಹುಮತದ ವಿರೋಧವಿದ್ದದ್ದನ್ನು ಕಂಡು ಬಿಲ್ಲನ್ನು ಹಿಂದಕ್ಕೆ ತೆಗೆದುಕೊಂಡರು.

೨೫೦೦ ಜನರ ಸತ್ಯಾಗ್ರಹ ಮತ್ತು ಕಾಯದೆಭಂಗ.

—(೦)—

ದೊಡ್ಡ ದೊಡ್ಡ ಜನರ ದಸ್ತಗಿರಿಯು.

—೦—

ಸೌಥ ಇಂಡಿಯನ್ನ ರೇಲ್ವೆಯು ಸಂಪಿನ ದೆಸೆಯಿಂದ ಎರಡು ತಿಂಗಳ ತನಕ ಸಭೆಗಳನ್ನು ಕೂಡಿಸಬಾರದೆಂದು ದೊಡ್ಡ ದೊಡ್ಡ ಜಂಕ್ಶನ ಸ್ಟೇಶನಗಳಲ್ಲಿ ಸಭಾಬಂದಿಯ ಹುಕುಮನ್ನು ಪ್ರಸಿದ್ಧ ಮಾಡಿದರು. ಈರೋಡದ ನಾಗರಿಕರಿಗೆ ಈ ಬೇಬಂದ ಶಾಹಿಯ ಕಾಯದೆಯು ಸಮ್ಮತವಾಗಲಿಲ್ಲ. ಅವರು ಸತ್ಯಾಗ್ರಹ ಮತ್ತು ಕಾಯದೆಭಂಗ ಮಾಡುವದನ್ನು ನಿಶ್ಚಯಿಸಿ, ಆ ಪ್ರಕಾರ ಕಾಯದೆಯ ವಿರುದ್ಧ ಸಭೆ ಮಾಡಿದರು. ೨೫೦೦ ಜನರು ಸಭೆಯಲ್ಲಿ ಕೂಡಿದ್ದರು. ಅಪರಾತ್ರಿಯ ತನಕ ಸಭೆಯ ಕೆಲಸ ನಡೆಯಿತು. ಸಭೆ ಮುಗಿಯುವಾಗ ಪೋಲೀಸರು ಪ್ರಮುಖರಾದ ಶ್ರೀ. ಕನ್ನಪ್ಪರ, ಈಶ್ವರನ, ಮುತ್ತುಕೃಷ್ಣ, ನರಿಯಪ್ಪ ಈ ನಾಲ್ವರನ್ನು ದಸ್ತಗಿರ ಮಾಡಿದರು. ಸಭಾಧ್ಯಕ್ಷರಾದ ಶ್ರೀರಾಮಸ್ವಾಮಿ ನಾಯಕರನ್ನು ಏಕೆ ಹಿಡಿಯಲಿಲ್ಲವೊ ತಿಳಿಯದು.

ಗಜಾನನ ಮಹಾರಾಜನು ಬಿದ್ದು ಗೆದ್ದನು.

—(೦)—

ವಿಘ್ನನಾಶಕನೇ ಪಾರು.

—೦—

ಬೆಂಗಳೂರಿನ ಅಧಿಕಾರಿಗಳು ಶ್ರೀ. ಗಜಾನನ ಮಹಾರಾಜನಿಗೆ ಆತನ ಸ್ಥಳ ಕೊಟ್ಟು, ವಿದ್ಯಾರ್ಥಿಗಳ ಸಂಪು ಪೂರ್ಣವಾಗುವಂತೆ ಮಾಡಿದರು. ಆದರೆ ಅದು ಬೇಗನೆ ಮುರಿಯುವಂತಿಲ್ಲ. ಏಕೆಂದರೆ- ಇವರಲ್ಲಿ ಪ್ರಮುಖರಾದ ಸುಬ್ರಮ್ಮಣ್ಯ, ಭೀಮರಾವ ಮತ್ತು ತಿವಾರಿಯವರನ್ನು ಬಂಧಮುಕ್ತ ಮಾಡಿಲ್ಲ. ಇವರನ್ನು ಬಂಧಮುಕ್ತ ಮಾಡಬೇಕೆಂದು ಎಲ್ಲ ಶಾಲೆಗಳ ವಿದ್ಯಾರ್ಥಿಗಳು ಸತ್ಯಾಗ್ರಹ ಮಾಡಿ, ಶಾಲೆಗಳಿಗೆ ತರಣು ತೊಡೆದಿದ್ದಾರೆ. ವಿದ್ಯಾರ್ಥಿಗಳಿಗೆ ಸಹಾನುಭೂತಿಯುಳ್ಳವರಾಗಿ ಗಿರಣಿಗಳ ಕೂಲಿಕಾರರೂ ಹರತಾಳ ಮಾಡುವ ವಿಚಾರ ನಡೆಸಿದ್ದಾರೆ. ದಸ್ತಗಿರ ಮಾಡಲ್ಪಟ್ಟಂಥ ಮೇಲೆ ಹೇಳಿದ ಜನರ ಕೇಸುಗಳನ್ನು ಶ್ರೀ ಶಂಕರನಾರಾಯಣರಾವ ಡಿ. ಶಾಮರಾವ ಬೇಲೂರ ಶ್ರೀನಿವಾಸ ಅಯ್ಯಂಗಾರರು ಸ್ವೀಕರಿಸಿದ್ದಾರೆ.

ನಂಸೋಲಿಬನವಾಡಿಯ ಪ್ರಕರಣದಲ್ಲಿ ಪೋಲೀಸ ಸಬ್ಬಿನಸ್ಪೇಕ್ಟರನ ಸಾಕ್ಷಿಯಾಯಿತು. ಎಕ್ಸರೇಜಗಳಿಂದ ಒಬ್ಬನಿಗಾದ ಘಾಯದ ಪರೀಕ್ಷೆಯನ್ನು ಅಧಿಕಾರಿಗಳು ಮಾಡಿಸಿದ್ದಾರೆ.

ಬೆಂಗಳೂರಲ್ಲಿ ಗೋಳಿಬಾರು.

ವಿದ್ಯಾರ್ಥಿಗಳಿಗೂ ಪೋಲಿಸರಿಗೂ ಕಲ್ಲು ದೊಣ್ಣೆಯ ಕಾಳಗ.

—೦—

(ತಾರಿನ ವರ್ತಮಾನ)

ದಸ್ತಗಿರ ಮಾಡಿದಂಥ ತಮ್ಮ ನಾಲ್ವರು ಮುಖಂಡರನ್ನು ಬಂಧಮುಕ್ತ ಮಾಡಬೇಕೆಂದು ವಿದ್ಯಾರ್ಥಿಗಳು ಮಿ. ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟನನ್ನು ಕಾಣಲಿಕ್ಕೆ ಹೋದರು. ಅವರು ಬಂಧಮುಕ್ತ ಮಾಡುವದಿಲ್ಲೆಂದು ಹೇಳಿದ ಬಳಿಕ, ವಿದ್ಯಾರ್ಥಿಗಳು ದಂಗೆಗೆ ಪ್ರವೃತ್ತರಾದರು. ಊರ ತುಂಬ ಗೊಂದಲವೆದ್ದಿತು. ಪೋಲಿಸರು ತಂಡತಂಡವಾಗಿ ಬಂದೋಬಸ್ತಿಗೆ ಬಂದರು. ಉಭಯತರಿಗೂ ಕಲ್ಲು ದೊಣ್ಣೆಗಳ ಕಾಳಗವೆಸಗಿತು. ಎರಡು ಪಕ್ಷದ ಆನೇಕರು ಪೆಟ್ಟು ತಿಂದರು. ವಿದ್ಯಾರ್ಥಿಗಳ ಪುಂಡಾಟಿಕೆ, ಉದಾಟಿಕೆಯು ಆಟೋಪ ಮೀರಲು ಪೋಲಿಸರು ಗುಂಡು ಹಾರಿಸಿದರು. ಸುದೈವದಿಂದ ಯಾರೂ ಸಾಯಲಿಲ್ಲ. ಪೋಲೀಸರ ಸಹಾಯಕ್ಕಾಗಿ ದಂಡು ಬಂತು. ಪೇಟೆಯು ಎಲ್ಲ ವ್ಯಾಪಾರ ಬಂದಾಯಿತು. ದಂಡು ಮತ್ತು ಪಟ್ಟಣದ ರಹದಾರಿಯು ಕಟ್ಟಾಯಿತು.

ಬಾರಡೋಲಿಯ ಒಪ್ಪಂದ.

—(೦)—

ದಿನಕ್ಕೆ ಪರಾರು ಮಾತು.

—(೦)—

ಬಾರಡೋಲಿಯ ಒಪ್ಪಂದ ಮುರಿಯಿತೆಂದು ಮೊನ್ನಿನ ಸುದ್ದಿಯಿತ್ತು. ನಿನ್ನಿನ ದಿವಸ ಗುಜರಾಥದ ಕೆಲ ಮೆಂಬರರು ಸರದಾರ ಪಟೇಲರನ್ನು ಕಾಣಲಿಕ್ಕೆ ಹೋಗಿದ್ದು, ಅವರು ಖಂಡಿತವಾಗಿ ಒಪ್ಪಂದ ಮಾಡಿಸುವರೆಂದು ನಿನ್ನೆ ಬಂದ ವರ್ತಮಾನವಾಗಿದೆ.

ಖಾದಿಗೆ ಕಡೆಯ ನಂಬರು-

ಹಿಂದುಸ್ಥಾನದಲ್ಲಿ ಹುಟ್ಟುವ ಮತ್ತು ಪರದೇಶದಿಂದ ಬರುವ ಬಟ್ಟೆಯ ಅಂಕೆಗಳನ್ನು ನೋಡಿದಾಗ, ಖಾದಿಯ ನಂಬರ ತೀರ ಕನಿಷ್ಠವಾಗಿರುತ್ತದೆಂದು ಸಹಜವಾಗಿ ಕಂಡು ಬರುತ್ತದೆ. ಅದು ಹೇಗೆಂದರೆ-

ವಿಲಾಯತಿಯಿಂದ ಬರುವ ಬಟ್ಟೆ-	೧೮೨ ಕೋಟಿ
ಹಿಂದುಸ್ಥಾನದ ಗಿರಣಿಗಳಲ್ಲಾಗುವ ಬಟ್ಟೆ-	೨೩೬ ,,
ಗಿರಣಿಯ ನೂಲಿನ ಮೇಲಾಗುವ ಬಟ್ಟೆ-	೧೩೧ ,,
ಖಾದಿ-	೧ ,,

ಒಂದೇ ಕೋಟಿಯ ಖಾದಿಯು ಹೊರಡುತ್ತದೆಂಬದನ್ನು ನೋಡುವರೆ- ಖಾದಿಯ ಭಕ್ತರು, ಹಿಂದು

ಒಕ್ಕಲಿಗರೂ ಒಕ್ಕಲತನವೂ

ನಮ್ಮ ಮಾಸ ಪತ್ರಿಕೆಯು ಈಗ ಸುಮಾರು ೧೭ ವರ್ಷಗಳ ದೇಶಾಭಿಮಾನಿಗಳ ಸೇವೆಯನ್ನು ಮಾಡಿ ಮತ್ತು ಜನರ ಆದರಕ್ಕೆ ಪಾತ್ರವಾಗಿರುವದು. ಇತ್ತೀಚೆಗೆ ಒಕ್ಕಲತನದ ಬೆಳೆಗಳ ಸಮ್ಮಂಧಗಳಿಂದೊಡಗೂಡಿದ ವಿಷಯಗಳೂ ಅಂದವಾದ ಮುದ್ರಣವೂ ಇರುವದರಿಂದ ವಾಚಕರ ಮನಸ್ಸನ್ನು ತನ್ನ ಕಡೆಗೆ ಎಳೆಯುವದೆಂದೂ ಬಿಡದು. ಕೃಷಿಕರ್ಮವೇ ಶ್ರೇಷ್ಠವಾದದ್ದೆಂದು ಸರ್ವ ಸಮ್ಮತವಿರುವದರಿಂದ ಈ ವಿಷಯಕ್ಕೆ ಅನಾದರವನ್ನು ತೋರಿಸದೆ, ಇಂಥ ಮಾಸಪತ್ರಿಕೆಗಳನ್ನು ಆದರಿಸಬೇಕೆಂದು ನಮ್ಮ ಆಗ್ರಹಪೂರ್ವಕ ವಿನಂತಿ. ವಾರ್ಷಿಕ ವರ್ಗಣಿ ಅಂಚೆ ವೆಚ್ಚ ಸೇರಿ ೨-೨-೦

ಸಂಪಾದಕ

ಒಕ್ಕಲಿಗರೂ ಒಕ್ಕಲತನವೂ

ಧಾರವಾಡ

ವಿ. ಎಮ್. ಶ್ರಿ. ಸಾಠೆಯವರ

ನ್ಯೂ ಅಂಡ ಸೆಕಂಡ ಹ್ಯಾಂಡ

ಬುಕ್ಕಡಿಪೋ

—೦—

ನಾವು ಹಳೇ ಪುಸ್ತಕಗಳನ್ನು ಯೋಗ್ಯದರದಿಂದ ಖರೀದಿಗೆ ತಕ್ಕೊಳ್ಳುತ್ತೇವೆ. ಮತ್ತು ಮಾರಲಿಕ್ಕೆ ಕೊಡುತ್ತೇವೆ. ನಮ್ಮ ಪುಸ್ತಕಾಲಯದಲ್ಲಿ ಶಾಲೆ ಕಾಲೇಜುಗಳಿಗೆ ಬೇಕಾಗುವ ಕ್ರಮಿಕ ಪುಸ್ತಕಗಳೂ ಬೇರೆ ಪುಸ್ತಕಗಳೂ ದೊರೆಯುತ್ತವೆ. ಪರಸ್ಥಳದವರಿಗೆ ವ್ಹಿ. ಪಿ. ಯಿಂದಲೂ ಕಳಿಸುವೆವು. ಕೊಳ್ಳುವವರಿಗೆ ಯೋಗ್ಯ ಕಮೀಶನ ದೊರೆಯುವದು.

ಪ್ರೊಪ್ರಾಯಟರ,

ಎಮ್. ವಿ. ಸಾಠೆ.

ಗಾಂಧಿ ಚೌಕ, ಧಾರವಾಡ.

ಚಂದಾದಾರರಿಗೆ ಸೂಚನೆ

—೦—

ಆಗಸ್ಟ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗುವ ನಿಮಿತ್ತ ಮತ್ತು ವಾರ ಪತ್ರದ ಚಂದಾದಾರರ ಹೆಸರಿನಿಂದ ವ್ಹಿ. ಪಿ. ಯನ್ನು ಕಳಿಸುವೆವು. ಚಂದಾದಾರರು ವ್ಹಿ. ಪಿ. ಸ್ವೀಕಾರ ಮಾಡಿ ವಿಜಯವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಯು.

ಮ್ಯಾನೇಜರ ವಿಜಯ ಧಾರವಾಡ

—॥ ಶ್ರೀ ಗುರು ಪ್ರಸನ್ನ ॥—

ಪ್ರತಿಯೊಬ್ಬ ಕುಟುಂಬಿಕನು ಅವಶ್ಯ ಸಂಗ್ರಹದಲ್ಲಿಡತಕ್ಕ ಒಂದೇ ಔಷಧ.

ಭಾಸ್ಕರ ಚೂರ್ಣ

ಸುಪ್ರಸಿದ್ಧ ವನಸ್ಪತಿ ಶಾಸ್ತ್ರಜ್ಞರ ಸೂಚನೆಯ ಮೇರೆಗೆ ಈ ಚೂರ್ಣವು ತಯಾರಿಸಲ್ಪಟ್ಟದ್ದು ಇದರ ಸೇವನೆಯಿಂದ ನಾಲ್ಕು ತರದ ಕ್ಷಯರೋಗಗಳು ತ್ವರಿತದಲ್ಲಿಯೇ ನಾಶವಾಗುವವು. ಅಜೀರ್ಣ, ಅಪಚನ, ಅತಿಸಾರ, ಅಗ್ನಿಮಾಂದ್ಯ, ಸಾಂಗ್ರಹಣಿ, ಹೊಟ್ಟೆಶೂಲ, ಹೊಟ್ಟೆಯುಬ್ಬು ಮುಂತಾದ ಯಾವತ್ತೂ ತರದ ಹೊಟ್ಟೆವಿಕಾರಗಳ ಮೇಲೆ ಇದೊಂದೇ ರಾಮಬಾಣ ಔಷಧವಿರುವದು. ಒಂದು ಚಿಮಟಿಗಿಯಷ್ಟು ಈ ಚೂರ್ಣವನ್ನು ಬಾಯೊಳಗೆ ಹಾಕಿಕೊಂಡರೆ ನಾಲ್ಕು ನಿಮಿಷಗಳಲ್ಲಿಯೇ ಹಸಿವೆಯಾಗುವದು. ಬೇನೆಯಿಂದ ಗುಣವಾಗಿದ್ದ ಅಶಕ್ತ ಮನುಷ್ಯರು ಎರಡನೇ ಸಾರೆ ವೈದ್ಯರ ಔಷಧ ತೆಗೆದುಕೊಳ್ಳುವ ಕಾರಣವೇ ಇಲ್ಲ. ಹಳ್ಳಿಗಳಲ್ಲಿಯ ಜನರು ಒಂದು ಭಾಸ್ಕರ ಚೂರ್ಣದ ಡಬ್ಬಿಯನ್ನು ತಮ್ಮ ಹತ್ತರ ಇಟ್ಟುಕೊಂಡರೆ ನಾಲ್ಕು ಯಾವತ್ತೂ ಬೇನೆಗಳಿಗೆ ಉಪಯೋಗವಾಗುವದು. ಎಷ್ಟು ದಿವಸದ ಅಸಮಾಧಾನವಿದ್ದರೂ ಮೂರೇ ದಿವಸಗಳಲ್ಲಿ ಗುಣವಾಗುವದು. ಕೇವಲ ವನಸ್ಪತಿಯಿಂದಲೇ ತಯಾರಿಸಿದ್ದ ಈ ಸಿದ್ಧೌಷಧವನ್ನು ಪ್ರತಿಯೊಬ್ಬನೂ ಅವಶ್ಯ ಸಂಗ್ರಹದಲ್ಲಿಡತಕ್ಕದ್ದು. ಒಂದು ಡಬ್ಬಿಯ ಕಿಮ್ಮತ್ತು ೧೦ ಆ. ಬೇಕಾದವರು ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು. ಪೋಸ್ಟೇಜ ಬೇರೆ ನ್ಯಾ. ಪಾ. ೧೮ಕ.

ಏಜಂಟರು— ಬಿ. ಬಿ. ಟಿಕಾರೆ ಆ್ಯಂಡ ಸನ್ಸ, ಮಾರ್ಕೆಟರೋಡ ಧಾರವಾಡ.

ಜಾಹೀರಾತು.

ಆದಮುಗನಿ ನೂರ ಮುಹಮುದ ಕಾಜೀವಾಡಿ. ಮಾರ್ಕೆಟ, ಧಾರವಾಡ.

ಏಜಂಟ, ಬರ್ಮರ ಮೂಂಡ ಆ್ಯಂಡ ಕಂಪನಿ.

ನಮ್ಮ ಆಫೀಸಿನಿಂದಾ ಆದಮ್ಮಗನಿ ನೂರ ಮಹಮ್ಮದ ಕಾಜೀವಾಡಿ. ಏಜಂಟ, ಧಾರವಾಡ ಇವರಿಗೆ ಕೆಳಗೆ ವರ್ಣಿಸಿದ ಮಾಲು ತಮಗೆ ಬೇಕಾದ ಮಾಲಿಗೆ ಆರ್ಡರ ಕೊಡಬೇಕು.

೧ ವಾಶಿಂಗ ಸೋಡಾ.
೨ ತಿನ್ನುವ ಸೋಡಾ.
೩ ಸಾಬಕಾರದ ಕೆಲಸಕ್ಕೆ ಉಪಯೋಗಿಸುವ ಸೋಡಾ.
೪ ಸಾಲ್ಟಕ್ರ ಅಂದರೆ ನವಸಾಗರ.
೫ ಎಲ್ಲಾ ತರದ ಬಣ್ಣಗಳು.
೬ ಸಲ್ಫೇಟ ಅಮೋನಿಯಾ ಅಂದರೆ ಹೊಲಕ್ಕೆ ಹಾಕುವ ಗೊಬ್ಬರ.

ಈ ಗೊಬ್ಬರವನ್ನು ಹೊಲಗಳಲ್ಲಿ ಹಾಗೂ ತೋಟಗಳಲ್ಲಿ ಸಣ್ಣ ಗಿಡಾ ಹಚ್ಚುವ ಕಾಲಕ್ಕೆ ಹಾಕಿದರೆ ಬಹಳ ಉಪಯೋಗವಾಗುತ್ತದೆ. ಮತ್ತು ಜಮೀನುಗಳು ಬಹಳ ದಪ್ಪವು ಆಗುತ್ತವೆ ಮತ್ತು ಸದರ ಗೊಬ್ಬರದಿಂದ ಯಾವ ಪದಾರ್ಥಗಳಿಗೂ ಹುಳಾ ಹತ್ತುವದಿಲ್ಲ. ಪೀಕ ನಾಶ ಆಗುವದಿಲ್ಲ. ಇದರಿಂದ ಪೀಕ ಹೆಚ್ಚಾಗುತ್ತದೆ. ಈ ಗೊಬ್ಬರವು ಫಕ್ತ ರೈತ ಜನರ ಉಪಯೋಗಕ್ಕಾಗಿ ಮುದ್ದಾಮ ಶ್ರಮಪಟ್ಟು ತಯಾರಿಸುತ್ತೇವೆ. ಒಮ್ಮೆ ಒಯ್ದು ಹೊಲದಲ್ಲಿ ಹಾಕಿಸಿ ಅನುಭವ ತಕ್ಕೊಳ್ಳಬೇಕು. ಯಾವತ್ತೂ ಜನರಿಗೆ ಮೇಲೆ ಕಾಣಿಸಿದ ಮಾಲುಗಳನ್ನು ಬೇಕಾದ ಮಾಲಿಗೆ ಆರ್ಡರ ಕೊಟ್ಟು ತರಿಸಿಕೊಳ್ಳಬೇಕು. ಹಾಗೂ ಸಮಕ್ಷಮ ಧಾರವಾಡ ಮಾರ್ಕೆಟನಲ್ಲಿ ಏಜಂಟ, ಆದಮ್ಮಗನಿ ನೂರ ಅಹಮದಶೇಟ ಇವರ ಅಂಗಡಿಯಲ್ಲಿ ತಿಳಕೊಳ್ಳಬೇಕು.

ಕೆ. ಟಿ. ಕಾಂಗೋ ಚಹವು ಬಹು ಉತ್ತಮವಿದೆ, ಎಲ್ಲಕ್ಕೂ ಮಿಗಿಲಾದದ್ದು. ಎಲ್ಲರೂ ಇದನ್ನೇ ಉಪಯೋಗಿಸುವರು. ತಮಗೂ ಅನುಭವ ಆದೆ. ಧಾರವಾಡ ಊರಿಗೆ ಏಜನ್ಸಿಯು ನಮ್ಮ ಕಡೆಗೆ ಇರುವದಲ್ಲದೆ ಮೇಲೆ ಕಾಣಿಸಿದ ಸಾಮಾನುಗಳ ಏಜನ್ಸಿಯೂ ನಮ್ಮ ಕಡೆಗೆ ಇರುತ್ತದೆ. ದರಬಂದು ಮಾಲು ಕಂಪನಿಯ ರೇಟಿನಂತೆ ಕೊಡುತ್ತೇವೆ. ಹೆಚ್ಚಿಗೆ ಮಾಹಿತಿಯು ಬೇಕಾದರೆ ಪತ್ರದ್ವಾರಾ ಇಲ್ಲವೆ ಸಮಕ್ಷಮ ಬಂದು ತಿಳಕೊಳ್ಳಬೇಕು.

ಆದಮುಗನಿ ನೂರ ಮಹಮುದ ಕಾಜೀವಾಡಿ.

ಏಜಂಟ, ಮಾರ್ಕೆಟ ಧಾರವಾಡ

ಜಾಹೀರಾತಿನ ದರಗಳು.

ತಿಂಗಳ ಕಾಲಮಿನ ಹತ್ತು ಪಂಕ್ತಿಗಳಿಗೆ ಒಂದು ರೂಪಾಯಿ ಮುಂದಿನ ಪ್ರತಿಯೊಂದು ಪಂಕ್ತಿಗೆ ಒಂದಾಣೆ [illegible] ಇಂಗ್ಲಿಷ ಪಂಕ್ತಿಯೊಂದು ಒಳಗೆ ಐದು [illegible] ಖಾಸಗಿ ಮಾರ್ಗದರ್ಶಕ [illegible] ಸಾರ್ವಜನಿಕ [illegible] ಕನ್ನಡದಲ್ಲಿ ಹಾಕುವದಿಲ್ಲ [illegible]

ಆರು ತಿಂಗಳಿನ ಒಳಗಳಿಗೆ ಇಮ್ಮಡಿ ಚಾರ್ಜ ಒಯ್ಯುವ ಜಾಹಿರಾತುಗಳನ್ನು ಕೊಡುವವರು ಕಚೇರಿಗೆ ಪತ್ರವ್ಯವಹಾರ ಮಾಡಬಹುದು

ಮ್ಯಾನೇಜರ ವಿಜಯ ಧಾರವಾಡ

ಈ ಪತ್ರವನ್ನು ಆಚಾರ್ಯ [illegible] ತಮ್ಮ [illegible] ದಲ್ಲಿಯ [illegible] ಮುದ್ರಿಸಿ ಪ್ರಸಿದ್ಧ [illegible]

R. N. B. 1443

ನಿತ್ಯ ಪತ್ರ — ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾ ಜಯರಾವ ಬಾಳಾಚಾರ್ಯ ಹೊಸಕೇರಿ

ವರ್ಷ ೯) ಧಾರವಾಡ ಶುಕ್ರವಾರ ತಾರೀಖು ೩ ನೇ ಅಗಸ್ಟ ೧೯೨೮ (ಸಂಚಿಕೆ ೧೭೫

ಮೂರನೆ ಕರ್ನಾಟಕ ಸೇವಾದಲದ ಪರಿಷತ್ತು

ಮತ್ತು

ವ್ಯಾಯಾಮ ವಿದ್ಯಾಪೀಠ ಅನಾವರಣ ಸಮಾರಂಭವು.

ಇದೇ ಅಗಸ್ಟ ೧ ನೇ ತಾರೀಖಿಗೆ ಹುಬ್ಬಳ್ಳಿಯಲ್ಲಿ ನಡೆಯುವದು.

ಅದೇ ಸಮಯದಲ್ಲಿ

ಕೆಳಗೆ ಬರೆದ ಪರಿಷತ್ತುಗಳೂ ಪ್ರದರ್ಶನಗಳೂ ನಡೆಯುವವು.

೧ ಅಖಿಲ ಭಾರತ ಸ್ವಯಂಸೇವಕ ಮಂಡಳದ ಸಭೆಯು. — ೧ ಖಾದಿ ಪ್ರದರ್ಶನ

೨ ಅಖಿಲ ಕರ್ನಾಟಕ ಸಂಪಾದಕರ ಪರಿಷತ್ತು — ೨ ವ್ಯಾಯಾಮ ಉಪಕರಣಗಳ ಪ್ರದರ್ಶನ

೩ ಅಖಿಲ ಕರ್ನಾಟಕ ವ್ಯಾಪಾರಸ್ಥರ ಪರಿಷತ್ತು — ೩ ಅಖಿಲ ಕರ್ನಾಟಕ ಐತಿಹಾಸಿಕ ವಸ್ತು ಪ್ರದರ್ಶನ.

೪ ಅಖಿಲ ಕರ್ನಾಟಕ ಗಾಯಕರ ಪರಿಷತ್ತು — ೪ ಅಖಿಲ ಕರ್ನಾಟಕ ವೃತ್ತ ಪತ್ರಗಳ ಪ್ರದರ್ಶನ.

ಕರ್ನಾಟಕಾಭಿಮಾನಿಗಳಾದ ಸರ್ವರೂ ಈ ಕಾರ್ಯಗಳಲ್ಲಿ ಭಾಗ ತೆಗೆದುಕೊಂಡು ತಮ್ಮ ಅಭಿಪ್ರಾಯಗಳನ್ನು ಉತ್ತಮ ರೀತಿಯಿಂದ ಸಾದರಪಡಿಸಬೇಕಾಗಿ ವಿನಂತಿ ಇದೆ.

ಹುಬ್ಬಳ್ಳಿ. ತಾ ೨೭-೭-೨೮ — ನಾ. ಸು. ಹರ್ಡೀಕರ. ಕಾರ್ಯದರ್ಶಿ ಕರ್ನಾಟಕದಲ

ದಿ ಜಯಲಕ್ಷ್ಮಿ ಬ್ಯಾಂಕ ಲಿಮಿಟೆಡ, ಧಾರವಾಡ.

ಸ್ಥಳ- ಮಂಗಳವಾರಪೇಟೆ, ಜಕಾತಿ ವಕೀಲ ಪಾಂಡುರಂಗರಾಯರ ಮನೆ.

೧ ಈ ಬ್ಯಾಂಕಿನಲ್ಲಿ ದಾಗಿನೆಗಳ ಮೇಲೆ ಸಾಲವು ದರದಿಂದ ತುಸು ಹೆಚ್ಚು ಒಹಳ ಮುದ್ದತಿಯ ಠೇವ ಇಟ್ಟು ಕೊಡಿಸಿದ ಬೇಕಾದಷ್ಟು ದೊಡ್ಡ ರಕಮಿನ ಕನಕ ಸಾಲ ದೊರೆಯುವದು. ಬಡ್ಡಿಯ ದರ ಮುಂಬೆ ಸಮಕ್ಷಮ ತಿಳಕೊಳ್ಳಬೇಕು.

೨ ಸರಕಾರಿ ಪ್ರಾಮಿಸರಿ ನೋಟುಗಳ ಖರೀದಿ, ವಿಕ್ರಿ ನಡೆಯುವದು. ಅವುಗಳ ಮೇಲೆ ಸಾಲ ದೊರೆಯುವದು. ಮತ್ತು ಯೋಗ್ಯ ಕಮೀಶನ ತಕ್ಕೊಂಡು ಗಿರಾಕಿಗಳಿಗೆ ಆಧಾರವಾಗಿ ಅವುಗಳ ಮಾಂಟ ಮಾಡಿ ಕೊಡಲ್ಪಡುವದು.

೩ ಮುದ್ದತಿ ಠೇವಿನ ಹಣವನ್ನು ಇಟ್ಟುಕೊಳ್ಳಲಾಗುವದು. ಸ್ವಲ್ಪ ರಕಮಿನಿಂದ ದೊಡ್ಡ ರಕಮಿನ ತನಕ ಇಟ್ಟುಕೊಳ್ಳಲಾಗುವದು. ಬಡ್ಡಿಯ ದರವನ್ನು ಸಮಕ್ಷಮ ಅಥವಾ ಪತ್ರವ್ಯವಹಾರದಿಂದ ತಿಳಕೊಳ್ಳಬೇಕು.

೪ ಈ ಬ್ಯಾಂಕಿನ ಶೇರುಗಳು ಮಾರಾಟಕ್ಕೆ ದೊರೆಯುವವು.

೫ ಬ್ಯಾಂಕಿಗೆ ಸಂಬಂಧಿಸಿದ ಬಾಕಿ ವ್ಯವಹಾರ ಮೊದಲಾದ ಎಲ್ಲ [illegible] ವಿಶೇಷ ಸಂಗತಿಗಳನ್ನು ಆಫೀಸಿನ ವೇಳೆಯಲ್ಲಿ ಸಮಕ್ಷಮ ಅಥವಾ ಪತ್ರವ್ಯವಹಾರದಿಂದ [illegible]

ಕೃಷ್ಣರಾವ ವೆಂಕಟೇಶರಾವ [illegible]

ದಿ ಧಾರವಾಡ ಅರ್ಬನ ಕೋ ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಖಂಡಿಗೆಯು [illegible] ಲಕ್ಷದ ಮೇಲುಂಟು. ಚೆಕ ಸಂಬಂಧ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರ [illegible] ನಡೆಸಲ್ಪಡುವದು. ಠೇವು ಮತ್ತು ಬೇರೆ ತರದ ಡಿಪಾಜಿಟುಗಳಿಗೆ ಜಾಸ್ತಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮಲ್ಲಪ್ಪಗೌಡ ಬಿ. ಜಕಾತಿ,
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು [illegible] ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಠೇವಾಗಿ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಒತ್ತೀ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ - ತಿಂಗಳಿಗೆ ಪಕ್ಕಿ ದರು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣೀ ದರ.

—೦—

ನಿತ್ಯ ಪತ್ರಿಕೆ	
೧೨ ತಿಂಗಳಿಗೆ	೧೭-೮-೦ ರೂ.
೬ ,,	೭-೦-೦
೩ ,,	೪-೦-೦
ವಾರ ಪತ್ರಿಕೆ ೧ ವರ್ಷಕ್ಕೆ	೩-೧೭-೦

[illegible] ರೇಟಿನ ಪೋಸ್ಟೇಜ ಹೊರತಾಗಿ

ವಿಜಯ.

ಧಾರವಾಡ ತಾ. ೧೯-೮-೨೧ ನೇ ಇಸ್ವಿ

ಶ್ರೀ.

ಆ ವಿಜಯಂ ಶ್ರೀಶಪ್ರಿಯ |
ನೀ ವಸುಮತಿಯ ನಲಿಸಿರೆ ಸುಹಿತಚರಿತೆಗಳಿಂ ||
ದೀ " ವಿಜಯಂ " ಶ್ರೀಶಕರುಣ |
ನಾ ವಿಹಿತಂಗಳೆ ವಿವರಿಸಿನಲಿಪುದು ಸಾಜಂ ||೧||

ಪ್ರಾಚೀನ ಮತ್ತು ಅರ್ವಾಚೀನ ಸ್ವಯಂಸೇವಕರು.

ಶ್ರೀ. ಜಯಸುಖಲಾಲರ ಭಾಷಣದ ಅನುವಾದ.

ಬಾಗಲಕೋಟೆಯಲ್ಲಿ ಮೊನ್ನಿನ ದಿವಸ ಆದಂಥ ಸ್ವಯಂಸೇವಕರ ಪರಿಷತ್ತು, ಮತ್ತು ತರುಣರ ಸಂಘಗಳ ಅಧ್ಯಕ್ಷರಾಗಿದ್ದ ಮುಂಬಯಿಯ ಶ್ರೀ. ಜಯಸುಖಲಾಲ ಮೇಹತಾಸಾಹೇಬರು ಮಾಡಿದ ಭಾಷಣದಲ್ಲಿ ಪ್ರಾಚೀನ ಮತ್ತು ಅರ್ವಾಚೀನ ಸ್ವಯಂಸೇವಕರ ಕರ್ತವ್ಯ ಪರಾಯಣತೆಯನ್ನು ವಿಷದವಾಗಿ ಹೇಳಲ್ಪಟ್ಟಿರುತ್ತದೆ. ಪ್ರಾಚೀನ ಕಾಲದಲ್ಲಿ ಸ್ವಯಂಸೇವಕರು ರಾಷ್ಟ್ರಕಾರ್ಯಕ್ಕಿಂತಲು ಧರ್ಮ ಕಾರ್ಯದಲ್ಲಿ ಉತ್ಸಾಹಾಸಕ್ತಿಯುಳ್ಳವರಾಗಿ, ದೇಶ ದೇಶಾಂತರಗಳಲ್ಲಿ ಧರ್ಮದ ಹಬ್ಬುಗೆಯನ್ನು ಮಾಡಿದರು. ಬೌದ್ಧ ಧರ್ಮ, ಅನಂತರ ಆದ ಹಿಂದೂಧರ್ಮದ ಪುನರುಜ್ಜೀವನದ ನಿರೀಕ್ಷಣೆ ಮಾಡಿದರೆ ಸ್ವಯಂಸೇವಕರು ಘನ ಕಾರ್ಯ ಮಾಡಿದರೆಂತಲೇ ಕಂಡುಬರುತ್ತದೆ. ಧರ್ಮಕ್ರಾಂತಿಗಳ ತರುವಾಯ ರಜಪೂತ ವೀರರು ತಮ್ಮ ಸ್ತ್ರೀಯರ ಸಂರಕ್ಷಣೆ ಮಾಡಲು ಆತ್ಮ ಯಜ್ಞ ಮಾಡಿದ್ದಾರೆ. ಇದರಲ್ಲಿ ಅವರ ನಿಸ್ವಾರ್ಥ ಬುದ್ಧಿಯೇ ವ್ಯಕ್ತವಾಗುತ್ತದೆ. ತಂತಮ್ಮ ಮನೆಯ ಅನ್ನವುಂಡು ಶ್ರೀ ಶಿವಾಜಿ ಮಹಾರಾಜನಿಗೆ ರಾಜ್ಯ ಸ್ಥಾಪನೆಮಾಡಲು ಸಹಾಯ ಮಾಡಿದ ಮರಾಠೆ ವೀರರೂ ಸ್ವಯಂಸೇವಕರೇ ಆಹುದು.

ಈ ಕಾಲ ಒದಗಿದಾಗ ಬ್ರಿಟಿಶ ರಾಜ್ಯವಾದ ಬಳಿಕ ಸ್ವಯಂಸೇವಕ, ದೇಶ ಸೇವಾನಿರತ, ಸ್ವಾರ್ಥತ್ಯಾಗಿ ಎಂಬ ಶಬ್ದಗಳೇ ಲೋಪವಾದವು. ಕಾಂಗ್ರೆಸ ಸಭೆಯು ಸ್ಥಾಪನವಾದ ಬಳಿಕ, ಪುನಃ ಈ ಶಬ್ದಗಳು ಜನ್ಮವೆತ್ತಿದವು. ಕಾಂಗ್ರೆಸದಲ್ಲಿ ವ್ಹಾಲಂಟಿಯರರಾಗಿ ಕೆಲಸಮಾಡಬೇಕೆಂಬ ಹುರುಪು ತರುಣರಲ್ಲಿ ವಿಶೇಷವಾಗಿ ಹುಟ್ಟಿತು. ದೇಶದ ಮುಂದಾಳುಗಳೆಂಬವರಲ್ಲಿ ಆದರಾಭಿಮಾನ ಉತ್ಪನ್ನವಾದವು. ನಮ್ಮನ್ನು ವ್ಹಾಲಂಟಿಯರರಾಗಿ ತಕ್ಕೊಳ್ಳಿರಿ ಎಂಬದಾಗಿ ತರುಣರು ಕಾಂಗ್ರೆಸದ ಮುಂದಾಳುಗಳ ಬಾಗಿಲವನ್ನು ಭಯಭಕ್ತಿಯಿಂದ ಕಾಯುವರು. ಸ್ವಯಂಸೇವಕರಾಗುವದು ಅಭಿಮಾನದ ಕೂಡ ಮರ್ಯಾದೆಯ ಕೆಲಸವೆಂದು ಸುಶಿಕ್ಷಿತರಾದ ತರುಣರು ಭಾವಿಸಿದರು. ಕಾಂಗ್ರೆಸದ ಅನುಕರಣವನ್ನೇ ಧಾರ್ಮಿಕ ಹಾಗೂ ಸಾಮಾಜಿಕ ಪರಿಷತ್ತುಗಳು ಮಾಡಿದವು ಆದರೆ ಈ ಸ್ವಯಂಸೇವಕತ್ವವು ಎರಡು ಮೂರು ತಿಂಗಳ ಮಟ್ಟಿಗಾಗುತ್ತಿತ್ತು.

ಬಂಗಾಲದಲ್ಲಿ ರಾಜಕೀಯ ಚಳವಳಿಯು ಹುಟ್ಟಿದ ಬಳಿಕ, ಸ್ವಯಂಸೇವಕರ ವಿಚಾರಾಚಾರದಲ್ಲಿ ಕ್ರಾಂತಿಯನ್ನುಂಟು ಮಾಡಿತು. ಶ್ರೀರಾಮಕೃಷ್ಣ ಮಿಶನದವರು ಬರಗಾಲ, ಜಲಪ್ರಳಯ, ರೋಗೋಪದ್ರವ, ಜಾತ್ರೆ ಯಾತ್ರೆಗಳಲ್ಲಿ ಸ್ವಯಂಸೇವಕರಾಗಿ ಮಾಡುತ್ತ ಬಂದ ಕಾರ್ಯವು ಸ್ತುತ್ಯರ್ಹವಾಗಿರುತ್ತದೆ. ಆದರೆ ಇವಕ್ಕೆ ವಿಶಿಷ್ಟವಾದ ನಿಶ್ಚಯ ಸ್ವರೂಪ ಕೊಟ್ಟು, ಇವಕ್ಕೆ ಯೋಗ್ಯ ದಿಶೆ ತೋರಿಸಿ, ಅಖಿಲ ಭಾರತೀಯ ಸೇವಾದಲವನ್ನು ಸ್ಥಾಪಿಸುವಂಥ ಮಹತ್ಕಾರ್ಯವನ್ನು ಡಾಕ್ಟರ ಹರ್ಡೀಕರರೇ ಪ್ರಾರಂಭಿಸಿದ್ದಾರೆ. ಸ್ವಯಂಸೇವಕರಲ್ಲಿ ಶಿಸ್ತು ಇರಬೇಕು; ಕಾರ್ಯಪಟುತ್ವವುಳ್ಳವರಾಗಬೇಕು. ರಾಜಕಾರಣದಲ್ಲಿ ದೊಡ್ಡ ಸಾಮರ್ಥ್ಯವಾಗಲಿಕ್ಕೆ ಶೇವಾದಲದಂಥ ಸಂಸ್ಥೆಯ ಶಾಖೆಗಳು ಊರೂರಿಗೆ ಸ್ಥಾಪಿಸಬೇಕು. ಮೈಯ್ಯಲ್ಲಿ ಶಕ್ತಿಯುಳ್ಳ ವಿನಹ ಯಾವ ಸಾಹಸದ ಮತ್ತು ಸಂಕಟ ಪರಿಹಾರದ ಕೆಲಸವಾಗಲಾರದು. ಸ್ವಯಂಸೇವಕನೆಂದರೆ ಧಷ್ಟ ಪುಷ್ಟ ಬಲಿಷ್ಠನೆಂದು ಕೂಡಲೆ ಮನಸ್ಸಿನಲ್ಲಿ ಬರುವಂಥಾದ್ದಾಗಬೇಕು. ಅಂದರೇ ಆತನಿಂದ ಯಾವದೊಂದು ಮಹತ್ಕಾರ್ಯದಲ್ಲಿ ಜಯ ಸಂಪಾದನೆಯಾಗುವದೆಂಬ ನಂಬಿಗೆಯುಂಟಾಗುವದು.

ಯುದ್ಧಕ್ಕೆ ಹೋಗುವ ಸೋಲ್ಜರ ಮತ್ತು ಸ್ವಯಂಸೇವಕನ ಕರ್ತವ್ಯಗಳಲ್ಲಿ ಎಷ್ಟೊ ಹೆಚ್ಚು ಕಡಿಮೆ ಇರುವದಿಲ್ಲ. ಸೋಲ್ಜರನು ಹೋದಾಗ ಆತನ ಮುಂದೆ ಬ್ಯಾಂಡು ಬಾರಿಸುವದು. ಪುರಜನರು ಸಾಲುಸಾಲಾಗಿ ನಿಂತು ಪುಷ್ಪವೃಷ್ಟಿ ಮಾಡುವರು. ಆನಂದಘೋಷ ಮಾಡುವರು. ಮುಂದೆ ಈತನು ರಣಮಂಡಲದಲ್ಲಿ ಸೊಟ್ಟ ಮೋರೆಯಾಗಿ ತೋಡಿದ ಖಂದಕದಲ್ಲಿ ಸೇರಿದನೆಂದರೆ ಕಷ್ಟಪರಂಪರೆಗೆ ಪ್ರಾರಂಭವಾಗುತ್ತದೆ. ಖಂದಕದಲ್ಲಿ ನೀರು ಹರಿಯುವದು. ಶತ್ರುಗಳ ಬಾಂಬುಗಳು ಭಾರವಾಗುವವು. ಹುಳಗಳ ಪೀಡೆಯಾಗುವದು. ಹೊತ್ತು ಹೊತ್ತಿಗೆ ಅನ್ನ ಸಿಗದು. ದಾಹವುದಕ್ಕೆ ನೆಲ ಹೊರುವದಕ್ಕೆ ಆಕಾಶವಾಗುವದು ತಲೆಯ ಮೇಲೆ ವೈರಿಯ ಗುಂಡು ಬಂದು, ಯಾವಾಗ ತನಗೆ ವೀರಸ್ವರ್ಗಾರೋಹಣ ಮಾಡುವ ಹೊತ್ತು ಬರುವದೆಂಬ ನಿಶ್ಚಿತಿ ಇಲ್ಲದಾಗುವದು. ಇವೆಲ್ಲ ದುಃಖಗಳನ್ನು ಸೋಲ್ಜರನು ವರ್ಷಾನುವರ್ಷ ಭೋಗಿಸುತ್ತಾ, ವೈರಿಯ ಮೇಲೆ ಜಯಸಂಪಾದನೆ ಮಾಡಬೇಕಾಗುತ್ತದೆ ಸ್ವಯಂಸೇವಕನಾದವನು ಸೋಲ್ಜರನಂತೆ ಸಹನಶೀಲನಾದರೇ ದೀಕ್ಷೆ ತಕ್ಕೊಂಡದ್ದರ ಫಲವು ಈ ಮೂಲ ತತ್ವಗಳನ್ನು ತಿಳಿದವನೇ ನಿಜವಾದ ಸ್ವಯಂಸೇವಕನು.

ಇಜಿಪ್ತದ ರಾಜಪಕ್ಷ; ಪ್ರಜಾಪಕ್ಷ.

ಇಜಿಪ್ತದ ಈಗಿನ ಸುಲ್ತಾನ ಫೌಜಸಾಹೇಬರು ಅನುಭವಿಸುತ್ತಿರುವ ರಾಜಕೀಯ ಸ್ವಾತಂತ್ರ್ಯವು ಝಗಲುಲಪಾಶಾನ ರಾಷ್ಟ್ರೀಯ ಪಕ್ಷದಿಂದಲೇ ದೊರೆತಿರುತ್ತದೆ ಇಜಿಪ್ತದಲ್ಲಿ ಇಂಗ್ಲಿಷ ಜನರು ಧ್ವಜವೊಂದನ್ನು ಸ್ವಹಿತಕ್ಕಲ್ಲದೆ, ಇಜಿಪ್ತದ ದಸೆಯಿಂದಲ್ಲವೇ ಇಲ್ಲ. ಬ್ರಿಟಿಶ ಸೈನ್ಯವು ಅಲ್ಲಿಂದ ಗುಡಾರೆಸೆ ಕಟ್ಟಬೇಕೆನ್ನುವ ತನಕ ರಾಷ್ಟ್ರೀಯ ಪಕ್ಷವು ಸ್ವಚ್ಛ ಸ್ವಾತಂತ್ರ್ಯ ದೊರೆಕಿಸಿದೆ. ಇಂಗ್ರೇಜ ಸೇನಾಧಿಪತಿಯು ಬದಲಾಗಿ ಸ್ವದೇಶಿ ಸೇನಾಧಿಪತಿಯಾಗಿ, ಸೈನ್ಯದ ಎಲ್ಲ ಹುಕುಮತ್ತು ಇಜಿಪ್ತದ ಕೈ ಸೇರಿದೆ ಇಂಗ್ಲಿಷ ದಂಡು ಅಲ್ಲಿಂದ ಎದ್ದರೆ ಸುಯೇಜದ ಕಾಲುವೆಯ ಮಾರ್ಗವಾಗಿ ಹಿಂದುಸ್ಥಾನಕ್ಕೆ ಬದಲು ಇಂಗ್ಲಿಷರ ಈಗಿನ ಸ್ವಾತಂತ್ರ್ಯವೇ ನಷ್ಟವಾಗುತ್ತದೆ. ತಾವು ಅಲ್ಲಿ ಪರತಂತ್ರರಾಗಬಾರದೆಂದು ಇಂಗ್ಲಿಷ ಸರಕಾರದವರು ಸೈನ್ಯ ತೆಗೆಯಲು ಒಪ್ಪಲೊಲ್ಲರು. ಅದನ್ನು ತೆಗಿಸಬೇಕೆಂದು ರಾಷ್ಟ್ರೀಯರ ಮನೋಭಿಲಾಷೆಯು. ಈ ಇಚ್ಛೆ ಪೂರ್ಣವಾಗಲಿಕ್ಕೆ ಮಾಡಬೇಕಾದ ಉಪಾಯಗಳನ್ನು ಪಾರ್ಲಮೆಂಟಿನ ದ್ವಾರದಿಂದ ಮಾಡಬೇಕೆಂದರು. ಈ ಪಾರ್ಲಮೆಂಟದ ಬಾಗಿಲವನ್ನೇ ಬಂದು ಮಾಡಿದರೆ ಇವರ ಕಾಯದೆ ಕಾನೂನುಗಳಲ್ಲಿ ಪಾಸಾಗುವದೆಂದು ಸುಲ್ತಾನಸಾಹೇಬರೂ ಅವರ ಮಂತ್ರಿಗಳೂ ಸರಕಾರದಿಂದ ಪ್ರೇರಣೆಗೊಂಡು ಸಭೆಯ ಬಾಗಿಲಕ್ಕೆ ಬೀಗ ಮಾಡಿಸಿ, ಇತರ ಸಭೆಗಳು ಎಲ್ಲಿಯೂ ನೆರೆಯಬಾರದೆಂದೂ, ಮೂರು ವರ್ಷಗಳ ಪರ್ಯಂತರ ತಮ್ಮ ಪ್ರಭುತ್ವವೇ ನಡಿಯಬೇಕೆಂದೂ ಹುಕುಮು ಮಾಡಿದ್ದಾರೆ. ಮೂರು ವರ್ಷಗಳಲ್ಲಿ ರಾಷ್ಟ್ರೀಯ ಪಕ್ಷದವರು ಮೆತ್ತಗಾಗುವರೆಂಬ ಭಾವನೆಯಿಂದ, ಮೂರು ವರ್ಷಗಳ ಅವಧಿ ಹಾಕಿದ್ದಾರೆ ಈ ನಂತರವೂ ರಾಷ್ಟ್ರೀಯರ ಸ್ವಾತಂತ್ರ್ಯದ ಚಳವಳಿಯ ಉರಿಯು ಧಗಧಗಿಸುತ್ತಿದ್ದರೆ ಆ ಅವಧಿಯನ್ನು ಪುನಃ ಹೆಚ್ಚಿಸು

ವರೆಂಬುದು ಸಹಜವು. ಸುಲ್ತಾನಸಾಹೇಬರಿಗೆ ತಮ್ಮ ಪ್ರಜರ ವಿರುದ್ಧ ಇಷ್ಟು ಬಲಬರಬೇಕಾದಕ್ಕೆ- ಬ್ರಿಟಿಶ ಸೈನ್ಯದ ಬೆಂಬಲವೇ ಕಾರಣವು. ಇಲ್ಲವಾದರೆ- ರಾಷ್ಟ್ರೀಯರು ಈಗೊಳಗಾಗಿ ಕೆಮಾಲಪಾಷ್ಹಾನು ತುರ್ಕಸ್ಥಾನದ ಸುಲ್ತಾನರಿಗೆ ತೋರಿಸಿದ ದಾರಿಯನ್ನೇ ತೋರಿಸುತ್ತಿದ್ದರು. ಬ್ರಿಟಿಶ ಸೇನಾ ಸಹಾಯದ ಅಹಂಕಾರದಿಂದ ಫಾಡ ಸಾಹೇಬರು ಪಾರ್ಲಮೆಂಟು ಮುಕುಮುತ್ತು ನಡೆಸಿದ್ದರೂ ರಾಷ್ಟ್ರೀಯರು ಹೆದರಿಲ್ಲ; ಸ್ವಾತಂತ್ರ್ಯ ಸಂಪಾದನೆಯ ಸತ್ಯ ಪ್ರತಿಜ್ಞೆಯಿಂದ ಚ್ಯುತರಾಗಿಲ್ಲ. ವಿವೇಕ ಭ್ರಷ್ಟರಾಗಿಲ್ಲ. ತಮ್ಮಲ್ಲಿ ಸತ್ವವುಂಟೆಂದೂ ಆ ಸತ್ವದಿಂದಲೇ ಸ್ವರಾಜ್ಯ ಸ್ವಾತಂತ್ರ್ಯ ಸಂಪಾದಿಸುವೆವೆಂದೂ ವೀರಪ್ರತಿಜ್ಞೆ ಮಾಡುತ್ತಿದ್ದಾರೆ. ಜಾಹೀರ ಸಭೆ ಕೂಡಿಸಲಿಕ್ಕೆ ಕಾಯಿದೆಯಿಂದ ಬಂದು ಮಾಡಿದರೂ, ಮಂತ್ರಿಯ ಮನೆಯ ಹತ್ತರವೇ ಸಭೆಗೂಡಿಸಿದರು. ಮತ್ತು ಸ್ವಾತಂತ್ರ್ಯಕ್ಕಾಗಿ ಜೀವ ಹೋಗುವತನಕ ಹೋರಾಡುವೆವೆಂದು ಪ್ರತಿಜ್ಞಾಪತ್ರದ ಮೇಲೆ ಸಹಿ ಮಾಡಿದರು. ಸುಲ್ತಾನ, ಸಚಿವ ಸಮೂಹ ಮತ್ತು ಬಲಾಢ್ಯರಾದ ಇಂಗ್ಲಿಷ ಅಧಿಕಾರಿಗಳ ಮುಂದೆ ಮಾಡಿದ ಆಣೆಯಿಂದ ಆ ದೇಶದಲ್ಲಿ ರಣಯಜ್ಞವಾಗಲಿಕ್ಕೆ ಬಹಳ ಅವಕಾಶ ಹತ್ತಲಾರದೆಂದು ಹೇಳಬೇಕಾಗುತ್ತದೆ. ಸ್ವಜನರ ಪಾತಕ್ಕೆ ಗಂಡಗಲಿಯಾಗಿ ನಿಲ್ಲುವ ಸುಲ್ತಾನರು ಸ್ವಜನಾಭಿಮಾನಿಗಳೋ? ದ್ರೋಹಿಗಳೋ ಎಂಬುದನ್ನು ವಾಚಕರೇ ಊಹಿಸಲಿ.

ಧೈರ್ಯದ ಆಪದ್ಬಾಂಧವರು-

ಬಾರಡೋಲಿಯ ರೈತರು ಸತ್ಯಾಗ್ರಹದಲ್ಲಿ ಕಾಯದೆಭಂಗಮಾಡಿ, ಸೆರೆಗೆ ಹೋಗುವದರಷ್ಟೇ; ಈ ಕೆಲಸದಲ್ಲಿ ರೈತರನ್ನು ಹಿಂದಿಟ್ಟು, ಸಾಗರಪೂರದ ನಾಡಗರು ಕಾಯದೆಭಂಗಕ್ಕೆ ಸ್ವಯಂಸೇವಕರು ಹೋದಂತೆ ಬಾರಡೋಲಿಗೂ ಅಸಂಖ್ಯವಾಗಿ ಹೋಗಬೇಕೆಂದು ಸೂಚನೆ ಆಗಿರುತ್ತದೆ.

ಅಧಿಕ ವಿಚಾರ-

ಕರ್ನಾಟಕ ಪ್ರಾಂತದಲ್ಲಿ ಕೊಂಕಣಸ್ಥರಲ್ಲಿ ಕೆಲವರು ಮಾತ್ರ ಟಿಳಕ ಪಂಚಾಂಗದಂತೆ ಅಧಿಕ ಹಿಡಿಯಲಿಲ್ಲ. ಅವರು ಹೋದ ಪಂಚಮಿಯ ದಿವಸ ಶ್ರಾವಣಿ ಮಾಡಿದರು. ಮುಂದಿನ ತಿಂಗಳಲ್ಲಿ ಬೆನಕನ ಪೂಜೆಮಾಡುವವು. ದಸರೆ ದೀಪಾವಳಿಗಳೂ ಒಂದೊಂದು ತಿಂಗಳ ಹಿಂದೆ ಬರುವವು.

ಬಾರಡೋಲಿಗೆ ೫೦ ಸಾವಿರ ಕೂಲಿಕಾರರ ಪ್ರಚಂಡ ಸಹಾಯ.

—(೦)—

ಜಿ. ಆಯ. ರೇಲ್ವೆಯ ಅಪ್ಪಾವಧಿ ಕೂಲಿಕಾರರು ಸಂಪು ಮಾಡಿ, ಕಂಪನಿಯನ್ನು ಹಣ್ಣಿಗೆ ತರಬೇಕೆಂದು ನಡೆಸಿದ ಚಳವಳಿಯಲ್ಲಿ ಇದೇ ತಿಂಗಳ ೫ನೇ ತಾರೀಖಿನೊಳಗಾಗಿ ಹೆಚ್ಚು ೫೦ ಸಾವಿರ ಸಹಿಗಳನ್ನು ತೆಕ್ಕೊಂಡು, ಕಂಪನಿಗೆ ನೋಟೀಸ ಕೊಟ್ಟು, ಸಂಪಿನ ಕಹಳೆ ಹಿಡಿಯಬೇಕೆಂದಿದ್ದಾರೆ. ಈ ರೇಲ್ವೆಯಲ್ಲ ಸಂಪಾದರೆ- ಬಿ. ಬಿ. ಸಿ. ಆಯ ದ ಮಾರ್ಗವಾಗಿ ಕಂಪನಿಯು ವ್ಯವಹಾರ ನಡೆಯುವಂತಿರುವದರಿಂದ, ಆ ರೇಲ್ವೆಯವರೂ ಸಂಪು ಮಾಡಿಸಿ ಎಲ್ಲ ವ್ಯವಹಾರ ಬಂದಿಡುವ ವಿಚಾರ ನಡೆದಿದೆ. ಈ ಸಂಪು ಸದ್ಯದಲ್ಲಿ ಬೊಂಬಾಯಿಯ ಮುಟ್ಟಿಗೆ ಆಗುವದು. ಇದಕ್ಕೆ ಅಧಿಕವೆನ್ನುವರು. ಮುಂದೆ ರಾಜಕೀಯ ಸ್ವರೂಪ ತೊಡುವ ವಿಚಾರವೂ ಉಂಟು. ಬಾರಡೋಲಿಯಲ್ಲಿ ಗವ್ಹರ್ನರ ಸಾಹೇಬರ ದಬಾವಣಿಕೆಯಂತೆ ದಬ್ಬಾಳಿಕೆಯು ಪ್ರಾರಂಭವಾದರೆ- ರೈತರಿಗೆ ಸಹಾಯವಾಗಿ ಎರಡೂ ರೇಲ್ವೆಯವರು ಸಂಪು ಮಾಡಿ, ಸರಕಾರ ಮತ್ತು ಯುರೋಪಿಯನ್ನ ಕಂಪನಿಗಳ ನಾಡಿಗಳನ್ನೇ ನಿಲ್ಲಿಸಿಬಿಡಬೇಕೆಂದಿದ್ದಾರೆ. ಇವೆರಡೂ ಸಂಪಿನಲ್ಲಿ ಸೇರಿದ ಬಳಿಕ, ಬಂದರಗಳಲ್ಲಿ ಕೆಲಸಮಾಡುವಂಥವರೂ ಇವರಿಗೆ ಅನುಕೂಲವಾದರೆ. ಸಾಮ್ರಾಜ್ಯಮದದಿಂದ ಮೆರೆಯುವ ಆಳರಸರಿಗೆ ಸಂಪಿನ ಸಾಮರ್ಥ್ಯದ ಮುಂದೆ ಬಾಗಿ ನಡೆಯಬೇಕಾದೀತೆಂದು ಹೇಳಬೇಕಾಗುತ್ತದೆ.

ಎರಡೂವರೆ ಲಕ್ಷ ನುಂಗಿದ್ದಕ್ಕೆ ಕೈದು ಮತ್ತು ಶಿಕ್ಷೆ.

—೦—

ಮುಂಬಯಿಯಲ್ಲಿ ಇಂಡಿಯನ್ನ ಜನಿಸಸ್ಯಲ ರವೆಂಚ ನಡಗ ಕಂಪನಿಯ ಏಜಂಟರಾದ ಪದಮಸಿ ನರಸಿಭಾಯಿ ಎಂಬವರು ಕಂಪನಿಯ ಎರಡೂವರೆ ಲಕ್ಷ ರೂಪಾಯಿಗಳನ್ನು ಸ್ವಾಹಾಕಾರ ಮಾಡಿದ್ದಕ್ಕಾಗಿ, ಮ್ಯಾಜಿಸ್ಟ್ರೇಟರು ಇವರಿಗೆ ಒಂದು ವರ್ಷ ಕೈದು, ಸಾವಿರ ರೂಪಾಯಿ ದಂಡ ಮಾಡಿದರು. ೨॥ ಲಕ್ಷಕ್ಕೆ ಸಾವಿರ ಕಡಿಮೆಯಾದರೆ- ಆ ಭಾಟಿಯನಿಗೆ ಬರುವ ದರಿದ್ರತನವೇನು?

ಇಂದು ಬಾರಡೋಲಿ ವಿಷಯವಾಗಿ ವಿಶೇಷ ಸುದ್ದಿ ಇರುವದಿಲ್ಲ. ಕೌನ್ಸಿಲ ಮೆಂಬರರಾದ ಮಿ. ಹರಿಭಾಯಿ ಅಮೀನರು ಸರದಾರ ಪಟೇಲರ ಕೂಡ ಮಾತಾಡಲು ಬಾರಡೋಲಿಗೆ ಹೋಗಿದ್ದಾರೆ.

ರೈತರು ಅಧಿಕಾರಿಗಳಿಗೆ ಹೆದರುವ ಕಾಲ ಹಿಂದಾಯಿತು.

—(೦)—

ಮುಂಬಯಿ ಕೌನ್ಸಿಲದಲ್ಲಿ ಈಗ ಅರಚೀವಿಯಾಗಿ ಬಿದ್ದಿದ್ದ ಭೂಮಿಯ ತುಂಡಿನ ಕಾಯದೆ ಮತ್ತು ಪಡ್ಡೆಯ ಕಾಯದೆಯು ಯಾವಾಗ ಎದ್ದು ರೈತರನ್ನು ಕಚ್ಚುವದೆಂಬ ನಿಯಮವಿಲ್ಲ. ಆದುದರಿಂದ ಈ ವಿಷ ಸರ್ಪವು ಪೂರಾ ಸಾಯುವ ತನಕ ರೈತರು ಸಂಪೂರ್ಣ ಜಾಗೃತರಾಗಿಯೇ ಇರಬೇಕು. ಇದೇ ಉದ್ದೇಶ್ಯವಾಗಿ ನಿನ್ನಿನ ದಿವಸ ಬಾಗಲಕೋಟೆಯಲ್ಲಿ ಶ್ರೀ ಗಂಗಾಧರರಾವ ದೇಶಪಾಂಡೆಯವರ ಅಧ್ಯಕ್ಷತೆಯಲ್ಲಿ ರೈತರ ಪ್ರಚಂಡ ಜಾಹೀರ ಸಭೆಯು ಕೂಡಿತ್ತು. ಈ ಸಭೆಗೆ ರೈತರು ಹೋಗಬಾರದೆಂದು ಮುಲಕೀ ಅಧಿಕಾರಿಗಳು ರೈತರಿಗೆ ತಾಕೀತು ಕೊಡುವಂತೆ ಗ್ರಾಮಸ್ತರಿಗೆ ಅಪ್ಪಣೆ ಕೊಟ್ಟರು. ಗ್ರಾಮಸ್ತರು ಬೆದರಿಸಿ ನೋಡಿದರು. ಆದರೆ ರೈತರು ತಾವು ಸಭೆಗೆ ಹೋಗತಕ್ಕವರೇ ಎಂದು ನಿಷ್ಠುರದ ಉತ್ತರ ಕೊಟ್ಟು ಸಭೆಗೆ ತಂಡತಂಡವಾಗಿ ಬಂದರು. ಗ್ರಾಮಸ್ಥರಂಥ ಗ್ರಾಮ ಕೀಟಕರು ಕೆಲವು ದಿವಸ ಬಾರಡೋಲಿಗೆ ಹೋಗಿ ಅಲ್ಲಿಯ ಬಾರ ಹಂದೆರಾಯಿಗಳ ಹತ್ತರ ವ್ಯವಹಾರ ಕಲಿತರೆ- ರೈತರ ವಿಷಯವಾಗಿದ್ದ ಕರ್ತವ್ಯ ಜ್ಞಾನವಾಗುವದು.

ಮಲಪ್ರಭಾನದಿಯಲ್ಲಿ ಬಂಡಿ ಮುಣುಗಿ ಮೂವರು ಸತ್ತರು.

—೦—

ಹುನಗುಂದ ತಾಲೂಕ ಕಮತಗಿಯ ಹತ್ತರ ಕಾಜವೇದ ಮೇಲೆ ಒಂದು ಚಕ್ಕಡಿಯು ನೀರಿನ ಸೆಳವಿಗೆ ಒಳಗಾಯಿತು. ಬಂಡಿಯಲ್ಲಿ ಏಳು ಜನರಿದ್ದರು. ನಾಲ್ವರು ಈಸಿ ಪಾರಾದರು. ಮೂವರು ಸತ್ತರು.

---

೪೦ ಪೋಲೀಸ ಸಾರ್ಜಂಟರ ರಾಜೀನಾಮೆ.

—(೦)—

ಕಲಕತ್ತೆಯಲ್ಲಿ ಜೂನಿಯರರಾದವನಿಗೆ ಪೋಲೀಸ ಇನ್ಸಪೆಕ್ಟರ ಕೆಲಸ ಕೊಟ್ಟು, ಸೀನಿಯರರ ಹಕ್ಕು ಮುಳುಗಿಸಿದರೆಂದು ಯುರೋಪಿಯನ್ನರಾದಂಥ ೪೦ ಜನ ಸಾರ್ಜಂಟರು ರಾಜೀನಾಮೆ ಕೊಟ್ಟರು. ಇನ್ನೂ ಹತ್ತು ಜನರು ರಾಜೀನಾಮೆ ಕೊಡತಕ್ಕವರಿದ್ದಾರೆ.

ಮದ್ರಾಸ ಮೇಲ ಪತ್ರಿಕೆಯ ಉಪಸಂಪಾದಕರಾದ ಮಿ. ಗ್ರಿಡಿಸಾಹೇಬರು ಮಲಗಿದಲ್ಲಿಯೇ ಸತ್ತು ಬಿದ್ದಿದ್ದನ್ನು ಜನರು ಕಂಡರು.

ನೋಟೀಸು

ತಿ|| ರಾ|| ರಾ|| ನಾರಾಯಣರಾವ ಗೋಪಾಳರಾವ ಲೋಖಂಡೆ ಸಾ|| ಹುಬ್ಬಳ್ಳಿ ಇವರಿಗೆ–

ಕೆಳಗೆ ಸಹಿ ಮಾಡಿದವನ ಕಡಿಂದ ನೋಟೀಸಿನ ಉತ್ತರ ಕೊಡುವದೇನಂದರೆ– ನೀವು ಧಾರವಾಡ ವಿಜಯ ವರ್ತಮಾನಪತ್ರದಲ್ಲಿ ಜಾಹೀರ ಮಾಡಿದ ಸುಳ್ಳು ಮತಲಬಿನ ಮಜಕೂರ ತಿಳಿತು ನೀವು ಚಿಕ್ಕ ಹೆಂಡತಿಯ ಆಜ್ಞಾಧಾರಕರಾಗಿ ಮುಪ್ಪಿನಕಾಲದಲ್ಲಿ ಇಬ್ಬರೂ ಕೂಡಿ ನಮ್ಮನ್ನು ಹೊಡೆದು ಒಡೆದು ಹೊರಗೆ ಹಾಕಿ ಪ್ರೇಮೋಲಿನ ಅಣಿ ಸಹಿತ ಕಸಕೊಂಡು ಕಳಿಸಿರುತೀರಿ ಈಗ ಉಲಟ ದಂಗಿನ ಪತ್ರಿಕೆ ತಕ್ಕೊಂಡದ್ದು ಸುಳ್ಳು ಓದಿದದ್ದು ನಮ್ಮ ಮಾತು ಕೇಳಿದ್ದು ಪತ್ರಿಕೆ ಇನೆಲ್ಲ ಸುಳ್ಳು ಸಂಗತಿ ಬರದೀರಿ ಹೀಗೆ ಯೋಗ್ಯದರೊಂದು ತೋರುತ ಹಾಕಿ ನನ್ನ ಲಂಕನಾನ ಮಾಡುವದು ಯೋಗ್ಯವಲ್ಲಾ ತಿಳಿಯುವದು.

ಸಹಿ– ಶ್ರೀಧರ ನಾರಾಯಣ ಲೋಖಂಡೆ

ನೋಟೀಸು

ಅಡಿವೆಪ್ಪಾ ತಂದಿ ಬಸವಪ್ಪಾ ಸಾಧರ ಸಾ|| ಮರೊಳ ತಾಲ್ಲೂಕ ಕರ್ಜಗಿ ಈತನಿಗೆ–

ಈ ಕೆಳಗೆ ಹೆಬ್ಬೆಟ್ಟಿನ ಗುರ್ತಾ ಮಾಡಿದವಳ ಕಡಿಂದಾ ನೋಟೀಸ ಕೊಡುವದೇನಂದರೆ

ನೀನು ನನ್ನ ಮದಿವೆಯ ಗಂಡನಿದ್ದು ಅಂದಾಜ ೩ ವರ್ಷದ ಹಿಂದೆ ನನ್ನ ತಂಗಿಯ ಮನಿಗೆ ಕಳಿಸಿಕೊಟ್ಟಿ ಸದರ ತಂಗಿಯ ಮನಿಯಲ್ಲಿ ಒಂದು ವರ್ಷ ಇದ್ದರೂ ನೀನು ಕರಕೊಂಡು ಹೋಗಲಿಲ್ಲಾ ಅನಂತರಾ ನಾನು ರಾಣೆಬೆನ್ನೂರಿಗೆ ನನ್ನ ಹೆಣ್ಣು ಅಜ್ಜಿ ಮನಿಗೆ ಬಂದೆ ಈಗ ೨ ವರ್ಷದ ಲಾಗಾಯಿತು ನನ್ನ ಹೊಟ್ಟೆಗೆ ಎರಡನೇ ಕಡಿಗೆ ಸಾಲಾ ಮಾಡಿಕೊಂಡು ತಿಂದು ಉಪಜೀವನ ಮಾಡಿರುತ್ತೇನೆ ಸದರ ಸಾಲಗಾರರ ತಗಾದೆ ಬಹಳವಾದ್ದರಿಂದ ನಿನ್ನ ಮೇಲೆ ಈ ನೋಟೀಸ ಕೊಡುವ ಭಾಗಬಿತ್ತು ನನ್ನ ಮೈಮೇಲೆ ೫೦ ರೂಪಾಯಿಯ ಬೆಂಡವಾಲಿ, ಒಂದು ಚವಳಾ, ಒಂದು ಪಟ್ಟಿ ಬೆಳ್ಳಿಯದು ಇದ್ದು ಅವನ್ನು ಸಹಾ ಮತ್ತೆ ಇಟ್ಟಿರುತ್ತೇನೆ ಅದಕಾರಣ ಇನ್ನು ಮುಂದೆ ನನಗೆ ಸಾಲ ಹುಟ್ಟವಲ್ಲದು ಈಗ ನಾನು ಮಾಡಿದ ಎರಡು ನೂರು ರೂಪಾಯಿ (೨೦೦) ಸಾಲಾ ನೀನು ೧೫ ದಿವಸದಲ್ಲಿ ತಂದುಕೊಟ್ಟು ನನ್ನನ್ನು ಕರಕೊಂಡು ಹೋಗಬೇಕು ಇಲ್ಲವಾದರೆ ನಿನ್ನ ಮೇಲೆ ನನ್ನ ಹೊಟ್ಟೆ ಉಪಜೀವನ ದೆಸೆಯಿಂದಾ ಕಾಯದೇಶಿ ರ ಇಲಾಜ ನಡಿಸುವದಲ್ಲದೇ ನಿನ್ನ ದುಸರೇ ಲಗ್ನದ ಬಗ್ಗೆ ಸಹಾ ನಿನ್ನ ಮೇಲೆ ದಾವಾ ನಡಿಸತೇನೆ ಈ ನೋಟೀಸಿನ ಖರ್ಚು ಸಹಾ ನಿನ್ನ ತಲೆಯ ಮೇಲೆ ಇರುತ್ತದೆ. ತಿಳಿಯುವದು.

ತಾರೀಖು ೧ ನೇ ಅಗಸ್ಟ ೧೯೩೮.

ಈ ಎಡಗೈ ಹೆಬ್ಬೆಟ್ಟಿನ ಗುರ್ತಾ ಬುಳ್ಳವ್ವಾ ಕೋಮ ಅಡಿವೆಪ್ಪಾ ಸಾಧರ ಸಾ|| ಮರೊಳ ಹಾಲಿವಸ್ತಿ ರಾಣೇಬೆನ್ನೂರ ಇಕಿ ಮಾಡಿದ್ದು ಅದೆ

ನೋಟೀಸು

ಶೆರಿ ಕೋಮ ಬಸವ್ವಾ ಒಡಕಣ್ಣನವರ ಹಾಲಿವಸ್ತಿ ಗಾಮನಗಟ್ಟಿ ತಾಲೂಕ ಹುಬ್ಬಳ್ಳಿ ಇಕಿಗೆ–

ಕೆಳಗೆ ಹೆಬ್ಬೆಟ್ಟಿನ ಗುರ್ತಾ ಮಾಡುವ ಬಸಪ್ಪಾ ತಂದಿ ಫಕೀರಪ್ಪಾ ಒಡಕಣ್ಣನವರ ಸಾಕೀನ ಗಾಮನಗಟ್ಟಿ ಈತನು ನಿನಗೆ ಈ ನೋಟೀಸಿನಿಂದ ತಿಳಿಸುವದೇನಂದರೆ–

ನೀನು ನನ್ನ ಮದಿವೆಯ ಹೆಂಡತಿಯಾಗಬೇಕು ನೀನು ನನ್ನ ಕೂಡ ಸುರಳಿತ ರೀತಿಯಿಂದ ಪ್ರಪಂಚ ಮಾಡದೆ, ನಿನ್ನ ತವರ ಮನಿಯೂ ಅದೇ ಊರು ಇದ್ದರಿಂದ, ಆಗಾಗ್ಗೆ ತವರ ಮನಿಗೆ ಓಡಿ ಹೋಗುತ್ತಿದಿ ದೈವದವರು ನಿನಗೆ ಎಷ್ಟೋ ಬುದ್ಧಿ ಹೇಳಿ, ನಿನ್ನನ್ನು ಪ್ರಪಂಚಕ್ಕೆ ಹಚ್ಚಬೇಕೆಂದು ಮಾಡಿದರು. ಆದರೆ ನೀನು ನಿನ್ನ ದಾಕ್ಷಾಣೆಯನ್ನು ಬಿಡದೆ ತವರ ಮನೆಯಲ್ಲಿ ಹೋಗಿ ಕೂತುಕೊಂಡಿರುತೀದಿ ಇದರಿಂದ ನಿನ್ನ ಮನಸ್ಸಿನಲ್ಲಿ ಪ್ರಪಂಚ ಮಾಡುವ ಬುದ್ಧಿ ಇದ್ದಂತೆ ಕಂಡು ಬರುವದಿಲ್ಲ. ನಾನು ನನ್ನ ಪ್ರಪಂಚ ಸಾಗುವದಕ್ಕಾಗಿ ಎರಡನೇ ಲಗ್ನ ಮಾಡಿಕೊಳ್ಳಬೇಕಾಗಿದೆ ಇದಕ್ಕೆ ನಿನಗೆ ಸೋಡಪತ್ರ ಕೊಟ್ಟು, ನಿನ್ನ ಪೂರಾ ಸಂಬಂಧ ತಪ್ಪಿಸಿಕೊಳ್ಳಬೇಕಾಗಿರುತ್ತದೆ ಕಾರಣ ನಿನಗೆ ಈ ನೋಟೀಸಿನಿಂದ ಫಾರಿಕತ್ತು ಕೊಟ್ಟಿರುತ್ತೇನೆ ನೀನು ನನ್ನ ಮನೆ ಬಿಟ್ಟ [illegible] ದಿವಸದಿಂದ ನನ್ನ ನಿನ್ನ ಗಂಡ ಹೆಂಡತಿ [illegible] ಸಂಬಂಧ ತಪ್ಪಿ ಹೋಗಿರುತ್ತದ ನೀನು ನಿನ್ನ [illegible]ಗೆ ಬಂದಂತೆ ನಡಿಯಬೇಕು ನಾನು ಎರಡನೇ [illegible] ಮದಿವೆ ಅಥವಾ ಉಡಿಕೆ ಮಾಡಿಕೊಳ್ಳ[illegible] ಅವಳು ಮತ್ತು ಅವಳ ಹೊಟ್ಟೆಯಿಂದ ಹುಟ್ಟಿದ ಸಂತತಿಯೇ ನನ್ನ ವಾರಸದಾರರಾಗುವರು ನಿನ್ನ ಹಕ್ಕು ಯಾವ ರೀತಿಯಿಂದಲೂ ನನ್ನ ಸ್ಥಾವರ ಜಂಗಮ ಆಸ್ತಿಯ ಮೇಲೂ ನನ್ನ ಮೇಲೂ [illegible] ಕೊಟ್ಟ ಸೋಡಪತ್ರದ ನೋ[illegible] ತಾ|| ೩-೮-೩೮

ಈ ಎಡಗೈ ಹೆಬ್ಬೆಟ್ಟಿನ ಗುರ್ತಾ ಬಸಪ್ಪಾ ತಂದಿ ಫಕೀರಪ್ಪಾ ಒಡಕಣ್ಣನವರ ಈತನ ಕೈದು ಇರುತ್ತದೆ.

—॥ ಶ್ರೀ ಗುರು ಪ್ರಸನ್ನ ॥—

'ಪ್ರತಿಯೊಬ್ಬ ಕುಟುಂಬಕನು ಅವಶ್ಯ ಸಂಗ್ರಹದಲ್ಲಿಡತಕ್ಕ ಒಂದೇ ಔಷಧ.

'ಭಾಸ್ಕರ ಚೂರ್ಣ'

ಸುಪ್ರಸಿದ್ಧ ವನಸ್ಪತಿ ಶಾಸ್ತ್ರಜ್ಞರ ಸೂಚನೆಯ ಮೇರೆಗೆ ಈ ಚೂರ್ಣವು ತಯಾರಿಸಲ್ಪಟ್ಟದ್ದು ಇದರ ಸೇವನೆಯಿಂದ ನಾಲ್ಕು ತರದ ಕ್ಷಯರೋಗಗಳು ತ್ವರಿತದಲ್ಲಿಯೇ ನಾಶವಾಗುವವು. ಅಜೀರ್ಣ ಅಪಚನ, ಅಮಾಂಶ, ಅಗ್ನಿಮಾಂದ್ಯ ಸಂಗ್ರಹಣಿ, ಹೊಟ್ಟೆಶೂಲೆ, ಹೊಟ್ಟೆ[illegible] ಮತ್ತು ಯಾವತರದ ವಾತ ವಿಕಾರಗಳ ಮೇಲೆ ಇದೊಂದೇ ರಾಮಬಾಣ ಔಷಧ[illegible]. ಒಂದು ಚಿಮಟಿಗಿಯಷ್ಟು ಈ ಚೂರ್ಣವನ್ನು ಬಾಯಿಯಲ್ಲಿ ಹಾಕಿಕೊಂಡರೆ ಸಾಕು [illegible] ಹಸಿವೆಯಾಗುವದು. ಜೇನೆಯಿಂದ ಗುಣವಾಗಿದ್ದ ಅಶಕ್ತ ಮನುಷ್ಯರು ಎರಡ[illegible] ಔಷಧ ತೆಗೆದುಕೊಳ್ಳುವ ಕಾರಣವೇ ಇಲ್ಲಾ, ಹಳ್ಳಿಗಳಲ್ಲಿಯ ಜನರು ಒಂದು ಭಾಸ್ಕರ ಚೂರ್ಣದ ಡಬಿಯನ್ನು ತಮ್ಮ ಹತ್ತಿರ ಇಟ್ಟುಕೊಂಡರೆ ಸಾಕು ರಾತ್ರಿ ಜೇನಗಳಿಗೆ ಉಪಯೋಗ[illegible] ವಿವಸದ ಅನಾಂತವಿದ್ದರೂ ಮೂರೇ ದಿವಸಗಳಲ್ಲಿ ಗುಣವಾಗುವದು. [illegible] ತಯಾರಿಸಿದ್ದ ಈ ಸಿದ್ಧೌಷಧವನ್ನು ಪ್ರತಿಯೊಬ್ಬನೂ ಅವಶ್ಯ ಸಂಗ್ರಹದಲ್ಲಿ ಇಡತಕ್ಕದ್ದು [illegible] ಕಿಮ್ಮತ್ತು ೧೧ ಆ. ಬೇಕಾದವರು ಕೆಳಗಿನ ವಿಳಾಸಕ್ಕೆ ಬರದು ತರಿಸಿಕೊಳ್ಳಬಹುದು. ಪೋಸ್ಟ[illegible] ನ್ಯಾ. ಎಸ. ೧೮೫,

ಏಜಂಟ— ಬಿ. ಬಿ. ಟಿಕಾರೆ ಆ್ಯಂಡ ಸನ್ಸ, ಮಾರ್ಕೆಟರೋಡ [illegible].

ನೋಟೀಸಿನ ದರಗಳು.

ಸಿಂಗಲ ಕಾಲಮಿನ ೫ ಓಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಓಳಿಗೆ ಒಂದಾಣೆ ಆಕಿ ಇಂಗ್ಲಿಷ ಓಳಿಯೊಂದಕ್ಕೆ ಎರಡಾಣೆ ಸರಕಾರಿ, ಮ್ಯುನಿಸಿಪಾಲಿಟಿ ಲೋಕಲಬೋರ್ಡ ಡಿಸ್ಟ್ರಿಕ್ಟ ವಗೈರೆ ಸಾರ್ವಜನಿಕ ನೋಟೀಸುಗಳಿಗೆ ಸ[illegible] ಇಂಗ್ಲಿಷದಿಂದ ಅನುವಾದಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆಯಾ ಓಳಿ ಡಬಲ್‌ಕಾಲಮಿನ ಓಳಿಗಳಿಗೆ ಇಮ್ಮಡಿ ಚಾರ್ಜ ಕಾಯಂ ಜಾಹಿರಾತುಗಳನ್ನು ಕೊಡುವವರು ಈ ಸ[illegible] ಪತ್ರವ್ಯವಹಾರ ಮಾಡಬಹುದು

ವ್ಯಾನೇಜರ ವಿಜಯ ಧಾರವಾಡ

ಈ ಪತ್ರವನ್ನು ಅನಂತಾಚಾರ್ಯ ಬಿಂದುರಾವಾರ್ಯ ಹೊಸಕೇರಿ ಇವರು ಧಾರವಾಡದಲ್ಲಿಯ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B. 1443

ನಿತ್ಯ ಪತ್ರ

ವಿಜಯ

ಬಿಲಿ ಅರ್ಧ ಆಣೆ

ಸಂಪಾದಕರು:- [illegible]

ವರ್ಷ ೯)　　ಧಾರವಾಡ ಶನಿವಾರ ತಾರೀಖು ೪ ನೇ ಆಗಸ್ಟ ೧೯೩೪　　(ಸಂಚಿಕೆ ೧೭೬

ಮೂರನೆ ಕರ್ನಾಟಕ ಸೇವಾದಲದ ಪರಿಷತ್ತು

ಮತ್ತು

ವ್ಯಾಯಾಮ ವಿದ್ಯಾಪೀಠ ಉದ್ಘಾಟನ ಸಮಾರಂಭವು.

ಇದೇ ಆಗಸ್ಟ ೧ ನೇ ತಾರೀಖಿನಿಂದ ಬಾಗಲಕೋಟೆಯಲ್ಲಿ ನಡೆಯುವದು,

ಅದೇ ಸಮಯದಲ್ಲಿ

ಕೆಳಗೆ ಬರೆದ ಪರಿಷತ್ತುಗಳೂ ಪ್ರದರ್ಶನಗಳೂ ನಡೆಯುವವು.

೧ ಅಖಿಲ ಭಾರತ ಸ್ವಯಂಸೇವಕ ಮಂಡಳದ ಸಭೆಯು.　　೧ ಖಾದಿ ಪ್ರದರ್ಶನ

೨ ಅಖಿಲ ಕರ್ನಾಟಕ ಸಂಪಾದಕರ ಪರಿಷತ್ತು　　೨ ವ್ಯಾಯಾಮ ಉಪಕರಣಗಳ ಪ್ರದರ್ಶನ

೩ ಅಖಿಲ ಕರ್ನಾಟಕ ವ್ಯಾಪಾರಸ್ಥರ ಪರಿಷತ್ತು　　೩ ಅಖಿಲ ಕರ್ನಾಟಕ ಐತಿಹಾಸಿಕ ವಸ್ತು ಪ್ರದರ್ಶನ.

೪ ಅಖಿಲ ಕರ್ನಾಟಕ ಗಾಯಕರ ಪರಿಷತ್ತು　　೪ ಅಖಿಲ ಕರ್ನಾಟಕ ವೃತ್ತ ಪತ್ರಗಳ ಪ್ರದರ್ಶನ.

ಕರ್ನಾಟಕಾಭಿಮಾನಿಗಳಾದ ಸರ್ವರೂ ಈ ಕಾರ್ಯಗಳಲ್ಲಿ ಭಾಗ ತೆಗೆದುಕೊಂಡು ಅವುಗಳನ್ನು ಉತ್ತಮ ರೀತಿಯಿಂದ ಪಾರುಗಾಣಿಸಬೇಕಾಗಿ ವಿನಂತಿ ಇದೆ.

ಮು. ಪೋ.
ತಾ ೨೩-೭-೩೪

ನಾ. ಸು. ಹರ್ಡೀಕರ
ಕಾರ್ಯದರ್ಶಿ ಕರ್ನಾಟಕ ಸೇವಾದಲ

ದಿ ಜಯಲಕ್ಷ್ಮಿ ಬ್ಯಾಂಕ ಲಿಮಿಟೆಡ, ಧಾರವಾಡ-

ಸ್ಥಳ- ಮಂಗಳವಾರಪೇಟಿ, [illegible] ವಕೀಲ ಪಾಂಡುರಂಗರಾಯರ ಮನೆ.

೧ ಈ ಬ್ಯಾಂಕಿನಲ್ಲಿ ದಾಗೀನ [illegible] ದರದಿಂದ [illegible] ಮತ್ತು ಒಪ್ಪಿ ಮುದ್ದತಿಯ [illegible] ಕಡಿಮೆ ದರದ [illegible] ಸಾಲ ದೊರೆಯುವದು. ಬಡ್ಡಿಯ ದರ [illegible] ತಿಳಿದುಕೊಳ್ಳಬೇಕು.

೨ [illegible] ನಡೆಯುವದು. ಅವುಗಳ ಮೇಲೆ ಸಾಲ ದೊರೆಯುವದು. ಮತ್ತು [illegible] ಅವುಗಳ ಮಾರಾಟ ಮಾಡಿಕೊಡಲ್ಪಡುವದು.

೩ [illegible] ಠೇವಿನ ಹಣವನ್ನು ಇಟ್ಟುಕೊಳ್ಳಲಾಗುವದು. ಸ್ವಲ್ಪ ದಿವಸದಿಂದ ದೊಡ್ಡ ದಿವಸದ ಠೇವಿಗೆ [illegible] ಕೊಡಲಾಗುವದು. ಬಡ್ಡಿಯ ದರವನ್ನು [illegible] ಅಥವಾ ಪತ್ರವ್ಯವಹಾರದಿಂದ ತಿಳಿದುಕೊಳ್ಳಬೇಕು

೪ ಈ ಬ್ಯಾಂಕಿನ ಶೇರುಗಳು ಮಾರಾಟಕ್ಕೆ ದೊರೆಯುವವು.

೫ ಬ್ಯಾಂಕಿಗೆ ಸಂಬಂಧಿಸಿದ [illegible] ಎಲ್ಲ ಕೆಲಸಗಳು ನಡೆಯುವವು. ವಿಶೇಷ ಸಂಗತಿಗಳನ್ನು ಆಫೀಸಿನ ವೇಳೆಯಲ್ಲಿ ಸಮಕ್ಷಮ ಅಥವಾ ಪತ್ರವ್ಯವಹಾರದಿಂದ ತಿಳಿದುಕೊಳ್ಳಬೇಕು.

ಕೃಷ್ಣರಾವ ವೆಂಕಟರಾವ ಧಂಡಿವಾಡ.
ಮ್ಯಾನೇಜಿಂಗ ಏಜಂಟ.

ದಿ ಧಾರವಾಡ ಅರ್ಬನ ಕೋ ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

[illegible] ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ [illegible] ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

[illegible] ಬ್ಯಾಂಕಿನ ಎಲ್ಲ ಪ್ರಕಾರದ ವ್ಯವಹಾರ [illegible] ಬೇರೆ ತರದ [illegible] ಅನುಕೂಲವಾಗಿ ಬಡ್ಡಿ ದೊರೆಯುವದು.

ವಿಶೇಷ [illegible] ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮಂಜಪ್ಪ [illegible]
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಬ್ಯಾಂಕಿನಲ್ಲಿ [illegible] ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು [illegible] ಇಟ್ಟುಕೊಳ್ಳಲಾಗುವದು. ಬಡ್ಡಿಯನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು [illegible] ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ [illegible] ಇರುತ್ತದೆ.

[illegible]
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣೀ ದರ.

—೦—

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	೧೨—೮—೦ ರೂ.
೬ ,,	೭—೦—೦
೪ ,,	೪—೦—೦
ವಾರ ಪತ್ರಕ್ಕೆ ೧ ವರ್ಷಕ್ಕೆ	೩—೧೨—೦

ವಿಶೇಷ [illegible]

[illegible] ಧಾರವಾಡ

ಬೆಂಗಳೂರಿನಲ್ಲಿ ಭಯಂಕರ ಸ್ಥಿತಿಯು.

ನೂರಾರು ಜನರು ಘಾಯವಾದರು.

ಪೋಲೀಸ ಅಮಲದಾರರೂ, ದಂಡಿನವರೂ, ಘಾಸಿಯಾದರು.

ಖಾನಬಹಾದ್ದೂರ ಅಬಾಸಖಾನರ ಪಲಾಯನ.

ವಿದ್ಯಾರ್ಥಿಗಳ ಸತ್ಯಾಗ್ರಹವು ಮೂರು ದಿವಸ ಬೆಂಗಳೂರಲ್ಲಿ ಭಯಂಕರ ಸ್ವರೂಪ ಧಾರಣ ಮಾಡಿತು. ಸಂಪುಗಾರರು ಶ್ರೀ ಗಜಾನನ ಮೂರ್ತಿಯನ್ನು ಮೊದಲಿನ ಸ್ಥಳದಲ್ಲಿಯೇ ಪ್ರತಿಷ್ಠಾಪನೆ ಮಾಡಬೇಕೆಂದು ಸಂಪು ಮತ್ತು ಸತ್ಯಾಗ್ರಹ ನಡಿಸಿ, ದಾರಿಯನ್ನೇ ಕಟ್ಟುಮಾಡಿದರು. ವಿದ್ಯಾರ್ಥಿಗಳು ಚಿಕ್ಕವರು; ಅವರ ಮೇಲೆ ಕೈ ಎತ್ತಬಾರದೆಂದು ಪೋಲೀಸರು ಅವರ ಮುಖಂಡರಾದ ಮೂವರನ್ನು ಹಿಡಿದು, ತುರಂಗಕ್ಕೆ ಕಳಿಸಿದರು. ಜಾಮೀನು ಮುಚ್ಚಳಿಕೆ ಬರೆಕೊಟ್ಟು ಮನೆಗೆ ಹೋಗಿರೆಂದು ಅಧಿಕಾರಿಗಳು ಇವರಿಗೆ ಹೇಳಿದರು. ಜಾಮೀನಿಲ್ಲ; ಮುಚ್ಚಳಿಕೆ ಇಲ್ಲ; ಯಾವ ಕರಾರ ಕಟ್ಟಳೆಗಳಿಗೊಳಪಡಿಸದೆ, ಇವರನ್ನು ಹಾಗೇ ಬಿಡಬೇಕೆಂದು ವಿದ್ಯಾರ್ಥಿಗಳು ಹಟ ಹಿಡಿದರು. ದಿವಾನರ ಮನೆಗೆ ಹೋದರು. ತುರಂಗಕ್ಕೆ ಹೋದರು. ಅರಮಾ ಕಚೇರಿಗೆ ಹೋದರು. ಊರು ತುಂಬ ಸುತ್ತಾಡಿದರು. ಆದರೆ ಇವರನ್ನು ಯಾರೂ ಹಚ್ಚಿಕೊಳ್ಳಲಿಲ್ಲ. ಈ ಪ್ರಕಾರ ಇವರು ನಿರಾಶೆಗೊಂಡು ಅಸ್ತವ್ಯಸ್ತರಾಗಿ ತಿರುಗಾಡುತ್ತಾ ತಮ್ಮನ್ನು ತಡೆದ ಪೋಲೀಸರ ಮೇಲೆ ಕಲ್ಲು ದುಂಡಿ ಬಿಗಿಯುತ್ತಾ ಪುಂಡಾಟಿಕೆ ಪ್ರಾರಂಭಿಸಿದರು. ಊರೊಳಗಿನ ಬದಮಾಷರು ಇದೇ ಪರ್ವಣಿ ಎಂದು ಸಮಿತಿಲ್ಲಿ ಸೇರಿ ದಂಗೆಗೆ ದೊಡ್ಡ ಸ್ವರೂಪ ಕೊಟ್ಟರು. ಕಮ್ಮಿಂದ ದಂಗೆಯನ್ನು ಶಾಂತಮಾಡಲಿಕ್ಕಾಗದ್ದನ್ನು ಕಂಡು ಪೋಲೀಸರು ರಾವುತರನ್ನು ಕರೆಸಿದರು. ಅವರ ಕುದುರೆಗಳ ತುಳಿತದಿಂದ ಐವರು ಜನರು ಪೆಟ್ಟು ತಿಂದರು. ಕೂಡಿದ ಜನಸ್ತೋಮವು ಸ್ವಾರರ ಆಟವನ್ನು ನಡೆಯಗೊಡಲಿಲ್ಲ. ಪೋಲೀಸರು ಟೆಲಿಫೋನು ಮಾಡಿ, ಸೈನ್ಯ ತರಿಸಿದರು. ಸೈನ್ಯದ ಕೂಡ ವಿದ್ಯಾರ್ಥಿಗಳನ್ನು ಸಮಾಧಾನಪಡಿಸುವದಕ್ಕಾಗಿ ಗಣಪತಿಯನ್ನು ಮೊದಲಿನ ಸ್ಥಳದಲ್ಲಿ ತಂದಿಡಿಸಿದರು. ಮುಚ್ಚಳಿಕೆ ಬರಿಸಿಕೊಂಡು ಮುಖಂಡರನ್ನು ಬಂಧಮುಕ್ತಮಾಡಿದರು. ವಿದ್ಯಾರ್ಥಿಗಳು ತಮ್ಮ ಮುಖಂಡರ ಮೆರವಣಿಗೆ ಹೊರಡಿಸಿ, ಜಯಘೋಷಮಾಡುತ್ತಾ ಶ್ರೀ ಗಜಾನನ ಮಹಾರಾಜನಿಗೆ ನಮಸ್ಕಾರ ಮಾಡಲು ಬಂದರು. ವಿದ್ಯಾರ್ಥಿಗಳ ದುರ್ದೈವವೋ! ಪಟ್ಟಣಿಗರ ದೈವದಾಟವೋ! ಅಲ್ಲಿ ಗಣಪನ ಮೂರ್ತಿಯೇ ಇರಲಿಲ್ಲ. ದೇವಾಲಯದ ಹತ್ತರವೇ ಖಾನಬಹಾದ್ದೂರ ಅಬಾಸಖಾನರ ಮನೆಯುಂಟು. ಇವರು ತಮ್ಮ ಹಾಗೂ ಮನೆಯ ಭದ್ರತೆಗಾಗಿ ಮನೆಯಲ್ಲಿ ೪೦-೫೦ ಗುಂಡಪುಂಡರನ್ನು ಅಡಗಿಸಿಹಾಕಿದ್ದರು. ಗಣಪತಿಯ ಉಚ್ಚಾಟಣವು ಇವರಿಂದಲೇ ಆಗಿರಬೇಕೆಂಬ ಸಂಶಯದಿಂದ, ವಿದ್ಯಾರ್ಥಿಗಳು ಇವರ ಮನೆಯ ಕಡೆಗೆ ಹೊರಳಿದರು. ಮಾಳಿಗೆಯ ಮೇಲಿನವರು ಕೂಡಲೇ ಮೂರು ನಾಲ್ಕು ಸಾರೆ ಗುಂಡು ಹಾರಿಸಿದರು. ಸುದೈವದಿಂದ ಯಾರಿಗೂ ಸಾಯುವಂಥ ಘಾಯವಾಗಲಿಲ್ಲ. ಅರಳು ಹುರಿದಂತಾದ ಗುಂಡಿನ ಸಪ್ಪಳ ಕೇಳಿ, ಮೊದಲೇ ಕೆರಳಿದ್ದ ಅಲ್ಲಲ್ಲಿ ನಿಂತ ಜನರು ಇತ್ತ ಕಡೆಗೆ ಬಂದರು. ಹತ್ತು ಸಾವಿರ ಜನ ಕಲೆಯಿತು. ಪೋಲೀಸರು ಮೈಸೂರ ಲ್ಯಾನ್ಸರ ದಂಡಿನ ಸಹಾಯದಿಂದಲೇ ಇಲ್ಲಿಗೆ ಬಂದರು. ಖಾನಬಹಾದ್ದೂರರ ಮನೆ ಬಾಗಿಲ ಹಾಕಿತ್ತು. ಬಾಗಿಲ ಮುರಿದು ಒಳಗೆ ಹೋಗಿ, ಆಯುಧ ಪಾಣಿಗಳಾಗಿದ್ದ ಅಡಗಿಕೊಂಡಿದ್ದ ಮೂವರು ಮುಸಲಮಾನರನ್ನು ರಿವಾಲ್ವರ, ಬಡಿಗೆ, ಡೊಣ್ಣೆ ಸಹಿತವಾಗಿ ಹಿಡಿದರು. ಇನ್ನೊಬ್ಬ ಮುಸಲಮಾನನು ತುಂಬಿದ ರಿವಾಲ್ವರ ತಕ್ಕೊಂಡು ಸಾಯಲ ಮೇಲೆ ಕೂತು ಹಿತ್ತಲಬಾಗಿಲದಿಂದ ಗಪ್ಪ ಹೇಳಿಸುತ್ತಿದ್ದನು. ದಂಗೆಗಾರರು ಆತನನ್ನು ಹಿಡಿದು ಮೈಮುಕ್ಕಿಗೆ ಮಾಡಿದರು. ಪೋಲೀಸರು ಆತನನ್ನೂ ದಸ್ತಗೀರಮಾಡಿದರು. ಈ ಗೊಂದಲ ನಡೆದಾಗ ಖಾನಬಹಾದ್ದೂರ ಅಬಾಸಖಾನ ಸಾಹೇಬರು ಪಲಾಯನ ಹೇಳಿ ಮಟಮಾಯರಾದರು. ಎಲ್ಲಿದ್ದಾರೆಂಬ ಪತ್ತೆಯಿಲ್ಲ. ಇವರಂತೆ ಎಷ್ಟೋ ಜನ ಗುಂಡಪುಂಡರೂ ಕಾಲಿಗೆ ಬುದ್ಧಿ ಹೇಳಿಸಿದ್ದಾರೆ. ದಂಗೆ, ಗೋಳೀಬಾರ ಮತ್ತು ಗುಂಡಪುಂಡರ ದುಷ್ಟ ವರ್ತನದಿಂದ ಪಟ್ಟಣವೇ ಕಂಪಿಸಿತು. ಪೇಟೆ ಬಂದಾಯಿತು. ಎತ್ತ ನೋಡಿದತ್ತ ಪುಂಡಾಟಿಕೆ ಮಾಡುವಂಥವರೇ ಹೆಚ್ಚಿದರು. ದಂಡು ಮತ್ತು ಪಟ್ಟಣದ ನಡುವಿನ ದಾರಿಯು ಬಂದಾಗಿ, ಎರಡೂ ಊರುಗಳ ಸಂಬಂಧ ಕಡಿಯಿತು. ದೊಡ್ಡ ದೊಡ್ಡ ಪೋಲೀಸ ಅಮಲದಾರರೂ ಕಲ್ಲು ದುಂಡಿಗಳಿಂದ ಘಾಯವಾದರು. ಇನ್ಸಪೆಕ್ಟರ ಜನರಲ್ಲರೂ ಅನೇಕ ದೊಡ್ಡ ದೊಡ್ಡ ಆಫೀಸರರೂ ದಂಡಿನವರೂ ಹೆಚ್ಚು ಕಡಿಮೆ ಘಾಯವಾದರು. ದಂಡಿನವರು ಜನರನ್ನು ಚದರಿಸುವದಕ್ಕಾಗಿ ಕೂಟು ಕೂಟಿಗೆ ಗುಂಡು ಹಾರಿಸಿದರು. ಇಂಗ್ಲಿಷರ ತೋಫು ಕೂಡಿದ ಕವಚದ ಬಂಡಿಗಳನ್ನು ತರಿಸಿದರು. ಈ ಸರಕಾರ ಹಾರಿದ ಗುಂಡುಗಳಿಂದ ಘಾಯವಾದವರ ಸಂಖ್ಯೆಯು ೫೦ ಆಗಿದೆ. ನಾಲ್ವರು ಹಿಂದೂ, ಮೂವರು ಮುಸಲಮಾನರು ಮರಣಹೊಂದಿರುವದಾಗಿದೆ. ಗುಂಡು ಹಾರಿದ ಸ್ಥಳದಲ್ಲಿ ಮಾತ್ರ ಯಾರೂ ಸತ್ತು ಬೀಳಲಿಲ್ಲ. ಖಾನಬಹಾದ್ದೂರ ಅಬಾಸ ಸಾಹೇಬರೂ ಅವರ ಸಂಬಂಧರೂ ಮಾಡಿದ ಅತ್ಯಾಚಾರದಿಂದ ಸಂಪು ಸತ್ಯಾಗ್ರಹವು ಹಿಂದೂ ಮುಸಲಮಾನರ ದಂಗೆಯಲ್ಲಿ ಪರಿಣಮಿಸಿತು. ಕೂಟ ಕೂಟಿಗೆ ಪೋಲೀಸ ಮತ್ತು ದಂಡಿನ ಕಾವಲಿದ್ದದರಿಂದ ದಂಗೆ ಹಬ್ಬಲು ಅವಕಾಶವಿರಲಿಲ್ಲ. ಪಟ್ಟಣವು ಭಯಾನಕಸ್ಥಿತಿಯಲ್ಲಿದ್ದು ಸರಕಾರ ಮತ್ತು ಪುರ ಪ್ರಮುಖ ಜನರು ಶಾಂತಪಡಿಸಿ, ಮೊದಲಿನಂತೆ ವ್ಯವಹಾರ ನಡೆಯುವ ಹಾಗೆ ಶಕ್ಯವಾದಷ್ಟು ಪ್ರಯತ್ನಿಸುತ್ತಿದ್ದಾರೆ. ಆದರೂ ಅಂಗಡಿಕಾರರು ಅಂಗಡಿ ತೆರೆಯದ್ದರಿಂದ ಪೇಟೆಗಳು ಬಣಗುಟ್ಟುತ್ತಿರುವವು. ದಂಗೆಯ ವಿಚಾರ ಮಾಡಲು ದಿವಾನರು ಒಬ್ಬ ಮ್ಯಾಜಿಸ್ಟ್ರೇಟರನ್ನು ನೇಮಿಸಿದ್ದಾರೆ.

ಬಾರಡೋಲಿಯ ರಾಜಿಯ ಆಶೆಯುಳಿಯಲಿಲ್ಲ.

(೧)

ಬಾರಡೋಲಿಗೆ ಮಹಾತ್ಮರ ಆಗಮನ.

(೨)

ಎಲ್ಲ ಪ್ರಮುಖರ ದಸ್ತಗಿರಿಯು

ಬಾರಡೋಲಿಯ ಒಪ್ಪಂದಿಕೆಯ ಆಶೆಯುಳಿಯಲಿಲ್ಲ. ಸರಕಾರದವರು ಅರ್ಥಸತ್ತದಂಥ ಅಷ್ಟೇ ಕಾಣುವಂಥ ಜಾಹೀರನಾಮೆಯನ್ನು ಪ್ರಸಿದ್ಧ ಮಾಡಿ, ಕ್ರಮ ಪ್ರಕಾರ ಎಲ್ಲ ಮುಂದಾಳುಗಳನ್ನು ಅಸಿಮುಸ ನೋಡದೆ ದಸ್ತಗಿರ ಮಾಡುವರು. ೮೦ ಸಾವಿರ ರೈತರಿಗೆ ನಾಯಕನಿಲ್ಲದಂತಾಗುವದರಿಂದ, ಇವರ ಸಹಾಯಕ್ಕಾಗಿ ಮಹಾತ್ಮರು ಸ್ವತಃ ನಿನ್ನಿನ ದಿವಸ ಬಾರಡೋಲಿಗೆ ದಯಮಾಡಿದ್ದಾರೆ.

ಲಾಲಾ ಹರಕಿಶನಲಾಲರು ಚಿತ್ರಾಳ ಪ್ರಾಂತದಲ್ಲಿ ಸಾರ್ವಜನಿಕ ಕಟ್ಟಿಗೆಯ ಗುತ್ತೇದಾರರಾಗಿದ್ದಾರೆ. ಕಾಬೂಲ ಹೊಳೆಯುಗುಂಟ ಈ ಕಟ್ಟಿಗೆಯನ್ನು ಹಿಂದುಸ್ಥಾನಕ್ಕೆ ತರಲು ಕಾಬೂಲದ ಸರಕಾರದ ಕರಾರುಪತ್ರ ಮಾಡಿಕೊಂಡರು.

ಲೋಕಮಾನ್ಯರ ಸ್ಮರಣ ಮತ್ತು ಸ್ವರಾಜ್ಯದ ದಾಸ್ಯತ್ವ !!

—(೦)—

ಸಾಯಮನ್ನ ಕಮೀಶನದ ಕೂಡ ಸಹಕಾರ ಮಾಡಬೇಕೆಂದು ಮುಂಬಯಿಯ ಕೌನ್ಸಿಲದಲ್ಲಿ ನಡೆದ ಚರ್ಚೆ ಮತ್ತು ವಾದವಿವಾದದ ವೇಳೆಯಲ್ಲಿ ಶ್ರೀ. ನರಿಮನ್ನರು ಮುಂದೆ ಕೊಟ್ಟಂತೆ ಭಾಷಣ ಮಾಡಿದ್ದಾರೆ.

ಇಂದು ಲೋಕಮಾನ್ಯರ ಎಂಟನೆಯ ವಾರ್ಷಿಕ ಸ್ಮರಣದ ದಿವಸ ಈ ಕೌನ್ಸಿಲ ಹಾಲಿನಲ್ಲಿ ಸರ ಚಿನಿಭಾಯಿ ಮಹಾ ಸಾಹೇಬರು ಹಿಂದುಸ್ಥಾನವು ದಾಸ್ಯಪಂಕದಲ್ಲಿ ಸಿಕ್ಕು ಕೊಳೆಯಬೇಕೆಂದು ಠರಾವು ತಂದದ್ದು ದುರ್ದೈವವೇ ಸರಿ. ಸಂ[illegible]ಲರು ಈ ಕೌನ್ಸಿಲ ಹಾಲಿನ ಹೊರಗೆ ಬಂದು, ಈ ಠರಾವನ್ನು ತಂದು, ಇದು ಜನ ಸಮ್ಮತವಾಗುತ್ತದೆಯೋ ಹೇಗೆಂಬದನ್ನು ನೋಡಲಿ. ಕಮೀಶನದ ಬಗ್ಗೆ ಪ್ರಜರ ನಿಜವಾದ ಮತವೇನಿರುತ್ತದೆಂಬದನ್ನು ತಿಳಿಯುವದಕ್ಕೆ ಕೌನ್ಸಿಲವು ಯೋಗ್ಯ ಸ್ಥಳವಲ್ಲವೇ ಅಲ್ಲ. ಹೊರಗೆ ಸಾರ್ವಜನಿಕ ಸಭೆಯಲ್ಲಿ ಈ ಠರಾವನ್ನು ಇದನ್ನು ತರುವಂಥವರನ್ನು ಸಭಿಕರು ಎತ್ತಿ ಒಗೆಯುವರು. ಈ ಕೌನ್ಸಿಲ ಹಾಲಿನಲ್ಲಿ ಮಾತ್ರ ಹಗಲು ಹಾಡೇ ಮೋಸಗಾರಿಕೆಯು ನಡೆಯುವದು. ಇದೊಂದೇ ಕೃತ್ಯದಿಂದ ಹಿಂದುಸ್ಥಾನವು ಎಷ್ಟು ಪುರುಷಾರ್ಥಹೀನವಾಗಿರುತ್ತದೆಂಬದು ವ್ಯಕ್ತವಾಗುತ್ತದೆ

ಸ್ವರಾಜ್ಯವು ಇಂಗ್ಲಂಡಕ್ಕೆ ರಾಷ್ಟ್ರೀಯ ಘಾತಕವಾಗಿರುತ್ತದೆ. ಅದ್ದರಿಂದ ಇಂಗ್ಲಂಡವು ಹಿಂದುಸ್ಥಾನಕ್ಕೆ ಸ್ವರಾಜ್ಯ ಕೊಟ್ಟು, ತನ್ನ ಘಾತಮಾಡಿಕೊಳ್ಳಲಾರದು. ಸರ ವಿಲ್ಯಮ್, ಸ್ಟ್ರಾಸಿ, ಲಾರ್ಡ ಸಾಲಿಸಬರಿ ಸರ ಜಾಯನಸಹಿಕ್ಸರು ಇಂಗ್ಲಂಡ ಹಿತಕ್ಕಾಗಿಯೇ ದುಷ್ಟ ಹಿಂದುಸ್ಥಾನವನ್ನು ಆಳುವಂತೆ ಸಾರಿ ಹೇಳಿದ್ದಾರೆ. ಅದ್ದರಿಂದ ಸಾಯಮನ ಕಮಿಶನದಿಂದ ಹಿಂದುಸ್ಥಾನಕ್ಕೆ ಎಷ್ಟೂ ಹಿತವಾಗಲಾರದು.

ಇಂಡಿಯಾ ಸರಕಾರದವರು ಸರ ಮಾಲಕಮ ಹೇಲಿಸಾಹೇಬರನ್ನು ಅಕ್ಷಾ ಭಾದ ಇರಾಣಿಯ ಗವ್ಹರ್ನರರಾಗಿ ನೇಮಿಸಿದರು. ಈ ನೇಮಣೂಕು ಯುರೋಪಿಯನ್ನರಿಗೇ ಒಪ್ಪಿಗೆಯಾಗಿಲ್ಲ.

— —

ಸೌಥ ಇಂಡಿಯನ್ನ ರೇಲ್ವೆ ಕಂಪನಿಯವರು ಪೋದನೂರಿನ ವರ್ಕ್‌ಶಾಪಿನ ಭುಂಗಾ ಸಿದರಿಸಿದರು. ೧೨೦೦ ಜನರಲ್ಲಿ ಮೂವರೇ ಕೆಲಸಕ್ಕೆ ಹೋದರು.

ರಿಂಗ ಮತ್ತು ಟರ್ನರರ ಸೆಶನ ಕಮಿಟಿ.

ಬೆಳಗಾವಿಯಲ್ಲಿ ರಾ. ಬ. ಪಾಲೇಕರರ ಮುಂದೆ ನಡೆದ ಪೋಲೀಸ ಲಂಚದ ಪ್ರಕರಣದಲ್ಲಿ ಮೆಸರ್ಸ ರಿಂಗ ಮತ್ತು ಟರ್ನರರು ತಾವು ಯುರೋಪಿಯನ್ನರಿದ್ದರಿಂದ ತಮ್ಮ ವಿಚಾರಣೆಯು ಸೆಶನ ಕಮಿಟಿಯಾಗಬೇಕೆಂದು ಕೋರ್ಟಿಗೆ ವಿನಂತಿ ಮಾಡಿಕೊಂಡದ್ದರಿಂದ, ಕಮೀಟ ಮಾಡಲ್ಪಟ್ಟರು. ಇವರ ಕೂಡ ವಿ. ಮೋಘೆಯವರ ವಿಚಾರಣೆಯೂ ಸೆಶನದಲ್ಲಾಗುವದು.

— —

ಪತಿಯಾಳದಲ್ಲಿ ಜರ್ಮನಿಯ ಬ್ಯಾಂಡು-

ಪತಿಯಾಳದ ಮಹಾರಾಜರು ಬರ್ಲಿನ ಪಟ್ಟಣವನ್ನು ನೋಡಲಿಕ್ಕೆ ಹೋದಾಗ- ಅಲ್ಲಿಯ ಬ್ಯಾಂಡಿನ ಒಂದು ಕಂಪನಿಯನ್ನು ತಮ್ಮ ದೇಶಕ್ಕೆ ತರುವ ವಿಚಾರ ಮಾಡಿದ್ದಾರೆ. ಬ್ಯಾಂಡ ಮಾಸ್ತರನಿಗೆ ತಿಂಗಳಿಗೆ ೧೮೦೦ ರೂಪಾಯಿ ಸಂಬಳ. ಈತನಿಗೆ ಬಂಗಲೆ, ಆಳು, ಕುದುರೆ, ಊಟ ಮುಂತಾದ್ದನ್ನು ದರಬಾರದಿಂದಲೇ ಒದಗಿಸುವರು. ಇವನ ಸಂಗಡ ೬೦ ಜನ ಉಪವಾಲಗದವರು ಬರುವರು. ಇವರಿಗೂ ಊಟಹಾಕಿ, ತಿಂಗಳಿಗೆ ೬೫ ರೂಪಾಯಿ ಸಂಬಳ ಕೊಡುವರು.

— —

ರೇಲ್ವೆಯ ಸಂಪುಗಳ ಕೋಲಾಹಲ-

ಬಾರಡೋಲಿಗಿಂತ ಭಯಂಕರವಾಗಿ ರೇಲ್ವೆಯ ಸಂಪುಗಳ ಕೋಲಾಹಲವೆಳುವ ದುರ್ಲಕ್ಷಣಗಳಾಗಿವೆ. ಸಮಸ್ತ ರೇಲ್ವೆಗಳ ಕೂಲಿಕಾರರ ಪ್ರತಿನಿಧಿಗಳ ಒಂದು ಗುಪ್ತ ಕಮೀಟಿಯು ಮದ್ರಾಸದಲ್ಲಿ ಸದರ್ನ ಮರಾಠಾ ರೇಲ್ವೆ ಕೂಲಿಕಾರರ ಯೂನಿಯನದಲ್ಲಿ ಕೂಡುವದು. ಮುಂಬಯಿಂದ ಜಾಬವಾಲಾ ಮತ್ತು ಜೋಗಳೇಕರರು ಕಮಿಟಿಗೆ ಹೋಗುವವರಿಂದ, ಆದರಲ್ಲಾಗುವ ಠರಾವುಗಳ ಊಹೆ ಮಾಡಬಹುದು. ಕಮೀಟಿಯು ಬಾಗಿಲ ಹಾಕಿಕೊಂಡು ಠರಾವು ಮಾಡುವದು. ಠರಾವಿನ ಪ್ರತಿಗಳನ್ನು ವರ್ತಮಾನಪತ್ರಕಾರರಿಗೆ ಪ್ರಸಿದ್ಧಿಗಾಗಿ ಕೊಡುವರು.

— —

ಲಿಲೋವಾದ ಸಂಪು-

ಬಂಗಾಲ ರೇಲ್ವೆಯ ವರ್ಕ್‌ಶಾಪಿನಲ್ಲಾದ ಸಂಪು ಮುರಿಯಬೇಕೆಂದು ಕಂಪನಿಯವರು ಭುಂಗಾ ಒದರಿಸಿ, ಬಾಗಿಲ ತೆರೆದರು. ಹತ್ತು ಸಾವಿರ ಕೂಲಿಕಾರರು ಒಳಗೆ ಹೋದರು. ಆದರೆ ಕೆಲಸ ಮಾಡದೆ, ಸತ್ಯಾಗ್ರಹ ಮಾಡಿ, ತಾವು ಸ್ಥಳ ಹಿಡಿದು ಕೂತರು. ಕಂಪನಿಯವರು ಬೇಸತ್ತು, ಇವರಿಗೆ ಹೋಗಲಿಕ್ಕೆ ಹೇಳಿ, ಬಾಗಿಲ ಹಾಕಿದರು. ಲಿಲೋವಾದ ಸಂಪು ಪ್ರಾರಂಭವಾಗಿ ಮೂರು ತಿಂಗಳಾಯಿತು. ಇದೊಂದೇ ಸಂಗತಿಯಿಂದ ಇಡೀ ಹಿಂದುಸ್ಥಾನದ ರೇಲ್ವೆಗಳ ಸಂಪಾದರೆ- ಎಂಥ ಪ್ರಸಂಗ ಒದಗುವದೆಂಬದನ್ನು ಹೇಳಬೇಕಾಗುವದಿಲ್ಲ.

— —

ಸ್ವರಾಜ್ಯ ಕಮಿಟಿ ವಿಚಾರ-

ಸರ್ವ ಪಕ್ಷೀಯರ ಪರಿಷದ ಬರೆದ ಸ್ವರಾಜ್ಯ ಕಮೀಟಿಯ ಯೋಜನೆಯನ್ನು ಅಲ್ಲಿಯ ಪ್ರಮುಖರಿಗೆ ತೋರಿಸುವದಕ್ಕಾಗಿ ಪಂಡಿತ ಮೋತಿಲಾಲರೂ, ಸರ ತೇಜಬಹಾದ್ದೂರ ಸಪ್ರುಸಾಹೇಬರೂ ಹೊರಟಿದ್ದು ಪಾಟಣಾಕ್ಕೆ ಹೋಗಿ, ಅಲ್ಲಿ ಇದನ್ನು ಸರ ಅಲ್ಲಿ ಇಮಾಮ ಮತ್ತು ಸಚ್ಚಿದಾನಂದ ಸಿಂಹರಿಗೆ ತೋರಿಸಿದರು.

— —

ಹಾಯಕೋರ್ಟಿನ ಮುಖ್ಯ ಜಡ್ಜರು ಸಿಸ್ಸಿಲಿಯನ್ನರೂ ಆರ್ಬಿಟ್ರೇಟರ ಕಾಯದೆಯನ್ನು ಲಾರ್ಡ ಬರ್ಕನಹೆಡ್ಡ ಸಾಹೇಬರು ಹಿಂದಕ್ಕೆ ಕರೆಸ್ಕೊಂಡರು.

— —

ಸರ ಪಿ ಸಿ ಮಿತ್ರರು ಬಂಗಾಲ ಸರಕಾರದ ಕೌನ್ಸಿಲರರಾಗಿ ನೇಮಿಸಲ್ಪಟ್ಟರು.

— —

ಧಾರವಾಡ—

ಇಲ್ಲಿಯ ಪರ್ಸನಲ್ಲ ಅಸಿಸ್ಟಂಟರಾದ ವಿ. ಗುತ್ತೀಕರರು ೧೫ ನೇ ತಾರೀಖಿನಿಂದ ಪೆನಶನ ತಕ್ಕೊಳ್ಳುವದರಿಂದ, ಇವರ ಸ್ಥಳದಲ್ಲಿ ವಿ. ಕೆ. ಜಿ. ಕುಲಕರ್ಣಿಯವರನ್ನೂ, ಸೊಲ್ಲಾಪೂರಕ್ಕೆ ವರ್ಗಾದ ವಿ ಪೋತದಾರರನ್ನು ಇವರ ಸ್ಥಳದಲ್ಲಿಯೂ ನೇಮಿಸಿದಂತೆ ಸರಕಾರಿ ವರ್ತಮಾನ ಬಂದಿದೆ.

— —

ನಾಳಿನ ದಿವಸ ಶಿರಹಟ್ಟಿಯಲ್ಲಿ ಶ್ರೀ ಹರ್ಡೇಕರ ಮಂಜಪ್ಪನವರಿಂದ ಲೋಕಮಾನ್ಯ ಟಿಳಕ ವಾಚನಾಲಯದ ವಾರ್ಷಿಕೋತ್ಸವದ ಸಮಾರಂಭವಾಗುವದು.

— —

ಇಂದು ಶನಿವಾರ ತಾ. ೪-೮-೨೮ನೇ ದಿವಸ ಸಂಜೆ ೬ ಗಂಟೆಗೆ ಸರಿಯಾಗಿ ಶ್ರೀ ವಾಮನರಾವ ಧಾರವಾಡಕರರವರ ಅಧ್ಯಕ್ಷತೆಯಲ್ಲಿ ಧಾರವಾಡ ಆ. ವ. ಮಂ, ಪರವಾಗಿ ಆರೋಗ್ಯವರ್ಧಕ ವಾಚನಮ ದಿರದಲ್ಲಿ (ಶ್ರೀ ಸಾಠೆಯವರ ಮೇಲಟ್ಟ) ಪ್ರಸಿದ್ಧ ಜ್ಯೋತಿಷಿ ಶ್ರೀ. ಕೃಷ್ಣಶಾಸ್ತ್ರಿ ಘತ್ತೆ ಇವರು "ಆರೋಗ್ಯಶಾಸ್ತ್ರದ ಕೂಡ ಗ್ರಹಗಳ ಸಂಬಂಧ" ಎಂಬ ವಿಷಯವನ್ನು ಕುರಿತು ವ್ಯಾಖ್ಯಾನ ಮಾಡುವರು. ಸರ್ವರೂ ಎಲ್ಲರೂ ಬರಬೇಕಾಗಿ ಕಾರ್ಯದರ್ಶಿಗಳಾದ ಡಾ. ಮಳಿಬೆನ್ನೂರವರು ತಿಳಿಸುತ್ತಾರೆ.

—॥ ಶ್ರೀ ಗುರು ಪ್ರಸನ್ನ ॥—

ಪ್ರತಿಯೊಬ್ಬ ಕುಟುಂಬಕನು ಅವಶ್ಯ ಸಂಗ್ರಹದಲ್ಲಿಡತಕ್ಕಂಥ ಔಷಧ.

ಭಾಸ್ಕರ ಚೂರ್ಣ-

ಸುಪ್ರಸಿದ್ಧ ವನಸ್ಪತಿ ಶಾಸ್ತ್ರಜ್ಞರ ಸೂಚನೆಯ ಮೇರೆಗೆ ಈ ಚೂರ್ಣವು ತಯಾರಿಸಲ್ಪಟ್ಟಿದ್ದು ಇದರ ಸೇವನೆಯಿಂದ ನಾಲ್ಕು ತರದ ಕ್ಷಯರೋಗಗಳು ತ್ವರಿತದಲ್ಲಿಯೇ ನಾಶಹೊಂದುವವು. ಅಜೀರ್ಣ ಅಪಚನ, ಅಮಾಂಶ, ಅಗ್ನಿಮಾಂದ್ಯ ಸಾಂಗ್ರಾಹಿಣಿ, ಹೊಟ್ಟೆಶೂಲೆ, ಹೊಟ್ಟೆನೋವು ಮತ್ತು ಇನ್ನೂ ತಕ್ಕ ತರದ ಧಾತುವಿಕಾರಗಳ ಮೇಲೆ ಇದೊಂದೇ ರಾಮಬಾಣ ಔಷಧವಿರುವದು. ಒಂದು ಚಿವಟಿಗೆಯಷ್ಟು ಈ ಚೂರ್ಣವನ್ನು ಬಾಯಿಯಲ್ಲಿ ಹಾಕಿಕೊಂಡರೆ- ನಾಕು ಪ್ರಸ ಅರ್ಧತಾಸಿನಲ್ಲಿಯೇ ಹಸಿವೆಯಾಗುವದು. ಜೇನೆಯಿಂದ ಗುಣವಾಗಿದ್ದ ಅಶಕ್ತ ವನಸ್ಪರು ಎರಡನೆ ಶಕ್ತಿವರ್ಧಕ ಔಷಧ ತೆಗೆದುಕೊಳ್ಳುವ ಕಾರಣವೇ ಇಲ್ಲಾ. ಹಳ್ಳಿಗಳಲ್ಲಿಯ ಜನರು ಒಂದು ಭಾಸ್ಕರ ಚೂರ್ಣದ ಡಬ್ಬಿಯನ್ನು ತಮ್ಮ ಹತ್ತರ ಇಟ್ಟುಕೊಂಡರೆ- ನಾನಾ ತರಾವತ್ತು ಜೇನೆಗಳಿಗೆ ಉಪಯೋಗವಾಗುವದು. ಒಕ್ಕು ದಿವಸದ ಅನಾರೋಗ್ಯವಿದ್ದರೂ ಮೂರೇ ದಿವಸಗಳಲ್ಲಿ ಗುಣವಾಗುವದು. ಕೇವಲ ವನಸ್ಪತಿಯಿಂದಲೇ ತಯಾರಿಸಿದ್ದ ಈ ಸಿದ್ಧೌಷಧವನ್ನು ಪ್ರತಿಬ್ಬನೂ ಅವಶ್ಯ ಸಂಗ್ರಹದಲ್ಲಿಡತಕ್ಕದ್ದು. ಒಂದು ಡಬ್ಬಿಯ ಕಿಮ್ಮತ್ತು ೧೦ ಆ. ಬೇಕಾದವರು ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು. ಪೋಸ್ಟೇಜ ಬೇರೆ ಸ್ವಾ ಪಾ. ೧ ಆಣೆ.

ಏಜಂಟ — ಬಿ ಬಿ ಟಿಕಾರೆ ಅ್ಯಾಂಡ ಸನ್ಸ, ಮಾರ್ಕೆಟರೋಡ ಧಾರವಾಡ.

ಜಾಹೀರ ನೋಟೀಸು.

ಅನಂತಾಚಾರ್ಯ ಬಿನ ಲಿಂಗಪ್ಪಾಚಾರ್ಯ ಅನೇಗುಂದಿ ಸಾಕೀನ ಹಾನಗಲ್ಲ, ತಾಲ್ಲೂಕ ಹಾನಗಲ್ಲ ಈತನಿಗೆ-

ಕೆಳಗೆ ಸಹಿ ಮಾಡಿದ ಧರ್ಮಾಚಾರ್ಯ ಬಿನ ಲಿಂಗಪ್ಪಾಚಾರ್ಯ ಅನೇಗುಂದಿ ಸಾ॥ ದೇವೀಹೊಸೂರ ತಾಲ್ಲೂಕ ಕರ್ಜಗಿ ನಾನು ಈ ನೋಟೀಸಿನ ದ್ವಾರಾ ನಿನಗೆ ಉತ್ತರ ಕೊಡುವದೇನಂದರೆ- ನೀನು ತಾರೀಖು ೨೪-೭-೧೯೩೮ ನೇ ದಿವ್ಸ ಧಾರವಾಡ ವಿಜಯಪತ್ರದಲ್ಲಿ ಕೊಟ್ಟ ನೋಟೀಸಿನ ಮಜಕೂರು ನನಗೆ ತಿಳಿಯಿತು. ಸದರ ನೋಟೀಸಿನ ಮಜಕೂರು ಅಗದೀ ಸುಳ್ಳು ಲಬಾಡಗಿರಿದು ಇದ್ದು ಎಷ್ಟೂ ಖರೇತನಾ ಇರೋದಿಲ್ಲ ಯಾಕಂದರೆ-

೧ ನೀನು ವ ನಾನು ಏಕೋದರರಿದ್ದದ್ದು ಖರೆ ಆದರೆ ನಮ್ಮ ತಂದಿ ಈಗ ಅಜಮಾಸ ೫೦ ವರ್ಷದ ಕೆಳಗೆ ತೀರಿಕೊಂಡನು. ಆ ಕಾಲಕ್ಕೆ ನಾವು ನೀನು ಅವಿಭಕ್ತರು ಇದ್ದೇವಿ. ಆದರೆ ತಂದಿ ತೀರಿದ ನಂತರ ನೀನು ದುರ್ನಡತೆಗೆ ಅಂದರೆ ಜುಗಾರಿ ರಾಂಡಬಾಜು ವಗೈರೆ ಇನ್ನೂ ಅನೇಕ ಹೇಳಲಿಕ್ಕೆ ಬರದಂಥ ದುರ್ನಡತೆಗಳನ್ನು ಮಾಡಿಕೊಳ್ತಾ ಬಂದದರಿಂದ ನಮ್ಮಾ ನಿಮ್ಮಾ ತಂಟೆ ನಡೆದು ಈಗ ಅಜಮಾಸ ४೦-४೫ ವರ್ಷಗಳ ಹಿಂದೆ ನಾನೂ ನೀನೂ ಬೇರೆ ಆಗಿ ನಮ್ಮ ನಿಮ್ಮ ಹಿಸೆ ಮಾಡಿಕೊಂಡು ನಿನ್ನ ದುರ್ನಡತೆಗಳ ವಗೈರೆ ನಿನ್ನಿಂದಾ ಅಲ್ಲಿ (ಹುಬ್ಬಳ್ಳಿಯಲ್ಲಿ) ಇರೋದು ಆಗದ್ದರಿಂದಾ ನಾನು ನನ್ನ ಹಿಸ್ಸೆಕ್ಕೆ ಬಂದ ಜಂಗಮ ಆಸ್ತಿ ತಗೊಂಡು ಕರ್ಜಗಿ ತಾಲ್ಲೂಕ ದೇವೀಹೊಸೂರಿಗೆ ಬಂದೆನು. ನೀನು ಅದೇ ಊರಲ್ಲಿ ಇರುತ್ತಿದ್ದಿ. ಈ ವರೆಗೂ ನಮ್ಮಾ ನಿಮ್ಮಾ ಭೆಟ್ಟಿ ವ ಮಾತುಕಥಿ ಸಹಾ ಇಲ್ಲಾ. ಹೀಗಿದ್ದು ನೋಟೀಸಿನಲ್ಲಿ ಅವಿಭಕ್ತ ಅಂತಾ ನಮೂದ ಮಾಡಿದ್ದು ಅಗದೀ ಸುಳ್ಳು ಲಬಾಡಗಿರೀ ಆದೆ. ನೀನು ಕೊಟ್ಟ ನೋಟೀಸಿನ ಮಜಕೂರು ಖರೆ ಆಗಲಾರದು.

೨ ನಾನೂ ನೀನೂ ಬೇರೆಯಾಗಿ ನಾನು ದೇವೀಹೊಸೂರಿಗೆ ಒಂದು ವಾಸಮಾಡಿದನಂತರಾ ನನ್ನ ಹಿಸ್ಸೆಕ್ಕೆ ಬಂದ ಪಿತ್ರಾರ್ಜಿತ ಆಸ್ತಿ ಅಂದರೆ (ಒಂದು ಹೂರು ಮನಿ) ಇದ್ದದ್ದನ್ನು ನೀನು ಅಲ್ಲೇ ವಾಸವಾಗಿ ಇದ್ದ ಮೂಲಕ ನನ್ನ ಹಿಸೆ ಮತ್ತು ನಿನ್ನ ಹಿಸೆ ಸಹಿತಾ ಮತ್ತು ನೀನು ಸ್ವತಃ ಹಾನಗಲ್ಲದಲ್ಲಿ ಸಂಪಾದನೆ ಮಾಡಿದ ದೇವಸ್ಥಾನ ಪನಿಯೋಗ ಎವಿನು ವ ಇತರ ಆಸ್ತಿ ಸಹಿತ ನಿನ್ನ ದುರ್ನಡತೆಗಳ ಖರ್ಚಿಗೆ ಸಾಲದೆ ಮಾರಾಟ ಮಾಡಿರುತ್ತೀದಿ. ನಾನು ಹಾಗೆ ಮಾಡದೆ ದೇವೀಹೊಸೂರಿಗೆ ಒಂದು ನನ್ನ ವಿದ್ಯೆಯಿಂದ ಆ.ದರೆ- ಗಾಯನ ವೈರಕಯಲ್ಲಿ ಕಾಲಾ ಬ ದಿಸೋದು ಮತ್ತು ದೈವಕೀ (ಪ್ರಿ ಫೀ ಚಾ) ನಾಡಿಕಾಯ್ದು ಪದರಿಂ ಹಿದು ಸ್ವತಃ ಸಂಪಾದನೆಯಿಂದ ಸದರ ... ಅಂದರೆ- (ನೀನು ನೋಟೀಸಿನಲ್ಲಿ ನಮೂದ ಮಾಡಿದ್ದು) ನಾನು ನನ್ನ ಹಣದಿಂದಾ ಲಿಲಾವಿನಲ್ಲಿ ತಗೊಂಡಿರತೇನೆ. ತಗೋಡಾಗ್ಯೂ ಸದರ ಜಮೀನು ತಂಟಿದಿಂದಾ ನನ್ನ ಕಬಜಾಕ್ಕೆ ೩-४ ಸಾರೆ ಕೋರ್ಟಿನಿಂದ ಕಬಜಾ ಬಂದದ್ದಲ್ಲದೆ ಅಖೈರ ಕಬಜಾ ಮೆ॥ ಮಾಮಲೇದಾರಸಾ॥ ತಾಲ್ಲೂಕ ಹಾನಗಲ್ಲ ಇವರಿಂದ ಈಗ ಅಜಮಾಸ ೧೮-೨೦ ವರ್ಷದ ಕೆಳಗೆ ಕಬಜಾ ಆಗಿ ನನ್ನ ತಾಬಾಕ್ಕೆ ಬಂದದೆ. ಸದರ ಜಮೀನು ನನ್ನ ಸ್ವತಃ ಸಂಪಾದನೆದ್ದು ಇದ್ದು ಇದರ ಮೇಲೆ ನಿನ್ನ ಯಾವ ತರದ ಹಕ್ಕು ಬೋಜಾ ವ ಮಾಲ್ಕಿ ಇಲ್ಲಾ. ನನ್ನ ಮರ್ಜಿ ಬಂದಂತೆ ಮಾಡಲಿಕ್ಕೆ ನಾನು ಮಾಲೀಕನಿರುತ್ತೇನೆ.

೩ ನಾನು ೬೫ ವರ್ಷದ ಜಾಂಬುವಂತನಾದರೆ ನೀನು ಅಂದರೆ ನನ್ನ ಖಾಸ ತಮ್ಮಾ (ಅನಂತಾಚಾರ್ಯನು) ಅದೇ ಜಾಂಬುವಂತನ ವಂಶದ ಪ್ರಾಯದ (೬೦) ವರ್ಷದ ಹನುಮಂತ ಸಂತೆ ಇದ್ದು ನಿನ್ನ ದುರ್ನಡತೆಗಳ ಖರ್ಚಿಗೆ ಆಭಾವಾದ ಮೂಲಕಾ ನಿನ್ನ ವರ್ಗದ ದುರ್ನಡತೆಯ ಜನರ ದುರ್ಬೋಧದಿಂದ ಈ ಸುಳ್ಳು ನೋಟೀಸು ಕೊಟ್ಟಿರುತ್ತೀದಿ. ಮತ್ತು ನನ್ನ ಹಿಸೇದ ಮನಿ ಮಾರಿಕೊಂಡಿದ್ದು ಖರೀದಿ ಹಣದ ಪೈಕಿ ನನ್ನ ಹಿಸೇದ ಅರ್ಧಾ ಹಣಾ ನನಗೆ ಕೊಟ್ಟು ಸದರ ನೋಟೀಸು ತಿರುಗಿ ತಕ್ಕೊಂಡು ನನಗೆ ಕ್ಷಮಾ ಬೇಡಬೇಕು. ಇಲ್ಲದಿದ್ದರೆ ಸುಳ್ಳು ನೋಟೀಸು ಕೊಟ್ಟ ಬಗ್ಗೆ ನಿನ್ನ ಮೇಲೆ ಅಧಿಕಾರವುಳ್ಳ ಹುದ್ದೇದಾರರ ಕಡೆಗೆ ಫಿರ್ಯಾದಿ ಮಾಡಬೇಕು ಅಂತಾ ಮಾಡಿರುತ್ತೇನೆ. ಈಗ ೫೦ ವರ್ಷದ ಆ ಗಾಯಿತು ಬೇರೆ ಇದ್ದು ಹಿಶೆಯಾದ ಬಗ್ಗೆ ನಾನು ಬೇಕಾದಷ್ಟು ಪುರಾವೆ ಕೊಡುತ್ತೇನೆ. ನೀನು ಬಖೈರೆ ಆದ ಬಗ್ಗೆ ಸರಕಾರೀ ದ ಖಲೆ ಸಹಿತ ಕೊಡುತ್ತೇನೆ. ಅಂಬಿನಿಂದಾ ಈವರೆಗೂ ನಿನ್ನ ಮುಖಾವಲೋಕನವನ್ನು ಸಹಾ ಮಾಡಿಲ್ಲಾ. ಮುಂದಾದರೂ ಮಾಡೋದಿಲ್ಲಾ. ಹೀಗಿದ್ದು ನೀನು ಕೊಟ್ಟ ನೋಟೀಸು ಸುಳ್ಳು, ಖೋಟ್ಟಿ, ಲಬಾಡ ಆದೆ. ನಿನ್ನ ಮರ್ಜಿ ಇದ್ದರೆ ದಿವಾಣಿ ಕೋರ್ಟಿಗೆ ಹೋಗಬೇಕು. ಸದರ ನೋಟೀಸಿನ ಉತ್ತರದ ಪಕೀಕತ್ತು ಆಜೂಬಾಜೂ ಗ್ರಾಮಗಳಿಗೆ ತಿಳಿಯಬೇಕೆಂದು ನೀನು ನೋಟೀಸಿನಲ್ಲಿ ನಮೂದ ಮಾಡಿದ ಜನರಿಗೆ ಅಂದರೆ-

೧ ರಾ. ಚಾ. ಚನಬಸಪ್ಪಾ ಅಣ್ಣಾ ಶೆಟ್ಟಿ, ಸಾ॥ ದೇವೀಹೊಸೂರ.

೨ ರಾಮಚಂದ್ರ ಪಟ್ಟಾರ ಕುಲಕರ್ಣಿ ಸಾ॥ ದೇವೀಹೊಸೂರ.

೩ ಗುರಪ್ಪಾ ಹುಲಸೂರ ಸಾ॥ ವರ್ದಿ ತಾಲ್ಲೂಕ ಹಾನಗಲ್ಲ

४ ಕಾಜುಸಾಹೇಬ ತೊಂಡೂರ ಸಾ॥ ವರ್ದಿ ತಾಲ್ಲೂಕ ಹಾನಗಲ್ಲ.

೫ ಖುದ್ದ ನಿನಗೆ ಅಂದರೆ ಅನಂತಾಚಾರ್ಯ ಬಿನ ಲಿಂಗಪ್ಪಾಚಾರ್ಯ ಅನೆಗುಂದಿ ಸಾ॥ ಹಾನಗಲ್ಲ. ತಾಲ್ಲೂಕ ಹಾನಗಲ್ಲ.

ಈ ಪ್ರಕಾರ ಜನರಿಗೆ ಒಂದೊಂದು ಪ್ರತಿ ಕಳಿಸುವಂತೆ ಪತ್ರಕರ್ತರಿಗೆ ತಿಳಿಸಿರುತ್ತೇನೆ. ಅಂತಾ ಕೊಟ್ಟ ನೋಟೀಸಿನ ಉತ್ತರಾ. ಸದರ ನೋಟೀಸಿನ ಖರ್ಚು ನಿನ್ನ ತಲಿ ಮೇಲೆ ಆದೆ. ತಿಳಿಯಬೇಕು. ತಾರೀಖು ೩೧-೭-೧೯೩೮ ಇಸ್ವಿ.

ಸಹಿ- ಧರ್ಮಾಚಾರ್ಯ ಬಿನ ಲಿಂಗಪ್ಪಾಚಾರ್ಯ ಅನೇಗುಂದಿ ಸಾ॥ ದೇವೀಹೊಸೂರ.

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡ-ಲ್ಲಿನ ತಮ್ಮ ವಿಜಯ ಪ್ರಿಂಟಿಂಗ್‌ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಿದರು.

R. N. B. 1443

ನಿತ್ಯ ಪತ್ರ — ವಿಜಯ — ಬೆಲೆ ಅರ್ಧ ಆಣೆ

ಸಂಪಾದಕರು:- ಜಗನ್ನಾಥಾಚಾರ್ಯ ಬಾಳಾಚಾರ್ಯ ಹೊಸಕೇರಿ

ವರ್ಷ ೯) ಧಾರವಾಡ ರವಿವಾರ ತಾರೀಖು ೫ ನೇ ಆಗಸ್ಟ ೧೯೨೮ (ಸಂಚಿಕೆ ೧೭೭

ಮೂರನೆ ಕರ್ನಾಟಕ ಸೇವಾದಲದ ಪರಿಷತ್ತು

ಮತ್ತು

ವ್ಯಾಯಾಮ ವಿದ್ಯಾಪೀಠ ಉದ್ಘಾಟನ ಸಮಾರಂಭವು.

ಇದೇ ಆಗಸ್ಟ ೧ ನೇ ತಾರೀಖಿಗೆ ಬಾಗಲಕೋಟೆಯಲ್ಲಿ ನಡೆಯುವದು.

ಅದೇ ಸಮಯದಲ್ಲಿ

ಕೆಳಗೆ ಬರೆದ ಪರಿಷತ್ತುಗಳೂ ಪ್ರದರ್ಶನಗಳೂ ನಡೆಯುವವು.

೧ ಅಖಿಲ ಭಾರತ ಸ್ವಯಂಸೇವಕ ಮಂಡಳದ ಸಭೆಯು. — ೧ ಖಾದಿ ಪ್ರದರ್ಶನ

೨ ಅಖಿಲ ಕರ್ನಾಟಕ ಸಂಪಾದಕರ ಪರಿಷತ್ತು — ೨ ವ್ಯಾಯಾಮ ಉಪಕರಣಗಳ ಪ್ರದರ್ಶನ

೩ ಅಖಿಲ ಕರ್ನಾಟಕ ವ್ಯಾಪಾರಸ್ಥರ ಪರಿಷತ್ತು — ೩ ಅಖಿಲ ಕರ್ನಾಟಕ ಐತಿಹಾಸಿಕ ವಸ್ತು ಪ್ರದರ್ಶನ.

೪ ಅಖಿಲ ಕರ್ನಾಟಕ ಗಾಯಕರ ಪರಿಷತ್ತು — ೪ ಅಖಿಲ ಕರ್ನಾಟಕ ವೃತ್ತ ಪತ್ರಗಳ ಪ್ರದರ್ಶನ.

ಕರ್ನಾಟಕಾಭಿಮಾನಿಗಳಾದ ಸರ್ವರೂ ಈ ಕಾರ್ಯಗಳಲ್ಲಿ ಭಾಗ ತೆಗೆದುಕೊಂಡು ಈ ಅಂಗಗಳನ್ನು ಉತ್ತಮ ರೀತಿಯಿಂದ ಪಾರಗಾಣಿಸಬೇಕೆಂದು ವಿನಂತಿ ಇದೆ.

ಹುಬಳ್ಳಿ, ತಾ ೨೨-೭-೨೮ — ನಾ. ಸು. ಹರ್ಡೀಕರ. ಕಾರ್ಯದರ್ಶಿ ಕರ್ನಾಟಕದಲ

ದಿ ಧಾರವಾಡ ಅರ್ಬನ ಕೋ ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಕಾಯದೆ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಠೇವಣಿಗೆಯು ಏಳು ಲಕ್ಷದ ಮೇಲ್ಪಟ್ಟು. ಚೆಕ್ಕು ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರ [illegible] ನಡೆಯುವದು. ಠೇವಣಿ ಮತ್ತು ಬೇರೆ ತರದ [illegible]ಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮುದ್ದುಪಾಲ ಬಿ. [illegible],
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್ ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ಆರು, ಒಂಬತ್ತು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಠೇವಣಿ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಒತ್ತೆ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತೆ ಬೀಳುತ್ತದೆ.

ಎ. ಕೆ. ಶೆಟ್ಟಿ
ಮ್ಯಾನೇಜಿಂಗ ಡಾಯರೆಕ್ಟರ

ದಿ ಜಯಲಕ್ಷ್ಮಿ ಬ್ಯಾಂಕ ಲಿಮಿಟೆಡ, ಧಾರವಾಡ-

ಸ್ಥಳ- ಮಂಗಳವಾರಪೇಟೆ, [illegible] ವಕೀಲ ಪಾಂಡುರಂಗರಾಯರ ಮನೆ.

೧ ಈ ಬ್ಯಾಂಕಿನಲ್ಲಿ ದಾಗೀನೆಗಳ ಮೇಲೆ ಸೋಯಿ ದರದಿಂದ ಮಾಸ ಮತ್ತು ಒಂದು ಮುದ್ದತಿಯ ತನಕ [illegible] ರಕಮಿನಿಂದ ಬೇಕಾದಷ್ಟು ದೊಡ್ಡ ರಕಮಿನ ತನಕ ಸಾಲ ದೊರೆಯುವದು. ಬಡ್ಡಿಯ ದರ ಸುಲಭ ಸಮಕ್ಷಮ ತಿಳಕೊಳ್ಳಬೇಕು.

೨ ಸರಕಾರಿ ಪ್ರಾಮಿಸರಿ ನೋಟುಗಳು ಖರೀದಿ, ವಿಕ್ರಿ ನಡೆಯುವದು. ಅವುಗಳ ಮೇಲೆ ಸಾಲ ದೊರೆಯುವದು. ಮತ್ತು ಯೋಗ್ಯ [illegible] ಗಿರಾಕಿಗಳಿಗೆ ಲಾಭಕರವಾಗಿ ಅವುಗಳ [illegible] ಮಾಡಿ ಕೊಡಲ್ಪಡುವದು.

೩ ಮುದ್ದತಿ ಠೇವಣಿ ಹಣವನ್ನು ಇಟ್ಟುಕೊಳ್ಳಲಾಗುವದು. [illegible] ರಕಮಿನಿಂದ ದೊಡ್ಡ ರಕಮಿನ ತನಕ ಇಟ್ಟುಕೊಳ್ಳಲಾಗುವದು. ಬಡ್ಡಿಯ ದರವನ್ನು ಸಮಕ್ಷಮ ಅಥವಾ ಪತ್ರವ್ಯವಹಾರದಿಂದ ತಿಳಕೊಳ್ಳಬೇಕು

೪ ಈ ಬ್ಯಾಂಕಿನ ಶೇರುಗಳು ಸೂಟಿಗೆ ದೊರೆಯುವವು.

೫ ಬ್ಯಾಂಕಿಗೆ [illegible] ವ್ಯವಹಾರ ಮೊದಲಾದ [illegible]ಗಳು ನಡೆಯುವವು. ವಿಶೇಷ ಸಂಗತಿಗಳನ್ನು [illegible] ಸಮಕ್ಷಮ ಅಥವಾ [illegible] ವ್ಯವಹಾರದಿಂದ ತಿಳಕೊಳ್ಳಬೇಕು.

ಕೃಷ್ಣ [illegible] ವೆಂಕಟರಾವ ಭಂಡಿವಾ[illegible]
ಮ್ಯಾನೇಜಿಂಗ ಏಜಂಟ.

ವಿಜಯದ ವರ್ಗಣೀ ದರ.

—೦—

ನಿತ್ಯ ಪತ್ರಿಕೆ

೧೨ ತಿಂಗಳಿಗೆ	೧೨-೮-೦ ರೂ
೬ ,,	೭-೦-೦
೪ ,,	೪-೦-೦
ವಾರ ಪತ್ರಿಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ

ಮ್ಯಾ. ವಿಜಯ ಧಾರವಾಡ

ವಿಜಯ.

ಧಾರವಾಡ ತಾ- ೫-೮-೨೮ ನೇ ಇಸ್ವಿ

ಶ್ರೀ.

ಆ ವಿಜಯಂ ಶ್ರೀಶಪ್ರಿಯು |
ನೀ ವಸುಮತಿಯು ನಲಿಸಿತೆ ಸುಹಿತಚರಿತೆಗಳಿಂ ||
ದೀ "ವಿಜಯಂ" ಶ್ರೀಶಕರುಣ |
ನಾ ವಿಹಿತಂಗಳ ವಿವರಿಸಿನಲಿವುದು ನಾಜಂ ||೧||

ರೈತರ ಪರಿಷತ್ತು.

ಬಾಗಲಕೋಟೆಯಲ್ಲಿ ರೈತರ ಸಭೆ.

——(೦)——

ಈ ಮೊದಲು ಪ್ರಸಿದ್ಧ ಮಾಡಿದಂತೆ ಬಾಗಲಕೋಟೆಯಲ್ಲಿ ರೈತರ ಸಭೆಯು ಕೂಡಿತ್ತು. ಆಗ ದೇ. ಗಂಗಾಧರರಾಯರು ಮಾಡಿದ ಭಾಷಣವು-

ಮಧ್ಯಾನ್ಹ ೨ ಘಂಟೆಗೆ ೧-೮-೨೮ ವಿಜಾಪೂರ ಜಿಲ್ಲಾ ರೈತರ ಪರಿಷತ್ತು ಕೂಡಿತ್ತು. ೨ ಸಾವಿರ ಜನರು ಕೂಡುವಷ್ಟು ಮಂಟಪವಿದ್ದರೂ ಅದು ಸಾಲದೇ ಹೋಗಿ ಒಂದು ಸಾವಿರ ಜನರಾದರೂ ಹೊರಗೆ ಸಂದಣಿಯಿಂದ ನಿಂತುಕೊಂಡಿದ್ದರು. ಸ್ವಾಗತಾಧ್ಯಕ್ಷರಾದ ವಿಜಾಪುರದ ಪ್ರಸಿದ್ಧ ವಕೀಲರಾದ ಪಾಂಡುರಂಗರಾವ ದೇಸಾಯಿಯವರ ಭಾಷಣವನ್ನು ಕನ್ನಡದಲ್ಲಿ ದಿವಾಕರರು ಓದಿ ತೋರಿಸಿದನಂತರ ಕರ್ನಾಟಕದ ವಲ್ಲಭಭಾಯಿಯೆಂತಿರುವ ಗಂಗಾಧರರಾಯರು ಪ್ರಚಂಡ ಚಪ್ಪಾಳೆಗಳಿಂದ ಸನ್ಮಾನಿಸಲ್ಪಟ್ಟು ತಮ್ಮ ಭಾಷಣವನ್ನು ಮಾಡಲಿಕ್ಕೆ ಎದ್ದರು. ವರ್ಣಿಸಲಿಕ್ಕೆ ಮುಪ್ಪಿನವರಾದರೂ ಅವರ ಅಪೂರ್ವ ಉತ್ಸಾಹ, ಸರಕಾರದ ಅನ್ಯಾಯದ ಬಗ್ಗೆ ಸಾತ್ವಿಕತ್ವೇಷ, ಈ ಅನ್ಯಾಯವನ್ನು ಪ್ರತೀಕರಿಸುವ ವಿಷಯದಲ್ಲಿ ಬೆಳೆದ ಸ್ವಾರ್ಥತ್ಯಾಗ ಮಾಡುವ ಅವರ ಸಿದ್ಧತೆ, ಇವುಗಳನ್ನು ನೋಡಿದರೆ- ಎಲ್ಲರೂ ಬೆರಗು ಆಗುವಂತಿದೆ. ಅವರು ಅಚ್ಚ ಅತ್ಯಂತ ಸುಲಭ ಹಳ್ಳಿಗಾಡಿನ ಭಾಷೆಯಲ್ಲಿ ರೈತರಿಗೆ ವಿಧವಿಧದ ಪ್ರಶ್ನೆಗಳನ್ನು ಕೇಳಿ ಸರಕಾರದವರು ನಡೆಸಿದ ಅನ್ಯಾಯಗಳನ್ನು ಹೊರಗೆಡವಿದರು. ಗವ್ಹರ್ನರನ್ನಾಹೇಬರ ಬಾರಡೋಲಿಯ ಬಗ್ಗೆ ಮಾಡಿದ ಭಾಷಣವನ್ನು ಕುರಿತು ಗಂಗಾಧರರಾಯರು ಬಹಳೇ ವೀರಶ್ರೀಯುಕ್ತ ಭಾಷಣ ಮಾಡಿದರು. ಯಾವ ದೇಶದ ರೈತರು ಸಂತುಷ್ಟರಿರುವರೋ ಆ ದೇಶದ ಅರಸೊತ್ತಿಗೆಯು ಬದುಕಬಹುದು. ರೈತರು ಅಸಂತುಷ್ಟರಾದರೆ ಆ ಅರಸನ ಆಳಿಕೆಯು ತೀರಿತೆಂದು ಸರ್ವಥಾ ತಿಳಿಯಬೇಕು. ಆದುದರಿಂದಲೇ ನಾರದನು, ಧರ್ಮರಾಜನೇ ನಿನ್ನ ರೈತರು ಸಂತುಷ್ಟರಿರುವರೇನು ಎಂಬ ಮೊದಲನೆಯ ಪ್ರಶ್ನೆಯನ್ನು ಮಾಡಿದ್ದಾನೆ. ಈಗ ಮುಂಬಯಿ ಸರಕಾರದ ಬುದ್ಧಿಯು ಹೋಗತೊಡಗಿದೆ. ಇಲ್ಲಿಯ ರೈತರು ಅಸಂತುಷ್ಟರಾಗಿದ್ದಾರೆ. ಇನ್ನು ಈ ತರದ ಆಡಳಿತವು ಬಹು ದಿವಸ ಬಾಳದೆಂದು ನಾನು ಸಾರುವೆನು. ಗವ್ಹರ್ನರರು ಜನರಿಗೆ ಮದ್ದು ಗುಂಡಿನ ಬೆದರಿಕೆಯನ್ನು ಹಾಕುತ್ತಿರುವರು. ಅದೇ ರೀತಿಯಾಗಿ ಬಾರಡೋಲಿ ರೈತರು ಚನ್ನಾಗಿ ಉತ್ತರವನ್ನು ಕೊಟ್ಟಿರುವರು. ಅದೇ ರೀತಿಯಾಗಿ ಇಲ್ಲಿಯ ರೈತರು ಸಹ ಗಟ್ಟಿ ಧೈರ್ಯದಿಂದ ನಿಲ್ಲಬೇಕಾಗಿದೆ ಈಗ ರೈತರ ಕುತ್ತಿಗೆಗೆ ಕೈಬಂದಿದೆ. ಸತ್ಯದಿಂದ ಧರ್ಮದಿಂದ ನಾವು ಪ್ರತಿರೋಧಿಸಲಿಕ್ಕೆ ಬೇಕು. ಈ ಪ್ರಕಾರ ೧|| ಘಂಟೆ ಮಂಬ-ಮೋಹನನಾಗಿ ಸ್ಫೂರ್ತಿದಾಯಕ ಭಾಷಣವಾಯಿತು.

ಬಂಗಾಲ ಕೌನ್ಸಿಲ.

ಸ್ವರಾಜ್ಯದ ಅರ್ಧ ದಾರಿಯು.

—(೦)—

ಬಂಗಾಲದ ಕೌನ್ಸಿಲದಲ್ಲಿ ಸಾಯಮನ್ನ ಕಮೀಶನದ ಕೂಡ ಸಹಕಾರ ಮಾಡಬೇಕೆಂಬ ಠರಾವು ಪಾಸಾದ ನಂತರ- ಬಂಗಾಲಕ್ಕೆ ಅಥವಾ ಇಡೀ ಹಿಂದುಸ್ಥಾನಕ್ಕೆ ಯಾವ ಪ್ರಕಾರದ ಸ್ವರಾಜ್ಯವಿರಬೇಕೆಂಬುದಾಗಿ ಸರ ಅಬ್ದುಲ ರಹಿಮಾನಸಾಹೇಬರು ತರಬೇಕೆಂದಿದ್ದ ಠರಾವಿನ ಯೋಜನೆಯನ್ನು ಈ ಮೊದಲು ಬರೆದಿದ್ದೇವೆ. ಕೌನ್ಸಿಲದಲ್ಲಿ ಈ ಠರಾವಿನ ಬದಲಾಗಿ, ಹಿಂದುಸ್ಥಾನಕ್ಕೆ ವಸಾಹತಿನ ಸ್ವರಾಜ್ಯದಂಥ ಹಕ್ಕಿರಬೇಕೆಂಬ ಠರಾವು ಪಾಸಾಯಿತು. ಇದರ ಕೂಡ ಇನ್ನೊಂದು ಮಹತ್ವದ ಠರಾವು ಪಾಸಾಯಿತು. ಮುಸಲಮಾನರು ಮತ್ತು ಅಸ್ಪೃಶ್ಯರು ತಮಗೆ ಚುನಾವಣೆಯಲ್ಲಿ ಸ್ವತಂತ್ರವಾದ ಮತದಾರ ಸಂಘವಿರಬೇಕೆಂದು ಒತ್ತಿ ಹೇಳುತ್ತಾ ಬಂದಿದ್ದಾರೆ. ಈ ತರದ ಸ್ವತಂತ್ರ ಚುನಾವಣೆಯ ಹಕ್ಕು ಇರಬಾರದೆಂಬ ಠರಾವು ಬಹುಮತದಿಂದ ಪಾಸಾಯಿತು.

ಮೇಲಿನ ಎರಡೂ ಠರಾವುಗಳು ಪಾಸಾಗುವಾಗ ಯುರೋಪಿಯನ್ನ ಮೆಂಬರರು ಊರು ಸಪ್ಪಳವೂ ಹಾಕುವಷ್ಟು ಹೊಂಗೆ ಎಂಬುದಾಗಿ ತಟಸ್ಥವೃತ್ತಿಯಿಂದಿದ್ದರು. ಕೌನ್ಸಿಲ ಸಭೆಯಲ್ಲಿ ಐಕ್ಯವಿಲ್ಲೆಂದು ಸಾಯಮನ್ನ ಕಮೀಶನಕ್ಕೆ ತಿಳಿಯಬೇಕೆಂದು ಇವರು ಈ ಯುಕ್ತಿ ಮಾಡಿದರು. ಆದನ್ನರಿತು ಶ್ರೀ ಸೇನಗುಪ್ತರು ಅವರಿಗೆ ಸ್ಪಷ್ಟವಾದ ಉತ್ತರ ಕೊಟ್ಟರು. ಹಿಂದುಸ್ಥಾನದ ಭವಿತವ್ಯ ಮತ್ತು ರಾಜ್ಯಘಟನೆಯನ್ನು ಹಿಂದೀ ಜನರೇ ಗೊತ್ತುಪಡಿಸುವರು. ಯುರೋಪಿಯನ್ನರನ್ನು ನಂಬಿ ನಡೆಯತಕ್ಕವರಲ್ಲೆಂದು ಈ ಉತ್ತರವಾಗಿದೆ.

ಸಾಯಮನ್ನ ಕಮೀಶನದ ಕೂಡ ಸಹಕಾರ.

--(೦)--

ಮುಂಬಯಿ ಕೌನ್ಸಿಲದಲ್ಲಿ ಸಾಯಮನ್ನ ಕಮೀಶನದ ಕೂಡ ಸಹಕಾರ ಮಾಡಬೇಕೆಂಬ ವಾದವಿವಾದವು ಬಧ ಮತ್ತು ಗುರುವಾರ ಎರಡು ದಿವಸ ನಡೆದು, ಕೊನೆಯಲ್ಲಿ [illegible] ಪೋಲಿಟು, ನಾಸಿಕ ಬ್ರಾಹ್ಮಣೇತರ [illegible] ಹಿಂದು [illegible] ಬ್ರಾಹ್ಮಣೇತರರ ಹೊರತು [illegible] ಬಹುಪಾಲಿ ಮುಸಲಮಾನರ ಹೋಟುಗಳಿಂದ ಕಮೀಶನದ ಕೂಡ ಸಹಕಾರ ಮಾಡಬೇಕೆಂಬ ಠರಾವು ಪಾಸಾಯಿತು. ಸರಕಾರ ಪಕ್ಷಕ್ಕೆ ೬೪ ಮತ್ತು ಲೋಕಪಕ್ಷಕ್ಕೆ ೪೦ ಮತಗಳು ಬಿದ್ದವು. [illegible] ದ್ವಯರಾದ ಕಾಂಬಳೆ ಮತ್ತು [illegible] ಬ್ರಾಹ್ಮಣೇತರ ಪಕ್ಷಕ್ಕೆ ಸೇರಿದ್ದರೂ, [illegible] ಕಮೀಶನಕ್ಕೆ ಬಹಿಷ್ಕಾರ ಹಾಕಿದಂಥ [illegible] ಇವರು ದಿವಾನ ಬಾಧವರಾಯರ [illegible] ಧೈರ್ಯದಿಂದ ಕಮೀಶನದ ವಿರುದ್ಧ ಹೋಟು ಕೊಟ್ಟದ್ದು ಸ್ತೋತ್ರಾರ್ಹವಾಗಿದೆ. ಕರ್ನಾಟಕದ ಉಳಿದ ಮೆಂಬರರಲ್ಲಿ ವಿಜಾಪೂರ [illegible] ದೇಸಾಯರ ಅನುಕೂಲ ಮತ [illegible]. ಊಹಿಸಬಹುದು ಏಕೆಂದರೆ [illegible] ಹೋಟು ಕೊಟ್ಟವರಲ್ಲಿ ಇವರ ಹೆಸರು ಇರುವದಿಲ್ಲ. [illegible] ದ ಮೆಸರ್ಸ ಜಕ್ಕೊಂದಿ [illegible] ಮತ್ತು [illegible] ವರು ಪ್ರತಿಕೂಲ ಮತಕೊಟ್ಟರೆಂದು ಹೇಳುವ ಅವಶ್ಯಕತೆಯೇ ಇಲ್ಲ.

ಬೆಂಗಳೂರಲ್ಲಿ ವರ್ತಮಾನ ಪತ್ರಗಳ ಬಾಯಿಗೆ ಬೀಗ.

—೦—

ಬೆಂಗಳೂರಲ್ಲಿ [illegible] ಹಿಂದುಗಳು ಮುಸಲಮಾನ ಮುಂದಾಳುಗಳು ಸೇರಿ ಒಂದು ವಿನಂತಿಪತ್ರವನ್ನು ಮುದ್ರಿಸಿ, ಊರತುಂಬ ಹಂಚಿದ್ದಾರೆ. [illegible] ಉದ್ರೇಕಕಾರಕವೆಂದು ವ್ಯರ್ಥವಾಗಿ ಬಗೆದುಕೊಂಡ ಅರಸರು ವಿಶ್ವಕರ್ನಾಟಕ ಮೊದಲಾದ ಮೂರು ನಾಲ್ಕು ಪತ್ರಿಕೆಗಳಿಗೆ ತಮ್ಮ ಪತ್ರಿಕೆಗಳನ್ನು ಪ್ರಸಿದ್ಧ ಮಾಡಬಾರದೆಂದು ತಾತ್ಪೂರ್ತಿಕ ಹುಕುಮನ್ನು ಕೊಟ್ಟಿದ್ದಾರೆ.

ಸಂಪಿನ ಸುಂಕ ಮೈಸೂರಿಗೆ ಒದೆಯಿತು.

—(೦)—

ಬೆಂಗಳೂರಲ್ಲಾದ ಸಂಪಿನ ಸುಂಕವು ಮೈಸೂರಿಗೂ ಹೋಯಿತು. ವಿದ್ಯಾರ್ಥಿಗಳು ಸತ್ಯಾಗ್ರಹವಾಡಬೇಕೆಂಬ ಹಸ್ತಪತ್ರಿಕೆಗಳು ಊರ ತುಂಬ ಹಂಚಲ್ಪಟ್ಟವು. ಟಾವ್ನ ಹಾಲಿನಲ್ಲಿ ಪ್ರಚಂಡ ಸಭೆ ಕೂಡಿತು. ಮಳೆ ಸುರಿಯುತ್ತಿದ್ದರೂ ಎಲ್ಲ ಕುಲಗಳ ಸಾವಿರಾರು ಜನರು ಸಭೆಗೆ ಬಂದರು. ಬೆಂಗಳೂರಿನ ವಿದ್ಯಾರ್ಥಿಗಳ ಅಭಿನಂದನ ಮಾಡಿ, ಸರಕಾರ ಪತ್ರಿಕೆಯನ್ನು ನಿಷೇಧಿಸುವ ಮತ್ತು ಮೈಸೂರಿನ ವಿದ್ಯಾರ್ಥಿಗಳೂ ಸತ್ಯಾಗ್ರಹ ಮಾಡಬೇಕೆಂಬ ಠರಾವು ಪಾಸಾಯಿತು. ಮರುದಿವಸ ವಿದ್ಯಾರ್ಥಿಗಳು ಸತ್ಯಾಗ್ರಹಮಾಡಿ, ಶಾಲೆಗೆ ಶರಣು ಕೊಡೆದು, ಊರ ತುಂಬ ಮೆರವಣಿಗೆ ತೆಗೆದು, ಸರಕಾರದ ಪತ್ರಿಕೆ ಮತ್ತು ಕೃತ್ಯವನ್ನು ನಿಷೇಧಿಸುತ್ತ ಮರಣ ಅಥವಾ ಸ್ವಾತಂತ್ರ್ಯವೆಂದು ಕೂಗುತ್ತ ಪಟ್ಟಣದ ತುಂಬ ಕೋಲಾಹಲ ಹೆಬ್ಬಿಸಿದರು.

ಶೈವ- ವೈಷ್ಣವರ ಹೊಡದಾಟ.

—(೦)—

ದಿಲ್ಲಿ ಚಾಂದಣಿ ಚೌಕಿನಲ್ಲಿ ಒಂದು ದೇವಾಲಯವುಂಟು. ಇದರ ವ್ಯವಸ್ಥೆಯನ್ನು ವೈಷ್ಣವ ಪಂಥದ ಮಹಂತರು ನೋಡುತ್ತಿದ್ದಾರೆ. ದೇವರ ಪೂಜೆ ಮತ್ತು ನೈವೇದ್ಯವನ್ನು ಇವರೇ ಮಾಡುವರು. ಆದರೆ ಶೈವ ಪಂಥದವರು ದೇವರು ತಮ್ಮವನೆಂದು ದೇವಾಲಯವನ್ನು ಆಕ್ರಮಿಸಲು- ಹುಂಬಗುಕ್ತಿಗೆಯ ಕಾಯದೆಯನ್ನು ಕಯ್ಯಲ್ಲಿ ತಕ್ಕೊಂಡು, ದೇವಾಲಯ ಪ್ರವೇಶ ಮಾಡಿದರು. ವೈಷ್ಣವರಿಗೂ, ಶೈವರಿಗೂ ದೇವರ ಸಮಕ್ಷಮ ಹೊಡದಾಟವಾಯಿತು. ಪೋಲಿಸರು ಒಂದು ದಂಗೆ ಮುರಿದರು. ವೈಷ್ಣವ ಸ್ವಯಂಸೇವಕರು ದೇವಾಲಯದ ರಕ್ಷಣೆ ಮಾಡುತ್ತಿದ್ದಾರೆ. ಪೋಲಿಸರು ಶೈವರ ಮೇಲೆ ಫಿರ್ಯಾದಿ ಮುಚ್ಚಳಿಕೆಯ ಕೆಲಸ ನಡಿಸಿದ್ದಾರೆ.

ಸಕ್ತಿ ಶಿಕ್ಷಣದ ಕಾಯದೆಯ ಪ್ರತಾಪ.

ಮಕ್ಕಳನ್ನು ಶಾಲೆಗೆ ಕಳಿಸದ್ದಕ್ಕೆ ಶಿಕ್ಷೆ.

ಸೊಲ್ಲಾಪೂರ ಪಟ್ಟಣದಲ್ಲಿ ಸಕ್ತಿಯ ಶಿಕ್ಷಣದ ಕಾಯದೆಯು ಅಮಲಿನಲ್ಲಿ ಬಂದಿದೆ. ಅನೇಕ ಜನರು ತಂತಮ್ಮ ಮಕ್ಕಳನ್ನು ಶಾಲೆಗೆ ಕಳಿಸಲಿಲ್ಲ. ಕೊನೆಗೆ ಇವರ ಮೇಲೆ ಸಕ್ತಿಯ ಕಾಯದೆಯ ಪ್ರಕಾರ ಫಿರ್ಯಾದಿ ಮಾಡಲ್ಪಟ್ಟಿತು. ಮ್ಯಾಜಿಸ್ಟ್ರೇಟರು ಇವರಿಗೆ ದಂಡ ಮಾಡಿದ್ದಲ್ಲದೆ, ಮಕ್ಕಳನ್ನು ಶಾಲೆಗೆ ಕಳಿಸಲೇ ಬೇಕೆಂದು ಹುಕುಮು ಮಾಡಿ, ಮುಚ್ಚಳಿಕೆ ಬರಿಸಿಕೊಂಡರು.

ಮ್ಯುನಿಸಿಪಲ ಚುನಾವಣೆ

ಮತ್ತು

ಹೆಂಬರನಾಗುವ ಅಪಾತ್ರತೆ.

—(೦)—

ಸೊಲ್ಲಾಪೂರ ಮ್ಯುನಿಸಿಪಾಲಿಟಿಯ ಚುನಾವಣೆಯಲ್ಲಿ ಐವರು ಉಮೇದವಾರರು ಮ್ಯುನಿಸಿಪಾಲಿಟಿಯ ಬಾಕಿ ಕೊಡತಕ್ಕದ್ದಿತ್ತು. ಚೀಫ ಅಫೀಸರರು ಇವರ ಮೇಲೆ ನೋಟೀಸು ಮಾಡಿದರು. ನಾಲ್ವರು ಕೊಟ್ಟರು. ಮಿ. ಶಹಾ ಎಂಬವರು ಕೆಲ ರಕಮು ಕೊಟ್ಟು, ಉಳಿದ ರಕಮಿನ ದೆಸೆಯಿಂದ ತಕರಾರು ತೆಗೆದರು. ಆದರೂ ಚೀಫ ಅಫೀಸರರ ರಿಪೋರ್ಟಿನ ಮೇರೆಗೆ ಕಲೆಕ್ಟರರು ಇವರ ಉಮೇದವಾರಿಯನ್ನು ರದ್ದುಪಡಿಸಿದರು. ಅನ್ಯಾಯವಾಗಿ ಉಮೇದವಾರಿಯನ್ನು ರದ್ದುಪಡಿಸಿದರೆಂದು, ಶಹಾ ಸಾಹೇಬರು ನಿಂತ ವಾರ್ಡಿನ ಮಿಕ್ಕ ಉಮೇದವಾರರೂ ತಮ್ಮ ಉಮೇದವಾರಿಯನ್ನು ಹಿಂದಕ್ಕೆ ತಕ್ಕೊಂಡರು.

ಇಂಗ್ಲಿಷರಿಗೆ ಅನುಕೂಲವಾಗಿ ಹಿಂದೀ ಜನರು

ಯುದ್ಧ ಮಾಡಬಾರದೆಂಬ ಚಳವಳಿಯು.

—(೦)—

ಅಮೇರಿಕೆಯ ಅಧ್ಯಕ್ಷರು ಜಗತ್ತಿನಲ್ಲಿ ಯುದ್ಧವಾಗಬಾರದೆಂದು ಎಲ್ಲ ರಾಷ್ಟ್ರಗಳ ಕೈಕಟ್ಟಿಹಾಕುವಂಥ ಉದ್ಯೋಗ ಕೈಕೊಂಡು, ಇದೇ ಉದ್ದೇಶ್ಯವಾಗಿ ಈಗ ಪಾರೀಸಕ್ಕೆ ಬರತಕ್ಕವರಿದ್ದಾರೆ. ಹೊರಗೆ ಶಾಂತಿವಿನಿಸಿದರೂ, ಒಳಗಿನ ಅಸೂಯವು ಬೂದಮುಚ್ಚಿ ಕೆಂಡವಾಗಿದೆ. ಯಾವಾಗ ಬೂದಿ ಹಾರಿ ಯುದ್ಧ ಹತ್ತುವದೆಂಬ ನಿಯಮವಿಲ್ಲ. ಈ ನಂತರದ ಯುದ್ಧವು ಎಲ್ಲಿ ಹತ್ತಿದರೂ, ಇಂಗ್ಲಿಷರಿಗೂ ರಷಿಯರಿಗೂ ಹತ್ತುವದು. ಇದು ಹಿಂದುಸ್ಥಾನದ ಸರಹದ್ದಿನಲ್ಲಿಯೇ ಏಳುವದು. ಇದರ ಪ್ರತ್ಯಕ್ಷ ಸಂಬಂಧವು ಪಂಜಾಬಕ್ಕೆ ಹತ್ತುತ್ತದೆ ಆದುದರಿಂದ ಪಂಜಾಬಿಗಳು ಈಗಿನಿಂದಲೇ ಎಚ್ಚರಾಗಿದ್ದಾರೆ. ಲಾಹೋರಿನ ಜ್ಯಾನಿಸ್ಟರ ಧುನಿಚಂದರೇ ಮೊದಲಾಗಿ ಕಾಂಗ್ರೆಸ ಮತ್ತು ಖಿಲಾಫತ ಪಕ್ಷದ ಪ್ರಮುಖರು ಒಂದು ಹಸ್ತಪತ್ರಿಕೆಯನ್ನು ಪ್ರಸಿದ್ಧ ಮಾಡಿ, ಸಾಮ್ರಾಜ್ಯವಾದಿಗಳು ಈ ನಂತರ ಮಾಡುವ ಯುದ್ಧದಲ್ಲಿ ತಾವು ಸೇರತಕ್ಕದ್ದಲ್ಲೆಂದೂ, ರಶಿಯಾ ಮತ್ತು ಅಫಗಾಣಿಸ್ಥಾನವು ಹಿಂದುಸ್ಥಾನದ ಹಿತೈಷಿಯಾಗಿರುವದರಿಂದ, ಇಂಗ್ಲಿಷರು ಮಾಡುವ ಯುದ್ಧದಲ್ಲಿ ತಾವು ಭಾಗತಕ್ಕೊಳ್ಳಬಾರದೆಂದು ಹೇಳಿದ್ದಾರೆ.

ಸರದಾರ ಪಟೇಲರು ಸರದಾರರೇ !

ಮಹಾತ್ಮರು ಅವರ ಕೈಕೆಳಗಿನ ಸಿಪಾಯಿ !!

ಪಟೇಲರನ್ನು ಪುಣೆಯಲ್ಲಿಯೇ ಹಿಡಿಯುವ ವಿಚಾರ.

ಕೌನ್ಸಿಲರರಾದ ಸರ ಚುನಿಲಾಲ ಮೆಹ್ತಾ ಮತ್ತು ಬೇರೆ ಕೌನ್ಸಿಲ ಮೆಂಬರರ ವಿನಂತಿಯ ಮೇರೆಗೆ ಸರದಾರ ಪಟೇಲರು ಪುಣೆಗೆ ಬಂದಿದ್ದಾರೆ. ಅಲ್ಲಿ ಇವರಿಗೂ ಗವ್ಹರ್ನರಸಾಹೇಬರಿಗೂ ರಾಜೀವಿಚಾರ ನಡೆದ್ದರೆ- ಸರಕಾರದ ಗಳ ದಿವಸಗಳ ಮುದ್ದತ್ತು ಮೀರಿ ತಮ್ಮನ್ನು ಹಿಡಿಯುವತನಕ ಸರದಾರರು ಸರ ಚುನಿಲಾಲ ಪುಣೆ ಮನೆಯಲ್ಲಿಯೇ ವಾಸವಾಗಿರುವರು.

ಸರದಾರರ ಕೆಲಸ ಮಾಡಲು ಮಹಾತ್ಮರು ಬಾರಡೋಲಿಗೆ ಬಂದಿದ್ದಾರೆ. ಸರದಾರರು ಸರದಾರರೇ! ತಾವು ಅವರ ಕೈಕೆಳಗಿನ ಸಿಪಾಯಿಯಾಗಿ ಕೆಲಸಮಾಡತಕ್ಕವರೆಂದು ಮಹಾತ್ಮರು ಜಾಹೀರ ಮಾಡಿದ್ದಾರೆ.

ಖಿಲಾಫತದ ಮ್ಯಾನೇಜರನ ಮೇಲೆ ಫಿರ್ಯಾದಿ.

ಮುಂಬಯಿಯಲ್ಲಿ ಖಿಲಾಫತ ಪತ್ರದ ಮ್ಯಾನೇಜರರಾಗಿದ್ದು, ಈಗ ಇತ್ತೆಹಾದ ಪತ್ರದ ಸಂಪಾದಕರಾದ ಅಲ್ಲಿಬಹಾದ್ದೂರಖಾನರ ಮೇಲೆ ಖಿಲಾಫತದ ಏಳು ನೂರು ರೂಪಾಯಿ ಕೊಡಬೇಕೆಂಬ ದಾವೆಯಾಯಿತು. ಕೋರ್ಟಿನಲ್ಲಿ ಖಿಲಾಫತದ ಲೆಖ್ಖದ ಪುಸ್ತಕಗಳು ಹಾಜರಾದವು. ಲೆಖ್ಖ ನೋಡುತ್ತೇವೆಂದು ಅಲ್ಲಿಬಾನರು ಪುಸ್ತಕಗಳನ್ನು ತಕ್ಕೊಂಡು ಅದರಲ್ಲಿ ತಮಗೆ ಸಂಬಂಧವಿದ್ದ ಪಾನುಗಳನ್ನು ಪಾವತಿಯನ್ನು ಹರಿದು ಹಾಕಿದರು. ಈ ಆರೋಪದ ದೆಸೆಯಿಂದ ಇವರ ಮೇಲೆ ಫಿರ್ಯಾದಿ ಆಗಿರುತ್ತದೆ.

ನೋಟೀಸಿನ ಉತ್ತರ

ಶ್ರೀ ರಾ|| ರಾ|| ನಾರಾಯಣರಾವ ಗೋಪಾಳರಾವ ಜೋಶಿ ಸಾ|| ಹುಬ್ಬಳ್ಳಿ ದುರ್ಗದ ಬೈಲ ಇವರಿಗೆ—

ಕೆಳಗೆ ಸಹಿ ಮಾಡುವವರ ಕಡೆಯ ನೋಟೀಸಿಗೆ ಉತ್ತರ ಕೊಡುವದೇನಂದರೆ- ನೀವು ವಿಜಯ ವರ್ತಮಾನದಲ್ಲಿ ತಾ|| ೨೨-೭-೨೮ ಮತ್ತು ತಾ|| ೨೯-೭-೨೮ ನೇ ದಿವಸ ಪ್ರಸಿದ್ಧಪಡಿಸಿರುವ ಸುಳ್ಳು ಮತಲಬಿಯ ಮೋಸದ ನೋಟೀಸು ನನಗೆ ಒಪ್ಪಿಗೆ ಮಾನಭಂಗ ಮಾಡಿದ್ದು ಸಹಿಸಲಾರದಷ್ಟು ಖೇದ ಆಗಿರುತ್ತದೆ. ನೀವು ನಿಮ್ಮ ಸ್ವಹಸ್ತದಲ್ಲಿ ತಂದೆ ಮಗನ ಹೆಸರಿನಲ್ಲಿ ನನ್ನನ್ನು ಬೇಕಾದ್ದು ಮಾಡಿ ಲುಕ್ಸಾನ ಮಾಡಿರುತ್ತೀರಿ. ನೀವು ನೋಟೀಸಿನಲ್ಲಿ ಜಾಹೀರ ಪಡಿಸಿದಂತೆ ಅಕ್ಷರಶಃ ಮಾಫಿ ಮತ್ತು ಸಂಗತಿಗಳನ್ನು (೭) ದಿವಸಗಳಲ್ಲಿ ಪ್ರಸಿದ್ಧ ಮಾಡಿಕೊಟ್ಟು ಸಿದ್ಧ ನಷ್ಟ ತೀರಿಸಬೇಕು. ಇಲ್ಲದಿದ್ದರೆ ನಿಮ್ಮ ಮೇಲೆ ಕಾಯದೆ ಪ್ರಕಾರ ಇಲಾಜ ಮಾಡುತ್ತೇನೆ. ಈ ನೋಟೀಸಿನ ಖರ್ಚು ನಿಮ್ಮ ಮೇಲೆ ಇದೆ

ತಾ|| ೪—೮—೨೮ ನೇ ಇಸ್ವಿ

ಸಹಿ ಫಕೀರಪ್ಪಾ ವೃಷಭಪ್ಪ ಜಾಧವ

ನೋಟೀಸು

ಬಾಳಪ್ಪ ಈಶ್ವರಪ್ಪ ಕ್ಷೀರಸಾಗರ ಸಾ|| ನರಗುಂದ ಇವರಿಗೆ—

ಕೆಳಗೆ ಸಹಿ ಮಾಡಿದವನ ಕಡಿಂದ ಜಾಹೀರ ನೋಟೀಸ ಕೊಡುವದೇನೆಂದರೆ- ನಿನ್ನ ಕಡಿಂದ ನನಗೆ ಬರತಕ್ಕ ಮೋಟಾರ ಸರ್ವೀಸ ಬಾಬತ ನೋಟಾರ ದುರಸ್ತಿ ಬಾಬತ ಮತ್ತು ಕರಾರ ಮುರಿದದ್ದರ ಲುಕ್ಸಾನ ಬಾಬತ ವಗೈರೆ ಬರತಕ್ಕ ರಕಮು ವಸೂಲ ಮಾಡುವದಕ್ಕಾಗಿ ದಿವಾಣಿಯಲ್ಲಿ ದಾವೆ ಮಾಡಿರುತ್ತದೆ. ಆದರೆ ನೀನು ಪಂಢರಪುರ ವಿಠೋಬಾನ ಆಣೆ ಮಾಡಿ ವಚನ ಕೊಟ್ಟದ್ದು ತಪ್ಪಿಸಿ ದುಷ್ಟ ಜನರನ್ನು ಸಾಮೀಲ ಮಾಡಿಕೊಂಡು ನನ್ನನ್ನು ಮುಣಗಿಸಬೇಕೆಂಬ ಪ್ರಯತ್ನದಲ್ಲಿ ಇದ್ದೀದಿ ಕಾರಣ ನನ್ನ ನಿನ್ನ ತಂಟೆ ನಡೆದಿರುವಾಗ್ಗೆ ಕೋರ್ಟ ನಿಕಾಲೆ ಆಗದ ಪೂರ್ತಾ ನೀನು ನಿನ್ನ ಆಸ್ತಿ ಅಪರಾತಪರ ಮಾಂಬಾರದು ಬರ ಮಾಡಿದ್ದಾದರೆ ಅದು ಕಾಯದೇಶೀರ ನಡಿಯಲಾರದು.

ನೋಟೀಸು

ಸಂಗಪ್ಪಾ ಹನಮಪ್ಪಾ ನೀಲವಾಣಿ ಮತ್ತು ಚನ್ನಪ್ಪಾ ಬಸಪ್ಪಾ ಚಿಕ್ಕನರಗುಂದ ಸಾಕೀನ ನರಗುಂದ ಇವರಿಗೆ—

ಕೆಳಗೆ ಸಹಿ ಮಾಡಿದವನ ಕಡಿಂದ ಜಾಹೀರ ನೋಟೀಸ ಕೊಡುವದೇನಂದರೆ- ನಿಮ್ಮದು ನಮ್ಮದು ಮೋಟಾರ ಸಂಬಂಧಿ ಹಿಸೆ ರಸೀದ ಲೆಖ್ಖಾ ಈವರೆಗೆ ಎಷ್ಟು ಸಾರೆ ಕೇಳಿದರೂ ದಾದ ಮಾಡದೆ ಲೆಖ್ಖದ ರೂಪಾಯಿಗಳನ್ನು ಕೊಡದಿದ್ದರಿಂದ ಕಾರಣ ಸದರ ಮೋಟಾರ ಸಂಬಂಧಿ ಲುಕ್ಸಾನ ಮತ್ತು ಹಿಸೆ ರಸೀದ ಸಂಬಂಧ ಬರತಕ್ಕದ್ದಾದ ಹಣಕ್ಕೆ ದಾವೆ ಮಾಡಿರುತ್ತದೆ. ಸದರ ದಾವೆ ನಿಕಾಲೆ ಆಗುವದರೊಳಗೆ ನೀವು ನಿಮ್ಮ ಆಸ್ತಿಗಳನ್ನು ವಿಲ್ಹೇವಾಟ ಮಾಡಿ ನನ್ನನ್ನು ಮುಣಗಿಸಬೇಕೆಂಬ ಪ್ರಯತ್ನದಲ್ಲಿ ಇದ್ದೀರೆಂದು ತಿಳಿದಕಾರಣ ನನ್ನ ದಾವೆ ನಿಕಾಲೆ ಆಗುವ ಪೂರ್ತಾ ನೀವು ನಿಮ್ಮ ಆಸ್ತಿ ಖರೀದಿ ಆಗರ ವತ್ತಿ ಕೊಟ್ಟರೆ ಕಾಯದೇಶೀರ ನಡಿಯಲಾರದು.

ಜಾಹೀರನಾಮಾ

ಕೆಳಗೆ ಸಹಿ ಮಾಡಿದವನ ಕಡೆಯಿಂದ ನರಗುಂದ ಕಸಬಾ ರಹಿವಾಸಿಗಳಾದ ಸಮಸ್ತ ಜನರಿಗೆ ಜಾಹೀರ ಪಡಿಸುವದೇನಂದರೆ ಗದಿಗೆಯ್ಯಾ ಬಸಲಿಂಗಯ್ಯಾ ಜರಂತಿಮಠ ಸಂಗಪ್ಪಾ ಹೂವಪ್ಪಾ ನೀಲವಾಣಿ ಚನ್ನಪ್ಪಾ ಬಸಪ್ಪಾ ಚಿಕ್ಕನರಗುಂದ ಸಾವುಕಾರರಲ್ಲಿ ಆರ್ಧಾ ಗದಿಗೆಯ್ಯನವು ಅರ್ಧಾದಲ್ಲಿ ನ ಅರ್ಧಮಾತದು ಹಿಸೆದಿಂದ ಮೋಟಾರ ಕಂದಾಯದಲ್ಲಿ ಮ್ಯಾನೇಜರನ್ನಾಗಿ ನೇಮಿಸಿದ ಬಾಳಪ್ಪಾ ಈಶ್ವರಪ್ಪಾ ಕ್ಷೀರಸಾಗರ ತೇಲಿ ಈತನು ಮೋಸದಿಂದ ಸಂಗಪ್ಪಾ ವ ಚನ್ನಪ್ಪಾ ಇವರನ್ನು ಸಾಮೀಲ ಮಾಡಿಕೊಂಡು ನನ್ನನ್ನು ಮುಣಗಿಸಬೇಕೆಂತ ಇರಾದೆಯಿಂದ ಮೋಟಾರ ಸಂಬಂಧಿ ಆದ ವ್ಯವಹಾರದಲ್ಲಿ ಅನೇಕ ರೀತಿಯಿಂದ ಲುಕ್ಸಾನ ಮಾಡಿರುತ್ತಾರೆ ಆ ಬಗ್ಗೆ ಮೂರೂ ಜನರ ಮೇಲೆ ದಾವೆ ಮಾಡಿ ಕೆಲಸ ನಡಿಸಿರುತ್ತದೆ ಅದನ್ನು ತಿಳಿದು ಬಾಳಪ್ಪಾ ಈಶ್ವರಪ್ಪಾ ಕ್ಷೀರಸಾಗರ ಸಂಗಪ್ಪಾ ಹೂವಪ್ಪಾ ನೀಲವಾಣಿ ಚನ್ನಪ್ಪಾ ಬಸಪ್ಪಾ ಚಿಕ್ಕನರಗುಂದ ಇವರು ನನ್ನನ್ನು ಮತ್ತು ಈ ಹಕೀಕತ ಗೊತ್ತಿಲ್ಲದ ಜನರನ್ನು ಮುಣಗಿಸುವದಕ್ಕಾಗಿ ತಮ್ಮ ತಮ್ಮ ಆಸ್ತಿಗಳನ್ನು ಅಪರಾತಪರಾ ಮಾಡಿ ಖರೀದಿ ಆಗರ ವತ್ತಿ ಬರಕೊಡತಕ್ಕವರಿದ್ದಾರೆ ಕಾರಣಾ ಗೊತ್ತಿಲ್ಲದೇ ಖರಿಸಿಕೊಂಡು ಯಾರೂ ಲುಕ್ಸಾನ ಹೊಂದಬಾರದೆಂದು ಜಾಹೀರಪಡಿಸಿರುತ್ತದೆ ಕದಾಚಿತ್ತ ಈ ಮೂರು ಜನರ ಆಸ್ತಿಗಳನ್ನು ಖರೀದಿ ಆಗರ ವತ್ತಿ ಯಾರಾದರೂ ಬರಿಸಿಕೊಂಡರೆ- ಅದು ಕಾಯದೇಶೀರ ನಡಿಯಲಾರದು.

ತಾ|| ೫—೮—೩೮ ನೇ ಇಸ್ವಿ

ಸಹಿ- ಗದಿಗೆಯ್ಯಾ ಬಸಲಿಂಗಯ್ಯಾ ಜರಂತಿಮಠ

ನೋಟೀಸು

ರಾ|| ರಾ|| ಗಂಗವ್ವಾ ಬಿನ್ನ ಬಸವಂತಪ್ಪಾ ರಜಪೂತ ಸಾಕೀನ ಮುಳಗೋಡ ಇವರಿಗೆ-

ಸಾಯಮನ್ನ ಕಮೀಶನದ ಕೂಡ ಸಹಕಾರ ಮಾಡಬೇಕೆಂದು ಮುಂಬಯಿಯ ಕೌನ್ಸಿಲದಲ್ಲಿ ಠರಾವ ಪಾಸಾದ ಮರುದಿವಸವೇ ಏಳು ಜನರನ್ನು ಆರಿಸುವ ಪ್ರಸಂಗ ಬಂದಿತು. ಬಂಗಾಲದ ಕೌನ್ಸಿಲದಲ್ಲಿ ಸರ ಅಬ್ದುಲ ರಹಿಮಾನರು ತಮಗೆ ವಸಾಹತಿಕ ಸ್ವರಾಜ್ಯವಾದರೂ ಬೇಕೆಂಬ ಠರಾವು ಪಾಸ ಮಾಡಿಕೊಂಡರು. ಇಂಥ ಧ್ಯೇಯ ಅಥವಾ ಠರಾವಿನ ಗೋಜಿಗೆ ಇಲ್ಲಿ ಯಾವನೂ ಹೋಗಲಿಲ್ಲ. ಉಮೇದವಾರರ ಸಂಖ್ಯೆಯಾದರೂ ಎಷ್ಟು? ಮೊದಲು ೨೧, ಆನಂತರ ಇಳಿದದ್ದು ೧೪ ಕ್ಕೆ, ಮುಂದೆ ಉಳಿದವರು ಹತ್ತು, ಇವರಲ್ಲಿ ಆರಿಸಲ್ಪಟ್ಟವರು ಏಳು ಜನರು. ಸ್ವರಾಜ್ಯ ಪಕ್ಷದ ಮೆಂಬರರು ಹೇಟು ತೊಡದೆ ಕೌನ್ಸಿಲದ ಹೊರಗೆ ಬಂದದ್ದರಿಂದ ಉಮೇದವಾರರು ಬಹು ಸರಿಯಾಗಿ ಮತಗಳ ಯಾಚನೆ ನಡಿಸಿಕೊಂಡರು. ಉಮೇದವಾರರಲ್ಲಿ ರಾ. ಬ. ಕಂಬಳಿ ಮತ್ತು ವಿಜಾಪೂರದ ಸಂದೀಸಾಹೇಬರು! ರಾ. ಬ. ಕಂಬಳಿಯವರು ಕಮೀಶನಕ್ಕೆ ಬಹಿಷ್ಕಾರ ಹಾಕುವಂಥವರಾಗಿದ್ದರೂ, ಹೀಗೆ ಉಮೇದವಾರರಾದರೆಂಬುದು ಸಖೇದಾಶ್ಚರ್ಯದ ಸಂಗತಿಯೇ ಸರಿ. ನಾವು ಈ ಮೊದಲು ಊಹಿಸಿದಂತೆ ವಿಜಾಪೂರದ ಸಂದೀಸಾಹೇಬರು ಸಹಕಾರ ಮಾಡಿದ್ದಲ್ಲದೆ, ತಾವೊಬ್ಬ ಮೆಂಬರರಾಗಬೇಕೆಂದೂ ಉಮೇದವಾರರಾಗಿ ನಿಂತುಕೊಂಡಿದ್ದರು. ಆದರೆ ಅವರಿಗೆ ಬಹಳ ಕಮ ಓಟು ಬಿದ್ದದ್ದರಿಂದ ಅವರಿಗೆ ಯಶ ಬರಲಿಲ್ಲ. ಕರ್ನಾಟಕದ ಎಲ್ಲ ಲೋಕನಿಯುಕ್ತ ಮೆಂಬರರು ಕಮೀಶನಕ್ಕೆ ಬಹಿಷ್ಕಾರ ಹಾಕಿದಾಗ, ಈ ಸಂದೀಸಾಹೇಬರಿಗೆ ಸಹಕಾರ ಮಾಡುವದರ ದುರ್ಬುದ್ಧಿಯು ಹೇಗೆ ಹುಟ್ಟಿತೆಂಬುದಕ್ಕೆ ಮುಸಲೀನ ಪಕ್ಷದಿಂದ ತಾವೊಬ್ಬ ಪ್ರಸಿದ್ಧ ಪುರುಷರಾಗಬೇಕೆಂಬ ಯೋಗ್ಯತೆ ಮೀರಿದ ಮಹದಾಶೆಯೇ ಎಂದು ಹೇಳಬೇಕಾಗುತ್ತದೆ.

ಚುನಾವಣೆಯಾದ ಏಳು ಜನರಲ್ಲಿ ಮೂವರು ಮುಸಲಮಾನರಿದ್ದಾರೆ. ಸರಕಾರದ ಬಲಗೈ ಎಂತಿದ್ದ ಖಾನಬಹಾದ್ದೂರ ಭೂಟೋಸಾಹೇಬರು ೧ ನೆಯ ನಂಬರ ಬಂದಿದ್ದಾರೆ. ಇವರ ತರುವಾಯ ಕೆಳಗಿನ ಇಬ್ಬರೂ ಮುಸಲಮಾನರೇ! ಇವರಾದನಂತರ ಮೂವರು ಹಿಂದುಗಳು. ಮೊದಲನೆಯವರು ಡಾಕ್ಟರ ಆಂಬೇಡಕರ! ಇವರು ಅಸ್ಪೃಶ್ಯವರ್ಗದವರು. ಹಳ್ಳಿಗಳಲ್ಲಿ ಅಸ್ಪೃಶ್ಯರನ್ನು ಬಿಟ್ಟೀ ಹಿಡಿಯುವ ಮತ್ತು ಅವರನ್ನು ನಿಕೃಷ್ಟರಾಗಿ ತಿಳಿಯುವದನ್ನು ತಪ್ಪಿಸುವದಕ್ಕಾಗಿ ಇದೇ ವೇಳೆಯಲ್ಲಿ ಕೌನ್ಸಿಲದಲ್ಲಿ ಇವರೊಂದು ಕಾಯದೆ ತಂದಿದ್ದಾರೆ. ಈ ಕಾಯದೆಯನ್ನು ಪಾಸು ಮಾಡದಿದ್ದರೆ ಹೊಲಿಮಾದಿಗರೆಲ್ಲರಿಗೂ ಸತ್ಯಾಗ್ರಹ ಮಾಡಿ, ಕಾಯದೆ ಭಂಗ ಮಾಡಲಿಕ್ಕೆ ಹಚ್ಚುವೆನೆಂದು ಭಯ ಹಾಕಿ ಮೆಂಬರರನ್ನು ಹೆದರಿಸಿಕೊಂಡಿದ್ದಾರೆ. ಆದರೂ ಇವರಿಗೆ ಸರಕಾರ ಮತ್ತು ಮುಸಲಮಾನರು ಓಟು ಕೊಟ್ಟರು. ಐದನೆಯವರು ಹಳೇ ಮಂತ್ರಿ ಜಾಧವರಾಯರು. ಸರಕಾರದವರು ಹಿಂದೀ ಜನರನ್ನು ಕಮೀಶನದಲ್ಲಿ ಸೇರಿಸದೆ ತಪ್ಪು ಮಾಡಿದರೆ ನಾವೇಕೆ ತಪ್ಪು ಮಾಡಬೇಕೆಂಬ ಮತದವರು. ತಾವು ಬ್ರಾಹ್ಮಣೇತರರ ಮುಖಂಡರೆಂದು ಹೇಳಿಕೊಳ್ಳುವದಂತೂ ನಿಶ್ಚಿತ ತರ್ಪಣವಾಗಿರುತ್ತದೆ. ಆದರೆ ಈ ತರ್ಪಣದಲ್ಲಿ ಎಲ್ಲ ಬಂಧುಗಳು ಸೇರಲಿಲ್ಲ. ಇವರ ಸಂಖ್ಯೆ ೧೩ ಇವರಲ್ಲಿ ಏಳು ಜನರೇ ಇವರ ಕೂಡ ತರ್ಪಣ ಮಾಡಿದರು. ಹೀಗಾಗಿ ಇವರಲ್ಲಿ ಇಬ್ಬಗೆಯಾಯಿತು. ಇದ್ದುದರ ಇಷ್ಟು ಪರಿಣಾಮವು ಕಮೀಶನದ ಮೇಲಾಗದೆ ಹೋಗದು. ಕರ್ನಾಟಕದ ಬ್ರಾಹ್ಮಣೇತರರ ಪತಿಯಿಂದ ಯಾರೂ ಸಂಖ್ಯೆಗೆ ಹೋಗದಿದ್ದರೆ ಮತ್ತು ಮಹಾರಾಷ್ಟ್ರ ದೇಶದ ಪ್ರಮುಖ ಬ್ರಾಹ್ಮಣೇತರರು ತಟಸ್ಥರಾದರೆ ಕಮೀಶನವು ಹಾಳು ಸುರಿಯುವದೆಂದು ಹೇಳಬೇಕಾಗ ಅವಶ್ಯವಿಲ್ಲ. ಕೊನೆಯವರಾದ ಸರದಾರ ಮುತಾಲಿಕ ದೇಸಾಯಿಯವರು ಸರದಾರರೆಂದು ಆರಿಸಲ್ಪಟ್ಟಿದ್ದಾರೆ, ಹಿಂದೂ ಅಥವಾ ಬ್ರಾಹ್ಮಣರ ಪ್ರತಿನಿಧಿಯೆಂದು ಆರಿಸಲ್ಪಡಲಿಲ್ಲ. ಸದ್ಯದ ಪರಿಸ್ಥಿತಿಯೇ ವಿಚಿತ್ರವಾದದ್ದು. ಅವರಿಗೆ ಸಹಕಾರ ಮಾಡಿದ ವಿನಹ ಗತ್ಯಂತರವೇ ಇಲ್ಲ. ಬ್ರಾಹ್ಮಣ ಪಕ್ಷ ಬಹೂ ಸದಾಚಾರ ಪತಿಯಿಂದ ಯಾವನೊಬ್ಬ ಮೆಂಬರನಿರಲೆಂದು ಇವರಿಗೆ ಕೆಲವು ಜನರು ಮಾತ್ರ ಓಟು ಕೊಟ್ಟಿದ್ದಾರೆ. ಸರದಾರ ಮತ್ತು ಸಾಹುಕಾರ ಮುಂತಾದ ಮೆಂಬರರ ಮನಸ್ಸಿನಲ್ಲಿ ಇವರೊಬ್ಬರು ಮೆಂಬರರಾಗಬೇಕೆಂಬ ಅಪೇಕ್ಷೆ ಇದ್ದರೆ ಖಾನಬಹಾದ್ದೂರ ಭೂಟೋ ಅಥವಾ ಅವರ ನಂತರದ ಉಳಿದಿಬ್ಬರು ಮುಸಲಮಾನರಿಗೆ ದೊರೆತಷ್ಟು ಮತಗಳು ದೊರೆಯಬೇಕಾಗಿತ್ತು. ಖಾನಬಹಾದ್ದೂರರಿಗೆ ೪೧ ಮತ್ತು ಸರದಾರ ಮುತಾಲಿಕರಿಗೆ ೧೭ ಅಂದರೆ ಇವರ ವಿಷಯವಾಗಿ ಮತದಾರರಲ್ಲಿ ಎಷ್ಟು ಪ್ರೀತಿ ಮಾದರದವೆಂಬೇಕೆಂದನ್ನು ತೋರಿಸುತ್ತದೆ. ಸರಕಾರ ಪಕ್ಷದ ಎಲ್ಲ ಮತಗಳೆಲ್ಲ ಇದ್ದರೆ ಬಹುಮತವಾಗಿ ಹೋಗುತ್ತಿರಲಿಲ್ಲ. ಕೇವಲ ಸಿದ್ಧಾಂತಿಯರಾಗಿ ಕನಿಷ್ಠ ತರವಾಗಿ ಚುನಾಯಿಸಲ್ಪಟ್ಟದ್ದಕ್ಕೆ ಆನಂದವಿಲ್ಲ. ಇವರು ರಾಜಿನಾಮೆಯನ್ನೇಕೆ ಕೊಡಬಾರದು? ಈ ಮತದಲ್ಲಿ ಮುಸಲಮಾನರು ಬೇರೆ ಮೇಲೆ ಮಾಡಿಕೊಂಡರೆ ಅದು ಅವರ ತತ್ವಕ್ಕೆ ತೀರ ವಿರುದ್ಧವಾದದ್ದು! ತಮಗೆ ಸ್ವತಂತ್ರವಾದ ಮತದಾರ ಸಂಘಬೇಕೆನ್ನುವರು ಮಿಶ್ರ ಚುನಾವಣೆಯಲ್ಲಿ ತಮ್ಮವರು ಮೂವರು ಆರಿಸಲ್ಪಟ್ಟದ್ದು ಒಂದು ಪವಾಡವೇ!! ವಾಸ್ತವಿಕವಾಗಿ ಪ್ರಮಾಣಕ್ಕಿಂತ ಹೆಚ್ಚು ಜನರು ಆರಿಸಲ್ಪಟ್ಟ ಬಳಿಕ ಸ್ವತಂತ್ರ ಸಂಘದ ಆವಶ್ಯವಿಲ್ಲೆಂದು ತಮ್ಮ ಬಾಯಿಂದಲೇ ಸಾರಿ ಒಪ್ಪಿದಂತಾಯಿತು. ಸಾರಿಸುವವರು ಯುರೋಪಿಯನ್ನರಿದ್ದು ಯುರೋಪಿಯನ್ನರಿಗೆ ಆನಂದದ ಸಂಗತಿಯೂ ಕಮೀಶನಕ್ಕೆ ಪುಷ್ಟಿಯೂ ಆಗುತ್ತದೆ. ಯುರೋಪಿಯನ್ನರ ರೊಟ್ಟಿಯು ಜಾರಿ ಹಾಲಿನಲ್ಲಿಯೇ ಬೀಳುವದಾಯಿತು.

ಸುರತದ ಹಳೇ ಕಲೆಕ್ಟರರಿಗೆ ನಿರೋಪ.

ಅಸಹಕಾರಿಗಳ ಅಸಹಕಾರ.

ಬಾರ್ಡೋಲಿಯ ಸತ್ಯಾಗ್ರಹದಲ್ಲಿ ಒಳ್ಳೇ ಹೆಸರಿಗೆ ಬಂದಿದ್ದ ಹಳೇ ಕಲೆಕ್ಟರರಾದ ಮಿ. ಹಾರ್ಟಶಾಹೇಬರನ್ನು ಸರಕಾರದವರು ತಾವಾಗಿ ಪಂಚಮಹಾಲಕ್ಕೆ ವರ್ಗಮಾಡಿ, ಇವರ ಬದಲಾಗಿ ಮಿ. ಗ್ಯಾರೆಟಸಾಹೇಬರನ್ನು ನೇಮಿಸಿದರು. ಒಳ್ಳೇ ಬಿಕ್ಕಟ್ಟಿನ ಸಮಯದಲ್ಲಿ ಇವರನ್ನು ವರ್ಗ ಮಾಡಿದ್ದು ಸರಕಾರದ ಬುದ್ಧಿಮಂತಿಕೆಯಾಗಲಿಲ್ಲೆಂದು ಆ ಕರದ ಪಕ್ಷದವರ ಮತವು. ಹೇಗೇ ಆಗಲಿ; ಇವರನ್ನು ವರ್ಗಮಾಡಿದ್ದು ನಿಜ. ಇವರು ಮೂರೇ ದಿವಸಗಳ ಹಿಂದೆ ಸುರತದಿಂದ ಪ್ರಯಾಣ ಮಾಡಿದರು. ಆಗ ಹಿಂದೂ ಜನರೆಲ್ಲರೂ ಅಸಹಕಾರ ಮಾಡಿ ಇವರ ಪ್ರಯಾಣದ ಗೋಜಿಗೇ ಹೋಗಲಿಲ್ಲ. ಮುಸಲಮಾನರು ಮಾತ್ರ ಸಾಹೇಬರ ಸ್ತುತಿಪಾಠಕರಾಗಿ, ಅವರನ್ನು ಅತಿಶಯವಾಗಿ ಸನ್ಮಾನಿಸಿದರು. ಸಟೇಶನದ ಪ್ಲಾಟಫಾರ್ಮದ ಮೇಲೆ ತಮ್ಮ ಬ್ಯಾಂಡು, ಛತ್ರ ಚಾಮರ ಸಹಿತವಾಗಿ ಬಂದು, ದೊಡ್ಡ ಮೆರವಣಿಗೆ ತೆಗೆದು, ಅವರನ್ನು ಸ್ಟೇಶನಕ್ಕೆ ತಂದು, ಸಾಗಗೊಳಿಸಿದರು. ಹಿಂದೂ ಮುಸಲಮಾನ ಭೇದ ನೀತಿಯೇ ಸರಿ.

ಬಾರಡೋಲಿಯ ಬ್ರಹ್ಮಲಿಖಿತ.

ಬಾರಡೋಲಿಯ ಬ್ರಹ್ಮಲಿಖಿತವು ಹೇಗುಂಟೆಂಬುದು ಇಂದು ನಾಳೆ ಇಷ್ಟರಲ್ಲಿ ತಿಳಿಯುವದು. ಸರದಾರ ಪಟೇಲರು ಪೂಣೆಕ್ಕೆ ಬಂದವರು, ಹೊಳ್ಳಿ ಸತ್ಯಾಗ್ರಹದ ಕುರುಕ್ಷೇತ್ರಕ್ಕೆ ಪ್ರಯಾಣ ಬೆಳೆಸಿದರು. ಸರ ಚುನಿಲಾಲಮೇಥಾ ಸಾಹೇಬರ ಮನೆಯಲ್ಲಿಯೇ ಇದ್ದು, ಅವರ ಮನೆಯ ಸುತ್ತಲು ಪೋಲೀಸ ಅಥವಾ ದಂಡಿನ ಕಾವಲುಗಳಿದ್ದು, ಅವರು ದಸ್ತಗೀರರಾಗುವಂಥ ಸಮಯ ಮುಂದೆ ಬಿತ್ತು. ಏಕೆಂದರೆ ಅಲ್ಲಿ ನಡೆದ ರದಬದಲಿಯು ಅತಿ ಮತ್ತು ನಿರಾಶೆಯನ್ನು ಹೇಳುವಂಥ ಪರಿಸ್ಥಿತಿಯನ್ನುಂಟು ಮಾಡಿದೆ. ಸರದಾರ ಪಟೇಲರು ಗವ್ಹರ್ನರಸಾಹೇಬರನ್ನು ಸಹ ಕಾಣಬೇಕಾಗಿತ್ತು. ಆದರೆ ಇವರು ಹೊರಗಿನಿಂದ ಒಂದಂಥ ಕುಂಟ ಜಗಳಗಂಟರಾಗಿದ್ದಾರೆಂದು ಕಮೀಶನರೇ ಮೊದಲಾದ ಅಧಿಕಾರಿಗಳು ಹೇಳಿದ ನಂತರ ಗವ್ಹರ್ನರಸಾಹೇಬರು ಸರದಾರ ಪಟೇಲರ ಮೇಲಿನ ಜವಾಬದಾರಿಯನ್ನು ಅಂಗೀಕರಿಸದೆ, ಸುರತದ ಮೆಂಬರರನ್ನು ಜವಾಬದಾರರಾಗಿ ಹಿಡಿದಿದ್ದರು. ಅದ್ದರಿಂದ ಸರದಾರ ಪಟೇಲರಿದ್ದಲ್ಲಿಗೇ ದೊಡ್ಡ ದೊಡ್ಡ ಸಾವುಕಾರರು ಬಂದು ರಾಜಿಯ ಪ್ರಸ್ತಾಪ ಮಾಡಿಕೊಂಡು ಹೋದರು. ರಾಜಿಯ ಎಲ್ಲ ಕಿರುಕುಳ ವಿಚಾರಗಳೆಲ್ಲ ಒಪ್ಪಿಗೆಯಾದವು. ಸರಕಾರದವರು ಜಪ್ತ ಮಾಡಿ ಲಿಲಾವು ಮಾಡಿದಂಥ ಹೊಲಗಳನ್ನು ಲಿಲಾವಿನಲ್ಲಿ ತಕ್ಕೊಂಡಿದ್ದರಿಂದ, ಮರಳಿಕೊಡುವದೊಂದೇ ಕಲಹ ಉಳಿದದೆಂದು ಹೇಳುವರು. ಲಿಲಾವಿನಲ್ಲಿ ಹೊಲಗಳನ್ನು ಕೊಂಡವರಿಗೆ ಅವರ ಹಣ ತಿರುಗಿ ಕೊಡಿಸಿ, ರೈತರ ಭೂಮಿಯನ್ನು ರೈತರಿಗೆ ಕೊಡಿಸಬೇಕೆಂದು ಮಿಸರ್ಸ ನರಿಮನ್ನ ಮತ್ತು ಕೇರವಾಡದ ನವಾಬಸಾಹೇಬರು ಬಾರಡೋಲಿಗೆ ಹೋಗಿದ್ದಾರೆ. ಶ್ರೀ ಪಟೇಲರು ಮಹಾತ್ಮರ ಕೂಡ ಕೊನೆಯ ಆಲೋಚನ ನಡಿಸಿ, ರಾಜಿಯ ಎಲ್ಲ ಕರಾರುಗಳನ್ನು ಒಪ್ಪುವರು. ರಾಜಿಯು ಆಗದಿದ್ದರೆ ಗವ್ಹರ್ನರಸಾಹೇಬರು ತಮ್ಮ ಮುದ್ದತ್ತನ್ನು ಬೆಳೆಸುವರು. ಕೊನೆಯ ಉಪಾಯ ಕೈಕೊಳ್ಳುವರು. ಮುದ್ದತ್ತು ಮೀರಿದ ಕೂಡಲೆ, ಬಾರಡೋಲಿಯಲ್ಲಿ ಕೈಕೊಳ್ಳುವ ತೀವ್ರತರ ಉಪಾಯಗಳ ದೆಸೆಯಿಂದ ಜೋರಾಗಿ ವ್ಯವಸ್ಥೆ ಮಾಡಿದ್ದಾರೆ. ಪೋಲೀಸಖಾತೆಯ ದೊಡ್ಡ ದೊಡ್ಡ ಕಾಮದಾರರು ಬಂದೋಬಸ್ತಿಗಾಗಿಯೂ, ವೇಜಣಿ ಖಾತೆಯವರು ಹೇಗೆಗೆ ಒಪ್ಪಿ ಮಾಡಬೇಕೆಂಬ ತಯಾರಿಯನ್ನೂ ಮಾಡುತ್ತಲಿದ್ದಾರೆ. ಸರಕಾರ ಪಕ್ಷದ ಪತಿಯಿಂದ ಸಿದ್ಧತೆಯು ಆಗುವಂತೆ ರೈತರ ಪಕ್ಷದಿಂದಾಗುವ ಅಗತ್ಯವಿಲ್ಲ. ಅವರ ಮೂಲಮಂತ್ರ ಗುರುಮಂತ್ರ ಒಂದೇ ಇರುತ್ತದೆ. ಅದು ಸತ್ಯಾಗ್ರಹ. ಅದಕ್ಕೆ ಮದ್ದು, ಕಾಗದ, ಪಾಂಡಿತ್ಯವೇನೂ ಬೇಕಾಗುವದಿಲ್ಲ. ಮೂರ್ಖನ್ನಿಯಾದವರಂತೆ ಕೂತಲ್ಲಿ ಕೂತುಕೊಳ್ಳುವದೂ. ಏಕೆಂದರೆ ಎಳೆದಿರು ಪದೂ ಅಸ್ತ್ರಶಸ್ತ್ರ ಬ್ರಹ್ಮಾಸ್ತ್ರಗಳಿಗೆ ಪ್ರತ್ಯಸ್ತ್ರವಾಗಿರುತ್ತದೆ. ಈ ಅಸ್ತ್ರಾಭ್ಯಾಸಕ್ಕೆ ವಿದ್ಯೆಬೇಕಾಗಿಲ್ಲ. ಮನಸಿನ ನಿಶ್ಚಯವಿದ್ದರಾಯಿತು.

ಬಾರಡೋಲಿಯ ಒಡಂಬಡಿಕೆಯಾಯಿತು.

ನಿನ್ನೆ ಸಾಯಂಕಾಲದಲ್ಲಿ ಬಂದ ಸ್ಪೇಶಲ ಸುದ್ದಿ.

—(೦)—

ಸುರತದಲ್ಲಿ ಹೊಸ ಕಲೆಕ್ಟರರಾದ ಮಿ. ಗ್ಯಾರೆಟ್ಟ ಮತ್ತು ಕೌನ್ಸಿಲರ ಮಿ. ಭೀಮಭಾಯಿ ನಾಯಿಕ ಇವರ ಪ್ರಯತ್ನದಿಂದ ಅನಿರೀಕ್ಷಿತವಾದ ರಾತ್ರಿಯಲ್ಲಿ ಒಪ್ಪಂದವಾಯಿತು. ಜಪ್ತಿಯ ಲಿಲಾವಿನಲ್ಲಿ ಹೊಲಗಳನ್ನು ತಿರುಗಿ ಕೊಡುವದಿಲ್ಲೆಂದು ಗಾಳಿ ಬಂದಾಗ ಕೊಂಡುಕೊಂಡವರು ಜಂಭದ ಮಾತಾಡಿದರು. ಆದರೆ ಮುಂದೆ ಸೋತು ತಮ್ಮ ಬೆಲೆ ತಕ್ಕೊಂಡು ಹೊಲಗಳನ್ನು ತಿರುಗಿ ಕೊಡಬೇಕೆಂದು ಗೊತ್ತಾಯಿತು. ಇವುಗಳ ಬೆಲೆ ೧೫೦೦೦ ರೂಪಾಯಿ ಇದ್ದು, ಸರದಾರ ಪಟೇಲರು ಈ ರಕಮು ಕೊಡತಕ್ಕದ್ದಾಗಿದೆ.

ಸತ್ಯಾಗ್ರಹವನ್ನು ನಿನ್ನೆ ಮಧ್ಯಾಹ್ನಕಾಲದಲ್ಲಿ ನಿಲ್ಲಿಸಿದರು. ರಾಜಿಗೆ ಹೋಗಿದ್ದ ಮಿ. ನರಿಮನ್ನ ಮತ್ತು ಕೇರವಾಡದ ನವಾಬಸಾಹೇಬರು ರಾಜಿಯ ಶರ್ತುಗಳನ್ನು ಬರೆದು ಸರಕಾರಕ್ಕೆ ಪದ್ಧತಿ ಪ್ರಕಾರ ಒಪ್ಪಿಸುವರು.

ಪಾರ್ಲಮೆಂಟಿನ ಮೆಂಬರರನ್ನೇ ಎತ್ತಿಕೊಂಡು ಹೋದರು.

—(೦)—

ಗ್ರೀಸ ದೇಶದಲ್ಲಿ ಪಾರ್ಲಮೆಂಟ ಸಭೆಯ ಚುನಾವಣೆ ನಡೆದಿದೆ. ಚುನಾವಣೆಯ ಕಾಲದಲ್ಲಿ ಉಮೇದವಾರರಾಗಿದ್ದ ಇಬ್ಬರನ್ನು ಪುಂಡ ಜನರು ಎತ್ತಿಕೊಂಡು ಹೋಗಿ, ಗಿರಿಕಂದರಗಳಲ್ಲಿ ಅಡಗಿಸಿಟ್ಟಿದ್ದಾರೆ. ಲಕ್ಷ ರೂಪಾಯಿ ಕೊಡಬೇಕು. ಇಲ್ಲವಾದರೆ ಇವರನ್ನು ಕೊಂದು ಹಾಕುವೆವೆಂದು ಸರಕಾರಕ್ಕೆ ಸವಾಲು ಹಾಕಿದ್ದಾರೆ. ಅಧ್ಯಕ್ಷರಾದ ಪ್ರೆಸಿಡೆಂಟ ಸಾಹೇಬರು ಸ್ವತಃ ಇವರನ್ನು ಶಿಕ್ಷಿಸಲು ಸೇನೆಯೊಂದಿಗೆ ಹೊರಟಿದ್ದಾರೆ.

ಹಿಂದುಸ್ಥಾನದ ಸ್ವರಾಜ್ಯ ಯೋಜನೆ.

—(೦)—

ಹಿಂದುಸ್ಥಾನಕ್ಕೆ ಯಾವ ತರದ ಸ್ವರಾಜ್ಯಬೇಕೆಂಬ ವಿಷಯವಾಗಿ ಸರ್ವಪಕ್ಷೀಯರು ನೇಮಿಸಿದ ಕಮೀಟಿಯ ರಿಪೋರ್ಟ ನಾಡದು ಶುಕ್ರವಾರ ದಿವಸ ಪ್ರಸಿದ್ಧವಾಗುವದು. ತತ್ಪೂರ್ವದಲ್ಲಿ ಅದರ ಸಾರಾಂಶವು ಪ್ರಸಿದ್ಧವಾಗಿದೆ ಅದೇನಂದರೆ-

೧ ವಸಾಹತುಗಳಂಥ ಸ್ವರಾಜ್ಯವಿರಬೇಕು.

೨ ಕೆನಡಾ ಮತ್ತು ದಕ್ಷಿಣ ಆಫ್ರಿಕೆಗಿರುವ ಯೋಗ್ಯತೆ ಮತ್ತು ಸ್ವಾತಂತ್ರ್ಯವಿರಬೇಕು.

೩ ಸಂಸ್ಥಾನಿಕರು ತಮ್ಮ ರಾಜ್ಯಗಳಲ್ಲಿ ಸ್ವರಾಜ್ಯವಿಲ್ಲದಿದ್ದರೂ ಸುರಾಜ್ಯದ ವ್ಯವಸ್ಥೆ ಮಾಡಬೇಕು.

೪ ಸಂಸ್ಥಾನಿಕರು ತಮ್ಮ ರಾಜಕೀಯ ಸಂಬಂಧವು ವಿಲಾಯತಿ ಸರಕಾರದ ಕೂಡ ಇರಬೇಕೆನ್ನುತ್ತಾರೆ ಅದನ್ನು ತಪ್ಪಿಸಿ, ಇವರ ಸಂಬಂಧವು ಹಿಂದುಸ್ಥಾನ ಸರಕಾರದೊಂದಿಗೇ ಇರಬೇಕು.

ವರ್ತಮಾನಪತ್ರದ ಎಡಿಟರನ್ನು ಗುಂಡು ಹಾಕಿ ಸಿಗಟಿದರು.

—(೦)—

ಸರ್ವಿಯಾ ದೇಶದ ರಾಜಧಾನಿಯಾದ ಬೆಲ್‌ಗ್ರೇಡದಲ್ಲಿರುವ ಜೆಂದಿನಶೀತ್ಲೋ ಎಂಬ ಪತ್ರದ ಸಂಪಾದಕರಾದ ರಿಸ್ಟೋ ಕ್ಯೂಜೆಟ್ಟಿ ಎಂಬುವರನ್ನು ರಾಜಕೀಯ ಮತಭೇದದ ದೆಸೆಯಿಂದ ಮೊದಲು ವ್ಯೈಯುರ ಹೊಡೆದು, ಅನಂತರ ಗುಂಡು ಹಾಕಿ ಕೊಂದರು. ಈ ಕೊಲೆಯ ದೆಸೆಯಿಂದ ನೂರಾರು ಜನರನ್ನು ಹಿಡಿದಿದ್ದು, ಅವರಲ್ಲಿ ಪಾರ್ಲಮೆಂಟದ ಡೆಪ್ಯುಟಿ ಪ್ರೆಸಿಡೆಂಟರೂ ಒಬ್ಬರಾಗಿದ್ದಾರೆ.

ಈ ವಾರದಲ್ಲಿ ಮಳೆಯು ಹೆಚ್ಚಾಗಿದೆ. ಆದರೂ ಆಗಾಗ್ಗೆ ಸೂರ್ಯನ ಕಿರಣಗಳು ಬೀಳುತ್ತಿರುವವು.

ಬೆಳಗಾವಿಯಲ್ಲಿ ಅಸಿಸ್ಟಂಟ ಜಡ್ಜರಾಗಿರುವ ಮಿ. ಹುಲಕೋಟಿಯವರಿಗೆ ಅಡಿಶನಲ ಸೆಶನ ಜಡ್ಜಿಯ ಅಧಿಕಾರ ಕೊಡಲ್ಪಟ್ಟಿದೆ.

ಚಂದಾದಾರರಿಗೆ ಸೂಚನೆ.

ಆಗಸ್ಟ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗುವ [illegible] ದಿಂದ ವ್ಹಿ. ಪಿ. [illegible] ವ್ಹಿ. ಪಿ. ಸ್ವೀಕರಿಸಿ [illegible] ಬೇಕೆಂದು ವಿನಂತಿಯು.

ವ್ಯವಸ್ಥಾಪಕ ವಿಜಯ ಧಾರವಾಡ

ನೋಟೀಸು.

೧ ರಾ|| ರಾ|| ರಾಮಣ್ಣಾ ಫಕೀರಪ್ಪಾ ಕಟ್ಟೀಗೇರಿ, ೨ ಬಸಪ್ಪಾ ಕಲ್ಲಪ್ಪಗೌಡಾ ಹಂಪಿಹೊಳಿ, ೩ ಫಕೀರಾ ಸೋಮಣ್ಣಾ ಪಿಶಾಳಿ, ೪ ಕಲ್ಲಪ್ಪಾ ಸೋಮಣ್ಣಾ ಪಿಶಾಳಿ, [illegible] ೬ ರಾಮಾ ಸೋಮಣ್ಣಾ ಕಡಸು ಹಂಪಿಹೊಳಿ, ೭ ರಾಮಾ ದಾನಪ್ಪಾ [illegible], ೮ [illegible] ಮಾಯಪ್ಪಾ [illegible], ೯ [illegible]ಪ್ಪಾ ಹೊಂಡಪ್ಪ ಹಂಪಿಹೊಳಿ, ೧೦ ದೇವಪ್ಪ [illegible]ಪ್ಪಾ ಹಂಪಿಹೊಳಿ, ೧೧ ಸಿಂಗಪ್ಪಾ ತಿಪ್ಪಣ್ಣಾ ಕೊಳ್ಳೇರ, ಸಂಗನಗೌಡ ೧೨ ಎಲ್ಲಪ್ಪಾ ದೇಮಣ್ಣಾ [illegible] ಸಂಗನಗೌಡ, ೧೩ ಬಸಣ್ಣಾ ಲಿಂಗಪ್ಪಗೌಡಾ ಸಂಗನಗೌಡ, ೧೪ ಅಪ್ಪಯ್ಯಾ ಗೋವಿಂದಪ್ಪಾ [illegible] ಸಂಗನಗೌಡ, ೧೫ ಲೋಕಪ್ಪಾ ಸಿಂಗಪ್ಪಾ ಸಂಬಗದ್ದಿ ಸಂಗನಗೌಡ, ೧೬ ಕಲ್ಲೇಶಪ್ಪಾ ಫಕೀರಪ್ಪಾ ಸಂಗನಗೌಡ, ಇವರಿಗೆ-

ಕೆಳಗೆ ಸಹಿ ಮಾಡುವ ಭೀಮರಾವ ವೀರಾಜಿ ಜೋಂಗರೆ ಸಾಕೀನ ಕಡ್ಲಿಗಿ, ತಾಲ್ಲೂಕ [illegible] ಇವರು ಈ ನೋಟೀಸಿನಿಂದ ತಿಳಿಸುವದೇನಂದರೆ-

ನೀವು ಮೇಲಿನ ಕಡ್ಲಿಗಿ ಜೇವಿಯ ಜಾತ್ರೆಯಲ್ಲಿ ಪಂಚನಾದ ನಾನು ಮತ್ತು ಜೇರೆ ಪಂಚರು ಮಾಡಿದಂಥ ಪುಣ್ಯ ಕಾರ್ಯದ ದಿನೆಯಿಂದ ನೀವು ಕೇವಲ ನನ್ನ ಅಪಮಾನಮಾಡುವ ದುಷ್ಟ ಬುದ್ಧಿಯಿಂದ ನೀವು ಕಮಿಟಿ ಕೂಡಿ, ಸಹಿ ಮಾಡಿ, ಹೆಚ್ಚಿನ ಗುತ್ತಿಗೆ ಹಾಕಿದ ಗಿರಿಗಳ ಪತ್ರವನ್ನು ಒದೆದು ನನ್ನ ಅಪಮಾನ ಮಾಡಿ, ಗೈರವರೊಳಗೆ ಜೇಅಬ್ರುಮಾಡಿರಕೀರಿ. ಈ ವಿಷಯವಾಗಿ ನಿಮಗೆ ನಾನೊಂದು ಪ್ರತ್ಯಕ್ಷ್ಯದ ಒರೆದೆನು ನೀವು ಕಮಿಟಿ ಮಾಡಿ, ನನ್ನನ್ನು ಕರಿಸಕೇಕೆಂದು ಉತ್ತರಾ ಹಾಕಿದಿರಿ ಆ ಪ್ರಕಾರ ನೀವು ವ್ಯವಸ್ಥಾ ಮಾಡದೆ, ನನ್ನ ಅಪಮಾನ ಮಾಡುವ ಕೃತ್ಯವನ್ನೇ ಮಾಡಿದ್ದೀರಿ ಅದ್ದರಿಂದ ಈ ನೋಟೀಸ ಕೊಡುವ ಅಗತ್ಯವುಂಟಾಯಿತು ನೀವು ಈ ನೋಟೀಸ ಮುಟ್ಟಿದ ಎಂಟು ದಿವಸಗಳಲ್ಲಿ ನಮ್ಮ ಕಡ್ಲಿಗಿ ಗ್ರಾಮದೇವತೆಯ ದೇವಾಲಯದ ಜೇಗೋಟ್ಸಾವಕ್ಕಾಗಿ ಒಟ್ಟಿಸ್ಸಬೇಕು ಅಥವಾ ಒಟ್ಟಾಗಿ [illegible] ರೂಪಾಯಿ ಕೊಟ್ಟು, ವರ್ತಮಾನ ಪತ್ರಗಳಲ್ಲಿ ಕ್ಷಮೆ ಜೇಡಿಕೊಳ್ಳಬೇಕು. ಇಲ್ಲವಾದರೆ ನಿಮ್ಮ ಮೇಲೆ ಫೌಜದಾರ ಮತ್ತು ದಿವಾನಿಯಲ್ಲಿ ಕಾಮಗಾರಿ ಇಲಾಜ ಮಾಡುವೆನು ಅದರಿಂದ ಹುಟ್ಟುವ ಯಾವತ್ತು ಕೋರ್ಟ ಖರ್ಚಿನ ಜೋಖಾ ನಿಮ್ಮ ಮೇಲಿರುತ್ತದೆ. ಮತ್ತು ನಿಮಗೆ ಈ ವಿಷಯವು ತಿಳಿಯಬೇಕೆಂದು ನಿಶ್ಚಿತ ಪ್ರಮಾಣದ ರಾ|| ರಾ|| ರಾಮಣ್ಣಾ ಫಕೀರಪ್ಪಾ ಇವರ ಹೆಸರಿಗೆ ರಜಿಸ್ಟರ ಮಾಡಿ ಉಳಿದವರಿಗೆ ಪತ್ರ ಪೋಸ್ಟ ಮಾಡಿದ ಬಾಬತು ಪೋಸ್ಟಖಾತೆಯ ತಿಕ್ಕಾ ತಕ್ಕೊಳ್ಳುವೆನು. ನೀವು ವಿನಾಕಾರಣ ಉಳ್ವಾನಕ್ಕೆ ಗುರಿಯಾಗಬಾರದೆಂದು ಮುಂದಾಗಿ ಎಚ್ಚರಿಕೆಯು ಈ ನೋಟೀಸು ಕೊಟ್ಟಿರುತ್ತೇನೆ ಈ ನೋಟೀಸಿನ ಖರ್ಚು ನಿಮ್ಮ ತಲೆಯ ಮೇಲೆ ಅದೆ. ತಿಳಿಯುವದು.

ತಾ|| ೬—೮—೧೯೨೨ ಇಸ್ವಿ.

ಸಹಿ ಮಾಡಿ, ಭೀಮರಾವ ವೀರಾಜಿ ಜೋಂಗರೆ ಸಾ|| ಕಡ್ಲಿಗಿ.

—

ನೋಟೀಸು.

ರಾ|| ರಾ|| ಅಣ್ಣಾಸಾ|| ತಾಯಿ ರಾಜಮಾ ಅಣ್ಣಿಗೇರಿ ಸಾಕೀನ ಧಾರವಾಡ ಇವರಿಗೆ-

ಕೆಳಗೆ ಗುರ್ತು ಮಾಡಿದವಳ ಕಡೆಯಿಂದಾ ನಿನಗೆ ನೋಟೀಸಿನಿಂದ ತಿಳಿಸುವದೇನಂದರೆ-

ನೀನು ನನ್ನ ಲಗ್ನದ ಗಂಡನು ಇದ್ದು ಈಗ ನನ್ನ ಲಗ್ನ ಆಗಿ ಅಜಮಾಸು ಹತ್ತು ಹನ್ನೆರಡು ವರ್ಷ ಆಗುತ್ತಾ ಬಂತು ನನ್ನ ಲಗ್ನ ಆದ ಮಂದು ವರ್ಷದ ವರಿಗೆ ಒಳ್ಳೇ ರೀತಿಯಿಂದ ನನ್ನ ಕೂಡ ಪ್ರಪಂಚ ಮಾಡಿದಿ ಆ ಮೇಲೆ ನೀನು ನಿನ್ನ ತಾಯಿ ಮಾತು ಕೇಳಿ ನನಗೆ ಹೊಡೆದು ಬಡೆದು ಮಾಡಿ ಬಹಳ ಪೀಡಿಸ್ತ ಕೊಟ್ಟು ನನ್ನ ಲಗ್ನ ಆಗುವಾಗ್ಯೆ ನೀನು ನನ್ನ ಮೈಮೇಲೆ ಬಂಗಾರ ಬೆಳ್ಳಿ ದಾಗೀನೆಗಳು ಅಂದ್ರೆ ಕೆಳಗೆ ಒರೆದ ಪ್ರಕಾರಾ—

ಬಂಗಾರ ಬಳೆ ಜೋಡು ಮಂದು ತೊಲಿ (೫) ಬಂಗಾರ ಗೆಜ್ಜಿಟೀಕಿ ಮಂದು ತೊಲಿ (೫) ಬಂಗಾರ ಮುರಿದ ಬೇಳು ಮಂದು ತೊಲಿ (೩) ಬಂಗಾರ ಪುತ್ಥಳಿ ಸರಾ ಮಂದು ತೊಲಿ (೧೨) ಹನ್ನೆರಡು ಬೆಳ್ಳಿ ತೋಡೆದ ಜೋಡು ಮಂದು ತೊಲೀ ಎಂಟಪೇರು ೮

ಈ ಪ್ರಕಾರ ದಾಗೀನೆಗಳು ನನ್ನ ಮೈಮ್ಯಾ ಮೇಲೆ ಇಟ್ಟಿದ್ದು ಕಸಕೊಂಡು ಮಂದು ಹರಾಕೀರಿ ಪಡಕೆಯಿಂದಾ ನಿನ್ನ ಮನಿ ಬಿಟ್ಟು ಹೊರಗೆ ಹಾಕಿದಿ ನನಗೆ ನೀನು ಬಿಟ್ಟು ಅಜಮಾಸು ಎಂಟು ಹತ್ತು ವರ್ಷ ಆಗುತ್ತಾ ಬಂತು ನಾನು ನಿಂನ ಮನಿಯಿಂದಾ ಹುಬ್ಬಳಿಗೆ ತವರುಮನಿಗೆ ಬಂದು ನನ್ನ ತವರುಮನಿ ಅವರು ಆಗದಿ ಬಡವರು ಇದ್ದು ನನಗೆ ಅವರ ಕಡಿಯಿಂದಾ ಹಿಡಿಯುವದು ಆಗಲಿಲ್ಲಾ ನಾನು ಜೀತೆಮಂದು ಮನೀ ಧಾಡೇಯಿಂದಾ ಹಿಡಿದು ಇರುತ್ತೇನೆ ನನ್ನ ಹೊಟ್ಟೆ ವಸ್ತ್ರಗೆ ಅರವಿ ದಿನೆಯಿಂದ ನಿನ್ನ ಹೆಸರಿನ ಮೇಲೆ ನಾನು ನಾತು ಕಾರರ ಇದಿಗೆ [illegible] ನೂರು ಹೆಂಗ [illegible] ದೀಕ್ಷೆ ಮಾಡಿರತೇನೆ ನನಗೆ ಜೀವಿ ಕೊಟ್ಟ ಸಾವಕಾರರು ಬಹಳ ತಗಾದಿ ಆದ್ದರಿಂದ ನಿನಗೆ ನಾನು ಪುಸ್ತಕ [illegible] ನನ್ನ ವಿ [illegible] ಮಾಡನೆ ನನ್ನ ಮನವುದಿಯ ನರಾಮಿಯ ಅಜಮಾಸ ಕೋರ್ಟನಲ್ಲಿ ನನ್ನ ಮೇಲೆ ನೀನು ಸುಳ್ಳ [illegible] ಯಾದಿ ಮಾಡಿದಿ ನಾನು ಅಜಂಮಾಸ ಕೋರ್ಟನಲ್ಲಿ ಹೋಗಿ ನಾನು ಬಾಳವೆ ಮಾಡತೇನೆ ಅಂತಾ ಜವಾಬು ಕೊಟ್ಟಿ ತ್ತೇನೆ ಸದರಿ ಕೋರ್ಟ ನವರು ನಿನಗೆ ಹುಬ್ಬಳ್ಳಿಯಲ್ಲಿ [illegible] ರೀತಿಯಿಂದ ನನ್ನ ಸಂಗತಿ [illegible] ವರಿಗೆ [illegible] ವು [illegible] ಅಂತಾ [illegible] ಕೇಳಿದಿ [illegible] ನಾನು [illegible] ಪ್ರಪಂಚ [illegible] ತಿಳಿಸುತ್ತೇನೆ [illegible] ಕಾಲಿಕ್ಕೆ [illegible] ಮಾಡುವದು ಅಂದರ [illegible] ನೀನು [illegible] ಪ್ರಪಂಚ [illegible] ಇತ್ತೀಚಿ ಈಗ್ಗೆ ನನಗೆ [illegible] ಅಗಿರತ್ತ [illegible] ನನಗೆ [illegible] ಹುಟ್ಟ ವಲ್ಲವು [illegible] ನಿನಗೆ ನೋಟೀಸು ಕೊಡುವ ಭಾಗ ಬಿತ್ತು. ಈ ನೋಟೀಸು ನಿನಗೆ ಮುಟ್ಟಿದ ಎಂಟು ದಿವಸದ ಒಳಗಾಗಿ ಬಂದು ನಾನು ಮಾಡಿದ ಸಾಲಾ ಫೇಡ ಮಾಡಿ ನನ್ನ ವಸ್ತ್ರ ಯೋಗ್ಯ ಜಾಮೀನು ಕೊಟ್ಟು ನನ್ನ ಮೈಯು ಮೇಲೆ ಮೇಲೆ ಒರದ ದಾಗಿನೆ [illegible] ಇಟ್ಟು ಕಂಕೊಂಡು ಹೋಗಿ ಒಳ್ಳೇ ರೀತಿಯಿಂದ ಬಾಳೇವು ಮಾಡಬೇಕು. ಮತ್ತು ನೀನು [illegible] ಈ ಮುದ್ದತ್ತಿಗೆ ನೀನು [illegible] ನನ್ನ ಇಸ್ತ್ರೀದ ಮೇಲೆ ಕೋರ್ಟನಲ್ಲಿ ಇಲಾಜ [illegible] ಇದು ಅಲ್ಲದೆ ನನ್ನ ವಸ್ತ್ರ ಪೋಟಗಿ ಮತ್ತು ನನಗೆ ಮುಸರು ಯಾರನು ನರಾ ಏವತ್ತು [illegible] ಜಾಬತ್ತು ನಿನ್ನ ಮೇಲೆ ದಾವೆ ತರುವೆನು ನಿನ ನದವು ತಿದಿರ [illegible] ಕಂಡು ಕೊಟ್ಟ ಜನರ ಸಂಗಡಾ ಕರಕೊಂಡು ಬಂದು ದಾಖಲೆ ಮಾಡಿದರೆ ನಿನಗೆ ಅವರಿಗೆ ಫೋಜೀಸರ ತಾಬಾಕ್ಕೆ ಕೊಡುವೆನು ಈ ನೋಟೀಸಿನ ಖರ್ಚು ನಿನ್ನ ತಲಿ ಮೇಲೆ ಇರುತ್ತದೆ.

ತಾ|| ೬—೮ [illegible] ಇಸ್ವಿ

ಈ ಎಡಗೈ ಹೆಬ್ಬಟ್ಟಿನ ಗುರ್ತು ಪಾರ್ವತೀ ಕೋಂ ಅಣ್ಣಾಸಾ|| ಅಣ್ಣಿಗೇರಿ ಈಕೆ ಕೈದು ಅದೆ.

—

ಚಂದಾದಾರರಿಗೆ ಸೂಚನೆ

ಆಗಸ್ಟ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗುವ ನಿಮಿತ್ತ, ವಾರ [illegible] ಚಂದಾದಾರರು ಹೊಸ [illegible] ನ್ನು ಪ್ರೊತ್ಸಾಹಿಸ [illegible]

ವ್ಯವಸ್ಥಾಪಕರ ವಿಜಯ ಧಾರವಾಡ

ಈ ಪತ್ರವನ್ನು [illegible] ಚಾರ್ಯ ಬಾಳಾಚಾರ್ಯ ಸೊಹತೇಂದ ಇವರು ಧಾರವಾಡ [illegible] ವಿಜಯ ಮುದ್ರಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಪಡಿಸಿದರು.

R. N. B. 1443

ವಿಜಯ

ಸಿಕ್ಕೆ ೧೨ — ಬಿಡಿ ಪ್ರತಿ ಅರ್ಧ ಆಣೆ

ಸಂಪಾದಕರು:- [illegible]

ವರ್ಷ ೯) ಧಾರವಾಡ ಗುರುವಾರ ತಾರೀಖು ೯ ನೇ ಅಗಸ್ಟ ೧೯೨೮ (ಸಂಚಿಕೆ ೧೮೦

ದಿ [illegible] ಲಕ್ಷ್ಮಿ ಬ್ಯಾಂಕ ಲಿಮಿಟೆಡ, ಧಾರವಾಡ.

ಸ್ಥಳ- [illegible] ಮಂಗಳವಾರಪೇಟೆ, ಧಾರವಾಡ ವಕೀಲ ಪಾಂಡುರಂಗರಾಯರ ಮನೆ.

೧ ಈ ಬ್ಯಾಂಕಿನ [illegible] ದಾಗೀನೆಗಳ ಮೇಲೆ ಸೋಯು ಬಿಗಿಂದ [illegible] ಮತ್ತು [illegible] ಮುದ್ದತಿಯ ತನಕ [illegible] ಬೇಕಾದಷ್ಟು ದೊಡ್ಡ ರಕಮಿನ ತನಕ ಸಾಲ ದೊರೆಯುವದು. ಬಡ್ಡಿಯ ದರ [illegible] ತಿಳಕೊಳ್ಳಬೇಕು.

೨ ಸರಕಾರಿ [illegible] ನೋಟುಗಳ ಖರೀದಿ, ವಿಕ್ರಿ ನಡೆಯುವದು. ಅವುಗಳ ಮೇಲೆ ಸಾಲ ದೊರೆಯುವದು. ಮತ್ತು ಯೋಗ್ಯ ಕಮೀಶನ [illegible] ಗಿರಾಕಿಗಳಿಗೆ ಲಾಭಕರವಾಗಿ ಅವುಗಳ [illegible] ಕೊಡಲ್ಪಡುವದು.

೩ ಮುದ್ದತಿ ಠೇವಿ [illegible] ಇಟ್ಟುಕೊಳ್ಳಲಾಗುವದು. ಸ್ವಲ್ಪ ರಕಮಿನಿಂದ ದೊಡ್ಡ ರಕಮಿನ ತನಕ ಇಟ್ಟುಕೊಳ್ಳಲಾಗುವದು. ಬಡ್ಡಿಯ ದರವನ್ನು ಸಮಕ್ಷಮ ಅಥವಾ ಪತ್ರವ್ಯವಹಾರದಿಂದ ತಿಳಕೊಳ್ಳಬೇಕು.

೪ ಈ ಬ್ಯಾಂಕಿನ ಶೇರುಗಳು ಮಾರಾಟಕ್ಕೆ ದೊರೆಯುವವು.

೫ ಬ್ಯಾಂಕಿಗೆ [illegible] ವ್ಯವಹಾರ ಮೊದಲಾದ ಎಲ್ಲ ಕೆಲಸಗಳು ನಡೆಯುವವು. ವಿಶೇಷ ಸಂಗತಿಗಳನ್ನು ಆಫೀಸಿನ ವೇಳೆಯಲ್ಲಿ ಸಮಕ್ಷಮ ಅಥವಾ ಪತ್ರವ್ಯವಹಾರದಿಂದ ತಿಳಕೊಳ್ಳಬೇಕು.

ಕೃಷ್ಣರಾವ ವೆಂಕಟರಾವ ಭಂಡಿವಾಡ
ಮ್ಯಾನೇಜಿಂಗ ಏಜಂಟ.

—॥ ಶ್ರೀ ಗುರು ಪ್ರಸನ್ನ ॥—

ಪ್ರತಿಯೊಬ್ಬ ಕುಟುಂಬಿಕನು ಅವಶ್ಯ ಸಂಗ್ರಹಿಸಲ್ಪಡತಕ್ಕ ಒಂದೇ ಔಷಧ.

ಭಾಸ್ಕರ ಚೂರ್ಣ.

ಸುಪ್ರಸಿದ್ಧ ವನಸ್ಪತಿ ಶಾಸ್ತ್ರಜ್ಞರ ಸೂಚನೆಯ ಮೇರೆಗೆ ಈ ಚೂರ್ಣವು ತಯಾರಿಸಲ್ಪಟ್ಟಿದ್ದು ಇದರ ಸೇವನದಿಂದ ನಾಲ್ಕು ತರದ [illegible] ರೋಗಗಳು ಸ್ವಲ್ಪದರಲ್ಲಿಯೇ ನಾಶಹೊಂದುವವು. ಅಜೀರ್ಣ ಅಪಚನ, ಅವಾಂಶ, ಅಗ್ನಿಮಾಂದ್ಯ ಸಾಂಗ್ರಹಿಣಿ, ಹೊಟ್ಟೆಶೂಲೆ, ಹೊಟ್ಟೆನೋವು ಮತ್ತು ಯಾವತ್ತು ತರದ ಧಾತುವಿಕಾರಗಳ ಮೇಲೆ ಇದೊಂದೇ ರಾಮಬಾಣ ಔಷಧವಿರುವದು. ಒಂದು ಚಿಮಟಿಗಿಯಷ್ಟು ಈ ಚೂರ್ಣವನ್ನು ಬಾಯಿಯಲ್ಲಿ ಹಾಕಿಕೊಂಡರೆ- ಸಾಕು ಪುನಃ ಅರ್ಧತಾಸಿನಲ್ಲಿಯೇ ಹಸಿವೆಯಾಗುವದು. ಬೇನೆಯಿಂದ ಗುಣವಾಗಿದ್ದ ಅಶಕ್ತ ಮನುಷ್ಯರು ಎರಡನೆ ಶಕ್ತಿವರ್ಧಕ ಔಷಧ ತೆಗೆದುಕೊಳ್ಳುವ ಕಾರಣವೇ ಇಲ್ಲ. ಹಳ್ಳಿಗಳಲ್ಲಿಯ ಜನರು ಒಂದು ಭಾಸ್ಕರ ಚೂರ್ಣದ ಡಬ್ಬಿಯನ್ನು ತಮ್ಮ ಹತ್ತಿರ ಇಟ್ಟುಕೊಂಡರೆ- ನಾನಾ ಯಾವತ್ತು ಬೇನೆಗಳಿಗೆ ಉಪಯೋಗವಾಗುವದು. ಎಷ್ಟು ದಿವಸದ [illegible] ಇದ್ದರೂ ಮೂರೇ ದಿನಗಳಲ್ಲಿ ಗುಣವಾಗುವದು. ಕೇವಲ ವನಸ್ಪತಿಯಿಂದಲೇ ತಯಾರಿಸಿದ್ದ ಈ ಸಿದ್ಧೌಷಧವನ್ನು ಪ್ರತಿಯೊಬ್ಬನೂ ಅವಶ್ಯ ಸಂಗ್ರಹಿಸತಕ್ಕದ್ದು ಒಂದು ಡಬ್ಬಿಯ ಕಿಮ್ಮತ್ತು ೧೦ ಆಣೆ. [illegible] ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು. ಪೋಸ್ಟೇಜ ಬೇರೆ ಸ್ಯಾ. ವಿ. ೧ ಆಣೆ.

ವಿಳಾಸ — ವಿ. ಬಿ. [illegible] ಸನ್ಸ, ಮಾರ್ಕೆಟರೋಡ ಧಾರವಾಡ.

ದಿ ಧಾರವಾಡ ಅರ್ಬನ ಕೋ- ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

[illegible] ಆಪರೇಟಿವ್ಹ ಕ್ರೆಡಿಟ ಸೊಸಾಯಿಟಿಯ [illegible] ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಬಂಡಿಗೆಯು ಏಳ ಲಕ್ಷದ ಮೇಲುಂಟು. [illegible] ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರ ನಡೆಯುವದು. ಕರೆಂಟ ಮತ್ತು ಠೇವಿ ಕದದ [illegible] ಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮುಕುಂದರಾವ ಬಿ. ಜಕಾತಿ,
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು [illegible] ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಠೇವಣಿ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಇಟ್ಟುಕೊಳ್ಳುವ ಬಡ್ಡಿಯ ದರವು ಸೂರಕ್ಷ [illegible] ತಿಂಗಳಿಗೆ ಹನ್ನೆರಡು ಆಣೆಯಾಗುತ್ತದೆ.

ಎ. ಕೆ. ಶೆಟ್ಟಿ
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣೀ ದರ.

ಸಿಕ್ಕ ಪತ್ರಕ್ಕೆ

೧೨ ತಿಂಗಳಿಗೆ	೩-೮-೦ ರೂ.
೬ ,,	೭-೦-೦
೪ ,,	೪-೦-೦
ವಾರ ಪತ್ರಕ್ಕೆ ೧ ವರ್ಷಕ್ಕೆ	[illegible]-೦

ವಿಶೇಷ ಜಾಹಿರಾತು ಕೆಳಗಿನ ವಿಳಾಸಕ್ಕೆ [illegible]

ವಿಜಯ.

ಧಾರವಾಡ ತಾ-೯-೮-೧೯೨೮ ನೇ ಇಸ್ವಿ

ಶ್ರೀ.

ಆ ವಿಜಯಂ ಶ್ರೀಪತಿಪ್ರಿಯ |
ನೀ ವಸುಮತಿಯ ನಲಿಸಿರೆ ಸುಹಿತಚರಿತೆಗಳಿಂ ||
ಈ "ವಿಜಯಂ" ಶ್ರೀಕರಣ |
ನಾ ವಿಹಿತಂಗಳ ವಿವರಿಸಿಸಲಿಪ್ಪನು ಸಾಜಂ ||೧||

ಬಾರಡೋಲಿಯ ಒಪ್ಪಂದ ಹೇಗಾಯಿತು?

ಸರದಾರ ಪಟೇಲರು ಪುಣೆಯಿಂದ ಬಾರಡೋಲಿಗೆ ಹೊರಟ ಕೂಡಲೆ, ಅವರ ಬೆನ್ನಿನ ಹಿಂದೆಯೇ ಕೌನ್ಸಿಲದ ನಾಲ್ವರು ಮೆಂಬರರಾದ ರಾ. ಬ. ಭೀಮಭಾಯಿ ನಾಯಿಕ, ಶೇರವಾಡಾದ ರಾಘೂಜಿ ಸಾಹೇಬರು, ಮಿ. ನರಿಮನ್ನ ಮತ್ತು ಮಿ. ಮುನಶಿಯವರು ಸೂರತಕ್ಕೆ ಹೋದರು. ಶ್ರೀ. ಪಟೇಲರು ಸೂರತದ ಸ್ಟೇಶನದಲ್ಲಿಳಿದ ಕೂಡಲೆ ಅವರ ಸ್ವಾಗತಕ್ಕಾಗಿ ತರುಣ ವಿದ್ಯಾರ್ಥಿಗಳ ಪ್ರಚಂಡ ಸ್ತೋಮವು ನಿಲ್ದಾಣದಲ್ಲಿ ಕೂಡಿತ್ತು. ಗುಜರಾಥ ಮತ್ತು ಬಹುವಾಗಿ ಬಡೋದೆಯ ವಿದ್ಯಾರ್ಥಿಗಳು ಸೇರಿದ್ದರು. ಸ್ಟೇಶನದಿಂದ ಊರೊಳಗೆ ಅತಿ ಸಮಾರಂಭದಿಂದ ಇವರ ಮೆರವಣಿಗೆ ಹೊರಟಿತು. ಇವರ ತರುವಾಯ ಮತ್ತೊಂದು ಬಂಡಿಯಿಂದಿಳಿದ ಮೇಲಿನ ನಾಲ್ವರು ನೀಟಾಗಿ ಕಲೆಕ್ಟರರ ಬಂಗ್ಲೆಕ್ಕೆ ಹೋಗಿ, ರಾಜಿಯ ಪ್ರಸ್ತಾಪ ನಡೆಸಿದರು. ಹೊಸ ಕಲೆಕ್ಟರರಾದ ಮಿ. ಗ್ಯಾರೆಟ್ಟ ಸಾಹೇಬರು ಅವರು ಬರಮಾಡಿಸಲಿದ್ದರು. ನೆರೆ ಹಾವಳಿಯಲ್ಲಿ ಇವರೂ ಸರದಾರ ಪಟೇಲರೂ ಸೇರಿ, ವಿಪದ್ಗ್ರಸ್ತರಿಗೆ ಮನಮುಟ್ಟಿ ನೆರವಾಗಿದ್ದರು. ಅದೊಂದು ಇವರೀರ್ವರಲ್ಲಿ ವಿಶೇಷ ಮಿತ್ರತ್ವ ಬೆಳೆಯಲು ಕಾರಣವಾಯಿತು. ಈ ಸ್ನೇಹದ ಮೂಲಕ ಪರಸ್ಪರ ಅನುರಾಗವುಂಟಾಗುವದು ಸಹಜವು. ಆದ್ದರಿಂದ ಇವರು ಹಿಂದಿನ ಕಲೆಕ್ಟರರಾದ ಮಿ. ಹಾರ್ಟಶಾರ್ನ ಸಾಹೇಬರಂತೆ ಸರದಾರರ ವಿಷಯವಾಗಿ ಕಠೋರ ವೃತ್ತಿಯಾಗುವಂತಿರಲಿಲ್ಲ. ತಮಗೂ ಮಿ. ಗ್ಯಾರೆಟ್ಟಸಾಹೇಬರು ಪರಮ ಸ್ನೇಹವಿದ್ದಾಗ್ಯೂ, ಸರದಾರರು ರಾಜಿಯ ವಿಚಾರದಲ್ಲಿ ಸ್ವಲ್ಪ ಮನಸ್ಸು ಹಾಕಲಿಲ್ಲ. ಏಕೆಂದರೆ- ಹಾಡಿದ್ದೇ ಹಾಡುವವಾಗಿತ್ತು. ತಮ್ಮ ಶರ್ತುಗಳು ಅಥವಾ ವಿಚಾರಗಳು ಹೀಗೀಗುಂಟು. ನೀವು ಭಲೆ! ಕಲೆಕ್ಟರರು ಭಲೆ!! ಎಂದು ಹೇಳಿ ಸ್ವಸ್ಥ ಕೂತುಕೊಂಡರು. ಪುಣೆಯಲ್ಲಿ ಕದರ್ಥಮುದರ್ಥವೆನ್ನುವಂತೆ ಎಲ್ಲ ಕಲಮುಗಳ ವಿಚಾರವಾಗಿತ್ತು. ಜಪ್ತಿಯಲ್ಲಿ ಕೊಂಡವರಿಂದ ಹೊಲಗಳನ್ನು ಬಿಡಿಸಿಕೊಳ್ಳುವದೇ ಮುಖ್ಯ ಕೆಲಸವಾಗಿತ್ತು. ಇವರೆಲ್ಲರಲ್ಲಿ ಪ್ರಮುಖರಾದ ಗಾರ್ಡ್ನ ಮೊದಲಾದವರನ್ನು ಕೌನ್ಸಿಲದ ಮೆಂಬರರು ದಾರಿಯಲ್ಲಿಯೇ ಹಿಡಿದು, ಕಲೆಕ್ಟರರ ಬಂಗ್ಲೇಕ್ಕೆ ಕರಕೊಂಡು ಹೋದರು. ಗಾರ್ಡ್ನಸಾಹೇಬರು ಪಾರಸೀ ಕುಲದವರು. ಇವರಂತೆ ಗಾಳಿ ಬಂದಾಗ ತೂರಿಕೊಂಡವರಲ್ಲಿ ಬಹುತೇಕ ಜನರು ಈ ಕುಲದವರೇ! ಗಾರ್ಡ್ನಸಾಹೇಬರ ಕಳೆದ ಮೂರು ತಿಂಗಳ ಭವಣೆಯನ್ನು ಏನೆಂದು ಹೇಳಬೇಕು? ಧಾರ್ಮಿಕ ಮತ್ತು ಸಾಮಾಜಿಕ ದೃಷ್ಟಿಯಿಂದ ಬಹಿಷ್ಕೃತರು. ರಾಜದ್ರೋಹಿಯಾದವನು ಪ್ರಜಾದ್ರೋಹಿಯಾಗಲಾರನು. ಪ್ರಜಾದ್ರೋಹಿಯಾದವನ ಅವಸ್ಥೆಯು ಕಾಗೀ ತಿಂದ ಹೋಳಿಗೆಯಂತಾಗುತ್ತದೆ. ಆ ಪ್ರಕಾರದ ಅಸ್ಪೃಶ್ಯತೆಯನ್ನು ಗಾರ್ಡ್ನ ಮತ್ತು ಬೇರೆ ಪರಿಸ್ಥ ಪುಷ್ಟ ಪಾರಸಿಗಳು ಭೋಗಿಸುತ್ತ ಬಂದಿದ್ದಾರೆ. ತಮ್ಮ ಆ ಅವಮಾನವನ್ನು ಪೂರ್ಣ ತುಂಬಿಕೊಳ್ಳುವದಕ್ಕೆ ಇದೇ ಸಮಯವೆಂದು ಗಾರ್ಡ್ನಸಾಹೇಬರು ಶರ್ತುಗಳನ್ನು ಮುಂದಕ್ಕೇರಿಸಿ, ಸರದಾರ ಪಟೇಲರು ತಮ್ಮ ಕ್ಷಮೆ ಬೇಡಿಕೊಳ್ಳಬೇಕು; ಬಹಿಷ್ಕಾರವನ್ನು ತೆಗೆದು ಹಾಕಿ, ಶುದ್ಧಮಾಡಿ, ಪಾವನಮಾಡಬೇಕೆಂಬ ಹಟಹಿಡಿದರು. ಬ್ರಹ್ಮದೇವನು ಬಂದರೂ, ಸರದಾರ ಪಟೇಲರು ಕ್ಷಮೆ ಬೇಡಿಕೊಳ್ಳುವಂತಿರಲಿಲ್ಲ. ಇದು ಒನಕೆ ಚಿಗಿಯುವಂಥ ಅಸಂಭವವಾದ್ದರಿಂದ, ಕಲೆಕ್ಟರರು ಕ್ಷಮೆಯ ಶರ್ತು ರಹಿತಪಡಿಸಿ, ಬಹಿಷ್ಕಾರ ಮಾತ್ರ ತೆಗೆಯಬೇಕೆಂದು ಸೂಚಿಸಿದರು. ಇದು ಉಭಯ ಪಕ್ಷಕ್ಕೂ ಒಪ್ಪಿಗೆಯಾಯಿತು. ಕೂಡಲೆ ಸಬ್ಬರಜಿಸ್ಟ್ರಾರರನ್ನು ಕರೆಸಿ, ಅವರ ಹಣವನ್ನು ತಿರುಗಿ ಕೊಟ್ಟು ರಾತ್ರಿ ಮತ್ತು ಜರಗಿಸುವ ಕನಸು ವಿಕ್ರಿ ಪತ್ರಗಳ ನೋಂದಣಿಸು ಕೆಲಸ ನಡೆಯಿಸಿದರು. ಇದರಲ್ಲಿ ಮಾತ್ರ ಆಳರಸರು ಗೆದ್ದರು. ಏಕೆಂದರೆ ಈ ಹನ್ನೆರಡು ಸಾವಿರ ರೂಪಾಯಿಗಳು ಈ ಮೊದಲೇ ಸರಕಾರದಲ್ಲಿ ಭರಣಾ ಆಗಿಹೋಗಿತ್ತು. ಈಗಿನ ದಣಿವನ್ನು ಸರದಾರ ಪಟೇಲರು ಕೊಡತಕ್ಕದ್ದೆಂದು ಮೇಲಿನ ಪಂಚರು ನಿರ್ಣಯಿಸಿದರು. ಪ್ರಕೃತದ ವಿಕ್ರಿಯ ಕಾಗದವು ರಾ. ಬ. ಭೀಮಭಾಯಿ ನಾಯಿಕರ ಹೆಸರಿನಿಂದ ಇದ್ದು, ಪೂರ್ಣ ರಾಜಿಯಾದ ಬಳಿಕ ಇವು ಆಯಾ ಮಾಲೀಕರ ಹೆಸರಿನಿಂದ ವಿಕ್ರಿ ಮಾಡಲ್ಪಡುವವು. ಗಾರ್ಡ್ನ ಮೊದಲಾದವರು ಲಕ್ಷ ರೂಪಾಯಿ ಬೆಲೆ ಬಾಳುವ ಸ್ಥಾವರ ಆಸ್ತಿಯನ್ನು ಹತ್ತೆಂಟು ಸಾವಿರಕ್ಕೆ ಕೊಂಡು ಧನ್ಯರಾಗಬೇಕೆಂದಿದ್ದರು. ಕೊನೆಯಲ್ಲಿ ಅತ್ಯಾಶೆ ಗತಿಗೆಡಿಸಿತೆಂಬಂತಾಯಿತು. ರಾಜಿಯ ದೆಸೆಯಿಂದ ಇವರ ಬಹಿಷ್ಕಾರ ಹೋದರೂ, ಜನರು ಒಳಿತೆ ಮಾಡಿದರೂ, ಗ್ರಾಮದ್ರೋಹಿ ಬಹಿಷ್ಕೃತರೆಂಬ ಕಲಂಕ ಮಾತ್ರ ಮಾಜಲಾರದು. ಸುಟ್ಟ ಕೊಡಗಲಿನ ಕಲೆಯು ಎಂದಾದರೂ ಹೋಗುವದುಂಟೇ? ಇರಲಿ; ರಾಜಿಯ ಶರ್ತುಗಳ ಒಪ್ಪಿಗೆಯಾದ ಬಳಿಕ ನಾಲ್ವರೂ ಮೆಂಬರರು ಪುಣೆಗೆ ಪ್ರಯಾಣ ಬೆಳೆಸಿದರು.

ಬಾರಡೋಲಿ ರೈತರ ಜಯಜಯಕಾರ!!

ಒಪ್ಪಂದದ ಕರಾರುಗಳು

೧ ಒಬ್ಬ ಮುಲಕೀ ಮತ್ತು ಒಬ್ಬ ನ್ಯಾಯಖಾತೆಯ ಕಾರ್ಯದಾರರ ಪ್ರಕಾರ ಇಬ್ಬರು ಕಾಮದಾರರ ಮುಂದೆ ರಿವಿಜನ್ನದ ವಿಚಾರಣೆಯಾಗಬೇಕು.

೨ ಈ ಕಮಿಶನದ ಮುಂದೆ ಸಾಕ್ಷೀ ಕೊಡುವ ಮತ್ತು ಸಾಕ್ಷೀದಾರರ ಕೊಂಡ ತಪಾಸಣಿ ನಡೆಸುವ ಅಧಿಕಾರ ವ್ಯಕ್ತಿಗೆ ಕೊಡಲ್ಪಟ್ಟಿದೆ.

೩ ಸರಕಾರದವರು ಕೈ ಹಿಡಿದ ಸತ್ಯಾಗ್ರಹಿಗಳನ್ನು ಬಂಧಮುಕ್ತ ಮಾಡತಕ್ಕದ್ದು.

೪ ರಾಜೀನಾಮೆ ಕೊಟ್ಟಂಥ ಗೌಡ ಕುಲಕರ್ಣಿಯರನ್ನು ಕೆಲಸದ ಮೇಲೆ ತಕ್ಕೊಳ್ಳತಕ್ಕದ್ದು. ಮತ್ತು ಅವರ ವೇತನಕ್ಕೆ ವಿಘ್ನ ತರತಕ್ಕದ್ದಲ್ಲ.

೫ ಮುಲಕೀ ಮತ್ತು ನ್ಯಾಯಖಾತೆಯ ಅಮಲದಾರರಲ್ಲಿ ಮತಭೇದವಾದರೆ ನ್ಯಾಯಖಾತೆಯ ಅಮಲದಾರನ ತೀರ್ಪೇ ಕೊನೆಯದಾಗುವದು.

೬ ವಿಚಾರಣೆಯು ಸ್ವತಂತ್ರ ಮತ್ತು ಬಹಿರಂಗವಾಗಿ ಆಗತಕ್ಕದ್ದು. ತಮ್ಮ ಪರಿಯಿಂದ ಸಾಕ್ಷೀ ಕೊಡಲು ರೈತರಿಗೆ ಹಕ್ಕು ದೊರೆಯತಕ್ಕದ್ದು.

೭ ಬಾರಡೋಲಿ ಮಾತ್ರವಲ್ಲ; ವಾಲೋಡ ತಾಲೂಕಿನ ರಿವಿಜನದ ವಿಷಯವಾಗಿಯೂ ವಿಚಾರಣೆಯಾಗತಕ್ಕದ್ದು.

ಶ್ರೀ ವಲ್ಲಭಭಾಯಿ ಪಟೇಲರು ಕಮಿಟಿಯ ಮುಂದೆ ಸಾಕ್ಷೀ ಕೊಡಲು ಸಿದ್ಧತೆ ಮಾಡುವರು. ವಿಚಾರಣೆಯು ಕನಿಷ್ಠ ಎರಡು ತಿಂಗಳು ನಡೆಯುವದು. ಸತ್ಯಾಗ್ರಹದ ಕೈದಿಗಳು [illegible] ಇವರು ಸಾಬರಮತಿಯ ತುರಂಗದಲ್ಲಿರುವರು. [illegible] ಇವರನ್ನು ಬಂಧಮುಕ್ತ ಮಾಡುವರು. ಮುಖಂಡರಾದವರು ಬಂದವರು ದಿವಸಗಳಲ್ಲಿ [illegible] ಬೇಸುವರು

ಮೇಲಿನ ಎಳು ಕರಾರುಗಳೂ ಸರದಾರ ಪಟೇಲ ಮತ್ತು ರೈತರಿಗೆ ಅನುಕೂಲವಾಗಿದೆ. ಲಿಲಾವಿನಲ್ಲಿ ಹೊಲಗಳನ್ನು ಕೊಂಡವರಿಗೆ ೧೫೦೦೦ ರೂಪಾಯಿ ಕೊಟ್ಟದ್ದೊಂದೇ ಸೋಲು! ಸರದಾರ ಪಟೇಲರ ಪಾಲಿಗೆ ಬಂತು. ಭಟ್ಟರ ರಿವ್ಹಿಜನದ ಹಣದ ಪ್ರಶ್ನವೇ ಹೋಗಲಿಲ್ಲ. ಅಂತೂ ರೈತರ ಜಯಜಯಕಾರ ಮಾಡುವಂತಾಯಿತು. ಈ ರಾಜಿ ಮಾಡಿಸಿದ್ದಕ್ಕೆ ರಾ. ಬ. ನಾಯಿಕ ಮೊದಲಾದವರು ನಾವುದಾರ ಗವ್ಹರ್ನರಸಾಹೇಬರ ಉಪಕಾರ ಸ್ಮರಿಸಿದರು.

ರಾಜಿಯಾಗದಿದ್ದರೆ ಮಹಾತ್ಮಾಜಿ ಏನು ಮಾಡುತ್ತಿದ್ದರು?

—(೦)—

ಸತ್ಯಾಗ್ರಹಕ್ಕೆ ಪೂರ್ಣ ಪ್ರೋತ್ಸಾಹನ ಕೊಡುವದಕ್ಕಾಗಿ ಹೊರಗಿದ್ದ ಮಹಾತ್ಮರು ಎರಡು ಹಾದಿಗಳನ್ನು ತೆಗೆದಿದ್ದರು. ಒಂದು ನಿನ್ನಿನ ವಿಜಯದಲ್ಲಿ ಬರೆದಂತೆ ಮೂಕವ್ರತ ಧಾರಣ ಮಾಡುವದು. ಇದು ಹುಡುಗರು, ಮುದುಕರು ಮತ್ತು ಅಂಥಿಂಥ ಪ್ರಕೃತಿಯವರ ಕೆಲಸವಾಗದ್ದರಿಂದ ಅವರೆಲ್ಲರೂ ಗ್ರಾಮತ್ಯಾಗ ಮಾಡಿ, ಬಾರಡೋಲಿ ತಾಲೂಕಿನ ಹೊರಗೆ ಹೋಗಬೇಕು. ಸೂರತ, ಬಡೋದೆ ಮುಂತಾದ ಪಟ್ಟಣಗಳಲ್ಲಿ ವಾಸವಾಗಿರಬೇಕು. ಎಂಥ ಕಷ್ಟ ಬಂದರೂ, ಕತ್ತಿಯು ತಲೆಯ ಮೇಲೆ ನಿಲ್ಲುವಂಥ ಹೊತ್ತು ಬಂದರೂ, ಎದೆಗೊಡುವಂಥವರು ಮಾತ್ರ ಅಂತವನ್ನು ಊರೊಳಗಿರಬೇಕು. ಸರಕಾರೀ ಅಧಿಕಾರಿಗಳು ತಿರುಗಿ ಬಿದ್ದರೂ, ನೇಟಿನಲ್ಲಿ ಪನ್ನೀರ, ಹಾಲು ಬೆಣ್ಣೆ ಕೊಡುತ್ತಿದ್ದರು. ಈ ನಂತರ ಅವರಿಗೇನೂ ತೋರದಂತೆ ಬಂದುಕಟ್ಟು ಮಾಡಿ, ಸತ್ಯಾಗ್ರಹದ ಮಹಿಮೆ ತೋರಿಸಬೇಕೆಂದಿದ್ದರು. ಇದನ್ನು ನೋಡುವ ಪುಣ್ಯವು ಇನ್ನು ಭಾರತೀಯರಿಗೆ ಬರಲಿಲ್ಲೆಂಬುದೊಂದು ದುಃಖ ಮತ್ತು ತಮ್ಮ ಎಷ್ಟು ಸೇನಾಸಾಮರ್ಥ್ಯವಿದ್ದರೂ ಅಹಿಂಸೆಯ ಅನುಸರಣದ ಮುಂದೆ ಬಗ್ಗಿ ನಡೆಯಬೇಕಾಗುತ್ತದೆಂದು ಆಳರಸರಿಗೆ ಪೂರಾ ತೋರಿದ್ದು, ಬಾರಡೋಲಿಯಿಂದ ಬುದ್ಧಿಗಲಿಯುವ ಹೊತ್ತು ಬಂದದ್ದು ಹೋಯಿತಲ್ಲಾ ಎಂದು ದುಃಖವು. ಆದರೂ ಬಾರಡೋಲಿಯಿಂದ ಯಾವ ಬೋಧ ತೆಗೆದುಕೊಳ್ಳಬೇಕೆಂಬುದನ್ನು ರಾಜ್ಯಾಸ್ಪರ್ಧಿಗಳೂ ಬಹುಮಟ್ಟಿಗೆ ತಿಳಿದುಕೊಂಡಂತಾಯಿತೆಂಬುದು ಮಾತ್ರ ಸುಳ್ಳಲ್ಲ.

ರಶಿಯವನ್ನು ತ್ರಿಶಂಕು ಮಾಡುವಂತೆ ಬಲಾಢ್ಯ ರಾಷ್ಟ್ರಗಳ ಸಂಗನಮತ.

—(೦)—

ಜಗತ್ತಿನಲ್ಲಿ ಈ ನಂತರ ಯುದ್ಧವಾಗಬಾರದೆಂದು ಅಮೇರಿಕೆಯ ಅಧ್ಯಕ್ಷರಾದ ಮಿ. ಕೆಲಾಗಸಾಹೇಬರು ಪ್ರಯತ್ನಿಸಿರುವ ವಿಷಯವಾಗಿ ಈ ಮೊದಲು ಬರೆದಿದ್ದೇವೆ. ಜರ್ಮನಿ, ಇಂಗ್ಲಂಡ ಫ್ರಾನ್ಸ ಮೊದಲಾದ ದೇಶಗಳು ಸಾಹೇಬರಿಗೆ ಒಪ್ಪಿಗೆ ಕೊಟ್ಟವೆ. ಇಂಗ್ಲಂಡದ ನೇವನಗುಂಟ ನಡೆಯುವ ಹಿಂದುಸ್ಥಾನದ ಅಧಿಕಾರಿಗಳು "ಮಿಯ್ಯಾ ಬೋಲೆ ದಾಡೀಹಾಲೆ" ಎನ್ನುವ ಪ್ರಕಾರ ಕೆಲಾಗಸಾಹೇಬರಿಗೆ ತಥಾಸ್ತು ಎಂದಿದ್ದಾರೆ. ಆದರೆ ಈ ಕೂಟಿನಲ್ಲಿ ರಶಿಯು ಮಾತ್ರವಿಲ್ಲ. ಈ ದೇಶವನ್ನು ಬಿಟ್ಟೇ ಎಲ್ಲ ಕಾರಸ್ಥಾನ ನಡೆದಿದೆ. ರಶಿಯವು ಬೊಲ್ಶೆವಿಕವಾದ್ದರಿಂದ, ಅದನ್ನು ತಮ್ಮೊಳಗೆ ಸೇರಿಸಿಕೊಂಡರೆ ಹಾದೀ ಹೋಗುವಂಥ ಪಾಪವನ್ನು ಮೈಮೇಲೆ ಹೊರಿಸಿಕೊಳ್ಳುವಂತಾದ್ದರಿಂದ, ಇದನ್ನು ಅಸ್ಪೃಶ್ಯ ಮಾಡಿದ್ದಾರೆ. ರಶಿಯದಂಥ ಬಲಿಷ್ಠ ದೇಶವನ್ನು ತ್ರಿಶಂಕುರಾಜನಂತೆ ಏಶಿಯಾ ಯುರೋಪದ ಮಧ್ಯದಲ್ಲಿ ಬಿಟ್ಟು, ಇವರು ಜಗತ್ತಿನ ಶಾಂತತೆಯನ್ನು ಹೇಗೆ ಕಾಯುವರೆಂಬುದು ದೊಡ್ಡ ಸಂಶಯವೇ ಸರಿ. ಈ ದೇಶಗಳ ಒಳವಿಚಾರವನ್ನು ನೋಡಿ, ರಶಿಯವನ್ನು ಚಿಮ್ಮಿ ಹಾಕುವದೇ ಇವುಗಳ ರಹಸ್ಯವಾಗಿದೆಂದು, ರಶಿಯಾದ ಪರರಾಷ್ಟ್ರ ಪ್ರಧಾನಿಯಾದ ಚೆಚೆರಿನ್ನಸಾಹೇಬರು ಹೇಳುತ್ತಾರೆ. ಈ ಸ್ಪರ್ಧೆಯು ಸುಳ್ಳಾದರೆ ರಶಿಯವನ್ನು ಶಾಂತತಾ ಸಂಘದಲ್ಲಿ ಸೇರಿಸಿಕೊಳ್ಳಿರಿ. [illegible] ನಡೆದ ಪತ್ರವ್ಯವಹಾರವನ್ನು ತೆರೆಸಿರಿ ಅಂದರೆ ನಿಮ್ಮ ಕೂಡ ನಾವೂ ಸಹಕಾರ ಮಾಡುವೆವೆಂದು ಚೆಚೆರಿನ್ನಸಾಹೇಬರು ಅಂದಿದ್ದಾರೆ. ಇಷ್ಟೇ ಅಂದು ಇವರು ಸುಮ್ಮನೆ ಕೂಡ್ರದೆ, ಯಾವದೊಂದು ದೇಶವು ತನ್ನ ದಂಡು ನಿಃಶಸ್ತ್ರ ಅಥವಾ ಕಡಿಮೆ ಮಾಡುವ ಕಲಮಿಗೆ ಒಪ್ಪದ್ದರಿಂದ, ಈ ಒಡಂಬಡಿಕೆಯು ಅರ್ಥಹೀನವಾದದ್ದೆಂದು ಸ್ಪಷ್ಟವಾದ ಅಭಿಪ್ರಾಯ ಕೊಟ್ಟಿದ್ದಾರೆ. ಬಾಣಾಸುರನ ಕೈಗಳು ಕಳಕಳವೆನ್ನುತ್ತಲೇ, ಅವನನ್ನು ಯುದ್ಧಕ್ಕೆ ಅಣಿ ಮಾಡಿದವೆಂದು ಪುರಾಣೋಕ್ತಿಯುಂಟು. ಅದೇ ಪ್ರಕಾರ ದಂಡಿಟ್ಟುಕೊಂಡ ದೇಶಗಳ ಪರಿಣಾಮವೂ ಆಗುವದು.

ಸರ್ವಪಕ್ಷೀಯರ ಸ್ವರಾಜ್ಯ ಯೋಜನೆಯ ವಿಚಾರ ಮಾಡಲು ಮುಸಲ್ಮಾನರೊಳಗಿನ ಖಿಲಾಫತ, ಜಮಾಯತ-ಉಲ್ ಉಲೇಮಾ ಮುಸಲ್ಮಾನ ಲೀಗ ಸಭೆಯವರು ಇದೇ ತಿಂಗಳ ೨೫ನೇ ತಾರೀಖಿನ ದಿನ ಲಖನೌದಲ್ಲಿ ಕಮಿಟಿ ಕೂಡುವದು.

ಮಕ್ಕಳ ದೆಸೆಯಿಂದ ಮನೆ!! ಅವುಗಳ ಮೇಲೆ ಮ್ಯುನಿಸಿಪಾಲಿಟಿಯ ಕರ!!!

ಅಹಮದಾಬಾದ ಮುನಿಸಿಪಾಲಿಟಿಯ ಹದ್ದಿನಲ್ಲಿರುವಂಥ ನಾಗರಿಕರಲ್ಲಿ ಸಧನಾಢ್ಯರು ಮುಂದೆ ತಮ್ಮ ಮಕ್ಕಳು ಮನೆಯ ಭಾಗದ ದೆಸೆಯಿಂದ ನ್ಯಾಯವಾದಬಾರದೆಂಬ ಸದ್ಬುದ್ಧಿಯಿಂದ ಮಕ್ಕಳಿಗೆ ಹಂಚಿಕೊಳ್ಳಲಿಕ್ಕೆ ಬರುವಂತೆ ಮನೆಯನ್ನು ಕಟ್ಟುವರು. ವಾಸ್ತವಿಕವಾಗಿ ಮನೆಯು ಒಂದೇ ಆದರೂ, ಅದರಲ್ಲಿ ಭಾಗ ಬೀಳುವವು. ಮ್ಯುನಿಸಿಪಾಲಿಟಿಯು ತನ್ನ ಆದಾಯ ಬೆಳೆಸುವದಕ್ಕಾಗಿ, ಮಕ್ಕಳ ಹೆಸರ ಸಲುವಾಗಿ ಮಾಡಿದ ಪ್ರತಿಯೊಂದು ಭಾಗವನ್ನು ಸ್ವತಂತ್ರ ಮನೆ ಎಂದು ಎಣಿಸಿ, ಪ್ರತಿಯೊಂದರ ಮೇಲೆ ಪ್ರತ್ಯೇಕ ಕರ ಕೂಡಿಸುವದು. ಮ್ಯುನಿಸಿಪಾಲಿಟಿಯ ಈ ಕೃತ್ಯವು ಊರು ಸುಲಿಯುವದಾದ್ದರಿಂದ, ಕರದ ಈ ದುಷ್ಟ ಪದ್ಧತಿಯನ್ನು ನಿಲ್ಲಿಸಬೇಕೆಂದು ಮಿ. ಮಾವಳಂಕರೆಂಬ ಮೆಂಬರರು ಮ್ಯುನಿಸಿಪಾಲಿಟಿಯಲ್ಲಿ ಠರಾವು ತಂದರು. ಇದಕ್ಕೆ ಅನುಮೋದನವೂ ದೊರೆಯಿತು. ಆದರೆ ಮ್ಯುನಿಸಿಪಾಲಿಟಿಯಲ್ಲಿ ಜಬ್ಬುಗನಿದ್ದದರಿಂದ, ವಿರುದ್ಧ ಪಕ್ಷದವರು ಠರಾವಿನ ಬಗ್ಗೆ ಮೇಲೆ ಕಡು ಟೀಕೆ ಮಾಡಿದರು. ಕೊನೆಗೆ ಒಬ್ಬರೊಬ್ಬರ ಮೇಲೆ ಅಸಭ್ಯವಾದ ವಾಕ್ಪ್ರಹಾರ ನಡೆದು, ಸಭೆಯು ಕಂಬಗೊಂದಲವೆದ್ದು, ಸಭೆಯೇ ಮುರಿದು ಹೋಯಿತು. ನಂತರ ಕೋಲಾಹಲದಿಂದ ಸಭೆಯು ತಹಕೂಬಾಯಿತೆಂದು ಬರೆದಿರಬೇಕೆಂದು ಚೀಫ ಆಫೀಸರ ಸೆಕ್ರೆಟರಿಗೆ ಹುಕುಮು ಮಾಡಿದರು. ಇದನ್ನು ಮೆಂಬರರು ವಿರೋಧಿಸಿದರು. ಆದರೆ ವಿರೋಧವನ್ನು ಲಕ್ಷಿಸದೆ, ಮೇಲಿನಂತೆ ಬರೆದಿಟ್ಟರು.

ಸಾಠೆ ಪರಾಂಜಪೆ ಸ್ಕೀಮು ಸತ್ತಿತು!!!

—(೦)—

ಸಾಠೆ ಪರಾಂಜಪೆ ಸ್ಕೀಮಿನ ವಿಷಯವಾಗಿ ನೀವು ವಿಚಾರ ಮಾಡಬೇಕೆಂದು ಪ್ರಾಥಮಿಕ ಶಾಲೆಗಳ ಶಿಕ್ಷಕರಿಗೆ ಹೇಳಿದ್ದು ನಿಜವೇ ಹೇಗೆಂದು ಕೌನ್ಸಿಲದಲ್ಲಿ ದಿವಾನ ಜೋಸಾಯರಿಗೆ ಪ್ರಶ್ನವನ್ನು ಮಿ. ಬೋಲೆಯವರು ಮಾಡಲು "ಬಹುಮಟ್ಟಿಗೆ ಹೌದು" ಎಂದು ಹೇಳಿ, [illegible] ವೆಚ್ಚಕ್ಕೆ ಬರುವದರಿಂದ, ಪ್ರಕೃತದ ಸಾಂಪತ್ತಿಕ ಸ್ಥಿತಿಯಲ್ಲಿ ಅದರ ವಿಚಾರ ಮಾಡಲಿಕ್ಕಾಗುವದಿಲ್ಲೆಂದು ದಿವಾನರು ಉತ್ತರ ಕೊಟ್ಟಿದ್ದಾರೆ.

ಇನ್ನು ದತ್ತಾತ್ರೇಯ ಕಂಪನಿಯವರು ತಮ್ಮ ನಾಟಕವು ಉತ್ತಮವೆಂದು ಉದರ ನಿರ್ವಾಹಕ್ಕಾಗಿ ಸ್ವಾರ್ಥದಿಂದ ಹೇಳಿರಬಹುದು. ಆದರೆ ಈ ಸೇವಕರು ತಮ್ಮ ಸದಭಿಪ್ರಾಯವೆಂಬ ಸ್ಥಳದಲ್ಲಿ ಯಾವ ಸ್ಥಾನವನ್ನು ಮಾಡಿಕೊಂಡಿದ್ದರು? ಅಕ್ಕಸ್ತೋತ್ರ ಪಾರಾಯಣವೋ? ಕೂಸ ಮುದ್ದಾಟವೋ?

ಜವತಿಯ ಚಂದ್ರ, ನಾಟಕವು ಯೋಗ್ಯವಾಗಿ ಈ ಸೇವಕರಿಗೆ ಕಾಣುವದಕ್ಕೆ ಇವರು ಕಣ್ಣಿನಿಂದ ಕಾಣುವದಿಲ್ಲ. ಕಿವಿಯಿಂದ ಕೇಳುವದಿಲ್ಲ. ಇವರ ಬುದ್ಧಿಯು ಮೊಳಕಾಲ ಕೆಳಗಿರುತ್ತದೆ ನಿಜವಾಗಿಯೂ ಇವರು ಲೇಖ ಕೊಡುವದೆಂದರೆ ವೃತ್ತ ಪತ್ರಿಕೆಗಳಲ್ಲಿ ತಮ್ಮ ನಾಮವು ಅಂಟಿಕೊಳ್ಳಲೆಂದೇ? ಇರಲಿ ಹಿಂದೂ ಧರ್ಮಶಾಸ್ತ್ರದ ಹಂಬಲದಿಂದ ಬಡಬಡಿಸುವ ಇವರಿಗೆ ಹಿಂದೂ ಶಾಸ್ತ್ರವು ಗೊತ್ತುಂಟೋ? ಅದರಲ್ಲಿ ಸ್ವಯಂವರ ಪದ್ಧತಿಯುಂಟೋ? ವರ ಪರೀಕ್ಷೆಯನ್ನು ಮಾಡಿ, ತನಗನುರೂಪ ವರನನ್ನು ವರಿಸುವ ವಧುವು ಪುರುಷನ ಮುಖಾವಲೋಕನ ಮಾಡುವದಿಲ್ಲವೋ ಇದೇ ಏನು ಇವರ ಹಿಂದೂಶಾಸ್ತ್ರ ಪ್ರಾವೀಣ್ಯತೆ? ಜಾಂಬುವತಿಯು ರಂ| ಸೇವಕರಂತೆ ಉದ್ಧಾತದ್ದಾ ಒದರಾಡುವ ಚಂಚಲ ಸ್ವಭಾವದವಳಲ್ಲ. ತಮ್ಮ ಲೇಖವನ್ನು ಪುನರಾವರ್ತಿ ಪೈಲ ಮಾಡಿದರೆ ರಂ| ಸೇವಕರಿಗೆ ಪಶ್ಚಾತ್ತಾಪವಾಗಬಹುದು. ಸ್ವಾಮೀ, ಸೇವಕರೆ ನಾಟ್ಯ ಪ್ರಪಂಚದಲ್ಲಿ ಮಗ್ನರಾದ ಶ್ರೀ ಗರುಡರ ಮೇಲೆ ನಿಮಗೇಕಿಷ್ಟೊಂದು ಹೊಟ್ಟೆಯುರಿ? ಅವರು ನಾಟಕಾಲಂಕಾರ ಪದಕ್ಕೆ ಯೋಗ್ಯರೆಂದು ಇಡೀ ಜಗತ್ತಿಗೇ ಗೊತ್ತುಂಟು. ತಾವಿನ್ನೂ ಒಲೆಯ ಮುಂದೆಯೇ ಕುಳಿತಿದ್ದರೆ ಅದಕ್ಕೆ ಪರು ಮಾಡುವದೇನು? ಹಿಂದಕ್ಕೆ ವಿಜಾಪೂರದಲ್ಲಿ ಗರುಡರಿಗಾದ ಪುರಸ್ಕಾರವು ನಿಮ್ಮ ಹೊಟ್ಟೆಯನ್ನು ಉರಿಸಿದ್ದೇನೂ ಮಹತ್ವವಲ್ಲ. ಮೊನ್ನೆ ಬೆಳಗಾವಿಯಲ್ಲಿ ನರಸಿಂಹ ಚಿಂತಾಮಣಿ ಕೇಳಕರರು ಮಾಡಿದ ಪುರಸ್ಕಾರವನ್ನು ನೋಡಿ, ಕೇಳಿ ಸ್ವರಾಷ್ಟ್ರಾಭಿಮಾನದ ನಿಮಗೆ ನಾಚಿಕೆಯನ್ನು ಹುಟ್ಟಿಸಿತೆಂದು ಈ ಪ್ರಕಾರ ಬಡಬಡಿಸಿದ್ದು ತಮ್ಮ ಮೂರ್ಖತನದ ಪ್ರದರ್ಶನವನ್ನು ಮಾಡಿಸಿದಂತೇ ಆಗಿರುವದು. ಜವತಿಯ ಚಂದ್ರನ ನಾಟಕದ ಪ್ರಶ್ನೆಗೆ ಒಂದೇ ಉತ್ತರವನ್ನು ಕೊಡುವೆವು. ಭಗೀರಥನು ಪ್ರಯತ್ನ ಪುರಸ್ಸರನಾಗಿ ಪಿತೃಗಳ ತರ್ಪಣಕ್ಕಂದು ಭಾಗೀರಥಿಯನ್ನು ಭೂಮಿಗಿಳಿಸಿದನಾದರೂ ಸೂರ್ಯನಿಗೆ ಅರ್ಘ್ಯವನ್ನು ಕೊಡಕಕ್ಕೆ ಬೇಡೆಂದು ಆತನು ನಿಬಂಧಗಳನ್ನು ಬರೆದಿಲ್ಲ. ವಾಲ್ಮೀಕಿಯು ರಾಮಾಯಣವನ್ನು ರಚಿಸಿದನಂತರದಲ್ಲಿ ಶತ ಕೋಟಿ ರಾಮಾಯಣಗಳು ರಚಿಸಲ್ಪಟ್ಟರೂ ಮೊದಲಿನ ರಾಮಾಯಣದ ಗೌರವವು ಹಾಳಾಗಿ ಹೋಗಿಲ್ಲ. ಭಕ್ತಿಯು ಅಳಿಯಲಿಲ್ಲ. ಇದಕ್ಕಾದರೂ ಈ ಸೇವಕರು ಒಪ್ಪುವರೋ? ಅಥ ತೃತೀಯಃಸಂಧಾ ಎಂಬ ದೊಡ್ಡದಾದ ವಕ್ರದೃಷ್ಟಿಯನ್ನು ನನ್ನ ಲೇಖದ ಮೇಲೆಯೂ ಕೆಡಹುವರೋ?

ನಿರಂಕುಶಾಃ ಕವಯಃ,, ಎಂಬುದನ್ನು ತಾವೇ ಒಪ್ಪಿಕೊಂಡು ಗರುಡರನ್ನೇಕೆ ಕೇಳಿದ್ದು? ಯದ್ಯಪಿ ಪುರಾಣಿಕರಿಗೆ ಅಸಂಬದ್ಧವಾಗಿ ತೋರಿರಬಹುದು. ಆದರೆ ನಾಟ್ಯ ದೇವತೆಯು ಕಲಂಕಿತಳೆಂದು ಬರೆಯುವ ರಂ| ಸೇವಕರು ತಮ್ಮ ಬುದ್ಧಿಯನ್ನು ಬಾಳೇಹಣ್ಣು ತಿನ್ನಲಿಕ್ಕೆ ಕಳಿಸಿದಂತೆ ಕಾಣುತ್ತದೆ. ಮೇಲೆ ಹೇಳಿದ ಎಲ್ಲ ನಾಟಕಗಳನ್ನು ಕಿತ್ತುಹಾಕಿರಿ. ರಂಗಭೂಮಿಯ ಸೇವಕರ ಅಸಂಬದ್ಧ ಪ್ರಲಾಪದ ಸಂವಿಧಾನಕಗಳನ್ನು ತಕ್ಕೊಳ್ಳಿರಿ ಅಂದರೆ ವ್ಯವಸಾಯ ಬಂಧುಗಳೇ? ನಿಮ್ಮ ಹೊಟ್ಟೆಗೆ ಕೇರು ಹಾಕಿಕೊಳ್ಳಿರಿ ಛೀ! ಛೀ! ಇನ್ನು ಈ ಸಖವನ್ನು ನೋಡಿ ಮತ್ತು ಮತ್ತು ಪಿಷ್ಟವನ್ನು ಮುಚ್ಚುವದು ನಮ್ಮ ಅಪೇಕ್ಷೆಯಿಲ್ಲ.

ಇಂಥಹ ಲೇಖಗಳನ್ನು ಮುದ್ರಿಸುವ ವೃತ್ತಪತ್ರಿಕಾಕರರಾದರೂ ಲೇಖಗಳಿಲ್ಲದೆ ಹಾಕೂರೆಯುತ್ತಿರಬಹುದಾಗಿ ಕಾಣುತ್ತದೆ. ಜಾಣನಾದವನು ಹೀಗೆಂದೂ ಮುದ್ರಿಸಲಿಕ್ಕಿಲ್ಲ. ಅಂದಮೇಲೆ ಪತ್ರಿಕಾಕರ್ತರು ರಂಗಭೂಮಿಯ ಸೇವಕನ ಅಡಿಯಾಳೋ? ಇಂತಹ ಟೀಕಾತ್ಮಕವೂ ವಾದಾಸ್ಪದವೂ ಆದ ಲೇಖವನ್ನು ಮುದ್ರಿಸಬಹುದೋ?

ತಿರುಪತಿಯಲ್ಲಿ ಬ್ರಹ್ಮೋತ್ಸವದ ಕಾಲಕ್ಕೆ ದೇಶದೇಶಗಳಿಂದ ಸಾವಿರಾರು ಜನ ಭಾವಿಕರು ಅಲ್ಲಿಗೆ ಹೋಗುವರು. ಆದರೆ ಅಲ್ಲಿ ಮಾರಿಕಾ ಬೇನೆಯು ಭಯಂಕರ ಸ್ವರೂಪಧಾರಣ ಮಾಡಿರುವದರಿಂದ ಜನರು ತಮ್ಮ ಜೀವವನ್ನು ಗಂಡಾಂತರದಲ್ಲಿ ಹಾಕಿಕೊಂಡು ಬರಬಾರದೆಂದು ಮದ್ರಾಸ ಸರಕಾರದವರು ಜಾಹೀರನಾಮೆಯನ್ನು ಪ್ರಸಿದ್ಧ ಮಾಡಿದ್ದಾರೆ

ಬೆಂಗಳೂರಲ್ಲಾದ ವಿದ್ಯಾರ್ಥಿಗಳ ಸತ್ಯಾಗ್ರಹದ ಸಮೂಲ ವಿಚಾರ ಮಾಡಲು ಮತ್ತು ಮುಂದೆ ಸತ್ಯಾಗ್ರಹ ಮಾಡದಂತೆ ವ್ಯವಸ್ಥೆ ಮಾಡಲು ಯಾವ ರೀತಿಯನ್ನು ಅನುಸರಿಸಬೇಕೆಂಬ ವಿಷಯವಾಗಿ ವಿಚಾರ ಮಾಡಲು ದರಬಾರಿನವರು ಒಂದು ಕಮೀಟಿ ನೇಮಿಸಕೊಳ್ಳುವರಿದ್ದಾರೆ.

ಮೈಸೂರಿಂದ ಕೊಡಗು ಮತ್ತು ತಿರೋಡಕ್ಕೆ ರೇಲ್ವೆ ಹಾಕಿ, ದಕ್ಷಿಣ ದೇಶಿಸುರು ಕಿರಿ ಹಳಿಯ ದಾರಿಯಿಂದಲೇ ಪುಣೆಯು ತನಕ ಪ್ರಯಾಣ ಬೆಳಸುವಂತೆ ವಿಚಾರ ನಡೆದಿದೆ.

ಸುಪ್ರಸಿದ್ಧ ಮುಸಲಮಾನ ಗೃಹಸ್ಥರೂ ಕೀರ್ತಿಯುಳ್ಳ ಪಂಡಿತರೂ ಆಗಿದ್ದ ಮಿ. ಅನೀಸರಲ್ಲಿಯವರು ಲಂಡನದಲ್ಲಿ ಹೃದಯಕ್ರಿಯ ನಿಂತು ಅಕಸ್ಮಾತ್ತಾಗಿ ಪರಲೋಕವಾಸಿಯಾದರು.

ನೋಟೀಸು

ರಾ| ಶಾಂತಿನಾಥ ನಾಗೇಂದ್ರ ಪಾಟೀಲ ವ ಟನೂತ ದೇವೇಂದ್ರ ಜೈನ ಸಾಕೀನ ಕಲಘಟಗಿ ಇವರಿಗೆ.

ಶಂಕರಪ್ಪಾ ಕೋಂ ಅಲ್ಲಪ್ಪಶೆಟ್ಟಿ ಗಾಣಿಗೇರ ಸಾಕೀನ ಧಾರವಾಡ ಈ ನೋಟೀಸಿನ ಮುಖಾಂತರ ತಿಳಿಸೋದೇನಂದರೆ- ನೀವು ಉಭಯತರು ನಿಂತ ಮನಿ ಕಲಘಟಗಿ ತಾಲೂಕ ಕಲಘಟಗಿಯಲ್ಲಿ ಇದ್ದು ಸದರ ಮನಿ ನಿಂಮ ಉಭಯತರಿಗೆ ವತ್ತಿ ಸ್ವಲ್ಪ ಹಣದಲ್ಲಿ ಕೊಂಡ ವತ್ತಿ ಬರಿಸಿಕೊಂಡು ಇರತ್ತಿರಿ ಅಂದರೆ- ಸದರಿ ಹಣ ನಿಂಮಿಂದ ಎಷ್ಟು ಆದೀತು ಅದ ಬೇಗ ತಿಳಿಸಿದಲ್ಲಿ ಲೆಖ್ಖಾಚಾರ ತೀರಿಸಿ ವಿಕಾಲೆ ಮಾಡತ್ತದೆ ನನಗೆ ತಿಳಿಸದಲೆ ಮಾನ ಖರ್ಚಿನೂ ಮಾಡಿದ್ದಲ್ಲಿ ಆ ಬಾಬತ್ತ ಆದ ಖರ್ಚಿಗೆ ನಾನು ಜವಾಬದಾರನಲ್ಲ ಈ ನೋಟೀಸ ಮುಟ್ಟಿದ ೮ ದಿನದಲ್ಲಿ ನಿಂಮ ಕಾಗದಪತ್ರ ತಗೊಂಡು ನನಗೆ ಭೆಟ್ಟಿ ಆಗಬೇಕು. ತಾ| ೯—೮—೨೮

ಈ ಎಡಗೈ ಹೆಬ್ಬಟ್ಟಿನ ಗುರ್ತು ಶಂಕರಪ್ಪಾ ಕೋಂ ಅಲ್ಲಪ್ಪಶೆಟ್ಟಿ ಗಾಣಿಗೇರ ಇವರದು ಅದೆ.

ನೋಟೀಸಿನ ದರಗಳು.

ಸಿಂಗಲ ಕಾಲಮಿನ ಹತ್ತು ಸಾಲಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಸಾಲಿಗೆ ಒಂದಾಣೆ ಆಕಿ ಇಂಗ್ಲಿಷ ಪತಿಯೊಂದು ಒಳಗೆ ಎರಡಾಣೆ ಸರಕಾರಿ, ಮ್ಯುನಿಸಿಪಾಲಿಟಿ ಲೋಕಲಬೋರ್ಡ ರೇಲ್ವೆ ಬ್ಯಾಂಕ ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರಾಣೆ ಇಂಗ್ಲಿಷದಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಅದ ಆಕೆ ಡಬಲ್‍ಕಾಲಮಿನ ಒಳಗೆಗೆ ಇಮ್ಮಡಿ ಚಾರ್ಜ ಕಾಯಂ ಜಾಹಿರಾತುಗಳನ್ನು ಕೊಡುವವರು ಕೆಳಗಿನ ಸಹಿಗೆ ಪತ್ರವ್ಯವಹಾರ ಮಾಡಬಹುದು

ಮ್ಯಾನೇಜರ ವಿಜಯ ಧಾರವಾಡ

ಚಂದಾದಾರರಿಗೆ ಸೂಚನೆ

ಆಗಸ್ಟ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗುವ ನಿಮಿತ್ತ ನಮ್ಮ ವಾರಪತ್ರದ ಚಂದಾದಾರರ ಹೆಸರಿನಿಂದ ವ್ಹಿ. ಪಿ. ಯನ್ನು ಕಳುಹುವೆವು. ಚಂದಾದಾರರು ವ್ಹಿ. ಪಿ. ಸ್ವೀಕರಿಸಿ ವಿಜಯವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಯು.

ಮ್ಯಾನೇಜರ ವಿಜಯ ಧಾರವಾಡ

ಈ ಪತ್ರವನ್ನು ಅನಂತಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಾಲಯದಲ್ಲಿ ಮುದ್ರಿಸಿ ಪ್ರಸಿದ್ಧಪಡಿಸಿದರು

R. N. B. 1443

ನಿತ್ಯ ಪತ್ರ

ವಿಜಯ

ಬೆಲೆ ಅರ್ಧ ಆಣೆ

ಸಂಪಾದಕರು:- ಆನಂದ ಆಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೯) ಧಾರವಾಡ ಶುಕ್ರವಾರ ತಾರೀಖು ೧೦ ನೇ ಆಗಸ್ಟ ೧೯೩೩ (ಸಂಚಿಕೆ ೧೮೧

ದಿ ಜಯಲಕ್ಷ್ಮಿ ಬ್ಯಾಂಕ ಲಿಮಿಟೆಡ, ಧಾರವಾಡ.

ಸ್ಥಳ- ಮಂಗಳವಾರಪೇಟಿ, ಆಕವಲೆ ವಕೀಲ ಪಾಂಡುರಂಗರಾಯರ ಮನೆ.

೧ ಈ ಬ್ಯಾಂಕಿನಲ್ಲಿ ದಾಗೀನೆಗಳ ಮೇಲೆ ಸೋಯಿ ದರದಿಂದ ಕುಸು ಮತ್ತು ಒಹಳ ಮುದ್ದತಿಯ ಕನಕ ೫ರ ರಕಮಿನಿಂದ ಬೇಕಾದಷ್ಟು ದೊಡ್ಡ ರಕಮಿನ ಕನಕ ಸಾಲ ದೊರೆಯುವದು. ಒಡ್ಡಿಯ ದರ ಸುಲಭ ಸಮಕ್ಷಮ ತಿಳಕೊಳ್ಳಬೇಕು.

೨ ಸರಕಾರಿ ಪ್ರಾಮಿಸರಿ ನೋಟುಗಳ ಖರೀದಿ, ವಿಕ್ರಿ ನಡೆಯುವದು. ಅವುಗಳ ಮೇಲೆ ಸಾಲ ದೊರೆಯುವದು. ಮತ್ತು ಯೋಗ್ಯ ಕಮೀಶನ ತಕ್ಕೊಂಡು ಗಿರಾಕಿಗಳಿಗೆ ಲಾಭಕರವಾಗಿ ಅವುಗಳ ಮಾರಾಟ ಮಾಡಿ ಕೊಡಲ್ಪಡುವದು.

೩ ಮುದ್ದತಿ ಠೇವಿನ ಹಣವನ್ನು ಇಟ್ಟುಕೊಳ್ಳಲಾಗುವದು. ಸ್ವಲ್ಪ ರಕಮಿನಿಂದ ದೊಡ್ಡ ರಕಮಿನ ಕನಕ ಇಟ್ಟುಕೊಳ್ಳಲಾಗುವದು. ಒಡ್ಡಿಯ ದರವನ್ನು ಸಮಕ್ಷಮ ಅಥವಾ ಪತ್ರವ್ಯವಹಾರದಿಂದ ತಿಳಕೊಳ್ಳಬೇಕು.

೪ ಈ ಬ್ಯಾಂಕಿನ ಶೇರುಗಳು ಮಾರಾಟಕ್ಕೆ ದೊರೆಯುವವು.

೫ ಬ್ಯಾಂಕಿಗೆ ಸಂಬಂಧಿಸಿದ ಹಾಲಿತಿ ವ್ಯವಹಾರ ಮೊದಲಾದ ಎಲ್ಲ ಕೆಲಸಗಳು ನಡೆಯುವವು. ವಿಶೇಷ ಸಂಗತಿಗಳನ್ನು ಆಫೀಸಿನ ವೇಳೆಯಲ್ಲಿ ಸಮಕ್ಷಮ ಅಥವಾ ಪತ್ರವ್ಯವಹಾರದಿಂದ ತಿಳಕೊಳ್ಳಬೇಕೂ

ಕೃಷ್ಣರಾವ ವೆಂಕಟರಾವ ಭಂಡಿವಾಡ.
ಮ್ಯಾನೇಜಿಂಗ ಏಜಂಟ.

-ಃ ಶ್ರೀ ಗುರು ಪ್ರಸನ್ನ ಃ-

ಪ್ರತಿಯೊಬ್ಬ ಕುಟುಂಬಕನು ಅವಶ್ಯ ಸಂಗ್ರಹದಲ್ಲಿಡತಕ್ಕ ಒಂದೇ ಔಷಧ.

ಭಾಸ್ಕರ ಚೂರ್ಣ.

ಸುಪ್ರಸಿದ್ಧ ವನಸ್ಪತಿ ಶಾಸ್ತ್ರಜ್ಞರ ಸೂಚನೆಯ ಮೇರೆಗೆ ಈ ಚೂರ್ಣವು ತಯಾರಿಸಲ್ಪಟ್ಟಿದ್ದು ಇದರ ಸೇವನೆಯಿಂದ ನಾಲ್ಕು ತರದ ಕ್ಷಯರೋಗಗಳು ಕ್ಷಣಕಾಲದಲ್ಲಿಯೇ ನಾಶಹೊಂದುವವು. ಅಜೀರ್ಣ ಅಪಚನ, ಅಪಾಂಶ, ಅಗ್ನಿಮಾಂದ್ಯ ಸಾಂಗ್ರಹಣಿ, ಹೊಟ್ಟೆಶೂಲೆ, ಹೊಟ್ಟೆನೋವು ಮತ್ತು ಇನ್ನೂ ತರದ ಧಾತುವಿಕಾರಗಳ ಮೇಲೆ ಇದೊಂದೇ ರಾಮಬಾಣ ಔಷಧವಿರುವದು. ಒಂದು ಚಿಮುಟಿಗಿಯಷ್ಟು ಈ ಚೂರ್ಣವನ್ನು ಬಾಯಿಯಲ್ಲಿ ಹಾಕಿಕೊಂಡರೆ- ಸಾಕು ಪುನಃ ಅರ್ಧತಾಸಿನಲ್ಲಿಯೇ ಹಸಿವೆ ಹಾಗುವದು. ಬೇರೆಯಿಂತ ಗುಣವಾಗಿದ್ದ ಅಶಕ್ತ ಮನುಷ್ಯರು ಎರಡನೆ ಶಕ್ತಿವರ್ಧಕ ಔಷಧ ತೆಗೆದುಕೊಳ್ಳುವ ಕಾರಣವೇ ಇಲ್ಲ. ಹಳ್ಳಿಗಳಲ್ಲಿಯ ಜನರು ಒಂದು ಭಾಸ್ಕರ ಚೂರ್ಣದ ಡಬ್ಬಿಯನ್ನು ತಮ್ಮ ಹತ್ತಿರ ಇಟ್ಟುಕೊಂಡರೆ- ಸಾಕು ಯಾವತ್ತು ಬೇನೆಗಳಿಗೆ ಉಪಯೋಗವಾಗುವದು. ಎಷ್ಟು ದಿನದ ಅಪಾಂಶವಿದ್ದರೂ ಮೂರೇ ದಿವಸಗಳಲ್ಲಿ ಗುಣವಾಗುವದು. ಕೇವಲ ವನಸ್ಪತಿಯಿಂದಲೇ ತಯಾರಿಸಿದ್ದ ಈ ಸಿದ್ಧೌಷಧವನ್ನು ಪ್ರತಿಬ್ಬನೂ ಅವಶ್ಯ ಸಂಗ್ರಹದಲ್ಲಿಡತಕ್ಕದ್ದು ಒಂದು ಡಬ್ಬಿಯ ಕಿಮ್ಮತ್ತು ೧೦ ಆ. ಕಾವದು ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು. ಪೋಸ್ಟೇಜ ಬೇರೆ ಮ್ಯಾ. ನಾ. ೧ ಆಣೆ.

ಏಜಂಟ- ಬಿ. ಬಿ. ಟಿರಾಕೆ ಆ್ಯಂಡ ಸನ್ಸ, ಮಾರ್ಕೆಟರೋಡ ಧಾರವಾಡ.

ದಿ ಧಾರವಾಡ ಅರ್ಬನ ಕೋ ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಬಂಡವಲು ಏಳು ಲಕ್ಷದ ಮೇಲೂಟು. ಚೆಕ ಕುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರ ನಡೆಯುವದು. ಕ್ಯಾಶಿಯರ ಮತ್ತು ಬೇರೆ ತರದ ಠೇವಣಿಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮಾಧವರಾವ ಬಿ. ಜಹಾಗಿ,
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು, ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಠೇವಣಿ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಒತ್ತೀ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಕಟ್ಟಿ
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣೀ ದರ.

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	೧೨-೦-೦ ರೂ.
೬ ,,	೭-೦-೦
೪ ,,	೪-೦-೦
ವಾರ ಪತ್ರಕ್ಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ

ಮ್ಯಾ. ವಿಜಯ ಧಾರವಾಡ

ವಿಜಯ.

ಧಾರವಾಡ ತಾ-೧೦-೮-೨೮ ನೇ ಇಸ್ವಿ

ಶ್ರೀ.

ಆ ವಿಜಯಂ ಶ್ರೀಶಪ್ರಿಯ |
ನೀ ವಸುಮತಿಯು ನಲಿಸಿರೆ ಸುಹಿತಚರಿತೆಗಳಿಂ ||
ದೀ "ವಿಜಯಂ" ಶ್ರೀಶಕರುಣ |
ನಾ ವಿಹಿತಂಗಳ ವಿವರಿಸಿನಲಿವುದು ಸಾಜಂ ||೧||

ಬಾರಡೋಲಿಯ ರೈತರು ಮತ್ತು ಪ್ರಾಥಮಿಕ ಶಾಲೆಗಳ ಶಿಕ್ಷಕರು.

ಸರಕಾರದವರು ಪ್ರತಿಯೊಂದು ಖಾತೆಯ ಕಾಮದಾರರ ಸಂಬಳ ಹೆಚ್ಚುವಂತೆ ಸ್ಕೇಲಬಡತಿಯನ್ನು ಗೊತ್ತು ಮಾಡಿದಂತೆ ಪ್ರಾಥಮಿಕ ಶಾಲೆಗಳ ಶಿಕ್ಷಕರ ಸಂಬಳ ಹೆಚ್ಚಿಸಲಿಲ್ಲ; ಸ್ಕೇಲ ಬಡತಿ ಕೊಡಲಿಲ್ಲ. ಆಗ ಶಿಕ್ಷಕರು ಅಸಹಕಾರ ಮಾಡಿ, ಶಾಲೆಗಳಿಗೆ ಬೀಗ ಹಾಕುವ ಧೃಡನಿಶ್ಚಯ ತೋರಿಸಿದರು. ಪುಣೆಗೆ ಹೋಗಿ, ಶಿಕ್ಷಣ ಮಂತ್ರಿಯಾಗಿದ್ದ ಡಾಕ್ಟರ ಪರಾಂಜಪೆಯವರಿಗೆ ವಿಧಿಯಂತೆ ಅಥವಾ ಸುದರ್ಶನ ಚಕ್ರದಂತೆ ಬೆನ್ನು ಹತ್ತಿದರು. ಅದರ ಪರಿಣಾಮವೇ ನಾಕೆ-ಪರಾಂಜಪೆ ಸ್ಕೀಮಿನ ಮೇಳಾಯಿತು. ಈ ಸ್ಕೀಮು ತಮಗೊಂದು ಶಿಲಾಶಾಸನವೆನಿಸುವಂಥ ಸನದೆಂದು ಶಿಕ್ಷಕರು ತಿಳಕೊಂಡಿದ್ದಾರೆ.

ಪರಾಂಜಪೆ ಸ್ಕೀಮು- ಡಾಕ್ಟರರ ತರುವಾಯ ಮಂತ್ರಿಯಾದ ಮಿ. ಜಾಧವರಾಯರಿಗೆ ಒಪ್ಪಿಗೆಯಾಗಲಿಲ್ಲ. ರಾಯರು ಅನ್ಯರ ಬೊಗಸೆಯಿಂದ ನೀರು ಕುಡಿಯುವಂಥವರೇ? ತಾವೂ ಒಂದು ಕಮಿಟಿ ನೇಮಿಸಿದರು. ಅದರ ಹಣೇಬರಹ ಮತ್ತು ಸರಕಾರದ ಆಜ್ಞೆಯನ್ನು ಇವೆರಡೂ ಶಿಕ್ಷಕರ ಮುಂದೆ ಮಾರ್ಕೆಯಂತೆ ಭಯವಾಗಿ ನಿಂತಿರುತ್ತವೆ.

ದಿವಾನ ಜಾಧವರಾಯರ ತರುವಾಯ, ದಿವಾನ ಬಹಾದ್ದೂರ ಹರಿಲಾಲ ದೇಸಾಯಿಯರು ಮಂತ್ರಿಯಾದರು. ಇವರು ನಾಕೆ ಪರಾಂಜಪೆ ಸ್ಕೀಮಿಗೆ ಪೂರಾ ಕೈ ತೋರಿಸಿದರು. ಅದಕ್ಕೆ ಮಣ್ಣು ಕೊಟ್ಟನೆಂದರೂ ಸಲ್ಲುವದು. ಈ ಯೋಜನೆಯ ಪ್ರಕಾರ ಶಿಕ್ಷಕರಿಗೆ ಸಂಬಳ ಕೊಡುವದಾದರೆ- ಸರಕಾರಕ್ಕೆ ಪ್ರತಿವರ್ಷ ಹೆಚ್ಚಿಗೆ ೨೧ ಲಕ್ಷದ ವೆಚ್ಚ ಬರುತ್ತದೆ. ಅದು ನೀಗಲಾರದಂಥ ಭಾರವಾಗುವ ಕಾರಣ ಶಿಕ್ಷಕರು ಈ ಸ್ಕೇಲ ಬಡತಿಯ ಅಪೇಕ್ಷೆ ಮಾಡಬಾರದೆಂದು ಸ್ಪಷ್ಟವಾಗಿ ಹೇಳಿಬಿಟ್ಟರು.

ಮಹಾ ಯುದ್ಧದ ವೇಳೆಯಲ್ಲಿ ಸರಕಾರದವರು ಬೇರೆ ಬೇರೆ ಖಾತೆಯವರಿಗೆ ಕೊಟ್ಟ ಬಡತಿಯನ್ನು ನೋಡಿದರೆ- ಸರಕಾರದ ವೆಚ್ಚವು ಇಮ್ಮಡಿಸಿತೆಂದು ಕಂಡು ಬರುವದು. ಅವರೆಲ್ಲರಿಗೂ ಸಂಬಳ ಬಡತಿ ಏಕೆ? ಶಿಕ್ಷಕರಿಗೆ ಮಾತ್ರ ಏಕೆ ಇಲ್ಲ?

ಶಿಕ್ಷಕರಲ್ಲಿ ಒಗ್ಗಟ್ಟಿದ್ದಾಗ, ಮತ್ತು ಅವರು ನಾನ-ಕೋ ಆಪರೇಶನದ ಹೆದರಿಕೆ ಹಾಕಿದಾಗ, ಡಾಕ್ಟರ ಪರಾಂಜಪೆಯವರು ಮೇಲಿನ ಕಮಿಟಿ ಕೂಡಿಸಿದರು. ಅನಂತರ ಶಿಕ್ಷಕರಲ್ಲಿ ಬ್ರಾಹ್ಮಣ ಬ್ರಾಹ್ಮಣೇತರವಾದ್ದರಿಂದ, ಇವರೊಳಗಿನ ಒಗ್ಗಟ್ಟು ಹೋಯಿತು. ಅದರ ಕೂಡ ಇವರ ಸ್ಕೇಲ ಬಡತಿಯೂ ಹಳ್ಳಗೂಡಿತು.

ಶಿಕ್ಷಕರು ಮೊದಲು ಬಾರಡೋಲಿಯ ರೈತರಂತೆ ನಟಿಸಿದರು. ಆ ನಂತರ ತೀರ ನತದೃಷ್ಟವೆನಿಸುವಂಥ ಕೃತ್ಯ ಮಾಡಿದರು. ಹೊಟ್ಟೆತುಂಬ ಕೂಲಿ ಬೇಳುವ ಹೊತ್ತು ಬಂದಾಗ- ಬ್ರಾಹ್ಮಣೇತರ-ಬ್ರಾಹ್ಮಣವೇಕೆ ಮಾಡುವದು? ಬಾರಡೋಲಿ ರೈತರಿಗಿಂತ ಮೊದಲೇ ಸತ್ಯಾಗ್ರಹ ತೋರಿಸಿದ ಶಿಕ್ಷಕರ ಪೌರುಷದ ಮಾತುಗಳೆಲ್ಲ ಉಗೆಲ್ಲಿರುವವು? ಅಂತಃಕಲಹದಿಂದ ಹಾನಿಯು ಹೇಗಾಗುತ್ತದೆಂಬ ಶಿಕ್ಷಣವನ್ನು, ಶಿಕ್ಷಕರು ಅನ್ಯರಿಗೆ ಶಿಕ್ಷಣ ಕೊಡುವ ಮೊದಲು, ತಾವು ಸ್ವತಃ ಪಡೆಯುವದು ವಿಹಿತವಲ್ಲವೇ?

ಮಲಬಾರದಲ್ಲಿ ಅತಿವೃಷ್ಟಿ.

—(೦)—

ಮಲಿಯಾಳ ಮಲಬಾರ ಪ್ರಾಂತಕ್ಕೆ ಸೇರಿದ ಕಾಲೀಕತ್ತ ಜಿಲ್ಲೆಯಲ್ಲಿ ಕಳೆದೊಂದು ವಾರದಿಂದ ಅದ್ಭುತ ಮಳೆ ಸುರಿದು, ಬಹು ಕೇಡಾಗಿದೆ. ನದಿಗಳಿಗೆ ಮಹಾಪೂರ ಬಂದು, ಕೆರೆ. ಕಾಲುವೆಗಳು ಒಡೆದು, ಎತ್ತ ನೋಡಿದತ್ತ ನೀರೇನೀರಾಗಿದೆ. ಕಾಲುದಾರಿ, ಭತ್ತದಗದ್ದೆ, ತೋಟಗಳ ತುಂಬ ಎದೆ ಮಟ ನೀರು ನಿಂತಿದೆ. ಡೋಣಿ ಹರಗೋಲ, ಹಾಕಿದ ಹೊರ್ತು, ಊರು ಬಿಟ್ಟು ಊರಿಗೆ ಹೋಗುವಂತಿಲ್ಲ. ಎಲ್ಲ ಉದ್ದಿಮೆ ವ್ಯವಹಾರ ಕಟ್ಟಾಗಿವೆ. ಮಳೆಯ ಕೂಡ ದೆವ್ವಗಾಳಿ ಬೀಸಿ, ಗಿಡಗಳು ಬೇರು ಸಹಿತ ಕಿತ್ತು ಬಿದ್ದವು. ಮನೆಗಳ ಹಂಚುಗಳು ಅರಳು ಹುರಿದಂತೆ ಹಾರಿದವು. ಗುಡಿಸಲುಗಳ ಚಪ್ಪರಗಳು ಪಾರಿವಾಳದಂತೆ ಆಕಾಶದಲ್ಲಿ ಕಂಡವು.

ಬಾರಡೋಲಿ ಒಡಂಬಡಿಕೆ.

ಹಿಂದುಸ್ಥಾನದ ತುಂಬ ಆನಂದವೇ ಆನಂದ.

ಬಾರಡೋಲಿಯ ಒಪ್ಪಂದದ ದಿನದಿಂದ ಹಿಂದುಸ್ಥಾನದ ತುಂಬ ಹಿಂದೀ ಶ್ರೇಷ್ಠ ಕನಿಷ್ಠರಿಗೆಲ್ಲ ಆನಂದವೇ ಆನಂದವಾಗಿರುತ್ತದೆ. ಪ್ರತಿಯೊಬ್ಬರು ಸರದಾರ ಪಟೇಲ, ಮಹಾತ್ಮಾ ಗಾಂಧಿ, ಸ್ವಯಂಸೇವಕರು ಮತ್ತು ತೀರ ಅಶಿಕ್ಷಿತರಾದಂಥ ರೈತರ ಪ್ರಶಂಸೆಯನ್ನು ಮನಮುಟ್ಟಿ ಮಾಡುತ್ತಿದ್ದಾರೆ. ಸ್ಥಳಾನುಕೂಲತೆಯ ಪ್ರಕಾರ ಕೆಲವು ಅಭಿಪ್ರಾಯಗಳನ್ನು ಇಲ್ಲಿ ಕೊಡುತ್ತೇವೆ:-

ಶ್ರೀ. ಸತ್ಯಮೂರ್ತಿ- ಮಹಾನುಭಾವರಾದ ಸರದಾರ ಪಟೇಲರೇ- ನೀವು ಸ್ವರಾಜ್ಯದ ದಾರಿಯನ್ನು ತೋರಿಸಿಕೊಟ್ಟಿರಿ.

ಮಿ. ಮುನಸಿ- ಕಳೆದ ಆರು ತಿಂಗಳು ಬಾರಡೋಲಿಯು ಹಿಂದುಸ್ಥಾನದ ಲಕ್ಷ್ಯವಾಗಿತ್ತು. ಇಂದು ಹಿಂದುಸ್ಥಾನದ ವೈಭವವಾಗಿದೆ. ಮುಂದೆ ಹಿಂದುಸ್ಥಾನಕ್ಕೆ ಪರದಾಸ್ಯ ತಪ್ಪಿಸಿ, ಮುಕ್ತಿ ಕೊಡುವದಾಗುವದು.

ಮಿ. ಜಮುನಾದಾಸ ಮೇಥಾ- ಬ್ರಿಟಿಶ ಸರಕಾರದ ಕಿಟಿಕೋಪದ್ರವ ಮತ್ತು ಅದರಿಂದ ಮುಂದೆ ಒದಗಬಹುದಾದ ಗಂಡಾಂತರವು ಮಹಾತ್ಮರ ಸತ್ಯಾಗ್ರಹದ ಅಭೇದ್ಯ ಕವಚದಿಂದಲೇ ದೂರಾಗುವದು.

ದಿವಾನ ಜಾಧವರಾವ- ಒಡಂಬಡಿಕೆಯು ಎರಡೂ ಪಕ್ಷಗಳಿಗೆ ಮರ್ಯಾದೆ ತಂದಿತು. ಇಬ್ಬರು ಕೂಡಿ ಒಪ್ಪಂದ ಮಾಡಿಕೊಂಡದ್ದರಿಂದ ಒಬ್ಬರು ಸೋತರು; ಒಬ್ಬರು ಗೆದ್ದರೆಂದು ಹೇಳಲಿಕ್ಕಾಗುವದಿಲ್ಲ.

ಲಾಲಾ ಲಜಪತರಾಯ- ಲೋಕಪಕ್ಷಕ್ಕೆ ಪ್ರಶಂಸನೀಯವಾದ ಜಯವು. ಕಷ್ಟ ಸಹಿಸಲಿಕ್ಕೆ, ಸ್ವಾರ್ಥತ್ಯಾಗ ಮಾಡಲಿಕ್ಕೆ ಸಿದ್ಧವಾದ ಯಾವ ಸಂಘಟನೆಯಿಂದ ಎಂಥ ಮಹತ್ವದ ಕಾರ್ಯವಾಗಬಹುದೆಂಬದನ್ನು ಬಾರಡೋಲಿಯು ಕಲಿಸುತ್ತದೆ. ಬಾರಡೋಲಿಯ ಸತ್ಯಾಗ್ರಹದ ಕಸವು ನ್ಯಾಮೇಲೆ ಬಿದ್ದರೇ- ಇಂಗ್ಲಿಷರು ಬೋಗಿಗ್ಗಾಗ್ರರೆಂದೂ ವ್ಯಕ್ತವಾಯಿತು.

ಶ್ರೀ ಸೇನಗುಪ್ತ- ಮಹಾತ್ಮರು ಉಪದೇಶ ಮಾಡುತ್ತಿರುವಂಥ ಸತ್ಯಾಗ್ರಹ ಮಂತ್ರದ ಸಿದ್ಧಿಯೇ ಸರಿ. ಜನರು ಶ್ರೀ ಪಟೇಲರಿಗೆ ಕೊಟ್ಟ ಸರದಾರ ಪದವಿಯು ಯಥಾರ್ಥವಾಗಿ ಅವರಿಗೆ ಒಪ್ಪುತ್ತದೆ.

ಬಾರಡೋಲಿಯ ಜಾಗೆ ಹಚ್ಚಲಿಕ್ಕೆ ಸ್ಥಾನಿಕ ಅಧಿಕಾರಿಗಳ ಮದಾಂಧತೆಯೇ ಕಾರಣ.

ಬಾರಡೋಲಿಯ ಜಾಗೆ ಹಚ್ಚಲು ಸ್ಥಾನಿಕ ಅಧಿಕಾರಿ ಅಂದರೆ- ಮುಖ್ಯವಾಗಿ ಕಲೆಕ್ಟರರಾಗಿದ್ದ ಮಿ. ಹಾರ್ಟಶರ್ನಸಾಹೇಬರ ಮದಾಂಧತೆಯೇ ಕಾರಣವಾಯಿತೆಂದೂ, ಇದರಲ್ಲಿ ಕಮಿಶನರ, ಡಿಪುಟಿ ಕಲೆಕ್ಟರ ಮೊದಲಾದವರ ಭರಿಯೂ ಕಾರಣವಾಗಿರಬೇಕೆಂದೂ ಈಗ ಸರಕಾರ ಮತ್ತು ಲೋಕಪಕ್ಷದ ಮೆಂಬರರು ಬಾಯಿಬಿಟ್ಟು ಮಾತಾಡುತ್ತಿದ್ದಾರೆ. ಆದ್ದರಿಂದಲೇ ರಾಜಿಯ ಸಮಯ ಬಂದಾಗ ಈ ಸಾಹೇಬರನ್ನು ವರ್ಗ ಮಾಡಿ, ಮಿ. ಗ್ಯಾರೆಟ್ಟಸಾಹೇಬರನ್ನು ತಂದರು. ರಿವ್ಹಿನ್ಯೂ ಮೆಂಬರರಾದ ಮಿ. ರ್ಹ್ಯೂಸಾಹೇಬರು ರಜೆ ತಕ್ಕೊಂಡು ವಿಲಾಯತಿಗೆ ಹೋಗಿದ್ದರು. ಅವರು ಮರಳಿ ಬಂದ ಕೂಡಲೆ ಬಾರಡೋಲಿಗೆ ಹೋಗಿ, ನಿಜಸ್ಥಿತಿಯನ್ನು ತಿಳಕೊಂಡು ರಾಜಿಯ ಪ್ರಸ್ತಾಪ ನಡೆಸಿದರು. ಅದರ ಬಹುತೇಕ ಶ್ರೇಯಸ್ಸು ಸರಕಾರ ಪಕ್ಷದಿಂದ ಈ ಸಾಹೇಬರಿಗಿರುತ್ತದೆ. ನಾಮದಾರ ಗವ್ಹರ್ನರಸಾಹೇಬರು ತೋಫು-ತುಪಾಕಿಯಿಂದ ದಬ್ಬಾಳಿಕೆಯ ಧಯ ಹಾಕಿದ್ದರೂ, ತಮ್ಮ ದೊರೆತನದ ಕೊನೆಯಲ್ಲಿ ಅಪಕೀರ್ತಿ ಬರಬಾರದೆಂದು ಬಯಸಿದ್ದರು. ಅವರ ಅಪೇಕ್ಷೆಯೂ ಪೂರ್ಣವಾಯಿತು.

ರಾಜಿಯ ಶರ್ತುಗಳಲ್ಲಿ ಕಮಿಟಿಯ ಮುಂದೆ ರೈತರು ಹೇಳಿಕೊಳ್ಳುವ ದೂರುಗಳನ್ನು ಬರಕೊಳ್ಳಬೇಕೆಂಬ ಕಲಮು ಇರುತ್ತದೆ. ಮಿ. ಹಾರ್ಟಶರ್ನಸಾಹೇಬರ ಕೈಕೆಳಗಿನ ಕಾಮದಾರರು ಸ್ವತಃ ಮತ್ತು ಸಾಹೇಬರ ಹುಕುಮಿನಿಂದ ಬಡ ರೈತರ ಮೇಲೆ ಎಷ್ಟು ಬಲಾತ್ಕಾರ ಮಾಡಿದರು; ಎಷ್ಟು ಹಿಂಸೆ ಪಡಿಸಿದರೆಂಬುದು ಕಮಿಟಿಯ ಮುಂದೆ ಪ್ರತ್ಯಕ್ಷ ಪ್ರಮಾಣವಾಗಿ ಬರುವದೆಂಬುದು ರಾಜಿಯ ಶರ್ತಿನ ವಿಶೇಷವೆಂದೇ ಹೇಳಬೇಕಾಗುತ್ತದೆ.

ಹಿಂದೂ ದೇವರನ್ನು ನಿಂದಿಸಿದ ಬಗ್ಗೆ ಮುಸಲಮಾನ ಎಡಿಟರನಿಗೆ ಶಿಕ್ಷೆ.

—೦—

ಅಹಮದಾಬಾದಿನಲ್ಲಿ ಅಫತಾಬ ಇಸ್ಲಾಮನೆಂಬ ಪತ್ರಸಂಪಾದಕರಾದ ಮಿ. ಸುಲೇಮಾನ ಇಬ್ರಾಹಿಮರೆಂಬವರು ಹಿಂದೂ ಜನರ ರಾಮ-ಕೃಷ್ಣಾದಿ ದೇವತೆಗಳನ್ನು ಅಭದ್ರವಾಗಿ ನಿಂದಿಸುವಂಥ ಲೇಖಗಳನ್ನು ಬರೆದ ಬಗ್ಗೆ ಫಿರ್ಯಾದಿಯಾಗಿ, ಸಂಪಾದಕರ ಮೇಲೆ ಆರೋಪ ಸಿದ್ಧವಾಗಿ ಅವರಿಗೆ ಮೂರು ತಿಂಗಳ ಸಕ್ತ ಕೈದು ಮತ್ತು ಮೂರು ನೂರು ರೂಪಾಯಿ ದಂಡದ ಶಿಕ್ಷೆ ವಿಧಿಸಲ್ಪಟ್ಟಿತು.

ಬೆಳಗಾವಿಯ ಪ್ರಸಿದ್ಧ ದರವಡೆಗಾರನ ದಸ್ತಗಿರಿ.

—೦—

ಅಥಣಿ, ಚಿಕ್ಕೋಡಿ, ಸದಲಗೆ ಮತ್ತು ಕೊಲ್ಹಾಪೂರದ ಸಿಮಾಂತರದಲ್ಲಿ ಮೇಲಿಂದ ಮೇಲೆ ದರವಡೆ ಹಾಕುತ್ತಿದ್ದ ಸಯಾ ಮಾಂಗ ಮತ್ತು ಆತನ ಸಂಗಡಿಗರನ್ನು ಬೆಳಗಾವಿಯ ಉತ್ತರಭಾಗದ ಪೋಲೀಸರು ದಸ್ತಗಿರ ಮಾಡಿದ್ದಾರೆ. ಇವರ ಹತ್ತಿರ ದರೋಡೆಯ ಪುಷ್ಕಳ ಜಿಂದಿಗೆಯೂ ಹೊರಟಿದೆ.

ಮ್ಯಾಜಿಸ್ಟ್ರೇಟರ ಮೇಲೆ ಮ್ಯಾಜಿಸ್ಟ್ರೇಟರ ವಾರಂಟು !!

ಕಲಕತ್ತೆಯ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರು ಇನ್ನೊಬ್ಬ ಮ್ಯಾಜಿಸ್ಟ್ರೇಟರಾದ ಮಿ. ಸೇನರು ಹುಚ್ಚರಿದ್ದಾರೆ. ಬುದ್ಧಿಸ್ಥಿರವಿಲ್ಲ; ಅವರ ಮೇಲೆ ವಾರಂಟು ಹುಟ್ಟಿತೆಂದು ಕೋರ್ಟಿನಲ್ಲಿ ಭಾಷಣ ಮಾಡಿದರು. ಇದರಿಂದ ತಮ್ಮ ಅಪಮಾನವಾಯಿತು. ಅವರ ಮೇಲೆ ವಾರಂಟು ತೆಗೆದು, ಅವರನ್ನು ದಸ್ತಗಿರ ಮಾಡಬೇಕೆಂದು ಸೇನಸಾಹೇಬರು ಹಾಯಕೋರ್ಟಿನಲ್ಲಿ ಫಿರ್ಯಾದಿ ಮಾಡಿದ್ದಾರೆ.

ಕಾಬೂಲದಲ್ಲಿ ಸ್ವಾತಂತ್ರ್ಯೋತ್ಸವ.

—(೦)—

ಕಾಬೂಲ ರಾಜ್ಯವು ಸರ್ವತಂತ್ರ ಸ್ವತಂತ್ರವಾಗಿ ಅಮೀರರು ಬಾದಶಹರಾದ ಬಗ್ಗೆ ಪ್ರತಿವರ್ಷ ಕಾಬೂಲ ರಾಜ್ಯದ ಕುಂಬ ಸಾಮ್ರಾಜ್ಯದಿನೋತ್ಸವ ನೆರವೇರಿಸಲ್ಪಡುವದು. ಈ ಸಾರೆಯ ಉತ್ಸವವು ಆಶದ ತಿಂಗಳ ೨೫ನೇ ತಾರೀಖಿಗೆ ಸರಿಯಾಗಿ ಇದೇ ತಿಂಗಳ ೧೭ನೇ ತಾರೀಖಿನ ದಿವಸ ಭಾಗಮನದಲ್ಲಿ ಅಮೀರರ ಸಮಕ್ಷದ ಬಹು ಸಮಾರಂಭದಿಂದ ನೆರವೇರುವದು. ಈ ಸಮಾರಂಭಕ್ಕೆ ಹಿಂದುಸ್ಥಾನದ ಬಹುಜನ ಪ್ರಮುಖರಿಗೆ ಆಮಂತ್ರಣ ಬರತಕ್ಕದ್ದುಂಟು. ಕಾಬೂಲವೆಂದರೆ- ಒಂದು ಅಜ್ಞಾತ ದೇಶವಾಗಿತ್ತು. ಅದನ್ನು ನೋಡುವ ಸುಯೋಗವು ಅನೇಕರಿಗೆ ಬರುವದುಂಟೆಂಬದೊಂದು ಸಂತೋಷವು.

ಎಡಿಟರನಿಗೆ ಹದ್ದುಪಾರು-

ಪುದುಕೋಟೆಯಲ್ಲಿ ಕೂಲಿಕಾರ ಪಕ್ಷದ ಪತ್ರಿಕೆಯಾದ ದೇಶಅಭಿಮಾನದಲ್ಲಿ ಸಂಸ್ಥಾನ ಮತ್ತು ಬ್ರಿಟಿಶ ಸರಕಾರದ ನಡುವೆ ವೈಷಮ್ಯ ಹುಟ್ಟಿಸುವಂಥ ಲೇಖ ಬರೆದಿರುವರೆಂಬ ಆರೋಪ ಹೊರಿಸಿ, ಮಹಾರಾಣಿ ರೀಜಂಟರು ಸರಕಾರೀ ಜಾಹೀರನಾಮೆಯನ್ನು ಪ್ರಸಿದ್ಧ ಮಾಡಿ, ಪತ್ರಸಂಪಾದಕರನ್ನು ನಾಲ್ಕೇ ಮಿನಿಟುಗಳಲ್ಲಿ ಸಂಸ್ಥಾನದ ಹೊರಗೆ ಹದ್ದುಪಾರು ಮಾಡಿದರು.

ರಂಗಭೂಮಿಯ ಸೇವಕನ

ಬಡಬಡಿಕೆ.

(ಬರೆದು ಬಂದದ್ದು)

"ನವಕರ್ನಾಟಕ" ದ ಜ್ಯುಲೈ ಐದನೇ ಸಂಚಿಕೆಯು ಇಂದು ಆಕಸ್ಮಾತ್ತಾಗಿ ನನ್ನ ದೃಷ್ಟಿಗೆ ಬಿದ್ದಿತು. ಅಲ್ಲದೆ ರಂಗಭೂಮಿಯ ಸೇವಕನ ಬಡಬಡಿಕೆಗೆ ಶ್ರೀ ಗರುಡರು ಉತ್ತರಕೊಡದೆ, ತಿಪ್ಪಣ್ಣನ ಟಿಪ್ಪಣಿಯಲ್ಲಿ ಹಾಕಿಟ್ಟಿದ್ದಕ್ಕಾಗಿ ಆನಂದವೆನಿಸಿತು. ಮತ್ತು ಈ ವಿಚಾರವನ್ನರಿಯದವರ ಸೇವಕನು ಗರುಡರು ನಿರುತ್ತರರಾದರೆಂದು ಹೆಮ್ಮೆಯಿಂದ ಇನ್ನು ಮುಂದಾದರೂ ಟೀಕೆಯೇ ಅಲ್ಲದ ಸಲ್ಲದ ಕುತ್ಸಿತ, ಜೀರ್ಣಕ ಲೇಖಗಳನ್ನು ಪ್ರಕಟಿಸಬಾರದೆಂದು ತಿರಾಯಿಕರಾದ ನಾವು ಕೆಲವು ಅಂಶದಿಂದ ಉತ್ತರಕೊಡುವವರಿದ್ದೇವೆ. ಈ ಉತ್ತರಕ್ಕೆ ಉತ್ತರವೆಂದು ಇನ್ನು ವೃತ್ತಪತ್ರಗಳಲ್ಲಿ ಕಾಗದ ಕಪ್ಪುಮಾಡುವ ಸಾಹಸವನ್ನು ಈ| ರಂ| ಸೇವಕರು ಮಾಡಬಾರದು. ಹಾಗೆ ಮಾಡಿದಲ್ಲಿ ಕನ್ನ ಹುಣ್ಣಿನ ಮೇಲೆ ತಾಕೀ ಬರೆಕೊಟ್ಟಂತಾದೀತು. ಅಸ್ತು. ಆಧುನಿಕ ಕರ್ನಾಟಕ ರಂಗಭೂಮಿಯ ಎರಡನೇ ಅಂಕ ಪ್ರವೇಶವನ್ನು ಮಾಡುವಾ.

ಮಹಾನಂದಾ, ಈ ನಾಟಕವು ಮಹಾರಾಷ್ಟ್ರ ದೇಶದವರಿಂದ ಆಡಲ್ಪಟ್ಟಿದ್ದಾದರೂ ಕರ್ನಾಟಕ ದೇಶದ ಅಥವಾ ಇಡೀ ಹಿಂದುಸ್ಥಾನದ ಪುರಾಣ ಮತವಾದಿಗಳ ಅಬ್ರಹ್ಮಣ್ಯಂಬ ಗ್ರಾಮದ ಕಿವಡೀಲೆಯೊಳಗಿನ ಕಥೆಯಾಗಿದೆ. ಎಂಬುದು ನಮ್ಮ ಮಿತ್ರರಿಗೆ ಗೊತ್ತಿಲ್ಲದ್ದಲ್ಲ; ಹೀಗಿರಲು ಇದು ಆನಂದನಾಸ್ಪದವಾದುದು ಹೇಗೆ? ಈ ಶಬ್ದಾರ್ಥವನ್ನು ಲೇಖಕರು ಏನೆಂದು ಊಹಿಸಿರುವರೋ? ಅವರು ಹಿಪ್ಪೆಯನ್ನು ತೆಗೆದುಕೊಂಡು ನಾಟಕವಾಡಿದ್ದರೂ, ಈ ಲೇಖಕರು ಅದನ್ನು ಸಿದ್ಧ ಮಾಡುವ ಭರದಲ್ಲಿ ತಿಪ್ಪೆಯೊಳಗೆ ಈ ವಿಷಯವನ್ನು ನಂಬಿಸಾಕಿದ್ದು ಶೋಚನೀಯವಾಗಿದೆ.

ಅಂತಾದರನ, ಈ ನಾಟಕದಲ್ಲಿಯ ನಾಯಕನೆಂದರೆ ಮಾರುತಿಯು. ಇವನು ಬಾಲಬ್ರಹ್ಮಚಾರಿಯೆಂಬುದು ಸಕಲರಿಗೂ ಗೊತ್ತುಂಟು. ಇಂತಹ ನಾಯಕನಿಗೆ ನಾಯಿಕೆ ಎಂದು ಒಂದು ಕುರಿಯನ್ನು ಇವರ ಹೇಳಿಕೆಯೇನು? ರಂ| ಸೇವಕರೇ ಪತಿಪತ್ನಿಯರೇ ನಾಯಕ ನಾಯಿಕೆಯರಾಗಬೇಕೆಂಬ ನಿಯಮವು ನಮ್ಮ ತಿಪ್ಪಣ್ಣ ಟಿಪ್ಪಣಿಯಲ್ಲಿ ಬರೆದಿರುವದೇನು? ಹಾಗಿದ್ದರೆ ಬ್ರಹ್ಮಚಾರಿಗಳು ತಮ್ಮ ಒಡೆಯೇ ಇರಬೇಕೆಂದು ಕಲ್ಪನೆಯೋ? ಈ ನಾಟಕವು ಶಾಸ್ತ್ರವಿರುದ್ಧವಿದೆಯೆಂದು ಒಳೆಯುವಾಗ ಲೇಖಕರು ಯಾವ ಶಾಸ್ತ್ರವನ್ನು ಬರೆಗೆ ಹಚ್ಚಿದ್ದರು? ಗಂಧರ್ವ ಕಂಪನಿಯವರನ್ನೇ?

ರಚನೆಗಳನ್ನು ತೆಗೆಯುವದನ್ನು ಮನಸ್ಸಿನಲ್ಲಿ ತಂದರೆ ಅಶಕ್ಯವಿಲ್ಲ. ಹೀಗಾದರೆ ಕರ್ನಾಟಕದ ಭವಿಷ್ಯತ್ತು ನಿಶ್ಚಯವಾಗಿ ಉದಯವಾಗುವದು.

ಜರ್ಮನ ಸ್ತ್ರೀಯ ಕೂಡ ಹಿಂದೂ ಜಮೀನದಾರರ ವಿವಾಹ.

—(೦)—

ಮದ್ರಾಸ ಇಲಾಖೆಗೆ ಸೇರಿದ ಗಂಜಾಮ ಪ್ರಾಂತದ ಓರ್ವ ಜಮೀನದಾರರಾದ ಶ್ರೀ ಕೃಷ್ಣಚಂದ್ರ ಸುಮಂತರಾಯರೆಂಬವರು ಹೋದ ವಾರದಲ್ಲಿ ಮದ್ರಾಸದಲ್ಲಿ ಜರ್ಮನ ಕನ್ನಿಕೆಯೊಡನೆ ಮದುವೆಯಾದರು. ಪಂಡಿತ ಗದಾಧರ ವಿದ್ಯಾಭೂಷಣರೆಂಬವರು ಇವಳಿಗೆ ಮದುವೆಗೆ ಮೂರು ದಿವಸ ಮುಂಚಿತವಾಗಿ ಹಿಂದೂ ಧರ್ಮ ದೀಕ್ಷೆ ಕೊಟ್ಟು ಶಾಂತಾದೇವಿ ಎಂಬ ಹೆಸರಿಟ್ಟರು. ಮತ್ತು ಇವರೇ ಮದುವೆ ಮಾಡಿಸಿದರು. ಜಮೀನದಾರರಿಗೆ ಮೊದಲಿನ ಹೆಂಡತಿ ಇದ್ದಾಳೆ.

ಬಾರಡೋಲಿಯಲ್ಲಿ ಜಪ್ತಾದ ಹೊಲಗಳ ಪರತ ಖರೀದಿಗಾಗಿ ಶ್ರೀ. ಪಟೇಲರು ಹನ್ನೆರಡು ಸಾವಿರ ರೂಪಾಯಿ ಕೊಟ್ಟರೆಂದು ಮುಂಬಯಿ ಟಾಯಿಮ್ಸನು ಪ್ರಸಿದ್ಧಮಾಡಿದ ಸುದ್ದಿಯು ಸಂಪೂರ್ಣ ನಿರಾಧಾರವಾದದ್ದೆಂದೂ, ಇದರಲ್ಲಿ ಶ್ರೀ. ಪಟೇಲರ ಪ್ರತ್ಯಕ್ಷಾಪ್ರತ್ಯಕ್ಷ ಸಂಬಂಧವಿಲ್ಲೆಂದೂ, ಇದು ಟಾಯಿಮ್ಸಪತ್ರದ ಖುದ್ದಗೇಡಿತನವೆಂದೂ ಪ್ರಸಿದ್ಧ ಮಾಡಲ್ಪಟ್ಟಿದೆ.

ಬಾರಡೋಲಿಯ ಜಯದ ಬಗ್ಗೆ ಅಹಮದಾಬಾದಿನಲ್ಲಿ ಆನಂದೋತ್ಸವ ಮಾಡಲ್ಪಟ್ಟಿತು. ವಿದ್ಯಾರ್ಥಿಗಳು ಉತ್ಸವದಲ್ಲಿ ಸೇರಿದ್ದರಿಂದ, ಶಾಲೆ-ಕಾಲೇಜುಗಳೆಲ್ಲ ಹಾಳು ಸುರಿದವು.

ಬೆಳಗಾವಿಯ ಸೆಂಟ್ರಲ ಜೇಲನ್ನು ಹೊರ್ಟ ಮಾಡಿಸಿ, ಮುಂಬಯಿ ಇಲಾಖೆಯ ಪ್ರತಿಯೊಂದು ತುರುಂಗದಲ್ಲಿಯೂ ಕೈದಿಗಳಿಗೆ ಧಾರ್ಮಿಕ ಶಿಕ್ಷಣ ಕೊಡುವ ವ್ಯವಸ್ಥೆ ಮಾಡಲ್ಪಟ್ಟಿದೆ.

ಚಂದಾದಾರರಿಗೆ ಸೂಚನೆ

ಅಗಸ್ಟ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗುವದರಿಂದ ಮತ್ತು ವಾರ ಪತ್ರದ ಚಂದಾದಾರರ ಹೆಸರಿನಿಂದ ವ್ಹಿ. ಪಿ. ರವಾನಿಸುತ್ತೇವೆ. ಚಂದಾದಾರರು ವ್ಹಿ. ಪಿ. ಸ್ವೀಕಾರ ಮಾಡಿ ಪತ್ರವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಯು.

ವ್ಯವಸ್ಥಾಪಕ, ವಿಜಯ, ಧಾರವಾಡ

ನಕಲಿ-ಮಾಲಿನ ಬಗ್ಗೆ ಎಚ್ಚರರಾಗಿರಿ.

ನಮ್ಮ ಉಂಚೀ ಪವಿತ್ರ ಕಾಬೂಲೀ

ಹೀರಾ ಹಿಂಗ

ಅವಶ್ಯ ಬೇಡಿರಿ.

ಇದು ದಿನಾಲು ಮನೆಯಲ್ಲಿ ಉಪಯೋಗವಾದದ್ದು ಅಡಿಗೆಯು ಇದರಿಂದ ರುಚಿಕರ ಮತ್ತು ಸ್ವಾದಿಷ್ಟವಾಗುವದು ಎಂಬದು ಎಲ್ಲರಿಗೂ ಖಾತ್ರಿಯಾಗಿರುವದು ನಾವು ನಮ್ಮ ಗುಮಾಸ್ತೆರನ್ನು ಕಾಬೂಲಕ್ಕೆ ಕಳುಹಿಸಿ ಉಂಚೀಮಾಲನ್ನು ನೇರಕವಾಗಿ ತೆಗೆದುಕೊಳ್ಳುವದರಿಂದ ನಮ್ಮ ಗಿರಾಕಿಗಳಿಗೆ ಬಹಳ ಸೋಯಿಸ್ಕರ ಬೆಲೆಯಿಂದಲ್ಲದೆ ಖಾತ್ರಿ ಮಾಲು ಸಿಗುವದು. ಈ ಹಿಂಗು ಬಜಾರ ಹಿಂಗಕ್ಕಿಂತಲೂ ಬಹಳ ತೀಕ್ಷ್ಣವಿದ್ದು ಸುವಾಸಿಕವಾಗಿರುವದರಿಂದ ನಮ್ಮ ಒಂದು ತೊಲಿ ಹಿಂಗು ಇತರ ಹತ್ತು ತೊಲಿ ಹಿಂಗಿಗಿಂತಲೂ ಮೇಲಾಗಿರುವದು. ಇದು ಔಷಧಿ ವಸ್ತುವಾಗಿರುವದರಿಂದ ಅಜೀರ್ಣ, ಬೇನಾ-ಜ್ವರ, ಹೊಟ್ಟೆಕುಟ್ಟು ಹಿಡಿಯೋಣ, ಮಲೇರಿಯಾ, ಕಾಲರಾ, ಇನ್‌ಫ್ಲುಯೆಂಝಾ, ಮುಂತಾದ ರೋಗಜಂತುಗಳ ಪ್ರತಿಬಂಧವಾಗಿರುವದು. ಉಪ್ಪಿನಕಾಯಿಯಲ್ಲಿ ಉಪಯೋಗಿಸಿದರೆ ಕ್ರಿಮಿಗಳಾಗುವ ಸಂಭವವಿಲ್ಲ. ಇದನ್ನು ಬೇಕಾದಷ್ಟು ಮುಚ್ಚಿಟ್ಟರೂ ವಾಸನೆಯು ಪಸರಿಸದೆ ಇರದು. ಇದನ್ನು ಸಂಗ್ರಹಿಸುವದು ಯೋಗ್ಯವದೆ

ಅರ್ಧಾ ಔಂಸಿನ ಚಿಲ್ಲರೆ ವಿಕ್ರಿಗೆ ಸೋಯಿಸ್ಕರ ಫ್ಯಾನ್ಸಿ ಡಬ್ಬಿಗಳು.

ಇರಾಣಿ ಮಾರ್ಟರ ಹಿಂಗು.

ಡಜನ ಒಂದಕ್ಕೆ ನಾಲ್ಕು ರೂಪಾಯಿ.

ಡಬ್ಬಿಯು ಒಂದು ಡಜನಕ್ಕಿಂತಲೂ ಕಡಿಮೆ ಹೆಚ್ಚು ಕೊಡೋಣಾಗಿಲ್ಲ. ಎಲ್ಲರಿಗೂ ಪ್ಯಾಕಿಂಗ ಪೋಸ್ಟೇಜ ಮಾಫ ಹೆಚ್ಚು ಮಾಲು ಬೇಡಿಕೊಳ್ಳುವವರು ಪತ್ರವ್ಯವಹಾರ ಮಾಡಬೇಕು. ವ್ಯಾಪಾರಸ್ಥರಿಗೆ ಬೋನಸ ಫುಕಟ ಸಿಗುವವು.

ಪತ್ತೆ— ಮೆಸರ್ಸ ಕುಲಗೋಡ ಬ್ರದರ್ಸ ಶೇಲೂಕ ಗೋಕಾಕ.

ನೋಟೀಸು.

ರಾ॥ ರಾ॥ ಗವಡಪ್ಪಾ ಶಿದ್ದಪ್ಪಾ ಕಡಕೋಳ ಸಾ॥ ಮುನವಳ್ಳಿ ತಾಲ್ಲೂಕ ಪರಸಗಡ ಇವರಿಗೆ-

ಕೆಳಗೆ ಸಹಿ ಮಾಡುವವನ ಕಡಿಂದಾ ನೋಟೀಸ ಮಾಡುವದೇನಂದರೆ-

ಕಳೆದ ವಿವಾಹ ಅಂದರೆ ತಾರೀಖು ೫-೮-೧೯೨೮ ಇಸ್ವಿ ದಿವಸ ಅಜಮಾಸ ಮಧ್ಯಾಹ್ನ ಒಂದು ಘಂಟೆಯ ಸುಮಾರಕ್ಕೆ ನಮ್ಮ ಮನೆಯಲ್ಲಿ ಇರುವಾಗ್ಗೆ ರಾ॥ ರಾಮಚಂದ್ರ ವೆಂಕಟೇಶ ಕವಲೇಶ್ವರ ಮಾಸ್ತರ ಇವರ ಕಡಿಯಿಂದಾ ವ ದತ್ತು ದೀಕ್ಷಿತ ಗ್ರಾಮಜೋಶಿ ನರಗುಂದಕರ ವಗೈರೇರ ಕಡಿಯಿಂದಾ ಅಲ್ಲಿ ನೀನು ಮತ್ತು-

೧ ಗುರುನಾಥಭಟ್ಟ ಶ್ರೀಪಾದಭಟ್ಟ ಜೋಶಿ ಸಾ॥ ಮುನವಳ್ಳಿ ತಾಲ್ಲೂಕ ಪರಸಗಡ ೨ ವೆಂಕಟಾಚಾರ್ಯ ದಾಸಾಚಾರ್ಯ ಉದ್ರಾಪೂರ ಸಾ॥ ಮುನವಳ್ಳಿ ತಾಲ್ಲೂಕ ಪರಸಗಡ, ೩ ಕೇಶವ ಬಾಳಾಜಿ ನಾಯಿಕ ಸಾ॥ ಮುನವಳ್ಳಿ ತಾಲ್ಲೂಕ ಪರಸಗಡ, ೪ ಬಸಲಿಂಗಪ್ಪಾ ಕಮತಗಿ ಸಾ॥ ಮುನವಳ್ಳಿ ತಾಲ್ಲೂಕ ಪರಸಗಡ, ೫ ದತ್ತು ದೀಕ್ಷಿತ ನರಗುಂದ ಸಾ॥ ಮುನವಳ್ಳಿ ತಾಲ್ಲೂಕ ಪರಸಗಡ,

ಈ ಪ್ರಕಾರ ಜನರು ಮತ್ತು ಕರಕೊಂಡು ಹೋದವರು ಸಹಿತಾ ನನ್ನನ್ನು ನಿಮ್ಮ ಮನೆಯಲ್ಲಿಯೇ ಅಟಕಮಾಡಿ ನನಗೆ ಅಂಜಿಕೆ ಹಾಕಿ ಧಮಕೀ ಕೊಟ್ಟು ನಿಮ್ಮ ಪೈಕಿ ಕೇಶವ ಬಾಳಾಜಿ ಅಂಬುವ ಕಡಿ ದಾ ನನ್ನ ಸಮ್ಮತಿಯ ಹೊರ್ತು ಅವಾಚ್ಯ ಮಾಣಿಕ್ಯನದೀದಾ ಬುದ್ಧ್ಯಾ ನನ್ನ ಉತ್ಸಾನವಾದುವ ಇರಾದೆಯಿಂದಾ ನಿನ್ನ ಹೇಳಿಕೆ ನಾನು ಸಹಿಲ ತೆಗೊಂಡಂತೆ ಒಂದು ನೋಟ ಬರೆಸಿ ಅದರ ಮೇಲೆ ಸಹಿ ಮಾಡಿಸಿ ಅದರಂತೆ ಒಂದು ಪಾವತಿ ಬರೆದು ಅದರ ಮೇಲೆ ಸಹಾ ಒತ್ತಾಯದಿಂದ ನನ್ನ ಸಹಿ ತೆಗೆದುಕೊಂಡು ಹಣಾ ಕೊಡದೆ ಖೊಟ್ಟಿ ನೋಟು ವ ಪಾವತಿ ಮಾಡಿದಿರಿ. ಈ ರೀತಿ ಖೊಟ್ಟಿ ಕಾಗದಪತ್ರ ಮಾಡಿರತೀರಿ. ಕಾರಣಾ ನಾನು ಈ ನೋಟೀಸ ಕೊಟ್ಟಿರತೇನೆ. ಈ ನೋಟೀಸ ಮುಟ್ಟಿದ ಎಂಟು (೮) ದಿವಸಗಳಲ್ಲಿ ಸದರೀ ನೋಟು ವ ಪಾವತಿ ಪರತ ಕೊಡಬೇಕು. ಇಲ್ಲವಿದ್ದರೆ ನಿಮ್ಮ ಮೇಲೆ ಫವಜದಾರಿಯಲ್ಲಿ ವ ದಿವಾಣಿಯಲ್ಲಿ ರೀತಿ ಪ್ರಕಾರ ಇಲಾಜಮಾಡುವದರಲ್ಲಿ ಬರುವದು ತಿಳಿಯಿರಿ. ತಾ॥ ೯ ನೇ ಅಗಸ್ಟ ಸನ್ ೧೯೨೮ ಇಸ್ವಿ.

ಸಹಿ- ರಾಮಭಟ್ಟ ಅಣ್ಣಾಭಟ್ಟ ನೇರ್ಲೇಕರ

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿಯ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಪಡಿಸಿದರು.

R. N. B. 1443

ವಿಜಯ

ನಿತ್ಯ ಪತ್ರ   ಬೆಲೆ ಅರ್ಧ ಆಣೆ

ಸಂಪಾದಕರು:— ಆಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೯)   ಧಾರವಾಡ ಶನಿವಾರ ತಾರೀಖು ೧೧ ನೇ ಅಗಸ್ಟ ೧೯೨೮   (ಸಂಚಿಕೆ ೧೮೨

ದಿ ಜಯಲಕ್ಷ್ಮಿ ಬ್ಯಾಂಕ ಲಿಮಿಟೆಡ, ಧಾರವಾಡ.

ಸ್ಥಳ— ಮಂಗಳವಾರಪೇಟೆ, ಆಳವಣೆ ವಕೀಲ ಪಾಂಡುರಂಗರಾಯರ ಮನೆ.

೧ ಈ ಬ್ಯಾಂಕಿನಲ್ಲಿ ದಾಗೀನಗಳ ಮೇಲೆ ಸೋಯಿ ದರದಿಂದ ತಾಸು ಮತ್ತು ಒಹಳ ಪದ್ಧತಿಯ ಕನಕ ನಿಕ್ಷ್ಯ ದರವಿಂದ ಬೆಳಗಾದದನ್ನು ದೊಡ್ಡ ರಕಮಿನ ಕನಕ ಸಾಲ ದೊರೆಯುವದು. ಬಡ್ಡಿಯ ದರ ಸಾಂಘ ಸಮಕ್ಷಮ ತಿಳಕೊಳ್ಳಬೇಕು.

೨ ಸರಕಾರ ಪ್ರಾಮಿಸರಿ ನೋಟುಗಳ ಖರೀದಿ, ವಿಕ್ರಿ ನಡೆಯುವದು. ಅವುಗಳ ಮೇಲೆ ಸಾಲ ದೊರೆಯುವದು. ಮತ್ತು ಯೋಗ್ಯ ಕಮಿಶನ ತಕ್ಕೊಂಡು ಗಿರಾಕಿಗಳಿಗೆ ಲಾಭಕರವಾಗಿ ಅವುಗಳ ಮರಾಟ ಮಾಡಿ ಕೊಡಲ್ಪಡುವದು.

೩ ಮುದ್ದತಿ ಠೇವಿನ ಹಣವನ್ನು ಇಟ್ಟುಕೊಳ್ಳಲಾಗುವದು. ಸ್ವಲ್ಪ ರಕಮಿನಿಂದ ದೊಡ್ಡ ರಕಮಿನ ಕನಕ ಇಟ್ಟುಕೊಳ್ಳಲಾಗುವದು. ಬಡ್ಡಿಯ ದರವನ್ನು ಸಮಕ್ಷಮ ಅಥವಾ ಪತ್ರವ್ಯವಹಾರದಿಂದ ತಿಳಕೊಳ್ಳಬೇಕು.

೪ ಈ ಬ್ಯಾಂಕಿನ ಶೇರುಗಳು ಮಾರಾಟಕ್ಕೆ ದೊರೆಯುವವು.

೫ ಬ್ಯಾಂಕಿಗೆ ಸಂಬಂಧಿಸಿದ ಚಾಲತಿ ವ್ಯವಹಾರ ಮೊದಲಾದ ಎಲ್ಲ ಕೆಲಸಗಳು ನಡೆಯುವವು. ವಿಶೇಷ ಸಂಗತಿಗಳನ್ನು ಆಫೀಸ ವೇಳೆಯಲ್ಲಿ ಸಮಕ್ಷಮ ಅಥವಾ ಪತ್ರವ್ಯವಹಾರದಿಂದ ತಿಳಕೊಳ್ಳಬೇಕು.

ಕೃಷ್ಣರಾವ ವೆಂಕಟರಾವ ಥಂಡಿಮಾಡ.
ಮ್ಯಾನೇಜಿಂಗ ಏಜಂಟ.

—ಃ ಶ್ರೀ ಗುರು ಪ್ರಸನ್ನ ಃ—

ಪ್ರತಿಯೊಬ್ಬ ಕುಟುಂಬಕನು ಅವಶ್ಯ ಸಂಗ್ರಹದಲ್ಲಿಡತಕ್ಕ ಒಂದೇ ಔಷಧ.

ಭಾಸ್ಕರ ಚೂರ್ಣ.

ಸುಪ್ರಸಿದ್ಧ ವನಸ್ಪತಿ ಶಾಸ್ತ್ರಜ್ಞರ ಸೂಚನೆಯ ಮೇರೆಗೆ ಈ ಚೂರ್ಣವು ತಯಾರಿಸಲ್ಪಟ್ಟಿದ್ದು ಇದರ ಸೇವನೆಯಿಂದ ನಾಲ್ಕು ತರದ ವ್ಯಾಧಿರೋಗಗಳು ತ್ವರಿತದಲ್ಲಿಯೇ ನಾಶಹೊಂದುವವು. ಅಜೀರ್ಣ ಅಪಚನ, ಆಮಾಂಶ, ಅಗ್ನಿಮಾಂದ್ಯ, ಸಂಗ್ರಹಣಿ, ಹೊಟ್ಟೆಶೂಲೆ, ಹೊಟ್ಟೆನೋವು ಮತ್ತು ಯಾವತರದ ಧಾತುವಿಕಾರಗಳ ಮೇಲೆ ಇದೊಂದೇ ರಾಮಬಾಣ ಔಷಧವಿರುವದು. ಒಂದು ಚಿಮಟಿಗೆಯಷ್ಟು ಈ ಚೂರ್ಣವನ್ನು ಬಾಯಿಯಲ್ಲಿ ಹಾಕಿಕೊಂಡರೆ ನಾಕು ಘಟಕ ಅರ್ಧತಾಸಿನಲ್ಲಿಯೇ ಹಸಿವೆಯಾಗುವದು. ಜೇನಿನಿಂದ ಗುಣವಾಗಿದ್ದ ಅಶಕ್ತ ಮನುಷ್ಯರು ಎರಡನೆ ಶಕ್ತಿವರ್ಧಕ ಔಷಧ ತೆಗೆದುಕೊಳ್ಳುವ ಕಾರಣವೇ ಇಲ್ಲ. ಮನೆಯಲ್ಲಿಯ ಜನರು ಒಂದು ಭಾಸ್ಕರ ಚೂರ್ಣದ ಡಬ್ಬಿಯನ್ನು ತಮ್ಮ ಹತ್ತರ ಇಟ್ಟುಕೊಂಡರೆ ನಾಕು ಬಗೆಯ ಬೇನೆಗಳಿಗೆ ಉಪಯೋಗವಾಗುವದು. ಎಷ್ಟು ದಿವಸದ ಅಜೀರ್ಣವಿದ್ದರೂ ಮೂರೇ ದಿವಸಗಳಲ್ಲಿ ಗುಣವಾಗುವದು. ಕೇವಲ ವನಸ್ಪತಿಯಿಂದಲೇ ತಯಾರಿಸಿದ್ದ ಈ ಔಷಧವನ್ನು ಪ್ರತಿಯೊಬ್ಬನೂ ಅವಶ್ಯ ಸಂಗ್ರಹದಲ್ಲಿಡತಕ್ಕದ್ದು. ಒಂದು ಡಬ್ಬಿಯ ಕಿಮ್ಮತ್ತು ೧೦ ಆ. ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು. ಪೋಸ್ಟೇಜ ಬೇರೆ ಸ್ಪ. ಹಾ. ೧ ಆಣೆ.

ವಿಳಾಸ:— ಬಿ. ಪಿ. ಟಿಕಾರೆ ಭಾಸ್ಕರ ಸ್ಟೋರ್ಸ, ಮಾರ್ಕೆಟರೋಡ ಧಾರವಾಡ.

ದಿ ಧಾರವಾಡ ಅರ್ಬನ ಕೋ ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಿಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಬಂಡಿಗೆಯು ಏಳು ಲಕ್ಷದ ಮೇಲಿಂದು. ಚಾಲ ಸುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರ ನಡೆಯಲ್ಪಡುವದು, ಕಾರ್ಯ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮಾಧವರಾವ ಬಿ. ಜಹಾಗೀರದಾರ,
ಮ್ಯಾನೆಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನಗಳನ್ನು ಒತ್ತೆ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣೀ ದರ.

ನಿತ್ಯ ಪತ್ರಕ್ಕೆ	
೧೨ ತಿಂಗಳಿಗೆ	೧೨—೮—೦ ರೂ.
೬ ,,	೭—೦—೦
೪ ,,	೪—೦—೦
ವಾರ ಪತ್ರಕ್ಕೆ ೧ ವರ್ಷಕ್ಕೆ	೩—೧೨—೦

ವಿಶೇಷ ಸಂಗತಿ ಕೆಳಗಿನ ವಿಳಾಸಕ್ಕೆ

ಮ್ಯಾ. ವಿಜಯ ಧಾರವಾಡ

ವಿಜಯ.

ಧಾರವಾಡ ತಾ-೧೧-೮-೨೮ ನೇ ಇಸ್ವಿ

ಶ್ರೀ.

ಆ ವಿಜಯಂ ಶ್ರೀಶಪ್ರಿಯ |
ನೀ ವಸುಮತಿಯು ನಲಿಸಿತೆ ಸುಹಿತಚರಿತೆಗಳಿಂ ||
ದೀ "ವಿಜಯಂ" ಶ್ರೀಶಕರುಣ |
ನಾ ವಿಹಿತಂಗಳ ವಿವರಿಸಿನಲಿವುದು ಸಾಜಂ ||೧||

ಬಾರಡೋಲಿಯಿಂದ ರೈತರೂ ಸರಕಾರದವರೂ ಎಚ್ಚತ್ತರು.

ಕೌನ್ಸಿಲದಲ್ಲಿ ಶ್ರೀ ಜೋಗ ವಕೀಲರ ಠರಾವು.

ಬಾರಡೋಲಿಯಿಂದ ರೈತರೂ ಸರಕಾರದವರೂ ಎಚ್ಚತ್ತರೆಂದು ಹೇಳುವಂಥ ಸಮಯವು ಬಂದೆ. ಗುಜರಾಥದಲ್ಲಿಯೇ ಜೆಡೀರಾಸಿ ಎಂಬ ತಾಲೂಕುಂಟು. ಅಲ್ಲಿಯೂ ರಿವ್ಹಿಜನ ಮಾಡಿದ್ದಾರೆ ದರೆ- ರೈತರಲ್ಲಿ ಬಾರಡೋಲಿಯವರಂಥ ಗಟ್ಟಿಗ ನವಿರಲಿಲ್ಲ. ಅವರು ಅಳಬುರುಕತನದಿಂದ ರಿವ್ಹಿಜನದ ಪಟ್ಟಿಯನ್ನು ಕೊಟ್ಟಿದ್ದಾರೆ. ಇವರ ರಿವ್ಹಿಜನದ ಪುನರ್ವಿಚಾರಣೆಯಾಗಬೇಕೆಂದೂ ಪ್ರಯತ್ನ ನಡೆವಿದೆ.

ಮದ್ರಾಸ ಇಲಾಖೆಯಲ್ಲಿ ಗೋದಾವರಿ ಕೃಷ್ಣಾ ಜಿಲ್ಹೆಗಳಲ್ಲಿ ರಿವ್ಹಿಜನ ನಡೆದಿದೆ. ರಿವ್ಹಿಜನದ ವಿರುದ್ಧ ವರ್ತಮಾನಪತ್ರಗಳಲ್ಲಿ ಎಡೆಬಿಡದೆ ಲೇಖಗಳು ಬರಹತ್ತಿವೆ. ಈ ಜಿಲ್ಹೆಗಳ ರೈತರು ಸರಕಾರದ ಪೇಳಿಯಲ್ಲಿ ಅಸಹಾಯಕೂರರಂತೆ ವಸಿದರು. ಸರಕಾರದವರು ತಮ್ಮ ಕಣ್ಣಿದಿಂದ ಪ್ರೀತಿಯನ್ನು ಹೆಚ್ಚಿಸದೆ, ಸ್ವತಂತ್ರ ವಿಚಾರದಿಂದ ರಿವ್ಹಿಜನದ ಪಟ್ಟಿ ಕಡಿಮೆ ಮಾಡಬೇಕೆಂದು ರೈತರು ಬಳ್ಳಿವ ಪ್ರಾರ್ಥಿಸಿದ್ದಾರೆ.

ಮುಂಬಯಿ ಇಲಾಖೆಯಲ್ಲಂತೂ ಸರಕಾರದವರು ಈನಂತರ ಸ್ವೇಚ್ಛೆಯಿಂದ ರಿವ್ಹಿಜನ ಮಾಡದಾಯಿತು. ಕೌನ್ಸಿಲದ ಒಪ್ಪಿಗೆ ಪಡೆದೇ ರಿವ್ಹಿಜನ ಮಾಡಬೇಕೆಂದು ಶ್ರೀ ಜೋಗರು ಒಂದು ಠರಾವು ತಂದಿದ್ದರು. ಸರಕಾರದವರು ಅದನ್ನು ವಿರೋಧಿಸಿದರೂ, ಕೆಲವು ಧುರಸ್ಥರಿಂದ ಠರಾವು ಬಹುಮತದಿಂದ ಪಾಸಾಯಿತು. ಈ ಠರಾವಿಗೆ ಹಿಂದುಸ್ಥಾನ ಸರಕಾರದ ಒಪ್ಪಿಗೆ ಬೇಕಾಗುತ್ತದೆ.

೩೦ ವರ್ಷಕ್ಕೊಮ್ಮೆ ರಿವ್ಹಿಜನವೆಂದರೆ- ಇದುವರೆಗೂ ಸಾಯುವವರಾರೆಂದು ಬ್ರಿಟಿಶ ಧೂರ್ತತನವನ್ನು ಅರಿಯದ ಹಳೇಕಾಲದ ಜನರು ಸುಮ್ಮನಿದ್ದರು. ರಿವ್ಹಿಜನವೆಂದರೆ- ತಾಯಿಗೆ ಸರಿಯಾಗಿ ಮಗಳು ಅಥವಾ ಗಂಟೆಗೆ ಸರಿಯಾಗಿ ಬಡ್ಡಿಯಾದೀತೆಂದು ಅವರ ಕನಸಿನಲ್ಲಿರಲಿಲ್ಲ. ಅಷ್ಟೆ ದ್ದನ್ನೆಲ್ಲ ವಿಠ್ಠಲ ದೇವರ ಮುಂದಿರುವಂಥ ಕಠಿಣ ಕಾಲ ಬರುತ್ತದೆಂದು ಅವರಿಗೆ ತಿಳಿದಿದ್ದರೆ- ಅವರು ಆಗ್ಗೆ ಈ ರಿವ್ಹಿಜನದ ಭೂತವನ್ನು ಸದೆಬಡೆಯುತ್ತಿದ್ದರು. ಈ ಮಧ್ಯ ಅನೇಕ ಕಾಲದಲ್ಲಿಗೆ ರೈತರು ಅನ್ಯಾಯವಾಗಿ ರಿವ್ಹಿಜನದ ಏರಿಕೆಯ ಪಟ್ಟಿ ಕೊಟ್ಟು, ವಿಲಿವಿಲಿಯಾಗಿದ್ದಾರೆ. ಹಿಂದೆ ಆದದ್ದು ಆಗಿ ಹೋಯಿತು. ಮುಂದೆ ಅವರ ಮೇಲೆ ಅನ್ಯಾಯ ಮತ್ತು ಅನವಶ್ಯಕವಾಗಿ ಹಿರಣ್ಯಶ್ರಾದ್ಧ ಮಾಡುವ ಹೊತ್ತು ಬರಲಾರದೆಂಬುದು ಖಂಡಿತ.

ಶ್ರೀ ಜೋಗ ವಕೀಲರು ಒಳ್ಳೇ ಸಮಯದಲ್ಲಿ ಈ ಠರಾವು ತಂದರು. ಬಾರಡೋಲಿಯಲ್ಲಿ ರಣಗಾಳಿ ಬೀಸುತ್ತಿರದಿದ್ದರೆ- ಕೌನ್ಸಿಲ ಮೆಂಬರರು ಇವರಿಗೆ ಎಷ್ಟರ ಮಟ್ಟಿಗೆ ವೋಟು ಕೊಡುತ್ತಿದ್ದರೆಂಬವೇ ಸಂಶಯವಾಗುತ್ತಿತ್ತು. ಬಾರಡೋಲಿಯೇ ಇವರಿಗೆ ದಿವ್ಯ ಅಂಜನ ಹಾಕಿತು. ಮತ್ತು ಕೌನ್ಸಿಲದಲ್ಲಿ ರೈತರಿಗೆ ಅನುಕೂಲವಾದ ಠರಾವು ಪಾಸಾಯಿತು. ಅಂತೂ ರೈತರಿಗೆ ಉಳಿಗಾಲ ಬಂತು.

ಕೌನ್ಸಿಲ ಮೆಂಬರರಾದ ಮಿ. ಜಾನವೇಕರರಿಗೆ ಕೋರ್ಟಿನಿಂದ ದೊರೆತ ಉಡುಗರೆಯು.

—(೦)—

ವಿಜಾಪೂರದ ಮಿ. ಜಾನವೇಕರರು ಕೌನ್ಸಿಲ ಮೆಂಬರರಾಗಿದ್ದಾರಷ್ಟೇ; ಮ್ಯುನಿಸಿಪಾಲಿಟಿ, ಲೋಕಲಬೋರ್ಡ ಮುಂತಾದ ಹಲವು ಸಂಸ್ಥೆಗಳ ಮತ್ತು ಹಲವು ಸಾರ್ವಜನಿಕ ಸಂಸ್ಥೆಗಳ ಪ್ರತ್ಯಕ್ಷಾಪ್ರತ್ಯಕ್ಷ ಸಂಬಂಧವುಂಟು. ಇವರ ಮೇಲೆ ಮಿ. ದುಂಡಪ್ಪಾ ಕಲಕೋಟಿ ಎಂಬವರು ದಿವಾಣಿಯಲ್ಲಿ ಕೆಲಸ ನಡೆಸಿದ್ದರು. ಮುನಸುಫರು ಈ ಪ್ರಕರಣದಲ್ಲಿ ಬರೆದ ಜಜ್ಮೆಂಟಿನಲ್ಲಿ ಮುಂದೆ ಕೊಟ್ಟಂತೆ ಅಭಿಪ್ರಾಯಪಟ್ಟಿದ್ದಾರೆ.

"ಮ್ಯುನಿಸಿಪಾಲಿಟಿಯು ಕಾಗದಪತ್ರಗಳು ಸಾರ್ವಜನಿಕವಿದ್ದು ದಿವಾನಸಾಹೇಬರ ಹಿತ ಸಾಧುವವಲವಾಗಿ ಹೆಚ್ಚು ಕಡಿಮೆ ಮಾಡಲ್ಪಟ್ಟವೆಂದು ನಾನು ಇಲ್ಲಿ ಹೇಳದೆ ಇರಲಾರೆನು. ಅನೇಕ ಸಾರ್ವಜನಿಕ ಸಂಸ್ಥೆಗಳಲ್ಲಿ ಪ್ರತಿಯು ಜವಾಬದಾರಿ ಸ್ಥಾನದಲ್ಲಿದ್ದುದನ್ನು ವಿಚಾರ ಮಾಡಿದರೆ- ಈ ಮನೆ ಬಾಡಿಗೆಯ ಪ್ರಕರಣದಲ್ಲಿ ಅವನ ನಡತೆಯು ನಿಂದ್ಯವಾಗಿದ್ದಿರುತ್ತದೆಂದು ಯಾವನೊಬ್ಬನು ಹೇಳದಿರನು.

ಬೆಂಗಳೂರಲ್ಲಿ ರಾಮರಾಜ್ಯದ ಬದಲಾಗಿ ಸುಲ್ತಾನಶಾಹಿಯು.

ಬೆಂಗಳೂರಿನಲ್ಲಿ ವಿದ್ಯಾರ್ಥಿಗಳ ಸಂಘದ ಬಗ್ಗೆ ವಿಸ್ತೃತವಾಗಿ ಬರೆದಿದ್ದೇವೆ. ಸಂಘ ಇಷ್ಟು ಭಯಂಕರವಾಗಿ ಹಬ್ಬಲಿಕ್ಕೆ ಕಾರಣವೇ ಇದ್ದಿಲ್ಲ. ಶ್ರೀಮನ್ಮಹಾರಾಜರಿಗೆ ಸಂಘ ಮತ್ತು ಅದರ ಮೂಲಕಾರಣ ತಿಳಿದ ಕೂಡಲೆ ಅವರು ದಯವಿಟ್ಟು, ಗಣಪತಿಯನ್ನು ಪೂರ್ವಸ್ಥಳದಲ್ಲಿ ಪ್ರತಿಷ್ಠಾಪನೆ ಮಾಡಬೇಕೆಂದೂ, ದಸ್ತಗಿರ ಮಾಡಿದಂಥ ಮುಖಂಡರನ್ನು ಕೂಡಲೆ ಬಂಧಮುಕ್ತ ಮಾಡಬೇಕೆಂದೂ ಅಪ್ಪಣೆ ಕೊಟ್ಟರು. ದೇವರು ಕೊಟ್ಟರೂ, ಅರ್ಚಕರು ಪ್ರಸಾದ ಕೊಡಲಿಲ್ಲೆನ್ನುವಂತೆ, ದಿವಾನರೇ ಮೊದಲಾಗಿ ಪ್ರಬಲ ಅಧಿಕಾರಿಗಳು ಮಹಾಸ್ವಾಮಿಗಳವರ ಆಜ್ಞೆಯಂತೆ ನಡೆಯದ್ದರಿಂದಲೇ ಕೆಡಿಯು ಊರನ್ನೇ ದಹಿಸುವಷ್ಟು ವಿಸ್ತಾರವಾಗಿ ದಂಗೆ ಹಬ್ಬಿತು. ದಂಗೆಯ ಲಾಭವನ್ನು ಮುಸಲಮಾನ ಪುಂಡರು ಯಥೇಚ್ಛವಾಗಿ ತಕ್ಕೊಂಡರು. ಖಾನಬಹಾದ್ದೂರ ಆಗಾಖಾನರಂಥವರು ಸ್ವಜಾತಿಯ ಗುಂಡಪುಂಡರಿಗೆ ಉತ್ತೇಜನ ಕೊಟ್ಟು, ಅವರನ್ನು ತಮ್ಮ ಮನೆಯಲ್ಲಿ ಇರಿಸಿದ್ದು ಅತ್ಯಂತವಾಗಿ ನಿಂದ್ಯ ಕೆಲಸವಾಯಿತು. ಹೋದ ಕಲದ ಇಂದೂರಿನಲ್ಲಿ ಹಿಂದೂ-ಮುಸಲಮಾನ ದಂಗೆಯಾದಾಗ ಆತ್ಮಸಂರಕ್ಷಣೆಗೆಂದು ಬಳಪಂಚರಾನ ಸುಪ್ಪೆಯವರು ಗುಂಡು ಹಾರಿಸಿದರು. ಆದರೂ ಅಧಿಕಾರಿಗಳು ಇವರನ್ನು ಹಿಡಿದು, ನ್ಯಾಯಕೋರ್ಟಿನ ಮುಂದೆ ನಿಲ್ಲಿಸಿದರು. ಈ ತರದ ಕೇಸು ಮತ್ತು ಸಮಂಜಸವೆನಿಸುವಂಥ ಉಪಾಯವನ್ನು ಪೋಲಿಸರಾಗಲಿ, ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರಾಗಲಿ ಕೈಕೊಳ್ಳಲಿಲ್ಲ. ಖಾನಬಹಾದ್ದೂರರಂತೂ ಪಲಾಯನ ಮಾಡಿಸಿದರು. ಅವರ ಮನೆಯಲ್ಲಿ ಅಡಗಿಕೊಂಡಿದ್ದ ಎಷ್ಟು ಜನರನ್ನು ಹಿಡಿದರು? ಇವರ ಮನೆಯ ಸುತ್ತಲು ಪೋಲೀಸ ಅಥವಾ ದಂಡಿನ ಬಂದೋಬಸ್ತು ಮಾಡಿದ್ದಾದರೆ- ದಂಗೆಯು ಹಬ್ಬುತ್ತಿದ್ದಿಲ್ಲೆಂದು ಸರ್ವಸಾಮಾನ್ಯವಾಗಿ ಬೆಂಗಳೂರಿನ ಲೋಕಮತವಾಗಿದೆ. ರಾಮಯ್ಯನವರನ್ನು ಕಂಡು ಒಮ್ಮೆ ಮೇಲೂ ವಿದ್ಯಾರ್ಥಿಗಳ ಮೇಲೂ ಹಾಕಿದ್ದಂತೂ ದೊಡ್ಡ ಪ್ರಮಾದವೂ ಸುಲ್ತಾನಶಾಹಿಯೂ ಸೈ.

ಎಲ್ಲಕ್ಕೂ ಹೆಚ್ಚಿನ ಸುಲ್ತಾನಶಾಹಿಯೆಂದರೆ- ವರ್ತಮಾನಪತ್ರಗಳ ಬಾಯಿಗೆ ಬೀಗ ಹಾಕಿದ್ದು. ಸಮಗ್ರ ಪ್ರತಿಕೂಲವಾಗಿ ನಿರ್ಬಂಧವನ್ನು ಪತ್ರಗಳ ಓದಿದು, ತಮ್ಮ ಪಾಲಿಗೆ ಅಗೌರವ ತರುತ್ತದೆಂದೇ ಇವನ್ನು ಬಂದು ಮಾಡಿದ್ದಾರೆ. ಇತ್ತೀಚಿನಲ್ಲಿ ಇಂಥ ದೇಬಂದಶಾಹಿಯು ಎಲ್ಲಿಯೂ ನಡೆದಿಲ್ಲವು. ಬ್ರಿಟಿಶ ಹಿಂದುಸ್ಥಾನದಲ್ಲಿ ಸ್ಥಾನಿಕ

ದಿಲ್ಲಿಯ ಕೋರ್ಟಿನಲ್ಲಿ ಭವಾನಂದನೆಂಬ ಸನ್ಯಾಸಿಯು ಪೂರ್ವಾಶ್ರಮದ ಹೆಂಡತಿಯನ್ನು ಒಬ್ಬನು ಉಡಿಕೆ ಮಾಡಿಕೊಂಡನು. ಸ್ವಾಮಿಯು ಆತನನ್ನು ಹೊಡೆದು ಗೊಂದಲ ಹಾಕಿದನು. ಈ ಆರೋಪದ ವಿಚಾರಣೆ ನಡೆದಾಗ ಆರೋಪಿಯು ಸಾಕ್ಷಿದಾರರಿಗೆ ಯದ್ವಾತದ್ವಾ ಪ್ರಶ್ನೆ ಕೇಳುವನು. ಮ್ಯಾಜಿಸ್ಟ್ರೇಟರು ರೀತಿಗನುಸರಿಸಿ ನಡೆ ಎಂದು ಹೇಳಲು, ಸ್ವಾಮಿಯು ಇವರಿಗೆ ಬೈಮಾನನೆಂದು ಬೈದು, ಮೋರೆಯ ಮೇಲೆ ಉಗುಳಿದನು. ಮತ್ತು ಹತ್ತರವೇ ಇದ್ದ ಕೋರ್ಟ ಇನ್ಸಪೇಕ್ಟರನ ಕಪಾಳಕ್ಕೆ ಹೊಡೆದನು. ಹೊಡೆದ ಬಗ್ಗೆ ಮತ್ತು ಉಗುಳಿದ ಬಗ್ಗೆ ಇವರಿಬ್ಬರು ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರ ಮುಂದೆ ಫಿರ್ಯಾದಿ ಮಾಡಿದ್ದಾರೆ. ಮ್ಯಾಜಿಸ್ಟ್ರೇಟರು ಮೊದಲಿನ ಆರೋಪದ ವಿಚಾರಣೆಯನ್ನು ತುರಂಗದಲ್ಲಿಯೇ ನಡಿಸುವರು.

——

ರಾಜಾ ನರೇಂದ್ರನಾಥರ ಸ್ವರಾಜ್ಯ ಯೋಜನೆ.

—(೦)—

ಪಂಜಾಬದ ಪ್ರಸಿದ್ಧ ಗೃಹಸ್ಥರಾದ ರಾಜಾ ನರೇಂದ್ರನಾಥರು ಸಾಯಮನ್ನ ಕಮಿಶನಕ್ಕೆ ತಮ್ಮ ಸ್ವರಾಜ್ಯ ಯೋಜನೆ ಬರೆದು ಕಳಿಸಿದ್ದಾರೆ ಅದರಲ್ಲಿ ಅವರು ಅನ್ನುವದೇನಂದರೇ-

ಪಾಯಾಪಾತಿನ ಸ್ವರಾಜ್ಯವೆಂದರೆ- ಆದರ ಸಿವ್ಹಿಲ ಸರ್ವಂಟರೂ, ಸೈನ್ಯವೂ ಏತದ್ದೇಶಿಯರದೇ ಆಗಬೇಕೆಂಬದನ್ನು ನಾನು ಬಲ್ಲೆನು. ಜಾತಿಜಾತಿಗಳಲ್ಲಿ ಕಲಹವಾಗದೆ, ಆ ಕಲಹದ ಬೀಜವು ಸೈನ್ಯದಲ್ಲಿ ಸೇರದೆಂದು ಕಂಡಕೂಡಲೆ- ನಾನು ಆ ಪಾಹಾತಿನ ಸ್ವರಾಜ್ಯದ ಪುರಸ್ಕರ್ತನಾಗುವೆನು. ನನ್ನ ಉದ್ದೇಶವು ಜಾತಿಭೇದದ ಭೂತವನ್ನು ನಾಶ ಮಾಡುವದೇ ಆಗಿರುತ್ತದೆ. ಇಂಗ್ರೇಜಿ ಸಿವ್ಹಿಲ ಸರ್ವಂಟರು ಇನ್ನೊಂದು ಹತ್ತು ವರ್ಷ ಹಿಂದು ಸ್ಥಾನದಲ್ಲಿ ಇರಬೇಕೆಂದು ನನ್ನ ಮತವು. ಸರ ಮಹಮ್ಮದ ಇಕಬಾಲಸಾಹೇಬರ ಮತವಾದರೂ ನನ್ನಂತೆ ಇರುತ್ತದೆ.

——

ವಿಲಾಯತಿಗೆ ಹೋಗಿದ್ದ ಶ್ರೀ ಶ್ರೀನಿವಾಸ ಅಯ್ಯಂಗಾರರು, ಬ್ಯಾರಿಸ್ಟರ ಜಿನ್ನಾ ಮತ್ತು ಶ್ರೀ. ಸತ್ಯಮೂರ್ತಿಯವರು ಮರಳಿ ಹಿಂದುಸ್ಥಾನದ ದಾರೀ ಹಿಡಿದಿದ್ದಾರೆ.

ವಾಯುವ್ಯ ಸರಹದ್ದಿನಲ್ಲಿ ಸೈನ್ಯದ ಪ್ರಚಂಡ ಸಿದ್ಧತೆ.

—(೦)—

ಪೇಶಾವರದಲ್ಲಿ ೩೫೦೦೦ ಸೈನ್ಯವೂ ವಿಮಾನಗಳ ಮೂರು ಕಂಪನಿಗಳೂ ಉಂಟು. ಪೇಶಾವರದ ಹುಕುಮತ್ತಿನಲ್ಲಿಯೇ ಇನ್ನೊಂದು ಸ್ಥಳದಲ್ಲಿ ೧೦ ಸಾವಿರ ಸೈನ್ಯವೂ ವಿಮಾನಗಳ ಒಂದು ಕಂಪನಿಯೂ ಉಂಟು. ಬಲೂಚಿಸ್ಥಾನದಲ್ಲಿರುವ ರಜಮುಕ ಪಾಳೆಯವು ಜಗತ್ತಿನಲ್ಲಿ ದೊಡ್ಡದೆಂದು ಪ್ರಸಿದ್ಧ ಹೊಂದಿದೆ. ಇಲ್ಲಿ ೩೫೦೦೦ ದಂಡುಂಟು. ಕ್ವೇಟಾ ಪಾಳೆಯವಂತೂ ಯಾರಿಗೂ ಅರಿಯದ್ದಲ್ಲ. ಇದು ಬಲೂಚಿಸ್ಥಾನದಲ್ಲಿ ಕಿಲ್ಲೆಯಂತೆ ಆಯಕಟ್ಟಿನ ಸ್ಥಳವಾಗಿದೆ. ಇಲ್ಲಿ ೩೫೦೦೦ ಪಡೆಯದೆ. ಒಟ್ಟು ಈ ಒಂದು ಲಕ್ಷ ಸೈನ್ಯಕ್ಕೆ ನೆರವಾಗುವದಕ್ಕಾಗಿ ಇನ್ನೊಂದು ಲಕ್ಷ ಸೈನ್ಯವನ್ನು ಕಾದಿಟ್ಟಿರುತ್ತಾರೆ.

——

ಅಧಿಕ ಗಣಪತಿಯ ಉತ್ಸವವು ಕೋರ್ಟಿನ ಕಟ್ಟೇ ಏರಿತು.

—(೦)—

ಟಿಳಕರ ಚಿರಂಜೀವರಿಗೂ, ಕೇಳಕರರಿಗೂ ವಾದ.

—೦—

ಪುಣೆಯ ಕೇಸರಿ ಪತ್ರದವರು ಟಿಳಕ ಪಂಚಾಂಗದ ಪ್ರಕಾರ ಆದಿತ್ಯವಾರ ದಿವಸ ಗಣಪತಿಯ ಉತ್ಸವ ಮಾಡಬೇಕೆಂದಿದ್ದಾರೆ. ಲೋಕಮಾನ್ಯರ ಚಿರಂಜೀವನೇ ಇದಕ್ಕೆ ವಿರುದ್ಧ ಇದ್ದು, ಹಳೇ ಪಂಚಾಂಗದಂತೆ ಅಧಿಕ ಹಿಡಿದಿದ್ದಾನೆ. ಈತನಿಗೆ ಇದು ಶ್ರಾವಣ ಮಾಸವು. ಇಬ್ಬರಲ್ಲಿಯೂ ಈ ಪ್ರಕಾರ ಜಗಳ ಬಂದಿದೆ. ಗಾಯಕವಾಡವಾಡೆಯು ತನ್ನದು ಅಲ್ಲಿ ಶ್ರೀ. ಕೇಳಕರರಿಗೆ ಉತ್ಸವ ಮಾಡಗೊಡಬಾರದೆಂದು ರಾಮಭಾಪೂಪು ದಿವಾಣಿ ಕೋರ್ಟಿನಲ್ಲಿ ತಹಕೂಬಿಯ ಹುಕುಮು ಬೇಡಿದ್ದಾರೆ.

——

ಮೋಟಾರ ಡ್ರಾಯವ್ಹರನಿಗೆ ಮೂರು ವರ್ಷದ ಶಿಕ್ಷೆ.

—(೦)—

ಮೈಸೂರ ಮಂಡ್ಯಾ ಕೆರೆಯ ಹತ್ತರ ಆದಂಥ ಮೋಟಾರಿನ ಭಯಂಕರ ಅಪಘಾತಕ್ಕೆ ಕಾರಣವಾದ ಡ್ರಾಯವ್ಹರನಿಗೆ ಮ್ಯಾಜಿಸ್ಟ್ರೇಟರು ೩೬ ತಿಂಗಳ ಸಕ್ತಮದ ಶಿಕ್ಷೆ ವಿಧಿಸಿದರು.

——

ಧಾರವಾಡ-

ಕಳೆದ ಶನಿವಾರ ದಿವಸ ಡಿಸ್ಟ್ರಿಕ್ಟ ಲೋಕಲ ಬೋರ್ಡಿನ ಜನರಲ ಕಮಿಟಿ ಠರಾವಿ, ಮಿ. ಹಂಚಿನಾಳರು ಸ್ಕೂಲುಡಿಪಾರ್ಟಿನ ಆ್ಯಡಮಿ.ನಿಸ್ಟ್ರೇಟರರಾಗಿ ನೇಮಿಸಲ್ಪಟ್ಟರು.

ನೋಟೀಸು

ಫಕೀರಪ್ಪಾ ಕೋಂ ಮರಲಿಂಗಪ್ಪಾ ಮರಲಿಂಗಣ್ಣನವರ ಸಾ॥ ಕೇನ ಕೂಲಿ ಹಾಲಿವಸ್ತಿ ಬ್ಯಾಡಗಿ ಇವಳಿಗೆ—

ಈ ಕೆಳಗೆ ಸಹಿ ಮಾಡಿದ ಗುತ್ತಾರ ಮಾಡಿದವನ ಕಡೆಯಿಂದ ನೋಟೀಸು ಕೊಡುವದೇನಂದರೆ ನೀನು ನಿನ್ನ ಲಗ್ನದ ಗಂಡ ಸತ್ತನಂತರ ಮಂದು ಹುಡುಗನನ್ನು ದತ್ತಕ ತೆಗೆದುಕೊಂಡು ಸದಾ ದತ್ತಕ ತೆಗೆದುಕೊಳ್ಳಲಿಕ್ಕೆ ನಿನಗೆ ಅಧಿಕಾರ ಇಲ್ಲಾ ಅಂತಾ ಸಂಕಾರದಿಂದ ನಿರ್ಣಯಿಸಿದ ಬಳಿಕ ನಿಮ್ಮ ಅತ್ತಿ ಮನೆಯಿಂದ ವರ್ಷವೊಂದಕ್ಕೆ ಮಂದು ನೂರು ೧೮೦ ರೂಪಾಯಿ ಪೋಟಿಗಿ ಮಾಡಿಕೊಂಡು ಸದರ ಪೋಟಿಗಿಯಿಂದ ವೃತ್ತಿಜೀವನ ಮಾಡತಾ ಇರೋ ಕಾಲಕ್ಕ ನನಗೆ ಸಹಾ ಹೆಂಡರು ಮಕ್ಕಳು ಇರುವದಿಲ್ಲವಾದ್ದರಿಂದಲೂ ನಮ್ಮ ನಿಮ್ಮ ಪರಿಚಯವಾಗಿ ಬುದ್ಧಿವಂತರ ವಿದ್ಯಮಾನ ಜಾತಿ ರಿವಾಜ ಪ್ರಕಾರ ಉಡಿಕಿ ಮಾಡಿಕೊಳ್ಳಲಿಕ್ಕೆ ಸಂತೋಷದಿಂದ ಒಪ್ಪಿ ನಿನ್ನ ಅತ್ತಿ ಮನೆಯವರದು ಸಹಾ ಒಪ್ಪಿಗೆ ತೆಗೆದುಕೊಂಡು ಆ ಬಗ್ಗೆ ಅವರಿಂದಾ ರೋಖ ಮೂರು ನೂರು ೩೦೦ ರೂಪಾಯಿಗಳನ್ನು ತೆಗೆದುಕೊಂಡು ಅವರ ಮೇಲಿನ ಪೋಟಿಗಿ ಬೋಜಾ ಸಹಾ ಬಿಟ್ಟು ಬುದ್ಧಿವಂತರ ಸಮಕ್ಷಮ ಮಾತಾದ ಪ್ರಕಾರಾ ಉಡಿಕಿ ಮಾಡಿಕೊಂಡು ನನ್ನೊಡನೆ ಕೆಲವು ದಿವಸ ಯೋಗ್ಯ ರೀತಿಯಿಂದ ಇದ್ದವಳು ಎಲ್ಲಿಕಡೆಗೆ ಕದರಮಂಡಲಗಿಗೆ ಹೋಗಿ ಬರ್ತೇನೆ ಅಂತಾ ಹೇಳಿ ಹೋದವಳು ಮರ್ಮರು ತಿಂಗಳಾದರೂ ಬರಲಿಲ್ಲ. ಇದರ ಕಾರಣ ನನಗೆ ತಿಳಿಯಲಿಲ್ಲ ಆದ್ದರಿಂದ ನಮ್ಮ ನಿಮ್ಮಲ್ಲಿ ಉಡಿಕಿ ಆಗೋಕಾಲಕ್ಕೆ ಬುದ್ಧಿವಂತರ ಸಮಕ್ಷಮ ಮಾತಾದ ಪ್ರಕಾರ ನಾನು ನಿಮಗೆ ಒಂದು ಕರಾರ ಪತ್ರ ಬರಕೊಟ್ಟಿದ್ದು ಆ ಕರಾರ ಪತ್ರದ ಪ್ರಕಾರ ನೀನು ಈ ನೋಟೀಸು ಮುಟ್ಟಿದ ಏಳು ದಿವಸದಲ್ಲಿ ಒಂದು ನನ್ನೊಡನೆ ಯೋಗ್ಯರೀತಿಯಿಂದ ಇರಬೇಕು ಇಲ್ಲವಾದರೆ ಆಗಿನ ಕಾಲಕ್ಕೆ ನಿನಗೆ ನಾನು ಕೊಟ್ಟ ದಾಗೀನೆಗಳು ಅಂದರೆ ಒಂದು ಗುಂಡಿನ ಟೀಕಿ ೩೦೦ ರೂ ಮಂದು ಭಂಗಾರ ಒಳಿ ಜತಿ ೧೩೦ ರೂಪಾಯಿ ಮತ್ತು ಎರಡು ಜಲೋ ಶೀರಿ ಕಿಮ್ಮತ್ತು ರೂಪಾಯಿ ೪೧ ಒಂದು ಪದಕದ ಸರ ಕಿಮ್ಮತ್ತು [illegible] ರೂಪಾಯಿ. ಈ ಪ್ರಕಾರ ಸಾಮಾನುಗಳನ್ನು ತಂದುಕೊಟ್ಟು ನನ್ನ ಹೆಸರಿಲೆ ಸೋಡಚೀಟಿ ಬರಕೊಟ್ಟು ಹೋಗಬೇಕು. ಈ ರೀತಿ ನೀನು ಒಂದು ಕೆಲಸ ತೀರಿಸದೆ ಇದ್ದರೆ ನನ್ನ ಮೇಲೆ ಮನ್ನ ಆಸ್ತಿ ಮೇಲೆ ಮ ನಾನು ಮುಂದೆ ದ.ಡ. ತನ್ನ ಆಸ್ತಿಯ ಮೇಲೆ ಸಹಾ ಕಾರಣ ಪ್ರ[illegible] ನನ್ನ ಪ್ರಕಾರ ನಿನ್ನನು ಯಾವ ಥರದ [illegible] ಕ್ಕು ಬಂಧ್ಯತೆ ಇರುವದಿಲ್ಲ ಮತ್ತು ನನ್ನ ದಾಗೀನೆ ಸಾಮಾನುಗಳನ್ನು ತಂದು ಕೊಡದೆ ಇದ್ದರೆ ನೀನು ನಿನ್ನ ಲಗ್ನದ ಗಂಡನ ಮನೆಯವರಲ್ಲಿ ಪೋಟಗಿ ಬಿಟ್ಟ ಬಾಬತ್ತ ಮೂರು ನೂರು ೩೦೦ ರೂಪಾಯಿ ನನ್ನ ಕಡಿಗೆ ಕೊಟ್ಟದ್ದು ನನಗೇನೆ ದಕ್ಕ ಅಂತಾ ತಿಳಿಯಬೇಕು ಇಲ್ಲವಾದರೆ— ಮೇಲೆ ಬರೆದ ಪ್ರಕಾರ ೭ ದಿವಸದಲ್ಲಿ ಒಂದು ನನ್ನ ದಾಗೀನೆ ನನಗೆ ಕೊಟ್ಟು ಸೋಡಚೀಟಿ ಮಾಡಿಸಿಕೊಟ್ಟು ನಿನ್ನ ರೂಪಾಯಿ ನೀನು ಒಯ್ಯಬೇಕು ಅಂತಾ ಕೊಟ್ಟ ನೋಟೀಸು

ತಾ|| ೧೨—೮—೩೮ ನೇ ಇಸ್ವಿ

ಈ ಎಡಗೈ ಹೆಬ್ಬಟ್ಟಿನ ಗುತ್ತಾರ ಮರಲಿಂಗಪ್ಪಾ ಬಿನ್ನ ಭರಮಪ್ಪಾ ಮರಲಿಂಗಣ್ಣನವರ ಸಾ|| ಕೂಲಿ ಈಕ ಮಾಡಿದ್ದು ಅದೆ.

ನಕಲಿ ಮಾಲಿನ ಬಗ್ಗೆ ಎಚ್ಚರಾಗಿರಿ.

ನಮ್ಮ ಉಂಚೀ ಪವಿತ್ರ ಬಾಜೂಲೀ

ಹಿರಾ ಇಂಗು

ಅವಶ್ಯ ಬೇಕು.

ಇದು ದಿನಾಲು ಮನೆಯಲ್ಲಿ ಉಪಯೋಗಿಸಬೇಕಾದದ್ದು ಅಡಿಗೆಯು ಇದರಿಂದ ರುಚಿಕರ ಮತ್ತು ಸ್ವಾದಿಷ್ಟವಾಗುವದು ಎಂಬುದು ಎಲ್ಲರಿಗೂ ಖಾತ್ರಿಯಾಗಿರುವ[illegible]. ನಾವು ನಮ್ಮ ಗಿರಾಕಸ್ತರನ್ನು ಕಾಪಾಡಲಕ್ಕೆ ಕಲಬೆರಿಸಿ ಉಂಚೀಮಾಲನ್ನು ರೋಕ[illegible]ಂದ [illegible] ಗಿರಾಕಿಗಳಿಗೆ [illegible] ನೋಡುವಿರಿ ಬೇಳುವದಲ್ಲದೆ ಖಾತ್ರಿ ಮಾಡ[illegible] ಈ ಇಂಗು [illegible] ಬಹಳ ತೀಕ್ಷ್ಣವಿದ್ದು ಸುವಾಸಿಕವಾಗಿರುವದರಿಂದ [illegible] ಒಂದು ತೊಲಿ [illegible] ಇಂಗಿಗಿಂತಲೂ ಮೇಲಾಗಿರುವದು. ಇದು [illegible] ಅಜೀರ್ಣ, [illegible]ರ, ಹೊಟ್ಟೆನೋವು, ಹಿಡಿಯೋಣ, ಮಲೇರಿಯಾ, ಕಾಲರಾ, [illegible], ಮುಂತಾದ ರೋಗಗಳಿಗೆ ಗಳ ಪ್ರತಿಬಂಧವಾಗಿರುವದು. ಉಪ್ಪಿನಕಾಯಿಯಲ್ಲಿ [illegible] ಹುಳ ಬೀಳುವ ಸಂಭವವಿಲ್ಲ. ಇದನ್ನು ಬೇಕಾದಷ್ಟು ಮುಚ್ಚಿಟ್ಟರೂ ವಾಸನೆಯು ಹಾರಿಹೋಗದು. ಇದನ್ನು ಸಂಗ್ರಹಿಸುವದು ಯೋಗ್ಯವದೆ

ಅರ್ಧಾ ಔಂಸಿನ ಕಿರಕೋಳ ಬಿಕ್ರಿಗೆ ನೂಯಿಸ್ಕರ ಫ್ಯಾನ್ಸಿ ಡಬ್ಬಿಗಳು.

ಇರಾಣಿ ಮಸ್ತಾಟ ಇಂಗು.

ಡಜನ ಒಂದಕ್ಕೆ ನಾಲ್ಕು ರೂಪಾಯಿ.

ಡಬ್ಬಿಯು ಒಂದು ಡಜನಕ್ಕಿಂತಲೂ ಕಡಿಮೇ ಹೆಚ್ಚು ಕೊಡೋಣವಿಲ್ಲಾ ಎಲ್ಲರಿಗೂ ವ್ಯಾಪಾರಿಗೆ ಪೋಸ್ಟೇಜ ಖರ್ಚ ಹೆಚ್ಚು ಮಾಲು ಬೇಡಿಕೊಳ್ಳುವವರು ಪತ್ರವ್ಯವಹಾರ ಮಾಡಬೇಕು. ವ್ಯಾಪಾರಸ್ಥರಿಗೆ ಟ.[illegible] ಪ್ರೂಟ ಸಿಗುವವು.

ಪತ್ತೆ— ಮೆಸರ್ಸ ಕ.ಲಗೋಡ ಬ್ರದರ್ಸ ಶಾಲೂಕ ಗೋಕಾಕ.

ನೋಟುಗಳು ಹೋಗಿವೆ.

—೦—

ಹುಡುಕಿ ಕೊಟ್ಟವರಿಗೆ ೨೦ ರೂಪಾಯಿ ಇನಾಮು ಕೊಡುವೆವು.

—(೦)—

ಬುಧವಾರ ೮ ನೇ ತಾರೀಖಿನ ದಿವಸ ಸಾಯಂಕಾಲದ ಉಗಿಬಂಡಿಯಿಂದ ನಾನು ಹುಬ್ಬಳ್ಳಿಯಿಂದ ಧಾರವಾಡಕ್ಕೆ ಬರುವಾಗ, [illegible] ನನ್ನ ಪಾಲಕಿಯು ೧೦-೧೦೦ ರೂಪಾಯಿ [illegible] ನೋಟುಗಳು ಬಿದ್ದು ಹೋಗಿವೆ [illegible] ಯು ರೇಲ್ವೆ ಪೋಲೀಸರ ಕಡೆಗೆ ಫಿರ್ಯಾದಿ ಕೊಟ್ಟಿದ್ದೇನೆ. ನೋಟುಗಳ ನಂ ೭೮೮೮೮೩ ಮತ್ತು ೧೦೮೮೨೦ ಇರುತ್ತವೆ ಇವನ್ನು ನಮಗೆ ತಂದು ಕೊಟ್ಟವರಿಗೆ ಅವರ ಖರ್ಚ ಅಲ್ಲದೆ ೨೦ ರೂಪಾಯಿ ಇನಾಮು ಕೊಡುವೆವು. ತಿಳಿಯುವದು.

ತಾರೀಖು ೧೧—೮—೩೮

ಗಂಗಪ್ಪಾ ಮಲ್ಲೇಶಪ್ಪಾ ಗಿಲಗಂಚಿ.

ಧಾರವಾಡ.

ನೋಟೀಸಿನ ದರಗಳು.

—೦—

ಸಿಂಗಲ ಕಾಲಮಿನ ಇತ್ತು ಪಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಪಳಿಗೆ ಒಂದಾಣೆ ಆರು ಇಂಚಿನ ಪತಿಯೊಂದು ಒಳಗೆ ಐದು ಆಣೆ ಸರಕಾರಿ, ಮ್ಯುನಿಸಿಪಾಲಿಟಿ ಲೋಕಲಬೋರ್ಡ ರೇಲ್ವೆ ಬ್ಯಾಂಕ ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾ ಲ ಗ ಮಾ ದಾ ದ— ಇಂಗ್ಲಿಷ ದಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರ ಆ [illegible] ಪಳಿಗಳಿಗೆ ಇಮ್ಮಡಿ ಚಾರ್ಜ ಕಾಯಂ ಜಾಹಿರಾತುಗಳನ್ನು ಕೊಡುವವರು ಕಳ ನ ತ್ಯೇಕ್ಯೆ ಪತ್ರವ್ಯವಹಾರ ಮಾಡಬಹುದು

ವ್ಯಾನೇಜರ ವಿಜಯ ಧಾರವಾಡ.

ಈ ಪತ್ರವನ್ನು ಅನ್ನಾಚಾರ್ಯ ಬಾಳಾಚಾರ್ಯ ಹೊಸಕೆರೆ ಇವರು ಧಾರವಾಡ ಶ್ರೀ [illegible] ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಕಟ ಮಾಡಿದರು.

R. N. B. 1443

ವಿಜಯ

ನಿತ್ಯ ಪತ್ರ — ಬೆಲೆ ಅರ್ಧ ಆಣೆ

ಸಂಪಾದಕರು:— ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೯) ಧಾರವಾಡ ಗುರುವಾರ ತಾರೀಖು ೧೬ ನೇ ಅಗಸ್ಟ ೧೯೩೪ (ಸಂಚಿಕೆ೧೪೬

ದಿ ಒಂಯಲಕ್ಷ್ಮಿ ಬ್ಯಾಂಕ ಲಿಮಿಟೆಡ, ಧಾರವಾಡ-

ಸ್ಥಳ— ಮಂಗಳವಾರಪೇಟೆ. ದಿವಂಗತ ಪಾಂಡುರಂಗರಾಯರ ಮನೆ.

೧ ಈ ಬ್ಯಾಂಕಿನಲ್ಲಿ ದಾಗೀನೆಗಳ ಮೇಲೆ ಸೋಯಿ ದರದಿಂದ ಹಾಗು ಮತ್ತು ಒಹಳ ಮುದ್ದತಿಯ ತನಕ ಸಣ್ಣ ರಕಮಿನಿಂದ ಹಿಡಿದು ದೊಡ್ಡ ರಕಮಿನ ತನಕ ಸಾಲ ದೊರೆಯುವದು. ಬಡ್ಡಿಯ ದರ ಸಂಬಂಧ ಸಮಕ್ಷಮ ತಿಳಕೊಳ್ಳಬೇಕು.

೨ ಸರಕಾರಿ ಪ್ರಾಮಿಸರಿ ನೋಟುಗಳ ಖರೀದಿ, ವಿಕ್ರಿ ನಡೆಯುವದು. ಅವುಗಳ ಮೇಲೆ ಸಾಲ ದೊರೆಯುವದು. ಮತ್ತು ಯೋಗ್ಯ ಕಮೀಶನ ತಕ್ಕೊಂಡು ಗಿರಾಕಿಗಳಿಗೆ ಲಾಭಕರವಾಗಿ ಅವು ಗಳ ಮಂಜೂರ ಮಾಡಿ ಕೊಡಲ್ಪಡುವದು.

೩ ಮುದ್ದತಿ ಠೇವಿನ ಹಣವನ್ನು ಇಟ್ಟುಕೊಳ್ಳಲಾಗುವದು. ಸ್ವಲ್ಪ ರಕಮಿನಿಂದ ದೊಡ್ಡ ರಕಮಿನ ತನಕ ಇಟ್ಟುಕೊಳ್ಳಲಾಗುವದು. ಬಡ್ಡಿಯ ದರವನ್ನು ಸಮಕ್ಷಮ ಅಥವಾ ಪತ್ರವ್ಯವಹಾರದಿಂದ ತಿಳಕೊಳ್ಳಬೇಕು.

೪ ಈ ಬ್ಯಾಂಕಿನ ಶೇರುಗಳು ಮಾರಾಟಕ್ಕೆ ದೊರೆಯುವವು.

೫ ಬ್ಯಾಂಕಿಗೆ ಸಂಬಂಧಿಸಿದ ಚಾಲತಿ ವ್ಯವಹಾರ ಮೊದಲಾದ ಎಲ್ಲ ಕೆಲಸಗಳು ನಡೆಯುವವು. ವಿಶೇಷ ಸಂಗತಿಗಳನ್ನು ಆಫೀಸಿನ ವೇಳೆಯಲ್ಲಿ ಸಮಕ್ಷಮ ಅಥವಾ ಪತ್ರವ್ಯವಹಾರದಿಂದ ತಿಳಕೊಳ್ಳಬೇಕೂ

ಕೃಷ್ಣರಾವ ವೆಂಕಟರಾವ ಭಂಡಿವಾಡ.
ಮ್ಯಾನೇಜಿಂಗ ಏಜಂಟ.

—॥ ಶ್ರೀ ಗುರು ಪ್ರಸನ್ನ ॥—

ಪ್ರತಿಯೊಬ್ಬ ಕುಟುಂಬಕನು ಅವಶ್ಯ ಸಂಗ್ರಹದಲ್ಲಿಡತಕ್ಕ ಒಂದೇ ಔಷಧ.

-ಭಾಸ್ಕರ ಚೂರ್ಣ-

ಸುಪ್ರಸಿದ್ಧ ವನಸ್ಪತಿ ಶಾಸ್ತ್ರಜ್ಞರ ಸೂಚನೆಯ ಮೇರೆಗೆ ಈ ಚೂರ್ಣವು ತಯಾರಿಸಲ್ಪಟ್ಟಿದ್ದು ಇದರ ಸೇವನೆಯಿಂದ ನಾಲ್ಕು ತರದ ವ್ಯಾಧಿಗಳು ಸ್ವಲ್ಪದರಲ್ಲಿಯೇ ನಾಶಹೊಂದುವವು. ಅಜೀರ್ಣ ಅಪಚನ, ಅಮ್ಲಪಿತ್ತ, ಅಗ್ನಿಮಾಂದ್ಯ ಸಂಗ್ರಹಿಣಿ, ಹೊಟ್ಟೆಶೂಲೆ, ಹೊಟ್ಟೆನೋವು ಮತ್ತು ಯಾವ ತರದ ವಾತವಿಕಾರಗಳ ಮೇಲೆ ಇದೊಂದೇ ರಾಮಬಾಣ ಔಷಧವಿರುವದು. ಒಂದು ಚಿಮಟಿಗಿಂತಲೂ ಈ ಚೂರ್ಣವನ್ನು ಬಾಯಿಯಲ್ಲಿ ಹಾಕಿಕೊಂಡರೆ ನಾಕು ಪ್ರಹರ ಅರ್ಧತಾಸಿನಲ್ಲಿಯೇ ಹಸಿವೆ ಆಗುವದು. ಹೊಟ್ಟೆಯಿಂದ ಗುಣವಾಗಿದ್ದ ಅಶಕ್ತ ಮನುಷ್ಯರು ಎರಡನೆ ಶಕ್ತಿವರ್ಧಕ ಔಷಧ ತೆಗೆದುಕೊಳ್ಳುವ ಕಾರಣವೇ ಇಲ್ಲಾ. ಪಕ್ಕೀಗಳಲ್ಲಿಯ ಜನರು ಒಂದು ಭಾಸ್ಕರ ಚೂರ್ಣದ ಡಬ್ಬಿಯನ್ನು ತಮ್ಮ ಹತ್ತಿರ ಇಟ್ಟುಕೊಂಡರೆ ನಾನಾ ರೀತಿಯ ಬೇನೆಗಳಿಗೆ ಉಪಯೋಗವಾಗುವದು. ಎಷ್ಟು ದಿವಸದ ಆಜಾರವಿದ್ದರೂ ಮೂರೇ ದಿವಸಗಳಲ್ಲಿ ಗುಣವಾಗುವದು. ಕೇವಲ ವನಸ್ಪತಿಯಿಂದಲೇ ತಯಾರಿಸಿದ್ದ ಈ ಸಿದ್ಧೌಷಧವನ್ನು ಪ್ರತಿಯೊಬ್ಬನೂ ಅವಶ್ಯ ಸಂಗ್ರಹದಲ್ಲಿಟ್ಟುಕೊಳ್ಳಬೇಕು ಒಂದು ಡಬ್ಬಿಯಕಿಮ್ಮತ್ತು ೧೦ ಆ. ಡಜನದ ಕಿಂಮತ್ತು ಹೆಚ್ಚಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು. ಪೋಸ್ಟೇಜ ಬೇರೆ ಸ್ಯಾಂಪಲ ೧ ಆಣೆ.

ಏಜಂಟ— ಬಿ. ಬಿ. ಟೀಕರೆ ಬ್ರಾಂಡ ನಪ್ಪ, ಮಾರ್ಕೆಟರೋಡ ಧಾರವಾಡ.

ದಿ ಧಾರವಾಡ ಅರ್ಬನ ಕೋ ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಅಪರೇಟಿವ್ಹ ಕ್ರೆಡಿಟ ಸೊಸಾಯಿಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಠೇವಿಗೆಯು ಏಳು ಲಕ್ಷದ ಮೇಲುಂಟು. ಚೆಕ ಸಂಬಂಧ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರದ ವ್ಯವಹಾರ ನಡೆಯುವದು. ಠಾವು(ಮ ಮತ್ತು ಬೇರೆ ತರದ ಠೇವುಗಳಿಗೆ ಬಹಳ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕಳಗೆ ಸಹಿ ಮಾಡಿದವ ರಿಂದ ತಿಳಕೊಳ್ಳಬೇಕು.

ಮಂಟ್ಟವರಾವ ಬಿ. ಜಕಾತಿ,
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ
ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಠೇವಣಿ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಒತ್ತೀ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಿರುತ್ತದೆ.

ಎ. ಕೆ. ಶೆಟ್ಟಿ
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣೀ ದರ.

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	೧೩—೮—೦ ರೂ.
೬ ,,	೭—೦—೦
೪ ,,	೪—೦—೦
ವಾರ ಪತ್ರಕ್ಕೆ ೧ ವರ್ಷಕ್ಕೆ	೩—೧೨—೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ

ಮ್ಯಾ. ವಿಜಯ ಧಾರವಾಡ

ಧಾರವಾಡ-

ಹಾನಗಲ್ಲ ತಾಲೂಕ ಲೋಕಲಬೋರ್ಡಿನ ಮುಂದೆ ಭೂಕಂದಾಯ ಏರಿಸುವ ಬಿಲ್ಲು ಮತ್ತು ಭೂವಿಭಾಗಣಿ ಬಿಲ್ಲು. ಹೀಗೆ ಎರಡೂ ಬಿಲ್ಲುಗಳ ನಿಷೇಧ ಮಾಡಬೇಕೆಂದು ಬೋರ್ಡಿನ ಕಮಿಟಿ ಮುಂದೆ ಠರಾವು ಬಂದಿತ್ತು. ಅದು ತಾ. ೧೦-೮ ೨೮ನೇ ದಿವಸದ ಕಮಿಟಿಯಲ್ಲಿ ಸರ್ವಾನುಮತದಿಂದ ಪಾಸಾಯಿತು. ಇದರಂತೆ ಧಾರವಾಡ ಜಿಲ್ಲೆಯು ಎಲ್ಲ ತಾಲೂಕ ಬೋರ್ಡಿನವರು ವರ್ತಿಸಬೇಕೆಂದು ಒಬ್ಬ ಸುದ್ದಿಗಾರರು ಬರೆಯುತ್ತಾರೆ.

ನೋಟೀಸು

ಗೌರಿ ಕೋಂ ಶಾಮಾ ಪಕ್ಕೀಂದ ಸಾಕೀನ ಬೇಲೂರ ತಾಲೂಕ ಧಾರವಾಡ ಇವಳಿಗೆ

ಕೆಳಗೆ ಸಹಿ ಮಾಡಿದ ಗುತರ್ಾ ಮಾಡುವ ಶಾಮಾ ತಂದೆ ಯಲ್ಲಪ್ಪಾ ಪಕ್ಕೀಂದ ಸಾಕೀನ ಬೇಲೂರ ತಾಲೂಕ ಧಾರವಾಡ ಈತನು ನಿನಗೆ ಈ ನೋಟೀಸಿನಿಂದ ತಿಳಿಸುವದೇನಂದರೆ-

ನೀನು ನನ್ನ ಮದವಿಯ ಹೆಂಡತಿಯಾಗಬೇಕು ಅಕ್ಕನ ಮಗಳು. ಬಿರದ ಮೇಲಿನ ಒಂದು ಗೋಡೆಯುಳ್ಳ ಒಂದೇ ಮನೆಯಲ್ಲಿರುತ್ತೇವೆ ಆದರೆ ನೀನು ಒಂದು ವರ್ಷದಿಂದ ನನ್ನ ಕೂಡ ಸುರಳಿತ ರೀತಿಯಿಂದ ಬಾಳವೆ ಮಾಡದೆ, ನಿನ್ನ ತವರ ಮನೆಯಲ್ಲಿ ಕೂತಿರತೀದಿ ವಿನಾ ಮುಖಭೆಟ್ಟಿಯಾದರೂ ನನ್ನ ಮನೆಗೆ ಬಾಳವೆ ಮಾಡಲಿಕ್ಕೆ ಬರವಲ್ಲಿ ನೀನು ನಿನ್ನ ತಾಯಿಯ ಮನೆಗೆ ಹೋದಾಗ ನೀನು ವೈದ ನನ್ನ ಮಾಲಕಿಯ ದಾಗಿನೆಗಳು-

ಒಂದು ಜೋಡು ಭಂಗಾರದ ಬಳಿ ತೂಕಾ ಆರು ತೊಲಿ, ೨ ಬೆಳ್ಳಿ ಕೋಳಬಂದಿ ಜೋಡು ತೂಕಾ ೨೪ ತೊಲಿ ೩ ಕರ್ಣಫೂಲು ೪ ಗುಂಡಿನಟೀಕಿ ೫ ಮೂಗತಿ ೬ ಹಿರದಿನ ಶೀರಿ ಕಿ॥ ರೂ॥ ೩೦ ಇಷ್ಟು ವೈದು ಅವನ್ನು ವೈಮೇಲೆ ಉಪಯೋಗಿಸದೆ, ಮುಚ್ಚಿಟ್ಟಿರುತ್ತೀದಿ.

ಈಗ ನಿನ್ನ ತಾಯಿಯ ಮನಸ್ಸಿನಲ್ಲಿ ನಿನಗೆ ಎರಡನೆಯವನಿಗೆ ಉಡಿಕೆ ಮಾಡಿಕೊಡುವ ಇರಾದೆ ಇದ್ದಂತೆ ತೋರತದೆ ನೀನು ನಿನ್ನ ತಾಯಿಯ ಮಾತು ಕೇಳಿ, ನನ್ನ ಮನೆಗೆ ಬರವಲ್ಲಿ ಗೃವದವರು ಹೇಳಿದರೂ ಕೇಳವಲ್ಲಿ ಕಾರಣ ನಿನಗೆ ಈ ನೋಟೀಸು ಕೊಟ್ಟಿರುತ್ತೇನೆ ನೀನು ಈ ನೋಟೀಸು ಮುಟ್ಟಿದ ಕೂಡಲೆ ನನ್ನ ಯಾವತ್ತು ದಾಗೀನೆ ತಕ್ಕೊಂಡು ನನ್ನ ಮನೆಗೆ ಬರಬೇಕು ಇದಕ್ಕೆ ತಪ್ಪಿಸಿ ನೀನು ಎರಡನೆಯವನನ್ನು ಉಡಿಕೆ ಮಾಡಿಕೊಂಡರೆ ನಿನ್ನ ಮೇಲೂ ಉಡಿಕೆಯಾಗುವವನ ಮೇಲೂ ಇದಕ್ಕೆ ಬುಲಕಾಫೆ ಕೊಡುವ ನಿನ್ನ ತಂಯಿಯ ಮೇಲೂ ಏಕದಂ ಫೌಜದಾರಿ ಮಾಡುವೆನು ನಾನು ನಿನಗೆ ಎಂದಿಗೂ ಸೋಡಪತ್ರ ಕೊಡುವದಿಲ್ಲ ಸೋಡಪತ್ರ ಕೊಡುವಂಥ ಯಾವ ಕಾರಣವೂ ಇರುವದಿಲ್ಲ ತಿಳಿಯುವದು ಈ ನೋಟೀಸಿನ ಖರ್ಚು ನಿನ್ನ ತಲೆಯ ಮೇಲೆ ಅದೆ.

ತಾ॥ ೧೬-೮-೨೮ ನೇ ಇಸ್ವಿ

ಈ ಎಡಗೈ ಹೆಬ್ಬಟ್ಟಿನ ಗುತರ್ಾ ಶಾಮಾ ತಂದಿ ಯಲ್ಲಪ್ಪಾ ಪಕ್ಕೀಂದ ಈತನ ಕೈದು ಇರುತ್ತದೆ.

ನಕಲಿ ಮಾಲಿನ ಬಗ್ಗೆ ಎಚ್ಚರಾಗಿರಿ.

ನಮ್ಮ ಉಂಟೀ ಪವಿತ್ರ ಕಾಬೂಲೀ

ಹಿರಾ ಇಂಗು

ಅವಶ್ಯ ಬೇಡಿರಿ.

ಇದು ದಿನಾಲು ಮನೆಯಲ್ಲಿ ಉಪಯೋಗವಾದದ್ದು ಅಡಿಗೆಯು ಇದರಿಂದ ರುಚಿಕರ ಮತ್ತು ಸ್ವಾದಿಷ್ಟವಾಗುವದು ಎಂಬುದು ಎಲ್ಲರಿಗೂ ಖಾತ್ರಿಯಾಗಿರುವದು ನಾವು ನಮ್ಮ ಗುಮಾಸ್ತರನ್ನು ಕಾಬೂಲಕ್ಕೆ ಕಳುಹಿಸಿ ಉಂಟೀಪಾಲನ್ನು ಕೊಂಡು ತೆಗೆದುಕೊಳ್ಳುವದರಿಂದ ನಮ್ಮ ಗಿರಾಕಿಗಳಿಗೆ ಬಹಳ ಸೋಯಿಸ್ಕರ ಬೀಳುವದಲ್ಲದೆ ಖಾತ್ರಿ ಮಾಲು ಸಿಗುವದು. ಈ ಇಂಗು ಬಾಜಾರಿ ಇಂಗಕ್ಕಿಂತಲೂ ಬಹಳ ತೀಕ್ಷ್ಣವಿದ್ದು ಸುವಾಸಿಕವಾಗಿರುವದರಿಂದ ನಮ್ಮ ಒಂದು ತೊಲಿ ಇಂಗು ಇತರ ಹತ್ತು ತೊಲಿ ಇಂಗಿಗಿಂತಲೂ ಮೇಲಾಗಿರುವದು. ಇದು ಔಷಧಿ ವಸ್ತುವಾಗಿರುವದರಿಂದ ಅಜೀರ್ಣ, ಜೀರ್ಣಜ್ವರ, ಹೊಟ್ಟೆಕುಟ್ಟು ಹಿಡಿಯೋಣ, ಮಲೇರಿಯಾ, ಕಾಲರಾ, ಇನ್ಫ್ಲುಎಂಝಾ, ಮುಂತಾದ ರೋಗಬಂಕುಗಳ ಪ್ರತಿಬಂಧವಾಗಿರುವದು. ಉಪ್ಪಿನಕಾಯಿಯಲ್ಲಿ ಉಪಯೋಗಿಸಿದರೆ ಕ್ರಿಮಿಗಳಾಗುವ ಸಂಭವವಿಲ್ಲ. ಇದನ್ನು ಬೇಕಾದಷ್ಟು ಮುಚ್ಚಿಟ್ಟರೂ ವಾಸನೆಯು ಪಸರಿಸದೆ ಇರದು. ಇದನ್ನು ಸಂಗ್ರಹಿಸುವದು ಯೋಗ್ಯವದೆ

ಆರ್ಧ ಔಂಸಿನ ಕಿರಕೋಳ ವಿಕ್ರಿಗೆ ಸೊಯಿಸ್ಕರ ಫ್ಯಾನ್ಸಿ ಡಬ್ಬಿಗಳು.

ಇರಾಣಿ ಪ್ಲಾಸ್ಟರ್ ಇಂಗು.

ಡಜನ ಒಂದಕ್ಕೆ ನಾಲ್ಕು ರೂಪಾಯಿ.

ಡಬ್ಬಿಯು ಒಂದು ಡಜನಕ್ಕಿಂತಲೂ ಕಡಿಮೇ ಹೆಚ್ಚು ಕೊಡೋಣವಿಲ್ಲ. ಎಲ್ಲರಿಗೂ ಪ್ಯಾಕಿಂಗ ಪೋಸ್ಟೇಜ ಮಾಫ ಹೆಚ್ಚು ಮಾಲು ಬೇಡಿಕೊಳ್ಳುವವರು ಪತ್ರವ್ಯವಹಾರ ಮಾಡಬೇಕು. ವ್ಯಾಪಾಸ್ಥರಿಗೆ ಬೋರ್ಡ ಫುಕಟ ಸಿಗುವವು.

ಪತ್ತೆ— ಮೆಸರ್ಸ ಕುಲಗೋಡ ಬ್ರದರ್ಸ ತಾಲೂಕ ಗೋಕಾಕ.

ನೋಟುಗಳು ಹೋಗಿವೆ.

—೦—

ಹುಡುಕಿ ಕೊಟ್ಟವರಿಗೆ ೩೦

ರೂಪಾಯಿ ಇನಾಮು ಕೊಡುವೆವು.

—(೦)—

ಬುಧವಾರ ೮ ನೇ ತಾರೀಖಿನ ದಿವಸ ಸಾಯಂಕಾಲದ ಉಗಿಬಂಡಿಯಿಂದ ನಾನು ಹುಬ್ಬಳ್ಳಿಯಿಂದ ಧಾರವಾಡಕ್ಕೆ ಬರುವಾಗ, ರೇಲ್ವೆಯಲ್ಲಿಯೇ ನಮ್ಮ ಮಾಲಕಿಯ ೧೦೮-೧೦೦ ರೂಪಾಯಿಗಳ ಎರಡು ನೋಟುಗಳು ಬಿದ್ದು ಹೋಗಿವೆ. ಈ ಬಗ್ಗೆ ಹುಬ್ಬಳ್ಳಿಯ ರೇಲ್ವೆಪೋಲೀಸರ ಕಡಿಗೆ ಫಿರ್ಯಾದಿ ಕೊಟ್ಟಿದ್ದೇನೆ. ನೋಟುಗಳ ನಂ. ೭೮೯೧೯೩ ಮತ್ತು ೧೦೮೯೨೦ ಇರುತ್ತವೆ. ಇವನ್ನು ನಮಗೆ ತಂದು ಕೊಟ್ಟವರಿಗೆ ಅವರ ಖರ್ಚು ಅಲ್ಲದೆ ೩೦ ರೂಪಾಯಿ ಇನಾಮು ಕೊಡುವೆವು. ತಿಳಿಯುವದು.

ತಾರೀಖು ೧೧-೮-೨೮

ಗಂಗಪ್ಪಾ ಮಲ್ಲೇಶಪ್ಪಾ ಗಿಲಗಂಚಿ.

ಧಾರವಾಡ.

ನೋಟೀಸಿನ ದರಗಳು.

—೦—

ಸಿಂಗಲ ಕಾಲಮಿನ ಹತ್ತು ಪಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಪಳಿಗೆ ಒಂದುವರಿ ಆಣೆ ಇಂಗ್ಲಿಷ ಪತಿಂ ಒಂದು ಒಳಿಗೆ ಐದು ಆಣೆ ಸರಕಾರಿ, ಮ್ಯುನಿಸಿಪಾಲಿಟಿ ಲೋಕಲಬೋರ್ಡ ರೇಲ್ವೆ ಬ್ಯಾಂಕ ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರಾಣೆ— ಇಂಗ್ಲಿಷದಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರ ಆಣೆ ಡಬಲ್‌ಕಾಲಮಿನ ಒಳಿಗಳಿಗೆ ಇಮ್ಮಡಿ ಚಾರ್ಜ ಕಾಯಂ ಜಾಹಿರಾತುಗಳನ್ನು ಕೊಡುವವರು ಕೆಳಗಿನ ಪತ್ತೇಕ್ಕೆ ಪತ್ರವ್ಯವಹಾರ ಮಾಡಬಹುದು

ಮ್ಯಾನೇಜರ ವಿಜಯ ಧಾರವಾಡ

ಚಂದಾದಾರರಿಗೆ ಸೂಚನೆ

—(೦)—

ಅಗಸ್ಟ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗುವ ನಿಮಿತ್ತ ಮತ್ತು ವಾರ ಪತ್ರದ ಚಂದಾದಾರರ ಹೆಸರಿನಿಂದ ವ್ಹಿ. ಪಿ. ಯನ್ನು ಕಳಿಸುವೆವು. ಚಂದಾದರು ವ್ಹಿ. ಪಿ. ಸ್ವೀಕಾರಮಾಡಿ ವಿಜಯವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಯು.

ಮ್ಯಾನೇಜರ ವಿಜಯ ಧಾರವಾಡ.

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B. 1443

ವಿಜಯ

ನಿತ್ಯ ಪತ್ರ ಬೆಲೆ ಅರ್ಧ ಆಣೆ

ಸಂಪಾದಕರು:- ಆಚಾರ್ಯ ಬಾಳಾಚಾರ್ಯ ಹೊಸಕೇರಿ

ವರ್ಷ ೯) ಧಾರವಾಡ ಶುಕ್ರವಾರ ತಾರೀಖು ೧೭ ನೇ ಆಗಸ್ಟ ೧೯೨೮ (ಸಂಚಿಕೆ ೧೪೭

ದಿ ಜಯಲಕ್ಷ್ಮಿ ಬ್ಯಾಂಕ ಲಿಮಿಟೆಡ, ಧಾರವಾಡ.

ಸ್ಥಳ- ಮಂಗಳವಾರಪೇಟಿ, ಆಶವಲೆ ವಕೀಲ ಪಾಂಡುರಂಗರಾಯರ ಮನೆ.

೧ ಈ ಬ್ಯಾಂಕಿನಲ್ಲಿ ದಾಗೀನೆಗಳ ಮೇಲೆ ಸೋಯಿ ದರದಿಂದ ತುಸು ಮತ್ತು ಒಹಳ ಮುದ್ದತಿಯ, ಠನಳ ಸಣ್ಣ ರಕಮಿನಿಂದ ಬೇಕಾದಷ್ಟು ದೊಡ್ಡ ರಕಮಿನ ಠನಳ ಸಾಲ ದೊರೆಯುವದು. ಬಡ್ಡಿಯ ದರ ಮುಂತಾದ ಸಮಕ್ಷಮ ತಿಳಕೊಳ್ಳಬೇಕು.

೨ ಸರಕಾರಿ ಪ್ರಾಮಿಸರಿ ನೋಟುಗಳ ಖರೀದಿ, ವಿಕ್ರಿ ನಡೆಯುವದು. ಅವುಗಳ ಮೇಲೆ ಸಾಲ ದೊರೆಯುವದು. ಮತ್ತು ಯೋಗ್ಯ ಕಮೀಶನ ತಕ್ಕೊಂಡು ಗಿರಾಕಿಗಳಿಗೆ ಲಾಭಕರವಾಗಿ ಅವುಗಳ ಮಾರಾಟ ಮಾಡಿ ಕೊಡಲ್ಪಡುವದು.

೩ ಮುದ್ದತಿ ಠೇವಿನ ಹಣವನ್ನು ಇಟ್ಟುಕೊಳ್ಳಲಾಗುವದು. ಸ್ವಲ್ಪ ರಕಮಿನಿಂದ ದೊಡ್ಡ ರಕಮಿನ ಠನಳ ಇಟ್ಟುಕೊಳ್ಳಲಾಗುವದು. ಬಡ್ಡಿಯ ದರವನ್ನು ಸಮಕ್ಷಮ ಅಥವಾ ಪತ್ರವ್ಯವಹಾರದಿಂದ ತಿಳಕೊಳ್ಳಬೇಕು.

೪ ಈ ಬ್ಯಾಂಕಿನ ಶೇರುಗಳು ಮಾರಾಟಕ್ಕೆ ದೊರೆಯುವವು.

೫ ಬ್ಯಾಂಕಿಗೆ ಸಂಬಂಧಿಸಿದ ಚಾಲತಿ ವ್ಯವಹಾರ ಮೊದಲಾದ ಎಲ್ಲ ಕೆಲಸಗಳು ನಡೆಯುವವು. ವಿಶೇಷ ಸಂಗತಿಗಳನ್ನು ಆಫೀಸಿನ ವೇಳೆಯಲ್ಲಿ ಸಮಕ್ಷಮ ಅಥವಾ ಪತ್ರವ್ಯವಹಾರದಿಂದ ತಿಳಕೊಳ್ಳಬೇಕೂ

ಕೃಷ್ಣರಾವ ವೆಂಕಟರಾವ ಭಂಡಿವಾಡ.
ಮ್ಯಾನೇಜಿಂಗ ಏಜಂಟ.

-: ಶ್ರೀ ಗುರು ಪ್ರಸನ್ನ :-

ಪ್ರತಿಯೊಬ್ಬ ಕುಟುಂಬಕನು ಅವಶ್ಯ ಸಂಗ್ರಹದಲ್ಲಿಡತಕ್ಕ ಒಂದೇ ಔಷಧ.

ಭಾಸ್ಕರ ಚೂರ್ಣ-

ಸುಪ್ರಸಿದ್ಧ ವನಸ್ಪತಿ ಶಾಸ್ತ್ರಜ್ಞರ ಸೂಚನೆಯ ಮೇರೆಗೆ ಈ ಚೂರ್ಣವು ತಯಾರಿಸಲ್ಪಟ್ಟಿದ್ದು ಇದರ ಸೇವನೆಯಿಂದ ನಾಲ್ಕು ತರದ ವ್ಯಾಯರೋಗಗಳು ತ್ವರಿತದಲ್ಲಿಯೇ ನಾಶಹೊಂದುವವು. ಅಜೀರ್ಣ ಅಪಚನ, ಆಮಾಂಶ, ಅಗ್ನಿಮಾಂದ್ಯ ಸಾಂಗ್ರಹಣಿ, ಹೊಟ್ಟೆಶೂಲೆ, ಹೊಟ್ಟೆನೋವು ಮತ್ತು ಯಾವ ತಹ್ರ ತರದ ಧಾತುವಿಕಾರಗಳ ಮೇಲೆ ಇದೊಂದೇ ರಾಮಬಾಣ ಔಷಧವಿರುವದು. ಒಂದು ಚಿಮುಟಿಗಿಯಷ್ಟು ಈ ಚೂರ್ಣವನ್ನು ಬಾಯಿಯಲ್ಲಿ ಹಾಕಿಕೊಂಡರೆ- ಸಾಕು ಪುನಃ ಅರ್ಧತಾಸಿನಲ್ಲಿಯೇ ಹಸಿವೆಯಾಗುವದು. ಬೇನೆಯಿಂದ ಗುಣವಾಗಿದ್ದ ಅಶಕ್ತ ಮನುಷ್ಯರು ಎರಡನೆ ಶಕ್ತಿವರ್ಧಕ ಔಷಧ ತೆಗೆದುಕೊಳ್ಳುವ ಕಾರಣವೇ ಇಲ್ಲಾ. ಹಳ್ಳಿಗಳಲ್ಲಿಯ ಜನರು ಒಂದು ಭಾಸ್ಕರ ಚೂರ್ಣದ ಡಬ್ಬಿಯನ್ನು ತಮ್ಮ ಹತ್ತರ ಇಟ್ಟುಕೊಂಡರೆ- ಸಾಕು ಯಾವತ್ತು ಬೇನೆಗಳಿಗೆ ಉಪಯೋಗವಾಗುವದು. ಎಷ್ಟು ದಿವಸದ ಅನಾರೋಗ್ಯವಿದ್ದರೂ ಮೂರೇ ದಿವಸಗಳಲ್ಲಿ ಗುಣವಾಗುವದು. ಕೇವಲ ವನಸ್ಪತಿಯಿಂದಲೇ ತಯಾರಿಸಿದ್ದ ಈ ಸಿದ್ಧೌಷಧವನ್ನು ಪ್ರತಿಒಬ್ಬರೂ ಅವಶ್ಯ ಸಂಗ್ರಹದಲ್ಲಿಡತಕ್ಕದ್ದು ಒಂದು ಡಬ್ಬಿಯ ಕಿಮ್ಮತ್ತು ೧೦ ಆ. ಗಿರಾಕರು ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು. ಪೋಸ್ಟೇಜ ಬೇರೆ ಸ್ಪಾ. ಪಾ. ೧ ಆಣೆ.

ಏಜಂಟ:- ಬಿ. ಬಿ. ಟಿಕಾರೆ ಬ್ರಾಂಡ ಸನ್ಸ, ಮಾರ್ಕೆಟರೋಡ ಧಾರವಾಡ.

ದಿ ಧಾರವಾಡ ಅರ್ಬನ ಕೋ ಆಪರೆಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಠೇವಣಿಗೆಯು ಏಳು ಲಕ್ಷದ ಮೇಲುಂಟು. ಚೆಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರ ನಡೆಯುತ್ತಿರುವದು. ಕ್ಯಾಶಿಯರ ಮತ್ತು ಬೇರೆ ತರದ ಠೇವಣಿಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮುದ್ದವರಾವ ಬಿ. ಬಕಾತಿ,
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಒತ್ತೀ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಿಂತಿರುತ್ತದೆ.

ಎ. ಕೆ. ಶೆಟ್ಟಿ
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣೀ ದರ.

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	೧೨-೮-೦ ರೂ.
೬ ,,	೭-೦-೦
೪ ,,	೫-೦-೦
ವಾರ ಪತ್ರಕ್ಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ

ಮ್ಯಾ. ವಿಜಯ ದಾ...

ವಿಜಯ.

ಧಾರವಾಡ ತಾ-೧೭-೮-೨೮ ನೇ ಇಸ್ವಿ

ಶ್ರೀ.

ಆ ವಿಜಯಂ ಶ್ರೀಶಪ್ರಿಯ |
ನೀ ವಸುಮತಿಯ ನಲಿಸಿರೆ ಸುಹಿತಚರಿತೆಗಳಿಂ ||
ದೀ "ವಿಜಯಂ" ಶ್ರೀಶಕರುಣ |
ನಾ ವಿಹಿತಂಗಳ ವಿವರಿಸಿನಲಿವುದು ನಾಜಂ ||೧||

ಇಜಿಪ್ತದಲ್ಲಿ ರಾಜಕೀಯ ಕೋಲಾಹಲ.

ಸರಕಾರದವರು ಪ್ರಜರ ಕಣ್ಣಿಗೆ
ಇಂಗು ಹಚ್ಚಿದರು.

ಇಜಿಪ್ತಕ್ಕೆ ರಾಷ್ಟ್ರೀಯತ್ವವನ್ನು ತಂದು ಕೊಟ್ಟಂಥ ಝಗಲುಲಪಾಶ್ಶಾನು ಸ್ವರ್ಗಸ್ಥನಾದರೂ, ಆತನ ಹೆಂಡತಿಯು ಜೀವಂತಳಿದ್ದಾಳೆ. ಚೀನದ ಸಯ್ಯುತಸೇನನ ಹೆಂಡತಿಯಂತೆ ಇವಳೂ ರಾಷ್ಟ್ರಕಾರ್ಯ ನಿರತಳಾಗಿದ್ದಾಳೆ. ಸದ್ಯ ಆ ದೇಶದಲ್ಲಿ ದಬ್ಬಾಳಿಕೆಯು ನಡೆದಿರುತ್ತದಷ್ಟೇ; ಇದೇ ಸಮಯದಲ್ಲಿ ಪಾಶ್ಶಾನ ಹೆಂಡತಿಯು ವಿಲಾಯತಿಯಿಂದ ಸ್ವದೇಶಕ್ಕೆ ಬರ ಹೊರಟಳು. ಪ್ರಜರು ಇವಳ ಸ್ವಾಗತ ಮಾಡಿ, ಪ್ರಚಂಡ ಮೆರವಣಿಗೆ ತೆಗೆಯಬೇಕೆಂಬ ಅದ್ಭುತ ಸಿದ್ಧತೆ ಮಾಡಿದರು. ಮೆರವಣಿಗೆಯನ್ನು ಬಂದು ಮಾಡುವಂಥ ಎದೆಯು ಸರಕಾರಕ್ಕಿರಲಿಲ್ಲ. ಪ್ರಜರ ಕಣ್ಣಿಗೆ ಇಂಗು ಹಚ್ಚುವ ಯುಕ್ತಿ ಮಾಡಿದರು. ಸ್ವಾಗತಕ್ಕಾಗಿ ಬಂದರದಲ್ಲಿ ಕೂಡಿದ ಜನರು ಬೇಸತ್ತು ತಿರುಗಿ ಹೋಗಲೆಂದು ಹಡಗವು ಮೂರು ತಾಸು ತಡವಾಗಿ ಬರುವಂತೆ ಹಡಗದ ಕಪ್ತಾನನಿಗೆ ವಿದ್ಯುತ್ಸಂದೇಶದಿಂದ ತಿಳಿಸಿದರು. ತಡವಾದಂತೆ ನಾಗರಿಕರ ಸಂಖ್ಯೆಯು ಹೆಚ್ಚಾಯಿತಲ್ಲದೆ, ಕಡಿಮೆಯಾಗಲಿಲ್ಲ. ಈ ವಿಚಾರವು ಮೈಮೇಲೆ ಬಂದದ್ದನ್ನು ಕಂಡು, ಜನರ ಕಣ್ಣಿಗೆ ಇಂಗು ಹಚ್ಚುವ ಯುಕ್ತಿ ಮಾಡಿದರು. ಅದು ಮಾತ್ರ ಸಿದ್ಧಿಗೆ ಹೋಯಿತು. ಸುಲ್ತಾನರ ಹೆಂಡತಿಯ ಅಣ್ಣನು ಉಗಿಯ ಸ್ಟೀಶಲ ಹಡಗೋಲಿನಲ್ಲಿ ಹೋಗಿ, ಪಾಶ್ಶಾಯಿಣಿಯನ್ನು ಕಂಡು, ನಿನಗೇ ಸುರಕ್ಷಿತೆಯ ಮಾತು ಹೇಳುತ್ತೇನೆ. ಪಟ್ಟಣದ ಮಧ್ಯಮಾರ್ಗದಿಂದ ನಿನ್ನ ಮನೆಗೆ ಹೋಗಬೇಡ ಅಡ್ಡದಾರಿಯಿಂದ ನಡೆ. ನಿನ್ನನ್ನು ನಾವು ಸೌಖ್ಯವಾಗಿ ಮನೆ ಮುಟ್ಟಿಸುತ್ತೇವೆಂದು ಹೇಳಿದನು. ಇಂಥ ಸವಿಮಾತಿಗೆ ಮರುಳಾಗುವಷ್ಟು ದಡ್ಡಿಯು ಆ ಹೆಣ್ಣುಮಗಳಿರಲೇ ಇಲ್ಲ. ನಾನು ಏಕಾಂಗಿಯಾಗಿರಲಾರೆನು. ನನ್ನ ರಾಷ್ಟ್ರದ ಕೂಡ ಇರತಕ್ಕವಳು ಎಂದು ಉತ್ತರ ಕೊಟ್ಟಳು. ಹೀಗೆ ಉತ್ತರ ದೊರೆತ ಬಳಿಕ, ಸುಲ್ತಾನರ ಬೀಗನಾದ ಶಕಾರನು ಇವಳನ್ನು ಒತ್ತಾಯದಿಂದ ತನ್ನ ಹಡಗೋಲಿನಲ್ಲಿ ಕೂಡಿಸಿಕೊಂಡು ಹೋಗಲಿಕ್ಕೆ ಅಪ್ಪಣೆಯಾಗಿದೆಂದನು. ಗವ್ಹರ್ನರನು ಬಂದು, ನೀವು ಇಳಿದು ಹೋದ ವಿನಹ ಹಡಗವು ದಂಡೆಗೆ ಹತ್ತಲಾರದು. ಸಾವಿರಾರು ಪ್ರಯಾಣಿಕರಿಗೆ ಅನಾನುಕೂಲತೆಯನ್ನುಂಟು ಮಾಡಬೇಡಿರೆಂದು ಬಿನ್ನಹ ಮಾಡಿಕೊಂಡನು. ಪಾಶ್ಶಾಯಿಣಿಯು ನಿರುಪಾಯಳಾಗಿ ಶಕಾರನ ಕೂಡ ಹಡಗವಿಳಿದು, ಸ್ಟೀಮಲಾಂಚದಲ್ಲಿ ಕೂತಳು. ಇವಳನ್ನು ಬಂದರದ ಬೇರೊಂದು ಅಡ್ಡ ಬದಿಯಲ್ಲಿಳಿಸಿಕೊಂಡು, ದರಿದ್ರ ಸ್ಟೇಶನದಲ್ಲಿ ಉಗಿಬಂಡಿ ಹತ್ತಿಸಿ ಕೆರೊ ಪಟ್ಟಣಕ್ಕೆ ತಂದು ಬಿಟ್ಟರು. ರೇಲ್ವೆಯ ದಾರಿಗುಂಟ ಪ್ರತಿಯೊಂದು ಸ್ಟೇಶನದಲ್ಲಿಯೂ ದಂಡಿನ ಬಂದೋಬಸ್ತು ಇಟ್ಟಿದ್ದರು.

ಕಾಬೂಲ ರಾಜ್ಯದಲ್ಲಿ ರೇಲ್ವೆ.

—(೦)—

ಜರ್ಮನ ಕಂಪನಿಗಳಿಗೆ ಗುತ್ತಿಗೆ.

—(೦)—

ಅಫಗಾಣ ಸರಕಾರದವರು ತಮ್ಮ ರಾಜ್ಯದಲ್ಲಿ ರೇಲ್ವೆ ಹಾಕುವರು. ರೇಲ್ವೆಗಾಗಿ ಬೇಕಾಗುವ ಬಂಡವಲವನ್ನು ರಾಜಕೀಯ ಇಕ್ಕಟ್ಟಿನಲ್ಲಿ ಸಿಗದಂಥ ಯಾವನೊಂದು ದೇಶ ಅಂದರೆ- ಬಹುಶಃ ಅಮೇರಿಕೆಯಿಂದ ಸಾಲವಾಗಿ ತಕ್ಕೊಳ್ಳುವರೆಂದು ಉಸುರೆಡೆದಿತ್ತು. ಆನಂತರ ಫ್ರೆಂಚ ಇಂಜಿನಿಯರರು ಕಾಬೂಲಕ್ಕೆ ಬಂದಿದ್ದಾರೆಂತಲೂ, ಅವರು ರೇಲ್ವೆ ಹಾಕುವದಲ್ಲದೆ, ಬಂಡವಲ ಸಹ ಕೂಡಿಸುವರೆಂದೂ ಒಂದು ವರ್ತಮಾನ ಪ್ರಸಿದ್ಧವಾಯಿತು. ಇವರು ಈ ಪ್ರಕಾರ ಪ್ರಯತ್ನಿಸುತ್ತಿರುವಾಗ ಅಮೀರಸಾಹೇಬರು ಈ ಕೆಲಸವನ್ನು ಜರ್ಮನ ಇಂಜಿನಿಯರರಿಗೂ, ಕಾರಖಾನೆಯವರಿಗೂ ಒಪ್ಪಿಸಿದ್ದಾರೆಂದು ಖಚಿತವಾದ ವರ್ತಮಾನ ಪ್ರಸಿದ್ಧವಾಗಿದೆ. ರೇಲ್ವೆಗೆ ಬೇಕಾದ ಹಳಿ, ವ್ಯಾಗನ, ಡಬ್ಬಿ, ಇಂಜಿನು ಮುಂತಾದ ಯಾವತ್ತು ಸಾಮಾನುಗಳನ್ನು ಕಾರಖಾನೆಯವರೇ ಪೂರೈಸುವರು. ರೇಲ್ವೆಯಾಗುವವರೆಗೆ ಹತ್ತುವ ವೆಚ್ಚವನ್ನೂ ನೋಡಿಕೊಳ್ಳುವರು. ಆ ವಿಚಾರರು ಸಾಹುಕಾರನ ಹಂಗಿನೊಳಗೆ ಸಿಗಬಾರದೆಂದು ಈ ಯುಕ್ತಿ ಮಾಡಿದ್ದು ನಿಜವಾದ ಮುತ್ಸದ್ದಿತನವೇ ಸೈ.

ಸುರತದಲ್ಲಿ ಅಪೂರ್ವ ಸಮಾರಂಭ.

—(೦)—

ಬಾರಡೋಲಿಯ ಸತ್ಯಾಗ್ರಹದ ಕಾರ್ಯ ಮುಗಿದದ್ದರಿಂದ ಮಹಾತ್ಮರೂ, ಸರದಾರ ಪಟೇಲರೂ ಅಹಮದಾಬಾದಿಗೆ ಹೋಗಲು ಪ್ರಯಾಣ ಬೆಳೆಸಿದರು. ಈ ಸಮಯ ಸಾಧಿಸಿ, ಸುರತವಾಸಿಗಳು ಮಹಾತ್ಮರಿಗೂ, ಸರದಾರ ಪಟೇಲರಿಗೂ ಮಾನಪತ್ರ ಕೊಡುವ ಅಪೂರ್ವ ಸಮಾರಂಭ ಮಾಡಿದರು. ಇವರೂ, ೧೨೦೦ ಸ್ವಯಂಸೇವಕರೂ, ದೀಕ್ಷೆ ಹೊಂದಿದ ಸ್ವಯಂಸೇವಕರೂ ಉಗಿಬಂಡಿಯಿಂದ ಸುರತಕ್ಕೆ ಬಂದರು. ನಿಲ್ದಾಣದಲ್ಲಿ ಅಪೂರ್ವ ಸ್ವಾಗತವಾಯಿತು. ಅಲ್ಲಿಂದ ತಾಪಿ ಹೊಳೆಯ ವಿಸ್ತಾರವಾದ ಉಸುಬಿನ ಬೈಲಿನಲ್ಲಿ ಸಾರ್ವಜನಿಕ ಸಭೆ ಕೂಡಿತ್ತು. ೪೦ ಸಾವಿರ ಜನರು ಕೂಡಿದ್ದರು. ಮಹಾತ್ಮರಿಗೂ, ಸರದಾರ ಪಟೇಲರಿಗೂ ಮಾನಪತ್ರ ಕೊಟ್ಟು ೧೦೦೧ ರೂಪಾಯಿಗಳ ಥೈಲಿಯನ್ನು ಕಾಣಿಕೆ ಕೊಟ್ಟರು. ಮಹಾತ್ಮರು ಈ ಜನಸಮೂಹಕ್ಕೆ ಒಂದು ಸವಾಲು ಹಾಕಿದರು. ನೀವು ಸ್ವರಾಜ್ಯಬೇಕೆನ್ನುತ್ತೀರಿ; ರಾಮರಾಜ್ಯವಾಗಬೇಕೆನ್ನುತ್ತೀರಿ. ಆದರೆ- ಇಂಗ್ರೇಜಿ ಕೋರ್ಟುಗಳಿಗೆ ಹೋಗುತ್ತೀರಿ. ನಿಮ್ಮ ಜಗಳವನ್ನು ನಿಮ್ಮ ಕೊಡತಕ್ಕೊಳ್ಳುವದನ್ನು ನೀವೇ ಏಕೆ ತೀರಿಸಿಕೊಳ್ಳಬಾರದು ಪ್ರತಿಯೊಂದು ಕೆಲಸದಲ್ಲಿಯೂ ಸರಕಾರ. ಜಾಗಿಲ ಕಾಯಿದೆ ಸ್ವತಂತ್ರ ವೃತ್ತಿಯಿಂದ ನಡೆಸಿರೆ- ನಿಮಗೆ ಸ್ವರಾಜ್ಯ ದೊರೆಯುವದು. ಅಸ್ತು ಸಭೆಯ ಕೆಲಸ ತೀರಿದ ಬಳಿಕ, ಮಹಾತ್ಮರು ಸಾಬರಮತಿಗೆ ಪ್ರಯಾಣ ಬೆಳೆಸಿದರು. ಮರು ದಿವಸ ಅಸ್ಪೃಶ್ಯರೇ ಮೊದಲಾಗಿ ಎಲ್ಲ ಕುಲಗಳ ಜನರ ಒಂದು ಸಾವಿರ ಜನರ ಪ್ರೀತಿ ಭೋಜನವಾಯಿತು.

ಬುದ್ಧ ಧರ್ಮದಲ್ಲಿ ಆತ್ಮಹತ್ಯವು ಪಾಪವಲ್ಲ.

—೦—

ಬುದ್ಧಧರ್ಮದಲ್ಲಿ ಆತ್ಮಹತ್ಯ ಮಾಡಿಕೊಳ್ಳುವದು ಪಾಪವೇ ಎಂಬ ಚರ್ಚೆಯು ಕೊಲಂಬೋದಲ್ಲಿ ನಡೆಯಿತು. ಭಾಸ್ಕರ ಪೆರಿಯರಾ ಎಂಬವರು ಇದರ ಸ್ಪಷ್ಟೀಕರಣ ಮಾಡಿದ್ದಾರೆ. ಆತ್ಮಹತ್ಯವು ಪಾಪವಲ್ಲ; ಅಪಮಾನದ ಲಜ್ಜೆಯು ಪಾಪವಲ್ಲ; ಅಪಮಾನದ ಕೃತ್ಯವಲ್ಲ; ಮನುಷ್ಯನಿಗೆ ಆಪಾದನೆ ಬಗ್ಗೆ ಹೋಗುವ ಆತನ ಕರ್ತವ್ಯ ಮತ್ತು ಯೋಗ್ಯತೆಯ ಪರಿಸ್ಥಿತಿಯನ್ನು ಅವಲಂಬಿಸಿರುತ್ತದೆ. ಬೌದ್ಧಧರ್ಮ ಪ್ರಕಾರ ಸ್ವತಃ ಜೀವಕ್ಕೆ ಮಹತ್ವವಿರುವದಿಲ್ಲ. ಕರ್ಮ ಮತ್ತು ಗುಣದಿಂದ ಮಹತ್ವ ಬರುವದು. ಎಂಬುದಾಗಿ ಪೆರಿಯಾಸಾಹೇಬರು ಹೇಳುತ್ತಾರೆ.

ಮಳೆಯಿಲ್ಲದೆ, ಸಿಂಧ ನದಕ್ಕೆ ಮಹಾಪೂರು.

—(೦)—

ಸಿಂಧನದಿಗೆ ಹಿಮಾಲಯದಲ್ಲಿ ಕೂಡುವ ಸಹೂಕ ಎಂಬ ಹೊಳೆಗೆ ಮಹಾಪೂರು ಬಂದು, ಅದರ ಭಯಂಕರ ಅನಿಷ್ಟ ಪರಿಣಾಮವು ಸಿಂಧ ನದಿಯ ದಂಡೆಯ ಮೇಲಿರುವ ಗ್ರಾಮಗಳಿಗಾಗಿರುತ್ತದೆ. ಸಹೂಕ ಹೊಳೆಯು ಹಿಮಾಲಯದ ತಪ್ಪಲದಲ್ಲಿರುವದು. ಇದು ಕಾರಕೆಂದ ಹೊಳೆಯ ಉಗಮಸ್ಥಾನದಲ್ಲಿಯೇ ಇರುವದು. ಸಾಯಕ ನದಿಯು ಹರಿಯುವ ಹಿಮಾಲಯದ ಬಾರಿಯು ಕೊನ್ನಾರದ್ದಾಗಿದೆ. ಈ ಕೊನ್ನಾರದಲ್ಲಿ ಬರ್ಫದ ಒಂದು ಗುಡ್ಡವು ಕತ್ತರಿಸಿ, ದೊಡ್ಡ ಸರೋವರ ಮಾಡಿತು. ಸರೋವರವು ಸಾಮಾನ್ಯವಲ್ಲ. ಸಮುದ್ರವೇ ಸೈ. ಈ ಪ್ರಕಾರ ಸರೋವರವಾದ ಸ್ಥಳವು ಶ್ರೀನಗರದಿಂದ ೧೬೦ ಮೈಲುಗಳ ಮೇಲುಂಟು. ಈ ಸರೋವರವು ಈಗ ಒಡೆದು ೧೭೦೦೦ ಫೂಟು ಎತ್ತರದಿಂದ ಪರ್ವತಪ್ರಾಯವಾಗಿ ನೀರು ಹೊರಬಿದ್ದಿದೆ. ಇದರಿಂದ ನದಿಯ ದಂಡೆಗುಂಟ ಇರುವ ಊರುಗಳ ಜನರು ಗಾಬರಿಯಾಗಿ, ಗುಳೇ ಹೋಗಲಾರಂಭಿಸಿದ್ದಾರೆ. ಪೋಲೀಸರೂ ದಂಡಿನವರೂ ಹೊಳೆಯ ದಂಡೆಗುಂಟ ಕಾವಲಿದ್ದು, ದೊಡ್ಡ ದೊಡ್ಡ ಸರ್ಚ ಲಾಯಿಟವೆಂಬ ದೀಪಗಳ ಪ್ರಕಾಶದಿಂದ ರಾತ್ರಿಯಲ್ಲಿ ನದಿಯು ಏರಿಬರುವದನ್ನು ಕಾಯುತ್ತಲಿದ್ದಾರೆ. ಕಾಶ್ಮೀರ ರಾಜ್ಯದಲ್ಲಂತೂ ಗುಡ್ಡಗಳ ಮೇಲೆ ಉರಿ ಎಬ್ಬಿಸಿ, ಜನರಿಗೆ ಎಚ್ಚರಿಕೆ ಕೊಡುತ್ತಿದ್ದಾರೆ. ನದಿಯು ಈಗ ಅಟಕದ ತನಕ ಬಂದಿದ್ದು, ಅದರ ಜಗತ್ಪ್ರಸಿದ್ಧ ಸೇತುವೆಗೆ ಎಲ್ಲಿ ಅಪಾಯವಾದೀತೆಂಬ ಭಯವಾಗಿದೆ.

ಅಸ್ಪೃಶ್ಯರಿಗೆ ದೇವರ ಗುಡಿಯಲ್ಲಿ ಪ್ರವೇಶ.

—(೦)—

ಪಂಡಿತ ಮಾಲವೀಯಾ ಮತ್ತು ಜಮುನಾಲಾಲ ಬಜಾಜರ ಸಹಾಯ

—೦—

ಅಸ್ಪೃಶ್ಯರಿಗೆ ದೇವರ ಗುಡಿಯಲ್ಲಿ ಪ್ರವೇಶವಿರಬೇಕೆಂದು ಅತಿಶಯ ಸುಧಾರಕರಾದ ಪಂಡಿತ ಮಾಲವೀಯರ ಮತವಾಗಿದೆ. ಕಾಶಿಯಲ್ಲಿ ಲಕ್ಷ್ಮೀನಾರಾಯಣನ ಗುಡಿಯಲ್ಲಿ ಇವರಿಗೆ ಪ್ರವೇಶ ದೊರೆಯಿತು. ಹಿಂದುಸ್ಥಾನದ ತುಂಬ ಈ ಬಗ್ಗೆ ಪ್ರತಿಯೊಂದು ಪಟ್ಟಣ ಮತ್ತು ದೇವಸ್ಥಾನದಲ್ಲಿ ಚಳವಳಿ ಮಾಡಬೇಕೆಂದು ಜಮುನಾಲಾಲ ಬಜಾಜರು ಹೇಳುತ್ತಾರೆ. ಎಲ್ಲಾ ಜನರೂ ಪಿಸ್ತ್ರಬಂಕಿರ್ತಿ ಸತ್ಯಾಗ್ರಹ ಮಾಡಬೇಕೆಂದು ಇವರ ಮತವು.

ಕ್ರಿಶ್ಚನ್ನರಿಗೆ ಡಾಯರ್ಕಿ ಬೇಡ; ಸ್ವತಂತ್ರ ಚುನಾವಣೆ ಬೇಡ.

—(೦)—

ಪಂಜಾಬ ಇಲಾಖೆಯ ಕ್ರಿಶ್ಚನ್ನರು ಸಾಯಮನ್ನ ಕಮಿಶನಕ್ಕೆ ತಮಗೆಂಥ ಸ್ವರಾಜ್ಯಬೇಕೆಂಬ ಪತ್ರಿಕೆಯನ್ನು ಕಳಿಸಿದ್ದಾರೆ. ಯಾವದೇ ಜನಾಂಗವಾಗಲಿ; ವಸಾಹತಿನ ಸ್ವರಾಜ್ಯದ ಕೆಳಗೆ ಮಾತಾಡುವದಿಲ್ಲೆಂಬದೊಂದು ಸಂತೋಷ. ಇವರು ಡಾಯರ್ಕಿ ಎಂಬ ದ್ವಿದಳ ದೊರೆತನವನ್ನು ತೆಗೆದು ಹಾಕಿ, ಗೌರ್ನರರ ಮಂತ್ರಿ ಮಂಡಲವು ಲೋಕಸತ್ತಾತ್ಮಕವಾಗಬೇಕೆಂದಿದ್ದಾರೆ. ಹೋಟರರ ಸಂಖ್ಯೆಯನ್ನು ಹೆಚ್ಚಿಸಬೇಕಲ್ಲದೆ, ಮುಂಬರೂ ತಿಸಿಜ ಆಗಬೇಕೆಂದಿದ್ದಾರೆ. ಅಲ್ಲಿ ಹಿಂದೂ ಮುಸಲಮಾನ, ಮತ್ತು ಶೀಖರಿಗೆ ಸ್ವತಂತ್ರ ಚುನಾವಣೆಯ ಹಕ್ಕುಂಟು. ಈ ಭೇದವನ್ನೇ ತೆಗೆದು ಹಾಕಬೇಕು. ಸದ್ಯ ಮಿಶ್ರ ಚುನಾವಣೆಯು ಶಕ್ಯವಿರದಿದ್ದರೆ ಎರಡು ಪ್ರಕಾರದ ಕೌನ್ಸಿಲ ಸಭೆಗಳನ್ನು ಮಾಡಬೇಕು. ಮೊದಲನೆಯದು ಕಾಮನ್ಸದಂಥ ಸಭೆಯಲ್ಲಿ ಜಾತಿಭೇದವಿರಲೇ ಕೂಡದು. ಎರಡನೆಯ ಸಭೆಯಲ್ಲಿ ಮಾತ್ರ ಜಾತಿಗಳ ಹಿತರಕ್ಷಣೆಯಾಗುವಂಥ ಚುನಾವಣೆಯಾಗಬೇಕು. ಚುನಾವಣೆಯು ಮಿಶ್ರವಾಗಿರಬೇಕು. ಇಂಥ ಪ್ರಸಂಗದಲ್ಲಿ ಕ್ರಿಶ್ಚನ್ನರಿಗಾಗಿ ಎಂಟು ಸ್ಥಳಗಳನ್ನು ಕಾದಿಡಬೇಕು. ಎಂಬದಾಗಿ ಅಂದಿರುತ್ತಾರೆ.

ಬೆಂಗಳೂರಿನ ಸುದ್ದಿಗಳು.

ಒಬ್ಬ ಮುಸಲಮಾನನು ಚಿಕ್ಕಾಜಿರಾಯರೆಂಬ ಕಚೇರಿಯ ಕಾರಕೂನನನ್ನು ಹೊಡೆದಿದ್ದಾನೆ. ಫಿರ್ಯಾದಿಯನ್ನು ಹಿಂದಕ್ಕೆ ತಕ್ಕೊಳ್ಳುವ ಹಾಗೆ ಈತನ ಮೇಲೆ ಒತ್ತಾಯ ನಡೆದಿದೆ. ದುಡ್ಡು ಕೊಡುವ ಆಶೆಯನ್ನೂ ತೋರಿಸುತ್ತಿದ್ದಾರೆ.

ವಿದ್ಯಾರ್ಥಿಗಳು ಸಂಪಿನಲ್ಲಿ ಸೇರಿದರೆಂದು ಮೈಸೂರ ಕಾಲೇಜದ ಪ್ರಿನ್ಸಿಪಾಲರು ಕೆಲವರಿಗೆ ಐದು ದಿವಸಗಳ ಗೈರ ಹಾಜರಿ ಹಾಕಿದ್ದಾರೆ.

ಪುಣೆಯಲ್ಲಿ ಲಾ ಕಾಲೇಜದಲ್ಲಿ ಓದುತ್ತಿರುವ ಮೈಸೂರ ದೇಶದ ವಿದ್ಯಾರ್ಥಿಗಳು ಸಭೆ ಮಾಡಿ, ದರಬಾರಿನ ಅಧಿಕಾರಿಗಳ ಕೃತ್ಯವನ್ನು ನಿಷೇಧಿಸಿದರು.

ದರಬಾರಿನವರು ಕೆಲ ವರ್ತಮಾನಪತ್ರಗಳನ್ನು ಬಂದು ಮಾಡಿದ್ದು, ಅನವಶ್ಯಕ ಮತ್ತು ಅಪ್ರಯೋಜಕ ಕೃತ್ಯವೆಂದು ವಕೀಲ ಸಭೆಯವರು ಠರಾವು ಪಾಸ ಮಾಡಿದ್ದಾರೆ.

ವಿವಿಧ ವರ್ತಮಾನಗಳು.

—(೦)—

ಬಾರಡೋಲಿಯ ಸತ್ಯಾಗ್ರಹದಲ್ಲಿ ಜಯ ಸಂಪಾದಿಸಿ ಮಾಡಿದ ಬಗ್ಗೆ ಅಹಮದಾಬಾದಿನ ನಾಗರಿಕರೂ, ಮ್ಯುನಿಸಿಪಾಲಿಟಿಯವರೂ ಸರದಾರ ಪಟೇಲರಿಗೆ ಮಾನಪತ್ರ ಕೊಡಬೇಕೆಂಬ ವಿಚಾರ ನಡೆದಿದೆ. ಸರದಾರರಿಗೆ ವಳಸ ಮಾಡುವದರಿಂದ ತಮ್ಮ ಮಾನವನ್ನು ಕಾಪು ಮಾಡಿಕೊಂಡಂತಾಗುತ್ತದೆ. ಅವರು ಮಾನಾತೀತರಾಗಿದ್ದಾರೆ.

ಬಾರಡೋಲಿಯ ಒಡಂಬಡಿಕೆಯ ದೆಸೆಯಿಂದ ಪಟೇಲರಿಗೂ ಗವರ್ನರಸಾಹೇಬರಿಗೂ ಒಂದೇ ಸ್ಥಳ ಮತ್ತು ಒಂದೇ ವೇಳೆಯಲ್ಲಿ ಮಾನಪತ್ರ ಕೊಡಬೇಕೆಂದು ಪುಣೆಯ ಸಬರ್ಬನ ಮ್ಯುನಿಸಿಪಾಲಿಟಿಯವರು ಆಲೋಚಿಸಿದ್ದಾರೆ.

ಹಾಯಕೋರ್ಟಿನ ಜಡ್ಜರಾಗಿದ್ದ ಸರ ಚೀಮನಸಾಹೇಬರೂ ಜತ್ತಿ ಸಂಸ್ಥಾನದ ಚೀಫರಾದ ಶ್ರೀಮಂತ ಅಬಾಸಾಹೇಬ ಡಫಳೆಯವರೂ ವಿಷಮಜ್ವರದಿಂದ ಪರಲೋಕವಾಸಿಯಾದರೆಂದು ಬರೆಯುವದಕ್ಕೆ ವಿಷಾದಿಸುತ್ತೇವೆ.

ವಿಜಾಪೂರ ಜಿಲ್ಹೆಯ ಡಿ. ಲೋ. ಬೋರ್ಡಿನ ಕಮೀಟಿಯಿಂದ ದಂಡ, ಹಿಂಬಡತಿ ವರ್ಗ ಮುಂತಾದ ಅನ್ಯಾಯದ ವ್ಯಥೆಗಳಿಗೆ ಕಾರಣವಾದ ಶಿಕ್ಷಕರ ಪ್ರಕರಣ ಕಾಗದಪತ್ರಗಳನ್ನು ವಿದ್ಯಾಖಾತೆಯ ಇನ್ಸಪೇಕ್ಟರರು ತಮ್ಮ ಕಡೆಗೆ ತರಿಸಿಕೊಂಡಂತೆ ತಿಳಿಯುತ್ತದೆ.

ನಾಗಪೂರ ಇಲಾಖೆಯ ಮಂತ್ರಿದ್ವಯರಾದ ರಾಘವೇಂದ್ರರಾವ ಮತ್ತು ಬ್ಯಾರಿಸ್ಟರ ದೇಶಮುಖರು ಸಾಯಮನ್ನ ಕಮಿಶನಕ್ಕೆ ಬಹಿಷ್ಕಾರ ಹಾಕಬೇಕೆಂಬ ತತ್ವದ ದೆಸೆಯಿಂದ ಮಂತ್ರಿ ಪದಕ್ಕೆ ರಾಜೀನಾಮೆ ಕೊಡುವರು.

ಪಂಜಾಬದಲ್ಲಿ ಮಳೆಯಿಲ್ಲ; ಬಿಸಿಲು ವಿಪರೀತವಾಗಿ ಕಾಯುವದು. ಬೆಳೆಗಳು ಒಣಗಿದವು. ಆದ್ದರಿಂದ ರೈತರು ತಂಡತಂಡವಾಗಿ ಗ್ರಾಮತ್ಯಾಗ ಮಾಡುತ್ತಿದ್ದಾರೆ.

ಶಿರ್ಶಿಯಲ್ಲಿ ಪ್ರಸಿದ್ಧ ವರ್ತಕರೂ ಒಮ್ಮೆ ಮ್ಯುನಿಸಿಪಾಲಿಟಿಯ ಅಧ್ಯಕ್ಷರೂ ಆಗಿದ್ದ ಎಂ. ಹೇಮ.ಶೆಟ್ಟಿಯವರು ಪರಲೋಕವಾಸಿಯಾದರೆಂದು ಬರೆಯುವದಕ್ಕೆ ವಿಷಾದಿಸುತ್ತೇವೆ.

ನೋಟೀಸು

ನಾವು ಕೆಳಗೆ ಸಹಿ ಮಾಡುವವರು ಯಾವತ್ತು ಜನರಿಗೆ ತಿಳಿಸುವದೇನೆಂದರೆ- ಗದಗ ತಾಲೂಕ ಸೊರಟೂರಲ್ಲಿ ಇರುವ ನಮ್ಮ ಖಾಸ ತಂದಿ ವಾಸುದೇವ ಶ್ರೀನಿವಾಸ ಪಡಣೀಸ ಎಂಬುವವರು ಇದ್ದು ಅವರಿಗೆ ಈಗ ವಯಸ್ಸು ಆಗಿದ್ದು ಅವರಿಗೆ ಬಹಳ ದಿವಸದ ಲಾಗಾಯತು ಪಕ್ಷ ವಾಯು ಇದ್ದು ಈ ಬೇನೆಯಿಂದ ಅವರ ತಲಿ ಒರೋಬರಿಯಿಲ್ಲದೆ ಇದ್ದದರಿಂದ ಅವರನ್ನು ನಮ್ಮ ಊರಲ್ಲಿ ಇರುವ ಸಮಗೆ ಆಗದವರು ತಮ್ಮ ಮನಿಗೆ ನಾವು ಇಲ್ಲದ ವೇಳೆಯಲ್ಲಿ ಕರಕೊಂಡು ಹೋಗಿರತಾರೆ ಅವರು ಹೋಗುವಕಾಲಕ್ಕೆ ಬೆಳ್ಳಿ, ಭಂಗಾರದ ದಾಗೀನೆ ವ ರೋಖ ರೂಪಾಯಿಗಳನ್ನು ಸಹ ತಗೊಂಡು ಹೋಗಿರತಾರೆ ನಾವು ಎಷ್ಟು ರೀತಿ ಕರದರೂ ಅವರು ಕಳಿಸವಲ್ಲರು ಕಾರಣ ಈ ನೋಟೀಸಿನಿಂದ ತಿಳಿಸುವದೇನಂದರೆ- ನಮ್ಮ ಆಸ್ತಿ ಅಂದರೆ ಜಮೀನುಗಳು ಸದರ ನಮ್ಮ ತಂದಿ ಹೆಸರಲೇ ಇದ್ದು ಜಮೀನಿ ವಹಿವಾಟ ನಾವು ಮಾಡತೇವೆ ಜಮೀನ ನಮ್ಮ ತಾಬಾದಲ್ಲಿ ಅವೆ ಹೀಗಿದ್ದು ನಮ್ಮ ತಂದಿ ಪ್ರಕೃತಿ ಒರೋಬರಿ ಇಲ್ಲದ್ದರಿಂದ ನಮ್ಮ ಆಗದಾರ ಮಾತಿನ ಮೇಲಿಂದ ನಮ್ಮ ಆಸ್ತಿ ತಮ್ಮ ಹೆಸರಲೇ ಇದ್ದದವು ಖರೀದಿ ಪತ್ರಿ ವಗೈರೆ ಯಾವದೇ ರೀತಿ ವಿಲೇವಾಟ ಮಾಡಿದರೆ ಅವನ್ನು ಯಾರೂ ತಗೋಬಾರದು ತಗೊಂಡರೆ ಆ ಆಸ್ತಿ ಮೇಲೆ ಯಾರದೂ ಯಾವ ತರಹದ ಹಕ್ಕೂ ಸಹ ನಡಿಯಲಿಕ್ಕಿಲ್ಲ ತಿಳಿಯುವದು ತಾ|| ೧೭—೮—೩೪ ನೇ ಇಸ್ವಿ

ಸಹಿ- ರಾಘವೇಂದ್ರರಾವ ವಾಸುದೇವ ಪಡಣೀಸ ಸೊರಟೂರ

ಕುಶಾಲ ವಾಸುದೇವ ಪಡಣೀಸ ಸೊರಟೂರ

ನೋಟೀಸು

ಬಂದಿ ಕೋಂ ಫಕೀರಪ್ಪಾ ಮುಂಶ್ರೋಡಿ ಸಾ|| ಗಂಜೀಗಟ್ಟಿ ಹಾಲಿವಸ್ತಿ ಬನ್ನಿಕೊಪ್ಪ ತಾ|| ಬಂಕಾಪೂರ ಇವಳಿಗೆ-

ಕೆಳಗೆ ಸಹಿ ಮಾಡಿದವರಿಂದ ತಿಳಿಸುವದೇನಂದರೆ ನೀನು ನನ್ನ ಲಗ್ನದ ಹೆಂಡತಿ ಇದ್ದು ಮಿಸರಿತ ೨-೩ ವರ್ಷಗಳ ವರೆಗೆ ಸುರಳೀತ ರೀತಿಯಿಂದ ಬಾಳ್ವೆ ಮಾಡಿಕೊಂಡು ಒಂದಿ ಅಜಮಾಸ ಸಂದು ವರ್ಷದ ಹಿಂದೆ ನಿನ್ನ ಅಣ್ಣನು ಬಂದು ಲಗ್ನಕ್ಕೆ ಅಂತಾ ಕರಕೊಂಡು ಹೋದನು ಅವಾಗ್ಗೆ ಇಲ್ಲಿಂದ ಹೋಗುವ ಕಾಲಕ್ಕೆ ನಿನ್ನ ಮೈಮೇಲೆ ಇದ್ದ ದಾಗಿನೆಗಳ ತಪಸೀಲು.

ಭಂಗಾರ ಸರಗಿ ಅ. ತೊ. ೯ ಕಿ. ರೂ. ೧೮೦

ಬಂಗಾರ ಬಳಿ ಅ ತೊ ೬ ಕಿ. ರೂ. ೧೫೦

ಈ ಪ್ರಕಾರ ಸಾಮಾನುಗಳನ್ನು ತಗೊಂಡು ಹೋದಿ ನಂತರ ನಾನು ೨-೩ ಸಾರೆ ಕರಿಯಲಿಕ್ಕೆ ಬಂದರೆ ನಿನ್ನ ಅಣ್ಣನು ನನ್ನ ದ್ವೇಷಿಕರ ಮಾತು ಕೇಳಿ ಕಳಿಸಲಿಕ್ಕೆ ಅನುಕೂಲ ಮಾಡದೆ ದುಷ್ಟ ಮಾತುಗ ಳಾಡಿದಾ ಕಾರಣಾ ನೀನು ಈ ನೋಟೀಸು ಮುಟ್ಟಿದ ೮ ದಿವಸಗಳಲ್ಲಿ ಸದರ ದಾಗೀನೆಗಳನ್ನು ತಗೊಂಡು ಬಂದು ಸರಳೀತ ರೀತಿಯಿಂದ ಬಾಳ್ವೆ ಮಾಡಿಕೊಂತಾ ಹೋಗಬೇಕು ಇಲ್ಲದಿದ್ದರೆ ಇದೇ ನೋಟೀಸಿನ ಅಂತಾ ತಿಳಿಯಬೇಕು ಸದರ ದಾಗಿನೆಗಳ ಬಗ್ಗೆ ದಿವಾಣಿಯಲ್ಲಿ ಫಿರ್ಯಾದ ನಡಿಸಲಾಗುವದು. ಈ ನೋಟೀಸಿನ ಖರ್ಚು ನಿನ್ನ ತಲಿಯ ಮೇಲೆ ಅದೆ ಅಂತಾ ಕೊಟ್ಟ ನೋಟೀಸು .

ತಾ|| ೧೪—೮—೩೪ ನೇ ಇಸ್ವಿ

ಸಹಿ ಪ. ಶಿ. ಮುಂಶ್ರೋಡಿ

ನೋಟುಗಳು ಹೋಗಿವೆ.

—೦—

ಹುಡುಕಿ ಕೊಟ್ಟವರಿಗೆ ೨೦ ರೂಪಾಯಿ ಇನಾಮು ಕೊಡುವೆವು.

—(೦)—

ಬುಧವಾರ ೮ ನೇ ತಾರೀಖಿನ ದಿವಸ ಸಾಯಂಕಾಲದ ಉಗಿಬಂಡಿಯಿಂದ ನಾನು ಹುಬ್ಬಳ್ಳಿಯಿಂದ ಧಾರವಾಡಕ್ಕೆ ಬರುವಾಗ, ರೇಲ್ವೆಯಲ್ಲಿಯೇ ನಮ್ಮ ಮಾಲಕಿಯ ೧೦೦-೧೦೦ ರೂಪಾಯಿಗಳ ಎರಡು ನೋಟುಗಳು ಬಿದ್ದು ಹೋಗಿವೆ. ಈ ಬಗ್ಗೆ ಹುಬ್ಬಳ್ಳಿ ಜಿ. ರೇಲ್ವೆ ಪೋಲೀಸರ ಕಡೆಗೆ ಫಿರ್ಯಾದು ಕೊಟ್ಟಿದ್ದೇನೆ ನೋಟುಗಳ ನಂ. ೭೮೯೧೯೩ ಮತ್ತು ೧೦೮೯೨೯ ಇರುತ್ತವೆ ಇವನ್ನು ನಮಗೆ ತಂದು ಕೊಟ್ಟವರಿಗೆ ಅವರ ಖರ್ಚ ಅಲ್ಲದೆ ೨೦ ರೂಪಾಯಿ ಇನಾಮು ಕೊಡುವೆವು. ತಿಳಿಯುವದು.

ತಾರೀಖು ೧೧—೮—೩೪

ಗಂಗಪ್ಪಾ ಮಲ್ಲೇಶಪ್ಪಾ ಗಿಲಗಂಚಿ.

ಧಾರವಾಡ.

ನಕಲಿ ಮಾಲಿನ ಬಗ್ಗೆ ಎಚ್ಚರಾಗಿರಿ.

ನಮ್ಮ ಉಂಚೀ ಪವಿತ್ರ ಕಾಬೂಲೀ

ಹಿರಾ ಇಂಗು

ಅವಶ್ಯ ಬೇಕಿರಿ.

ಇದು ದಿನಾಲು ಮನೆಯಲ್ಲಿ ಉಪಯೋಗವಾದದ್ದು ಅಡಿಗೆಯು ಇದರಿಂದ ರುಚಿಕರ ಮತ್ತು ಸ್ವಾದಿಷ್ಟವಾಗುವದು ಎಂಬದು ಎಲ್ಲರಿಗೂ ಖಾತ್ರಿಯಾಗಿರುವದು ನಾವು ನಮ್ಮ ಗಿರಾಸ್ತರನ್ನು ಕಾಬೂಲಕ್ಕೆ ಕಳುಹಿಸಿ ಉಂಚೀಮಾಲನ್ನು ರೋಖದಿಂದ ತೆಗೆದುಕೊಳ್ಳುವದರಿಂದ ನಮ್ಮ ಗಿರಾಕಿಗಳಿಗೆ ಬಹಳ ಸೋಯಿಸ್ಕರ ಬೀಳುವದಲ್ಲದೆ ಖಾತ್ರಿ ಮಾಲು ಸಿಗುವದು ಈ ಇಂಗು ಬೇರಾವ ಇಂಗಿಗಿಂತ ಬಹಳ ತೀಕ್ಷ್ಣವಿದ್ದು ಸುವಾಸಿಕವಾಗಿರುವದರಿಂದ ನಮ್ಮ ಒಂದು ತೊಲಿ ಇಂಗು ಇತರ ಮೂರು ತೊಲಿ ಇಂಗಿಗಿಂತಲೂ ಮೇಲಾಗಿರುವದು. ಇದು ಔಷಧ ವಸ್ತುವಾಗಿರುವದರಿಂದ ಅಜೀರ್ಣ, ಪೋಟಶೂಲ, ಹೊಟ್ಟೆಕುಟ್ಟು ಹಿಡಿಯೋಣ, ಮಲೇರಿಯಾ, ಕಾಲರಾ, ಇನ್‌ಫ್ಲ್ಯುಎಂಝಾ, ಮುಂತಾದ ರೋಗಜಂತುಗಳ ಪ್ರತಿಬಂಧವಾಗಿರುವದು. ಉಪ್ಪಿನಕಾಯಿಯಲ್ಲಿ ಉಪಯೋಗಿಸಿದರೆ ಕ್ರಿಮಿಗಳಾಗುವ ಸಂಭವವಿಲ್ಲ. ಇದನ್ನು ಬೇಕಾದಷ್ಟು ಮುಚ್ಚಿಟ್ಟರೂ ವಾಸನೆಯು ಹಸನಾದೆ ಇರುವದು. ಇದನ್ನು ಸಂಗ್ರಹಿಸುವದು ಯೋಗ್ಯವದೆ

ಅರ್ಧಾ ಔಂಸಿನ ತಿರಕೋಳಿ ವಿಕ್ರಿಗೆ ಸೋಯಿಸ್ಕರ ಫ್ಯಾನ್ಸಿ ಡಬ್ಬಿಗಳು.

ಇರಾಣಿ ಪ್ಲ್ಯಾಟ್ ಇಂಗು.

ಡಜನ ಒಂದಕ್ಕೆ ನಾಲ್ಕು ರೂಪಾಯಿ.

ಡಬ್ಬಿಯು ಒಂದು ಡಜನಕ್ಕಿಂತಲೂ ಕಡಿಮೆ ಹೆಚ್ಚು ಕೊಡೋಣವಿಲ್ಲಾ ಎಲ್ಲರಿಗೂ ಪ್ಯಾಕಿಂಗ ಪೋಸ್ಟೇಜ ಮಾಫ ಹೆಚ್ಚು ಮಾಲು ಬೇಡಿಕೊಳ್ಳುವವರು ಪತ್ರವ್ಯವಹಾರ ಮಾಡಬೇಕು. ವ್ಯಾಪಾಸ್ಥರಿಗೆ ಬೋರ್ಡ ಪುಕಟ ಸಿಗುವವು.

ಪತ್ತೆ— ಮೆಸರ್ಸ ಕುಬಗೋಡ ಬ್ರದರ್ಸ ತಾಲೂಕ ಗೋಕಾಕ.

ನೋಟೀಸಿನ ಬದಲಿಗೆ.

—೦—

ಹಿಂದಿನ ಕಾಲದಿನ ಪತ್ರಿ ಮೇಲಿಗೆ ಒಂದೆ ರೂಪಾಯಿ ಮುಂದೆ ಪ್ರತಿಯೊಂದು ಮೇಲಿಗೆ ಒಂದಾಣೆ ಆಕರಣೆ ಇಂಗ್ಲಿಷ ಪತ್ರಯೊಂದು ಒಳಗೆ ಇದು ಆದಾರ ಕಾರಿ, ಮ್ಯುನಿಸಿಪಾಲಿಟಿ ಲೋಕಲಬೋರ್ಡ ರೇಲ್ವೆ ಬ್ಯಾಂಕ ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರು ಪೈ— ಇಂಗ್ಲಿಷದಿಂದ ಅನುವಾದಿಸಿ ಕನ್ನಡದಲ್ಲಿ ಹಾಕುವದಿದ್ದರೆ ಅನುವಾದ ಪ್ರಕಾಶನದ ಒಕ್ಕಣಿಗೆ ಹಮ್ಮಿ ಜಾಹಿರ ಕಾಯಂ ಜಾಹಿರಾತುಗಳನ್ನು ಕೊಡುವವರು ಬೇರೆ ಪತ್ರಕ್ಕೆ ಪತ್ರವ್ಯವಹಾರ ಮಾಡಬಹುದು

ಮ್ಯಾನೇಜರ ವಿಜಯ ಧಾರವಾಡ

ಈ ಪತ್ರವನ್ನು ಅನಂತಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಾಲಯದಲ್ಲಿ ಮುದ್ರಿಸಿ ಪ್ರಸಿದ್ಧಪಡಿಸಿದರು.

R. N. B. 1443.

ನಿತ್ಯ ಪತ್ರ **ವಿಜಯ** ಬೆಲೆ ಅರ್ಧ ಆಣೆ

ಸಂಪಾದಕರು:– ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೪) ಧಾರವಾಡ ಶನಿವಾರ ತಾರೀಖು ೧೪ ನೇ ಅಗಸ್ಟ ೧೯೨೦ (ಸಂಚಿಕೆ ೧೪೪

ದಿ ಜಯಲಕ್ಷ್ಮಿ ಬ್ಯಾಂಕ ಲಿಮಿಟೆಡ, ಧಾರವಾಡ.

ಸ್ಥಳ– ಮಂಗಳವಾರಪೇಟೆ, [illegible] ಪಾಂಡುರಂಗರಾಯರ ಮನೆ.

೧ ಈ ಬ್ಯಾಂಕಿನಲ್ಲಿ ದಾಗೀನೆಗಳ ಮೇಲೆ ಸೋಯು ದರದಿಂದ [illegible] ಮತ್ತು ಒಪಳ ಮುದ್ದತಿಯ ಕರಾರು [illegible] ರಕಮಿನ ಮೇಲೆ [illegible] ರಕಮಿನ ತಸಕ ಸಾಲ ದೊರೆಯುವದು. ಬಡ್ಡಿಯ ದರ ಸುಲಭ ಸಮಕ್ಷಮ ತಿಳಕೊಳ್ಳಬೇಕು.

೨ ಸರಕಾರಿ [illegible] ನೋಟುಗಳ ಖರೀದಿ, ವಿಕ್ರಿ ನಡೆಯುವದು. ಅವುಗಳ ಮೇಲೆ ಸಾಲ ದೊರೆಯುವದು. ಮತ್ತು ಯೋಗ್ಯ [illegible] ಗಿರಾಕಿಗಳಿಗೆ ಲಾಭಕರವಾಗಿ ಅವುಗಳ ಮರಾಟ ಮಾಡಿ ಕೊಡಲ್ಪಡುವದು.

೩ ಮುದ್ದತಿ ಠೇವಿನ ರಕಮನ್ನು ಇಟ್ಟುಕೊಳ್ಳಲಾಗುವದು. ಸ್ವಲ್ಪ ರಕಮಿನಿಂದ ದೊಡ್ಡ ರಕಮಿನ ತನಕ ಇಟ್ಟುಕೊಳ್ಳಲಾಗುವದು. ಬಡ್ಡಿಯ ದರವನ್ನು ಸಮಕ್ಷಮ ಅಥವಾ ಪತ್ರವ್ಯವಹಾರದಿಂದ ತಿಳಕೊಳ್ಳಬೇಕು.

೪ ಈ ಬ್ಯಾಂಕಿನ ಶೇರುಗಳು ಮಾರಾಟಕ್ಕೆ ದೊರೆಯುವವು.

೫ ಬ್ಯಾಂಕಿಗೆ ಸಂಬಂಧಿಸಿದ ಬಾಕಿ ವ್ಯವಹಾರ ಮೊದಲಾದ ಎಲ್ಲ ಕೆಲಸಗಳು ನಡೆಯುವವು. ವಿಶೇಷ ಸಂಗತಿಗಳನ್ನು ಆಫೀಸಿನ ವೇಳೆಯಲ್ಲಿ ಸಮಕ್ಷಮ ಅಥವಾ ಪತ್ರವ್ಯವಹಾರದಿಂದ ತಿಳಕೊಳ್ಳಬೇಕು.

ಕೃಷ್ಣರಾವ ವೆಂಕಟರಾವ ಭಂಡಿವಾಡ.
ಮ್ಯಾನೇಜಿಂಗ ಏಜಂಟ.

—: ಶ್ರೀ ಗುರು ಪ್ರಸನ್ನ :—

ಪ್ರತಿಯೊಬ್ಬ ಕುಟುಂಬಿಕನು ಅವಶ್ಯ ಸಂಗ್ರಹದಲ್ಲಿಡತಕ್ಕ ಒಂದೇ ಔಷಧ.

ಭಾಸ್ಕರ ಚೂರ್ಣ.

ಸುಪ್ರಸಿದ್ಧ ವನಸ್ಪತಿ [illegible] ಈ ಚೂರ್ಣವು ತಯಾರಿಸಲ್ಪಟ್ಟಿದ್ದು ಇದರ ಸೇವನೆಯಿಂದ [illegible] ರೋಗಗಳು ತ್ವರಿತದಲ್ಲಿಯೇ ನಾಶಹೊಂದುವವು. ಅಜೀರ್ಣ [illegible], ಅಪಚನ, ಅಗ್ನಿಮಾಂದ್ಯ, [illegible], ಹೊಟ್ಟೆಶೂಲೆ, ಹೊಟ್ಟೆನೋವು ಮತ್ತು [illegible] ಮುಂತಾದ ರೋಗಗಳ ಮೇಲೆ ಇದೊಂದೇ ರಾಮಬಾಣ ಔಷಧವಿರುವದು. ಒಂದು ಚಿಮಟಿ [illegible] ಚೂರ್ಣವನ್ನು [illegible] ತಿಂದರೆ [illegible] ಅರ್ಧ ತಾಸಿನಲ್ಲಿಯೇ ಹಸಿವೆಯಾಗುವದು. [illegible] ವನಸ್ಪತಿಗಳು [illegible] ಶಕ್ತಿವರ್ಧಕ ಔಷಧ [illegible] ಕಾರಣದಿಂದ [illegible]. ಪ್ರತಿಯೊಬ್ಬರು ಒಂದು ಭಾಸ್ಕರ ಚೂರ್ಣದ ಡಬ್ಬಿಯನ್ನು [illegible] ಇಟ್ಟುಕೊಂಡರೆ [illegible] ಬೇನೆಗಳಿಗೆ ಉಪಯೋಗವಾಗುವದು. [illegible] ಗುಣವಾಗುವದು. ಕೇವಲ ವನಸ್ಪತಿಯಿಂದಲೇ ತಯಾರಿಸಿದ್ದ [illegible] ಸಂಗ್ರಹದಲ್ಲಿ ಇಡತಕ್ಕದ್ದು. ಒಂದು ಡಬ್ಬಿಯ ಕಿಮ್ಮತ್ತು ೧೦ ಆ. [illegible] ತರಿಸಿಕೊಳ್ಳಬಹುದು. ಪೋಸ್ಟೇಜ ಬೇರೆ ಸ್ಟಾ. ಪಾ. ೧ ಆಣೆ.

ಏಜಂಟರು– ಬಿ. ಬಿ. [illegible] ಸನ್ಸ, [illegible] ಧಾರವಾಡ.

ದಿ ಧಾರವಾಡ ಅರ್ಬನ ಕೋ ಅಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಅಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಬಂಡವಲು [illegible] ಲಕ್ಷದ ಮೇಲಿದೆ. [illegible] ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರ [illegible]. ಕಾಯಮ ಮತ್ತು ಬೇರೆ ತರದ ಠೇವುಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಠಾರ,
ಮ್ಯಾನೇಜಿಂಗ ಡಾಯರೆಕ್ಟರ.

ದಿ ಧಾರವಾಡ ಬ್ಯಾಂಕ ಲಿಮಿಟೆಡ

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು [illegible] ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು [illegible] ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ವತ್ತಿ ಇಟ್ಟುಕೊಳ್ಳುವ ಬಡ್ಡಿಯ ದರವು ಸೂಡಿಕ್ಕೆ [illegible] ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. [illegible]
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣೀ ದರ.

ನಿತ್ಯ ಪತ್ರಕ್ಕೆ	
೧೨ ತಿಂಗಳಿಗೆ	೧೨–೮–೦ ರೂ.
೬ ,,	೭–೦–೦
೪ ,,	೪–೦–೦
ವಾರ ಪತ್ರಕ್ಕೆ ೧ ವರ್ಷಕ್ಕೆ	೩–೧೨–೦

ವಿಶೇಷ ಮಾಹಿತಿ ಬೇಕಾದ ವಿಳಾಸಕ್ಕೆ

ಮ್ಯಾ. ವಿಜಯ ಧಾರವಾಡ

ವಿಜಯ.

ಧಾರವಾಡ ತಾ॥ ೧೮-೮-೨೮ ನೇ ಇಸ್ವಿ

ಶ್ರೀ.

ಆ ವಿಜಯಂ ಶ್ರೀಕರಪ್ರಿಯ |
ನೀ ವಸುಮತಿಯ ನಲಿಸಿರೆ ಸುಹಿತಚರಿತೆಗಳಂ ||
ದೀ "ವಿಜಯಂ" ಶ್ರೀಕರುಣ |
ನಾ ವಿಹಿತಂಗಳ ವಿವರಿಸಿನಲಿಪ್ಪವು ಸಾಜಂ ||೧||

ಸ್ವರಾಜ್ಯ ಕಮಿಟಿಯ ಮಹತ್ವದ ರಿಪೋರ್ಟ.

ಇಂಗ್ಲಂಡದ ಅಧಿಕಾರ ಹಿಂದುಸ್ಥಾನಕ್ಕೆ ಇರತಕ್ಕದ್ದು

(೦)

ಸ್ವರಾಜ್ಯ ಕಮಿಟಿಯ ರಿಪೋರ್ಟ ಬುಧವಾರ ಪ್ರಾತಃಕಾಲದಲ್ಲಿ ಪ್ರಸಿದ್ಧವಾಯಿತು. ಸರ್ವಪಕ್ಷೀಯರು ವಸಾಹತಿನ ಸಂಪೂರ್ಣ ಸ್ವರಾಜ್ಯಾಧಿಕಾರ ಬೇಡಿದ್ದು, ತದರ್ಧ-ಮದರ್ಧವೆಂಬ ಗಂಗಾಜಮುನಾ ದೊರೆತನಬೇಕಾಗಿಲ್ಲೆಂದು ಸ್ಪಷ್ಟವಾಗಿ ಹೇಳಿದ್ದಾರೆ. ರಿಪೋರ್ಟ ೧೩೨ ಪೃಷ್ಠವಾಗಿದೆ. ಅದರ ಮುಖ್ಯಾಂಶಗಳನ್ನು ಮಾತ್ರ ಇಲ್ಲಿ ಕೊಡುತ್ತೇವೆ.

೧ ಹಿಂದುಸ್ಥಾನಕ್ಕೆ ಸಂಪೂರ್ಣ ಜವಾಬದಾರ ರಾಜ್ಯಪದ್ಧತಿ ಇರತಕ್ಕದ್ದು. ಇಂಗ್ಲಿಷ ಜನರು ಹಿಂದುಸ್ಥಾನದ ಮೇಲೆ ನಡಿಸುತ್ತಿರುವಂಥ ರಾಜಕೀಯ ಹಕ್ಕು ಮತ್ತು ಹೊತ್ತಂಥ ಜವಾಬದಾರಿಯನ್ನು ಹಿಂದುಸ್ಥಾನಕ್ಕೆ ಒಪ್ಪಿಸತಕ್ಕದ್ದು. ಅರ್ಧ ಹಿಂದೀ ಅರ್ಧ ಯುರೋಪಿಯನ್ನವೆಂಬ ಮಿಶ್ರವಿಚಾರದ ಪದ್ಧತಿಯು ಬೇಕಾಗಿಲ್ಲ.

೨ ಜಾತಿಭೇದವನ್ನು ಪ್ರಬಲಿಸತಕ್ಕದ್ದಲ್ಲ. ಒಂದು ಜನಾಂಗದ ಅಧಿಕಾರ ಅಥವಾ ವರ್ಚಸ್ಸು ಮತ್ತೊಂದು ಜನಾಂಗದ ಮೇಲೆ ನಡೆಯತಕ್ಕದ್ದಲ್ಲ. ಜಾತಿಜಾತಿಯ ಸ್ವಭಾವವನ್ನು ನಾವು ಕಡೆ ಬಿಡದಿದ್ದರೂ, ಆ ಪ್ರಕಾರ ಧ್ಯೇಯವಿರತಕ್ಕದ್ದು. ಪ್ರತಿಯೊಬ್ಬನಿಗೆ ಧಾರ್ಮಿಕ ಸ್ವಾತಂತ್ರ್ಯವಿರತಕ್ಕದ್ದು. ಕುಲಬೋಗನಿಗಳು ಗುಣಕರ್ಮಾನುಸಾರ ದೊರೆಯತಕ್ಕದ್ದಲ್ಲದೆ, ಜಾತಿಯ ಹೆಸರಿನಿಂದ ದೊರೆಯಕೂಡದು. ಪ್ರತಿಯೊಬ್ಬನಿಗೆ ತನ್ನ ಧರ್ಮಾಚರಣೆಯ ಪ್ರಕಾರ ನಡೆಯಲು ಸಂಪೂರ್ಣ ಸ್ವಾತಂತ್ರ್ಯವಿರಬೇಕು.

೩ ರಾಜಕೀಯ ಚುನಾವಣೆಯಲ್ಲಿ ಹಿಂದೂ, ಮುಸಲಮಾನ, ಶೀಖ, ಪಾರಶಿ ಎಂದು ಭೇದವಿರತಕ್ಕದ್ದೇ ಅಲ್ಲ; ಬುದ್ಧಿಗೆ ಪ್ರಾಧಾನ್ಯವಿರತಕ್ಕದ್ದು. ಸಿಂಧವನ್ನು ಸ್ವತಂತ್ರ ಮಾಡಬೇಕು. ವಾಯುವ್ಯ ಸರಹದ್ದಿನ ಹಾಗು ಬಲೂಚಿಸ್ಥಾನಗಳ ರಾಜಕೀಯ ಆಡಳಿತೆಯು ಬೇರೆ ಇಲಾಖೆಗಳಂತಿರತಕ್ಕದ್ದು.

೪ ಸಂಸ್ಥಾನಿಕರು ಈಸ್ಟ ಇಂಡಿಯಾ ಕಂಪನಿ ಮತ್ತು ಇವತ್ತಿನತನಕ ಬ್ರಿಟಿಶ ಸರಕಾರದ ಕೂಡ ಮಾಡಿಕೊಂಡ ಒಪ್ಪಂದ ಮತ್ತು ಕರಾರುಗಳ ವರ್ತನವು ಹಿಂದುಸ್ಥಾನದ ಸಂಸ್ಥೆಗಾಗಿ, ಸ್ವರಾಜ್ಯದ ದೊರೆತನದ ಕೂಡ ಪ್ರತ್ಯಕ್ಷ ಸಂಬಂಧವಿರತಕ್ಕದ್ದು ಮತ್ತು ಯಾವ ಪ್ರಕಾರ ಹಿಂದುಸ್ಥಾನ ಸರಕಾರದವರು ಸಂಸ್ಥಾನಿಕರ ಕೂಡ ನಡೆಯುವರೋ? ಅದೇ ಪ್ರಕಾರ ಸ್ವರಾಜ್ಯದವರು ಸಂಸ್ಥಾನಿಕರ ಕೂಡ ನಡೆಯುವರು.

೫ ಹಿಂದುಸ್ಥಾನದ ಪ್ರಕೃತದ ಇಲಾಖೆಗಳು ಅಥವಾ ರಾಜಕೀಯ ವಿಭಾಗಗಳಲ್ಲಿ ಬುದ್ಧಿವಂತಿಕೆಯು ಇರುವದಿಲ್ಲ. ಸಮಾನ್ಯ ಕೊಡಿದಂತಾಗಿವೆ ಆದ್ದರಿಂದ ಈನಂತರ ರಾಜಕೀಯ ವಿಭಾಗವು ಭಾಷೆಯ ಪ್ರಕಾರ ಮತ್ತು ಅಲ್ಲಲ್ಲಿಯ ಜನರ ಒಮ್ಮತದ ಪ್ರಕಾರ ಆಗತಕ್ಕದ್ದು. ಕರ್ನಾಟಕವು ಸ್ವತಂತ್ರ ಪ್ರಾಂತಬೇಕು

೬ ಪ್ರತಿಯೊಬ್ಬನಿಗೆ ವ್ಯಕ್ತಿ ಸ್ವಾತಂತ್ರ್ಯವಿರತಕ್ಕದ್ದು. ವ್ಯಕ್ತಿ ಸ್ವಾತಂತ್ರ್ಯವೇ ಮೂಲಭೂತ ತತ್ವವಾಗಿರಬೇಕು. ಶ್ರಮಮಾಡುವಂಥ ಪ್ರತಿಯೊಬ್ಬನಿಗೆ ಸುಖವಾಗಿ ಜೀವಿಸಲಾಗುವಷ್ಟು ಗಳಿಕೆ ಇರಬೇಕು. ಪ್ರತಿಯೊಬ್ಬ ನಾಗರಿಕನಿಗೆ ಸಾರ್ವಜನಿಕವಾಗಿರುವಂಥ ಬಾವಿ, ಬೀದಿ, ಉಪವನ ಮುಂತಾದವುಗಳಲ್ಲಿ ಸರಿಸಮಾನ ಹಕ್ಕುಗಳಿರಬೇಕು

೭ ಸ್ವರಾಜ್ಯ ಸರಕಾರದಿಂದ ನಡೆಯುವಂಥ ಶಾಲೆ ಅಥವಾ ಬೇರೆ ವಿದ್ಯಾಲಯಗಳಲ್ಲಿ ಕುಲಭೇದವೇನೂ ಇರತಕ್ಕದ್ದಲ್ಲ.

೮ ಕಿರ್ಪಾನವು ಶೀಖರ ಧರ್ಮಸಂಸ್ಕಾರದ ಒಂದು ಅವಶ್ಯ ಭಾಗವು ಅವರು ಕಿರ್ಪಾನ ಹಿಡಕೊಂಡು ಹೋಗುವ ಹಕ್ಕು ನಿಸರ್ಗವಾಗಿರತಕ್ಕದ್ದು.

೯ ವಯಸ್ಸಿಗೆ ಬಂದು ಪ್ರಬುದ್ಧನಾದವನಿಗೆ ವೋಟು ಕೊಡುವ ಅಧಿಕಾರವಿರಬೇಕು. ಈಗ ಅರವತ್ತು ಲಕ್ಷ ಮತದಾರರಿದ್ದಾರೆ. ಅವರು ೮ ಕೋಟಿಯಾಗತಕ್ಕದ್ದು.

೧೦ ರಾಜ್ಯಪಾಲಕತೆಯಲ್ಲಿ ಇಡೀ ಹಿಂದುಸ್ಥಾನದ ದೆಸೆಯಿಂದ ಎರಡು ಸಭೆಗಳಿರಬೇಕು. ಮೊದಲಿನ ಸಭೆಯಲ್ಲಿ ೫೦೦ ಮೆಂಬರರು, ಮೇಲಿನ ಸಭೆಯಲ್ಲಿ ಇನ್ನೂರು ಮೆಂಬರರೂ ಇರತಕ್ಕದ್ದು. ಇಲಾಖೆಗಳ ಸಭೆಯಲ್ಲಿ ಲಕ್ಷಕ್ಕೆ ಒಬ್ಬನಂತೆ ಮೆಂಬರನಿರತಕ್ಕದ್ದು.

೧೧ ಮೊದಲನೆಯದಾದ ಪ್ರಜಾಪ್ರತಿನಿಧಿ ಸಭೆಯ ಚುನಾವಣೆಯು ಐದು ವರ್ಷಕ್ಕೊಮ್ಮೆ ಮತ್ತು ಅದರ ಮೇಲಿನ ಸಭೆಯ ಚುನಾವಣೆಯು ಏಳು ವರ್ಷಕೊಮ್ಮೆ ಆಗತಕ್ಕದ್ದು. ಹಣದ ವ್ಯವಹಾರವು ಪ್ರಜಾಪ್ರತಿನಿಧಿ ಸಭೆಗೇ ಇರತಕ್ಕದ್ದು.

೧೨ ಹಿಂದುಸ್ಥಾನ ಸರಕಾರದ ರಾಜ್ಯಕರ್ತರು ಏಳು ಜನಕ್ಕಿಂತ ಹೆಚ್ಚು ಇರತಕ್ಕದ್ದಲ್ಲ. ಇವರೆಲ್ಲರೂ ಮಂತ್ರಿಗಳೇ. ಇವರಲ್ಲಿ ಒಬ್ಬನು ಮುಖ್ಯ ಮಂತ್ರಿಯಾಗಿರತಕ್ಕದ್ದು. ಇಲಾಖೆ ಸರಕಾರಗಳ ಮಂತ್ರಿ ಮಂಡಲದಲ್ಲಿ ಐದು ಇರತಕ್ಕದ್ದು. ಇವರ ಅಧಿಕಾರವು ಸದ್ಯದ ಮಂತ್ರಿಗಳಿರುವಷ್ಟೇ ಇರಬೇಕು.

೧೩ ನ್ಯಾಯ ವಿಭಾಗದಲ್ಲಿ ಹಾಯಕೋರ್ಟುಗಳ ಮೇಲೆ ಒಂದು ಸುಪ್ರೀಂ ಕೋರ್ಟ ಇರತಕ್ಕದ್ದು. (ವಿಲಾಯತಿ ಪ್ರಿವ್ಹಿ ಕೌನ್ಸಿಲದ ಬದಲಾಗಿ)

೧೪ ಈಗಿನ ಸಿವ್ಹಿಲ ಸರ್ವಂಟರ ಆಡಳಿತೆ ಅಥವಾ ವ್ಯವಸ್ಥೆಯು ಕೆಟ್ಟು ಹೋಗಿದೆ ಅದರಲ್ಲಿ ಸುಧಾರಣೆ ಮಾಡತಕ್ಕದ್ದು. ಸಿವ್ಹಿಲ ಸರ್ವಂಟರ ಸಂಬಳವು ಕಳೆಭಾರವಾಗಿದೆ. ಈಗಿನ ರೀತಿ ಪ್ರಜೆಗಳ ಮೇಲೆ ಹೋಗಿದ್ದೂ, ಅಥವಾ ಸ್ವರಾಜ್ಯದವರು ಗೊತ್ತು ಮಾಡುವ ಸಂಬಳ ಹೇರಿದರೂ, ವ್ಯಕ್ತಿ ವಿಚಾರದ ಸ್ವಾತಂತ್ರ್ಯವಿರತಕ್ಕದ್ದು.

೧೫ ದಂಡು, ಹಡಗುಪಡೆ ವಿಮಾನಪಡೆ, ಮುಂತಾದವುಗಳಲ್ಲಿಯೂ ಸಿವ್ಹಿಲ ಸರ್ವಂಟರಂಥ ಸ್ವತಂತ್ರ ವಿಭಾಗ ಮಾಡಬೇಕು. ದಂಡಿನ ಖಾತೆಯ ವ್ಯವಸ್ಥೆ ಮಾಡಲು ಮುಖ್ಯ ಪ್ರಧಾನಿ, ಸರಸೇನಾಧಿಪತಿ, ಮತ್ತು ದಂಡಿನ ಖಾತೆಯ ಉಪಾಂಗಗಳ ಪ್ರಮುಖರಾದ ನಾಲ್ವರ ಒಂದು ಕಮಿಟಿ ಇರಬೇಕು.

೧೬ ಹಿಂದೀ ಜನರಿಗೆ ಲಷ್ಕರೀ ಶಿಕ್ಷಣ ಕಲಿಸುವದಕ್ಕಾಗಿ ಲಷ್ಕರೀ ಕಾಲೇಜುಗಳನ್ನು ಸ್ಥಾಪಿಸಬೇಕು.

ಚುನಾವಣೆಯ ವಿಚಾರಗಳು.

೧ ಹಿಂದುಸ್ಥಾನದ ಪ್ರಜಾಪ್ರತಿನಿಧಿಸಭೆ ಮತ್ತು ಇಲಾಖೆ ಕೌನ್ಸಿಲ ಸಭೆಗಾಗಿ ಮಿಶ್ರ ಚುನಾವಣೆ ಇರತಕ್ಕದ್ದು.

೨ ಮುಸಲಮಾನರು ಅಥವಾ ಹಿಂದೂ ಜನರು ಅಲ್ಪಸಂಖ್ಯಾತರಾಗಿರುವಂಥ ಪ್ರಾಂತಗಳಲ್ಲಿ ಮಾತ್ರ ಎರಡೂ ಜಾತಿಗಳ ದೆಸೆಯಿಂದ ಸ್ವತಂತ್ರ ಚುನಾವಣೆಯು ಸಕ್ಕರಬೇಕು. ಜನಸಂಖ್ಯೆಯ ಪ್ರಮಾಣದಷ್ಟು ಸ್ಥಳಗಳನ್ನು ಕಾಯಿದಿಡಬೇಕು.

೩ ಇಂಥ ಸ್ಥಳಗಳಲ್ಲಿ ಮಿಶ್ರ ಚುನಾವಣೆಗಾಗಿ ಜಾತಿಯ ವಿಚಾರ ಮಾಡದೆ, ಉಮೇದವಾರರಾಗಿ ನಿಲ್ಲಬಹುದು.

೪ ಪಂಜಾಬ ಮತ್ತು ಬಂಗಾಲದಲ್ಲಿ ಮಾತ್ರ

ಜಾತಿಯ ದೆಸೆಯಿಂದಲೂ ಸ್ವತಂತ್ರ ಸ್ಥಳಗಳನ್ನು ಕಾಯಿಡತಕ್ಕದ್ದಲ್ಲ.

೫ ಇವೆರಡು ಇಲಾಖೆಗಳನ್ನು ಹೊರ್ತುಪಡಿಸಿ, ಜನಸಂಖ್ಯೆಯ ಪ್ರಮಾಣದ ಮೇರೆಗೆ ಮುಸಲಮಾನರಿಗಾಗಿ ಸ್ಥಳಗಳನ್ನು ಕಾಯಿಡತಕ್ಕದ್ದು.

೬ ಬ್ರಾಹ್ಮಣೇತರರು ಚುನಾವಣೆಯಲ್ಲಿ ಬಹುಮಾಗಿ ಆರಿಸಲ್ಪಟ್ಟಿದ್ದರಿಂದ, ಅವರಿಗೆ ಸ್ವತಂತ್ರ ಚುನಾವಣೆಯ ಅವಶ್ಯಕತೆ ಇರುವದಿಲ್ಲ.

— —

ಮಳೆಯ ದೆಸೆಯಿಂದ ಹಾಹಾಕಾರ.

—(೦)—

ಕಳೆದ ೧೫ ದಿವಸಗಳಿಂದ ಹಿಂದಸ್ಥಾನದ ತುಂಬ ಮಳೆಯ ದೆಸೆಯಿಂದ ಹಾಹಾಕಾರವೆದ್ದಿದೆ. ದಕ್ಷಿಣ ದೇಶದಲ್ಲಿ ಎರೆನಾಡಿನಲ್ಲೆಲ್ಲ ಬಿತ್ತಿದ ಬೆಳೆಗಳು ಬಾಳಲಿಕ್ಕಿಲ್ಲವಲ್ಲದೆ, ಇದ್ದದ್ದನ್ನು ಇಲಿಯು ಕಟ್ಟಿಕೊಂಡು ಹೋಯಿತೆನ್ನುವಂತೆ ಹುಳತೆಗಳು ಧ್ವಂಸ ಮಾಡುತ್ತಿರುವವು.

ಉತ್ತರ ಹಿಂದುಸ್ಥಾನದಲ್ಲಿ ಮಳೆಯು ಇಲ್ಲವೇ ಇಲ್ಲ. ಪಂಜಾಬದಲ್ಲಿ ರೈತರು ಆಗಲೆ ಊರು ಬಿಟ್ಟು ಗುಳೇ ಹೋಗಲಾರಂಭಿಸಿದ್ದಾರೆ. ಇದರಂತೆ ಅನೇಕ ಸ್ಥಳಗಳಿಂದ ವರ್ತಮಾನ ಬರುತ್ತಿರುವದು ದಿಲ್ಲಿಯ ಪರಂತೂ ಹಾಹಾಕಾರಿದ್ದಾರೆ. ಮುಸಲಮಾನರು ಅಲ್ಲಾನ ಆರಾಧನೆ ಮಾಡತೊಡಗಿದ್ದಾರೆ. ಇವರ ಆರಾಧನೆಯ ದೆಸೆಯಿಂದ ಮ್ಯುನಿಸಿಪಾಲಿಟಿಯ ಕಮಿಟಿ ಕೂಡ ತಹಕೂಬ ಮಾಡಲ್ಪಟ್ಟಿತು.

ಹಿಂದೂ ಜನರು ಇಂದ್ರಸೂಪ ಯಜ್ಞ ಮಾಡಿ, ಇಂದ್ರನನ್ನು ಪ್ರಸನ್ನ ಮಾಡಿಕೊಳ್ಳುವ ಯಜ್ಞ ಪ್ರಾರಂಭಿಸಿದ್ದಾರೆ. ಕಾಶಿ ಮುಂತಾದ ದೂರ ದೂರದ ಸ್ಥಳಗಳಿಂದ ಪಂಡಿತರನ್ನು ಕರಿಸಿದ್ದಾರೆ. ಯಮುನಾ ತಟಾಕದಲ್ಲಿ ನಿತ್ಯ ಹೋಮ ಹವನ ನಡೆದಿದೆ.

— —

ಹಗಲೇ ತುಂಬಿದ ಬೀದಿಯಲ್ಲಿ ಹತ್ತು ಸಾವಿರದ ಸುಲಿಗೆ.

ಕಲಕತ್ತೆಯಲ್ಲಿ ಬಂಗಾಲಿ ಕಾಲೇಜದ ಸಂಬಳವನ್ನು ಒಬ್ಬ ದಿವಾನನು ಬ್ಯಾಂಕಿನಿಂದ ತರುತ್ತಿದ್ದಾಗ, ದಾರಿಯಲ್ಲಿ ದಿರವಾನನನ್ನು ಹೊಡೆದು, ರೈಲಿ ಕಸಕೊಂಡು, ಮೋಟಾರಿನಲ್ಲಿ ಕೂತು ಪಲಾಯನ ಹೇಳಿಸಿದರು. ಇವರನ್ನು ಹಿಡಿಯಲಿಕ್ಕೆ ಹೋದ ಇಬ್ಬರು ವಿದ್ಯಾರ್ಥಿಗಳಿಗೆ ಜಖಮಿಯಾಗುವ ಭಯ ಹಾಕಿದರು. ದೂರ ಹೋಗಿ ಮೋಟಾರ ಬಿಟ್ಟು, ಕಾಲಿಗೆ ಹೇಳುತ್ತಿದ್ದಾಗ ರೈಲಿ ಸಹಿತ ಸಿಕ್ಕರು.

ಬೆಂಗಳೂರಿನ ದಂಗೆಯಲ್ಲಿ ಗುಂಡು ಹಾರಿದ್ದು ನಿಜ.

—(೦)—

ಘಾಯವಾದವರೆಲ್ಲರೂ ಹಿಂದೂ ಜನರೇ ||

— ೦ —

ಬೆಂಗಳೂರಿನ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಪೋಲೀಸ ಇನ್ಸಪೆಕ್ಟರ ಕೃಷ್ಣಮೂರ್ತಿಯವರ ಜಬಾಬು ಸರಕಾರ ಪತಿಯಿಂದ ಮುಂದೆ ಕೊಟ್ಟಂತಾಗಿರುತ್ತದೆ.

ದಂಗೆಯ ಕಾಲದಲ್ಲಿ ಗುಂಡು ಹಾರಿದ್ದು ನಿಜ. ಘಾಯ ಹೊಂದಿದವರೆಲ್ಲರೂ ಹಿಂದೂ ಜನರೇ ಆಗಿದ್ದಾರೆ. ದಂಡಿಸಿಂದ ೧೨೦-೧೩೦ ಜನ ಮುಸಲಮಾನರ ಎರಡು ಗುಂಪುಗಳು ಬಂದವು. ಹಿಂಸೆಯ ಉದ್ಧಾರ ಅಜುನಮುನರಿಗೆ ಘಾಯವಾಗಿದೆ. ಆ ನರ ರಕ್ಷಣೆಗಾಗಿ ತಾವು ಸುಲ್ತಾನಪೇಟೆಗೆ ಹೋಗತಕ್ಕವರೆಂದು ಇವರು ಅಂದರು.

ಮ್ಯಾಜಿಸ್ಟ್ರೇಟರು ಘೋರ ತಪಾಸಣೆಯಲ್ಲಿ ಇವರಿಗೆ ಎಷ್ಟೋ ಪ್ರಶ್ನೆಗಳನ್ನು ಕೇಳಗೊಡಲಿಲ್ಲ. ಈ ಮ್ಯಾಜಿಸ್ಟ್ರೇಟ ಕೋರ್ಟಿನ ವಿಚಾರಣೆಯನ್ನು ರಹಿತ ಮಾಡಿ, ಸರಕಾರದವರು ಆಡಿದಂತೆ ನಡೆದು, ಸ್ವತಂತ್ರ ಕಮಿಟಿ ನೇಮಿಸಬೇಕೆಂದು ಶ್ರೀ ಹೊಸಕೊಪ್ಪದ ಕೃಷ್ಣರಾಯರು ಜಾಹೀರ ಲೇಖವನ್ನು ಪ್ರಸಿದ್ಧ ಮಾಡಿದ್ದಾರೆ.

— —

ಶ್ರೀ ದತ್ತಾತ್ರಯ ನಾಟಕ ಸಂಸ್ಥೆಯ ಪ್ರಶಸ್ತಿ

ಚಾಕ- ಶ್ರೀ ಸದಾಶಿವರಾಯರನು| ಕವಿ |
ತಾನುಮಾಸ್ಟರ ಕರ್ಣ್ಯವನ.| ಜನ |
ದೂಷಿಸಿರೇಂ ?
ಪ್ರೇಮಿಗಾಗಿ ಗುಲಾಬಿಯನು ಬೆಳೆದೆ ||

ಸ್ರಗ್ಧರಾ- ಶ್ರೀಮತ್ಕರ್ನಾಟಕ ಪ್ರಾಂತದಲಿ | ಪಡೆ
ದ ಸತ್ಕೀರ್ತಿಯಂ ಸರ್ವರಿಂದಂ ||
ಶ್ರೀಮತ್ಕರ್ನಾಟ ನಾಟ್ಯೋನ್ನತಿಯ| ನೆಸೆಗಲೆಂ
ದಾವಗಂ| ಗೈಯ್ಯುತಂ ||
ಶ್ರೀಮದ್ದತ್ತಾತ್ರಯ ಸಂಘಂ | ಮೆರೆವುದು ನಟ
ಸಾರ್ವಭೌಮರ| ಪಂಚಾಕ್ಷರಿಂದಂ ||
ತದ್ವೃತ್ತಂ ಲೋಕಮಂ ಸತ್ಕೃತಿಸತಿ | ನುತಿಪೋ
ದ್ಧಂಗಳಿಂ| ಕೀರ್ತಿವೆತ್ತಂ ||೧||

ಕಂದ- ನವರಸಗಳ್ ನಾಟಕಗಳೊ |
ಳಿವಗಿಷ್ಟೆಂದು ಸಿರಲಮುದೇ ಯತ್ನನಾಗರಗಳ್ ||
ಇವರೊಳ್ ದೃಷ್ಟಿಗಳಿಂತಿಂ|
ದೆ ಪಗುಸಿರಲ್ಕಳವೇಧವನ ಪ್ರತಿಸ್ಪಷ್ಟಿಗಳ್ದೆ ||೨||
ಜಮದಿವಸಂ ಬಿನ ದಶರಥ |
ನಮಡಿವರಾಗಳೆದ ರಾಮ, ಸೀತಾ, ಭರತರ್ ||
ಅಮುದಾ ರಾಮಾಯಣವೇ |
ಅವನಡೆದಿಹುದೀಗ ತುತ್ತ ಮೆನದಲಭಿನಯದ್ವೈ ||೩||

ಹಾಸ್ಯವೆನಲ್ಕಿವರೊಳ್ ಬಂ |
ಹಾಸ್ಯಂಸತಿರಿದು ಮೆಚ್ಚೆನೆಂಬಂತೆಲ್ಲಂ ||
ಹಾಸ್ಯದೊಳು ರೀತಿ ನೀತಿರ |
ಹಸ್ಯಂತಿನ ದುರ್ನೀತಿರೆದೆ ನಡುಗುವಪೋಲ್ ||೪||

ನನ್ನದು ರಾಜ್ಯಂ| ಮೀರಿವ |
ರೆನ್ನ ವರಿವರುನ್ನತಿಯನು |
ಗೈಯ್ಯುವುದೇ ಧ್ಯೇಯಂ ||
ನನ್ನದು ನಾಡಿನ ಮೇಲ್ಮೆಯೇ |
ನನ್ನದು ಎಂದಿರಿಪ ನಾಟಕಂಗಳ್ ಗುರುಗಳ್ ||೫||

ಜಾಮದಾನಿಲಯಗಳಿಂ |
ದಿದಿರಾ ಹೇಳಿದುದು ಸತ್ಯವೆಂದು ಪೇಳಗುವೋಲ್|
ತೆರನುತೆ ವಿದ್ಯಾದಾನವ |
ಧರಿತ್ರಿಗೀಯುತ್ತೆ ಮೆರೆಯುತಿಹುದೀ ಸಂಘಂ ||೬||

ಬೆಳೆಯಿಸಿ ನಾಟಕ ಕಲೆಯಂ |
ತೊಳೆಯಿಸಿ ನಾಡಿಗೆ ಹಾದಿ ತೋರುವ ತೆರದಿಂ
ತಳೆದಿರ್ಪ ಪೂರ್ಣ ಶಕ್ತಿಯುತ |
ಲವುಂಟದು ಕೂಡೆ ಕಾರ್ಯವೃಕ್ಷದ ಫಲವೈ ||೭||

ವಾರ್ಧಕ- ಇದ್ದು ಕನ್ನಡದಲ್ಲಿ ನೆಲೆದುದಲ್ಲದೆ
ಮುದಾ |
ರಾಷ್ಟ್ರದಿಂದೊಲವಿನಾಶಿಸವನ್ನು ಹೊಂದಿದು |
ಕೃಷ್ಣಮಾದಿಕ್ಷತ್ರರಾಜ ಸಂಗೀತ ಕರ್ನಾಟ ನಾ
ಟಕ ಸಂಘವೈ |
ತುಷ್ಟಿ ಬಡಿಸಲಿ ಪ್ರಾಜ್ಞ ಮುಂಬೈಗಳಲಿ ಮುದಾ |
ರಾಷ್ಟ್ರೀಯತೆ ಬೆಂಗುಗೆಳಿಸಿ ಮೇಲ್ ಕನ್ನಡನಾ|
ಶ್ರೀಷ್ಟತಿಯ ನರುಪಿ ವಿಜಯ ಶ್ರೀಯನಂ ಯಶ
ಶ್ರೀಯನಂ ಕೊಂಡುಬರಲಿ ||೮||

ಲೇಖಕ ಅರ್ಜುನ.

— —

ಆಂಧ್ರದೇಶದಲ್ಲಿ ಉತ್ತಮವಾಗಿ ಹುಟ್ಟುವ ಖಾದಿಯನ್ನು ಬೇರೆ ಬೇರೆ ಜನರು ಮಾಡಿಸುತ್ತಿದ್ದರು ಅದನ್ನು ಈಗ ರಹಿತಮಾಡಿ, ಅಖಿಲಭಾರತೀಯ ನೂಲುವ ಸಂಘದವರು ಇದನ್ನು ತಮ್ಮ ವಶಕ್ಕೆ ತಕ್ಕೊಂಡರು. ೫೦೦೦ ಜನರು ಸಂಘದ ಕೆಳಗೆ ನೂಲುವರು. ಈನಂತರ ಆಂಧ್ರಖಾದಿಯು ಎಷ್ಟೋ ಅಗ್ಗವಾಗಿ ದೊರೆಯುವದು.

— —

ಶ್ರೀ ಸ್ವಾಮಿ ದಯಾನಂದ ಸರಸ್ವತಿ ಸ್ವಾಮಿಗಳ ಸತ್ಯಾರ್ಥಪ್ರಕಾಶ ಗ್ರಂಥದ ತರ್ಜುಮೆಯು ಜರ್ಮನ ಭಾಷೆಯಲ್ಲಿ ನಡೆದಿದೆ.

— —

ವಿನಂತಿಯು.

ಮುನವಳ್ಳಿ ಶ್ರೀ. ವೆಂಕಟೇಶದೇವರ ಪ್ರತಿಷ್ಠಾಪನೆಯ ಕಾರ್ಯಾಲಯದಿಂದ ಕೃತಾನೇಕ ಸಾ. ನಮಸ್ಕಾರಗಳು ವಿನಂತಿ ವಿಶೇಷ ಸಾಂಪ್ರತ ಇದೇ ಶ್ರಾವಣ ಶುದ್ಧ ತ್ರಯೋದಶಿ ಬುಧವಾರ ಸೂರ್ಯೋದಯದಿಂದ ೬ ಘಳಿಗೆ (ತಾರೀಖು ೨೯--೮--೨೮ ಸ್ಟಾ ಟಾ ೮-೩೪) ಸುಮುಹೂರ್ತದಲ್ಲಿ ಶ್ರೀ ವೆಂಕಟೇಶದೇವರ ಪ್ರತಿಷ್ಠಾಪನೆಯನ್ನು ಮಾಡುವದು ಗೊತ್ತು ಮಾಡಿರುತ್ತದೆ. ಈ ಸತ್ಕಾರ್ಯಕ್ಕೆ ತಾವು ತಮ್ಮ ಆಪ್ತೇಷ್ಟರಿಂದೊಡಗೂಡಿ ಬಂದು ಕಾರ್ಯ ಸಾಂಗ ಮಾಡಿ ಪುಣ್ಯಭಾಗಿಗಳಾಗಬೇಕೆಂದು ಪ್ರಾರ್ಥಿಸುತ್ತೇವೆ.

೧ ಗೋಪಾಳಾಚಾರ್ಯ ಶೆಟ್ಟಿ
೨ ವೆಂಕಟೇಶರಾವ ಕುಲಕರ್ಣಿ
ಮುನವಳ್ಳಿ.

ಧಾರವಾಡ-

ನಾಗಪಂಚಮಿಯ ದೆಸೆಯಿಂದ ನಾಳೆ ಸೋಮವಾರದ ನಿತ್ಯದ ಪತ್ರವು ಪ್ರಕಟಿಸಲ್ಪಡಲಾರದು.

ನಾಳೆ ಸೋಮವಾರ ಸಾಯಂಕಾಲಕ್ಕೆ ಪದ್ಧತಿ ಪ್ರಕಾರ ಇಲ್ಲಿಯ ಶ್ರೀ ಜಗದ್ಗುರು ಶಂಕರಾಚಾರ್ಯ ಸಂಸ್ಕೃತ ಪಾಠಶಾಲೆಯ ವಾರ್ಷಿಕ ಸಮಾರಂಭವಾಗುವದು. ಹು. ಡಿ. ಕಲೆಕ್ಟರರಾದ ಮೆ. ದೇಶಪಾಂಡೆಯವರು ಸಭಾಧ್ಯಕ್ಷರಾಗುವರು.

ಜಾಹೀರ ನೋಟೀಸು

—(೦)—

ಈ ನೋಟೀಸಿನಿಂದ ಯಾವತ್ತೂ ಜನರಿಗೆ ನಾನು ತಿಳಿಸೋದೇನಂದರೆ— ನನ್ನ ಮಗ ಅಡಿವೆಪ್ಪಾ ತಂದಿ ಫಕೀರಪ್ಪಾ ಬಾಳೀಕಾಯಿ ಮಂಗಳವಾರಪ್ಯಾಟಿ ಸಾಕೀನ ಹುಬ್ಬಳ್ಳಿ ಈತನು ಈಗ ದುರ್ವ್ಯಸನಕ್ಕೆ ಬಿದ್ದು ಮನಿಬಿಟ್ಟು ಹೊರಗೆ ಇರುತ್ತಾನೆ ಇವನಿಗೆ ಶಿವಪ್ಪಾ ವ ಮಹಾದೇವಪ್ಪಾ ಅಂತಾ ಅಜ್ಞಾನ ತಮ್ಮಂದಿರು ಇರುತ್ತಾರೆ ಇವರಿಗೆ ನಾನೇ ಸಂರಕ್ಷಣೆ ಮಾಡುತ್ತೇನೆ ಈತನಿಗೆ ಯಾರಾದರೂ ಅನಸ್ತ್ರಕ್ತ ದೇಣಿ ಕೊಟ್ಟು ಅಜ್ಞಾನರ ಆಸ್ತಿ ವಗೈರೆ ಬರಿಸಿಕೊಂಡಲ್ಲಿ ಯಾವತ್ತೂ ರದ್ದಿ ಇರುತ್ತವೆ ಕಾರಣ ಇವನಿಗೆ ಸಾಲಾ ವಗೈರೆ ಕೊಡಬಾರದು ಕೊಟ್ಟರೆ ಫೋಕಟ ಅಂತಾ ಒರಕೊಂಡ ನೋಟೀಸು

ತಾ| ೮-೮-೧೯೨೮ ನೇ ಇಸ್ವಿ

ಈ ಎಡಗೈ ಹೆಬ್ಬೆಟ್ಟಿನ ಗುರ್ತಾ ಬಸವಣ್ಣೆಪ್ಪಾ ಕೋಂ ಫಕೀರಪ್ಪಾ ಬಾಳೀಕಾಯಿ ಸಾ| ಹುಬ್ಬಳ್ಳಿ ಜಿಲ್ಹಾ ಧಾರವಾಡ.

ನೋಟೀಸು

ಯಲ್ಲಪ್ಪಾ ಮಲ್ಲಪ್ಪಾ ಮಟ್ಟಿ ಸಾಕೀನ ಹುಬ್ಬಳ್ಳಿ ದುರಗದಬೈಲಿನಲ್ಲಿ ಬಸಲಿಂಗಪ್ಪಾ ಗುಳಗುಂದಿ ಇವನ ಮನೆಯಲ್ಲಿ

ಬಸವಣ್ಣೆವ್ವಾ ಕೋಂ ಮಲ್ಲಪ್ಪಾ ಮಟ್ಟಿ ಸಾಕೀನ ಹುಬ್ಬಳ್ಳಿ ಈ ನೋಟೀಸಿನಿಂದ ತಿಳಿಸೋದೇನಂದರೆ— ನೀನು ತಾರೀಖು ೨೭-೭-೧೯೨೮ನೇ ದಿವಸ ಕೊಟ್ಟ ನೋಟೀಸು ಮುಟ್ಟಿತು ವ ಮಜಕೂರ ತಿಳಿಯಿತು ಅದರಲ್ಲಿ ಫಕ್ತ ನಾನು ನಿಂಚ ಮಾಲಕಳು ಅಂತಾ ಬರೆದ ಮಜಕೂರಿನ ಹೊರ್ತುಪಡಿಸಿ ಬಾಕಿ ಯಾವತ್ತು ಮಜಕೂರು ಸುಳ್ಳು ಬರದೀದಿ ನನ್ನ ಸ್ಥಾವರಜಂಗಮ ಆಸ್ತಿ ಸ್ತ್ರೀಧನ ಜಸ್ತಿ ಇರುತ್ತದೆ ಅದರ ಮೇಲೆ ಯಾರದು ಏನು ಮಾಲ್ಕಿ ಹಕ್ಕು ಇಲ್ಲಾ ಅವುಗಳನ್ನು ನನ್ನ ಮರ್ಜಿ ಬಂದ ಪ್ರಕಾರ ವಿಲೇವಾಟ ಮತ್ತು ವಹಿವಾಟ ಮಾಡುವದಕ್ಕೆ ನನಗೆ ಸಂಪೂರ್ಣ ಹಕ್ಕು ಅದೆ ಅವುಗಳ ಬಗ್ಗೆ ಕೇಳಲಿಕ್ಕೆ ನಿನಗೆ ಏನು ಹಕ್ಕು ಮಾಲ್ಕಿ ಇರೋದಿಲ್ಲಾ ಈ ನೋಟೀಸಿನ ಖರ್ಚು ನಿನ್ನ ಮೇಲೆ ಅದೆ.

ತಾ| ೮-೮-೧೯೨೮ ನೇ ಇಸವಿ
ಬಸವಣ್ಣೆವ್ವಾ ಕೋಂ ಮಲ್ಲಪ್ಪಾ ಮಟ್ಟಿ

ನೋಟೀಸು

ರಾ|| ಬಸನಗೌಡಾ ಅಡಿವನಗೌಡಾ ಪಾಟೀಲ ಸಾ|| ಚಿಕ್ಕಉಳ್ಳಿಗೇರಿ ತಾ|| ಪರಸಗಡ ಇವರಿಗೆ-

ಕೆಳಗೆ ಸಹಿ ಮಾಡಿದವರ ಕಡಿಂದ ತಿಳಿಸೋದೇನಂದರೆ- ಕೃಷ್ಣಾಜಿ ಬಸವಂತ ಕುಲಕರ್ಣಿ ಇವರು ನನ್ನ ಇಟಗೊಂಡು ಬಾಳ್ವೆ ಮಾಡಿದರು ಅವರಿಂದ ನನಗೆ ಕಲ್ಲಪ್ಪಾ ವ ಮಲ್ಲಪ್ಪಾ ಎಂಬ ಹುಡಗರು ಹುಟ್ಟಿರತವೆ ಅವನ್ನ ನಾನು ಜೋಪಾನ ಮಾಡಿದೆ ಅವರು ಸಾಯುವ ಮುಂದೆ ತಮ್ಮ ಸ್ಥಾವರಜಂಗಮ ಯಾವತ್ತೂ ಆಸ್ತಿಗೆ ಅವರ ಪಶ್ಚಾತ ನಾನು ಮಾಲಕಳು ಅಂತ ನನ್ನ ಹೆಸರಿಲೆ ತಾ. ೨೪-೧-೨೭ನೇ ಇಸವಿ ದಿವಸ ಮೃತ್ಯುಲೇಖ ಮಾಡಿರತ್ತಾರೆ.

ಆ ಮೃತ್ಯುಲೇಖದ ಪ್ರಕಾರ ಮೈತ ಕೃಷ್ಣಾಜಿ ಈತನ ಯಾವತ್ತೂ ಆಸ್ತಿಗೆ ನಾನು ಸಂಪೂರ್ಣ ಮಾಲಕಳು ಇರತೇನೆ ಸದರಿ ಲೇಖದಲ್ಲಿ ಇನಾಂ ಗ್ರಾಮ ಹೊಂಗಲ ಗ್ರಾಮದಲ್ಲಿ ಇರೋ ಜಮೀನ ರಿ| ಸರ್ವೆ ನಂಬರ ೫೬ ಪೈಕಿ ಯಕರೆ ೬ ೨೦ ೩.೨ ಈ ಜಮೀನು ನಿಮಗೆ ೧೬೦೦ ರೂಪಾಯಿಗಳಲ್ಲಿ ವಿಶ್ವಾಸ ಖರೀದಿ ಬರಕೊಟ್ಟಿರತೇನೆ ಅವರಿಗೆ ೧೪೦೦ ರೂಪಾಯಿ ಕೊಟ್ಟಿಗೆ ಉಳಿದ ೨೦೦ ರೂಪಾಯಿ ಕೊಟ್ಟು ಜಮೀನ ಪಂತ ಖರೀದಿ ತಗೋಬೇಕಂಬ ನಮೂದ ಇದ

ಆ ಪ್ರಕಾರ ೨೦೦ ರೂಪಾಯಿ ತಗೊಂಡು ಜಮೀನು ಬಿಟ್ಟು ಕೊಡಿರಿ ಅಂತಾ ನಿಮಗೆ ಎಷ್ಟೋ ಸಾರೆ ಕೇಳಿದೆ ನೀವು ಇವತ್ತು ನಾಳೆ ಅಂತ ಹೇಳಕೋತಾ ಬಂದಿರಿ ರೂ| ತಗೆದು ಪಂತ ಬಿಟ್ಟು ಲೇಖ ಮಾಡಿಕೊಡಲಿಲ್ಲಾ ಈ ರೀತಿ ಈ ನೋಟೀಸ ಕೊಡುವ ಭಾಗಬಿತ್ತು ಈ ನೋಟೀಸ ಮುಟ್ಟಿದ ೭ ದಿವಸದಲ್ಲಿ ನೀವು ಹಣ ತಗೆದುಕೊಂಡು ಜಮೀನು ಬಿಟ್ಟು ಲೇಖ ಬರಕೊಡಬೇಕು ಹಾಗೆ ಮಾಡದೆ ಇದ್ರೆ ನಿಮ್ಮ ಮೇಲೆ ಕಾಯದೆ ಪ್ರಕಾರ ಇಲಾಜ ಮಾಡಿ ಜಮೀನ ಕಬಜಾ ತಗೊಂಡು ಖರ್ಚು ಸಹ ವಸೂಲ ಮಾಡಬಾರದೀತು ಈ ನೋಟೀಸಿನ ಖರ್ಚು ನಿಮ್ಮ ಮೇಲೆ ಅದೆ ತಿಳಿಯೋದು. ತಾ. ೭-೮-೧೯೨೮ ಇಸ್ವಿ

ಈ ಯಡಗೈ ಹೆಬ್ಬೆಟ್ಟಿನ ಗುರ್ತು ಈರವ್ವಾ ಕೋಂ ದೊಡ್ಡಪ್ಪಾ ಪತ್ತಾರ ಈಕಿ ಕೈದು ಅದೆ.

ಪಿ. ಎಸ್. ಷಿ. ಸಾರೆಯವರ
ನ್ಯೂ ಅಂಡ ಸೆಕಂಡ ಹ್ಯಾಂಡ
ಬುಕ್ಕ ಡಿಪೋ

ನಾವು ಹಳೇ ಪುಸ್ತಕಗಳನ್ನು ಯೋಗ್ಯದರದಿಂದ ಮಾರಲಿಕ್ಕೆ ತಕ್ಕೊಳ್ಳುತ್ತೇವೆ. ಮತ್ತು ಮಾರಲಿಕ್ಕೆ ಕೊಡುತ್ತೇವೆ. ನಮ್ಮ ಪುಸ್ತಕಾಲಯದಲ್ಲಿ ಶಾಲೆ ಕಾಲೇಜುಗಳಿಗೆ ಬೇಕಾಗುವ ಕ್ರಮಿಕ ಪುಸ್ತಕಗಳೂ ಬೇರೆ ಪುಸ್ತಕಗಳೂ ದೊರೆಯುತ್ತವೆ ಪರಸ್ಥಳದವರಿಗೆ ವ್ಹಿ. ಪಿ. ಯಿಂದಲೂ ಕಳಿಸುವೆವು. ಕಮೀಶ ಕೊಳ್ಳುವವರಿಗೆ ಯೋಗ್ಯ ಕಮೀಶನ ದೊರೆಯುವದು.

ಪ್ರೊಪ್ರಾಯಟರ,
ಎಮ್. ವಿ. ಸಾಠೆ.
ಗಾಂಧಿ ಚೌಕ, ಧಾರವಾಡ.

ನೋಟೀಸಿನ ದರಗಳು.

ಸಿಂಗಲ ಕಾಲಮಿನ ಹತ್ತು ಸಾಲುಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಸಾಲಿಗೆ ಒಂದಾಣೆ ಆರು ಇಂಗ್ಲಿಷ ಶಬ್ದಯೊಂದು ಒಳಗೆ ಐದು ಆಣೆ ಸರಕಾರಿ, ಮ್ಯುನಿಸಿಪಾಲಿಟಿ ಲೋಕಲಬೋರ್ಡ ರೇಲ್ವೆ ಬ್ಯಾಂಕ ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರಾಣೆ— ಇಂಗ್ಲಿಷದಿಂದ ಅವತರಿಸಿ ಕನ್ನಡದಲ್ಲಿ ಹಾಕಬೇಕಿದ್ದರೆ ಅರ್ಧ ಆಣೆ ಡಬಲ್ ಕಾಲಮಿನ ಒಳಗಳಿಗೆ ಇಮ್ಮಡಿ ಚಾರ್ಜ ಕಾಯಂ ಜಾಹೀರಾತುಗಳನ್ನು ಕೊಡುವವರು ಕೆಳಗಿನ ಒಕ್ಕೇಕ್ಕೆ ಪತ್ರವ್ಯವಹಾರ ಮಾಡಬಹುದು.

ಮ್ಯಾನೇಜರ ವಿಜಯ ಧಾರವಾಡ

ಈ ಪತ್ರವನ್ನು ಅನ್ನಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿಯ ಶ್ರೀ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಕಟಿಸಿದರು.

R. N. B. 1443

ವಿಜಯ

ನಿತ್ಯ ಪತ್ರ. ಬೆಲೆ ಅರ್ಧ ಆಣೆ

ಸಂಪಾದಕರು:- ಆಚಾರ್ಯ ಬಾಲಾಚಾರ್ಯ ಹೊಸಕೇರಿ.

ವರ್ಷ ೯) ಧಾರವಾಡ ರವಿವಾರ ತಾರೀಖು ೧೯ ನೇ ಅಗಸ್ಟ ೧೯೩೪ (ಸಂಚಿಕೆ ೧೪೯

ದಿ ಜಯಲಕ್ಷ್ಮಿ ಬ್ಯಾಂಕ ಲಿಮಿಟೆಡ, ಧಾರವಾಡ.

ಸ್ಥಳ- ಮಂಗಳವಾರಪೇಟಿ, ವಕೀಲ ಪಾಂಡುರಂಗರಾಯರ ಮನೆ.

೧ ಈ ಬ್ಯಾಂಕಿನಲ್ಲಿ ದಾಗೀನೆಗಳ ಮೇಲೆ ನೋಡಿ ದರದಿಂದ ಮತ್ತು ಒಳಗ ಮುದ್ದತಿಯ ತನಕ ಸಣ್ಣ ರಕಮಿನಿಂದ ಬೇಕಾದಷ್ಟು ದೊಡ್ಡ ರಕಮಿನ ತನಕ ಸಾಲ ದೊರೆಯುವದು. ಬಡ್ಡಿಯ ದರ ಸಂಬಂಧ ಸಮಕ್ಷಮ ತಿಳಕೊಳ್ಳಬೇಕು.

೨ ಸರಕಾರಿ ಪ್ರಾಮಿಸರಿ ನೋಟುಗಳ ಖರೇದಿ, ವಿಕ್ರಿ ನಡೆಯುವದು. ಅವುಗಳ ಮೇಲೆ ಸಾಲ ದೊರೆಯುವದು. ಮತ್ತು ಯೋಗ್ಯ ಕಮಿಶನ ತಕ್ಕೊಂಡು ಗಿರಾಕಿಗಳಿಗೆ ಲಾಭಕರವಾಗಿ ಅವುಗಳ ವ್ಯವಹಾರ ಮಾಡಿ ಕೊಡಲ್ಪಡುವದು.

೩ ಮುದ್ದತಿ ಠೇವಿನ ಹಣವನ್ನು ಇಟ್ಟು ಕೊಳ್ಳಲಾಗುವದು. ಸ್ವಲ್ಪ ರಕಮಿನಿಂದ ದೊಡ್ಡ ರಕಮಿನ ತನಕ ಇಟ್ಟುಕೊಳ್ಳಲಾಗುವದು. ಬಡ್ಡಿಯ ದರವನ್ನು ಸಮಕ್ಷಮ ಅಥವಾ ಪತ್ರವ್ಯವಹಾರದಿಂದ ತಿಳಕೊಳ್ಳಬೇಕು.

೪ ಈ ಬ್ಯಾಂಕಿನ ಶೇರುಗಳು ಮಾರಾಟಕ್ಕೆ ದೊರೆಯುವವು.

೫ ಬ್ಯಾಂಕಿಗೆ ಸಂಬಂಧಿಸಿದ ಜಾತಿ ವ್ಯವಹಾರ ಮೊದಲಾದ ಎಲ್ಲ ಕೆಲಸಗಳು ನಡೆಯುವವು. ವಿಶೇಷ ಸಂಗತಿಗಳನ್ನು ಆಫೀಸಿನ ವೇಳೆಯಲ್ಲಿ ಸಮಕ್ಷಮ ಅಥವಾ ಪತ್ರವ್ಯವಹಾರದಿಂದ ತಿಳಕೊಳ್ಳಬೇಕು.

ಕೃಷ್ಣರಾವ ವೆಂಕಟರಾವ ಭಂಡಿವಾಡ.
ಮ್ಯಾನೇಜಿಂಗ ಏಜಂಟ.

-॥ ಶ್ರೀ ಗುರು ಪ್ರಸನ್ನ ॥-

ಪ್ರತಿಯೊಬ್ಬ ಕುಟುಂಬಕನು ಅವಶ್ಯ ಸಂಗ್ರಹವಲ್ಲಿಡತಕ್ಕ ಒಂದೇ ಔಷಧ.

ಭಾಸ್ಕರ ಚೂರ್ಣ.

ಸುಪ್ರಸಿದ್ಧ ವನಸ್ಪತಿ ಶಾಸ್ತ್ರಜ್ಞರ ಸೂಚನೆಯ ಮೇರೆಗೆ ಈ ಚೂರ್ಣವು ತಯಾರಿಸಲ್ಪಟ್ಟಿದ್ದು ಇದರ ಸೇವನೆಯಿಂದ ನಾಲ್ಕು ತರದ ವ್ಯಾಧಿಗಳು ಸ್ವಲ್ಪದರಲ್ಲಿಯೇ ನಾಶಹೊಂದುವವು. ಅಜೀರ್ಣ ಅರುಚಿ, ಆಮಾಂಶ, ಅಗ್ನಿಮಾಂದ್ಯ, ಸಂಗ್ರಹಣಿ, ಹೊಟ್ಟೆಶೂಲೆ, ಹೊಟ್ಟೆನೋವು ಮತ್ತು ಯಾವ ತರದ ಧಾತುವಿಕಾರಗಳ ಮೇಲೆ ಇದೊಂದೇ ರಾಮಬಾಣ ಔಷಧವಿರುವದು. ಒಂದು ಚಿಮುಟಿಗಿಯಷ್ಟು ಈ ಚೂರ್ಣವನ್ನು ಬಾಯಿಯಲ್ಲಿ ಹಾಕಿಕೊಂಡರೆ- ಸಾಕು ಪುನಃ ಅರ್ಧತಾಸಿನಲ್ಲಿಯೇ ಹಸಿವೆ ಆಗುವದು. ಜೇನಿಯಿಂದ ಗುಣವಾಗದ್ದು ಅಶಕ್ತ ಮನುಷ್ಯರು ಎಳದನೆ ಶಕ್ತಿವರ್ಧಕ ಔಷಧ ತೆಗೆದುಕೊಳ್ಳುವ ಕಾರಣವೇ ಇಲ್ಲ. ಪಕ್ಷಿಗಳಲ್ಲಿಯ ಜನರು ಒಂದು ಭಾಸ್ಕರ ಚೂರ್ಣದ ಡಬ್ಬಿಯನ್ನು ತಮ್ಮ ಹತ್ತಿರ ಇಟ್ಟುಕೊಂಡರೆ- ಸಾಕು ಅಂಥವರು ಜೇನಗಳಿಗೆ ಉಪಯೋಗವಾಗುವದು. ಎಷ್ಟು ದಿವಸದ ಅಜೀರ್ಣವಿದ್ದರೂ ಮೂರೇ ದಿವಸಗಳಲ್ಲಿ ಗುಣವಾಗುವದು. ಕೇವಲ ವನಸ್ಪತಿಯಿಂದಲೇ ತಯಾರಿಸಿದ್ದು ಈ ಸಿದ್ಧೌಷಧವನ್ನು ಪ್ರತಿಯೊಬ್ಬನೂ ಅವಶ್ಯ ಸಂಗ್ರಹದಲ್ಲಿಡತಕ್ಕದ್ದು ಒಂದು ಡಬ್ಬಿಯ ಕಿಮ್ಮತ್ತು ೧೦ ಆ. ಮೇಲಿನ ಕೆಳಗಿನ ವಿಳಾಸಕ್ಕೆ ಬರದು ತರಿಸಿಕೊಳ್ಳಬಹುದು. ಪೋಸ್ಟೇಜ ಬೇರೆ ಸ್ಟಾ. ಪಾ. ೧ ಆಣೆ.

ಏಜಂಟರು:- ಬಿ. ಬಿ. ಟಿಕಾರೆ ಬ್ರ್ಯಾಂಡ ಸನ್ಸ, ಮಾರ್ಕೆಟರೋಡ. ಧಾರವಾಡ.

ದಿ ಧಾರವಾಡ ಅರ್ಬನ ಕೋ ಆಪರೆಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಬಂಡವಲವು ಏಳು ಲಕ್ಷದ ಮೇಲುಂಟು. ಚೆಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರ ನಡೆಸಲ್ಪಡುವದು. ಶಾಹಿರ ಮತ್ತು ಬೇರೆ ತರದ ಠೇವಣಿಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮಾಧವರಾವ ಬಿ. ಜಕಾತಿ,
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ಆರು, ಒಂಭತ್ತು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಠೇವಣಿ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಒತ್ತೀ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣೀ ದರ.

ನಿತ್ಯ ಪತ್ರಕ್ಕೆ	
೧೨ ತಿಂಗಳಿಗೆ	೧೨-೮-೦ ರೂ.
೬ ,,	೭-೦-೦
೪ ,,	೪-೦-೦
ವಾರ ಪತ್ರಕ್ಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಸಂಗತಿ ಕೆಳಗಿನ ವಿಳಾಸಕ್ಕೆ

ಮ್ಯಾ. ವಿಜಯ ಧಾರವಾಡ

ವಿಜಯ.

ಧಾರವಾಡ ತಾ-೧೯-೮-೨೮ ನೇ ಇಸ್ವಿ

ಶ್ರೀ.

ಆ ವಿಜಯಂ ಶ್ರೀಕರ್ಮಯು |
ನೀ ವಸುಮತಿಯು ನಲಿಸಿರೆ ಸುಹಿತಚರಿತೆಗಳಿಂ ||
ದೀ "ವಿಜಯಂ" ಶ್ರೀಕರಣ |
ನಾ ವಿಹಿತಂಗಳ ವಿವರಿಸನಲಿವುನು ಸಾಜಂ ||೧||

ಸ್ವರಾಜ್ಯದ ರಿಪೋರ್ಟಿನ ಬಗ್ಗೆ ಲೋಕಮತವು.

ಭಾರತ ಮಂತ್ರಿಯು ಬಾಯಿ ಕಟ್ಟುವಂಥ ಉತ್ತರ.

———(೦)———

ನೀವು ಸ್ವರಾಜ್ಯ, ಸ್ವರಾಜ್ಯವೆನ್ನುತ್ತೀರಿ; ನಿಮಗೆ ಬೇಕಾದ ಸ್ವರಾಜ್ಯವಾದರೂ ಎಂತಹದು? ಅದನ್ನು ನಮ್ಮ ಮುಂದಿಡಿರೆಂದು ಭಾರತ ಮಂತ್ರಿಯಾದ ಲಾರ್ಡ ಬರ್ಕನಹೆಡ್ಡ ಸಾಹೇಬರು ಕಾಂಗ್ರೆಸ ಪಕ್ಷೀಯರಿಗೆ ಆಗಾಗ್ಗೆ ಕೆಣಕುತ್ತಿದ್ದರು. ಮತ್ತು ಅಸಹಕಾರ ಬಿಟ್ಟು ಸಹಕಾರ ಮಾಡಿರೆಂದು ಕೊಳಕು ಮಾತಾಡುತ್ತಿದ್ದರು. ಇದೆಂದಕ್ಕೂ ಸ್ವರಾಜ್ಯ ಕಮೀಟಿಯವರು ಉತ್ತರ ಕೊಟ್ಟಿರುತ್ತಾರೆ. ಈ ರಿಪೋರ್ಟಿನಲ್ಲಿ ಎಂಥ ಸ್ವರಾಜ್ಯ ಬೇಕೆಂಬದೂ ಉಂಟು. ಯಾವ ಶರ್ತಿನ ಮೇಲೆ ಸಹಕಾರ ಮಾಡಬೇಕಾಗಿರುತ್ತದೆಂಬದೂ ಉಂಟು. ಇದರಿಂದ ಆ ಮಹಾನುಭಾವರ ಬಾಯಿಯೇ ಕಟ್ಟುವಂತಾಗಿದೆ. ರಿಪೋರ್ಟು ಈ ದೇಶದ ಹಿಂದೀ ಮತ್ತು ಯುರೋಪಿಯನ್ನ ಗೃಹಸ್ಥರಿಗೆ ಒಪ್ಪಿಗೆಯಾಗಿದ್ದು, ವಿಲಾಯತಿಯ ಜನರಿಗೆ ಇದು ಹೇಗೆ ಸರ್ವಾನುಮತದಿಂದ ಒಪ್ಪಿಗೆಯಾಯಿತೆಂದು ಆಶ್ಚರ್ಯಪಡುವಂತಾಗಿದೆ. ಈ ಬಗ್ಗೆ ಕೆಲ ಪ್ರಮುಖ ಮತಗಳು ಮುಂದೆ ಕೊಟ್ಟಿಂತಿದ್ದವೆ.

ಮಹಾತ್ಮರು:— ವರ್ತಮಾನ ಪರಿಸ್ಥಿತಿಗನುಸರಿಸಿ ರಿಪೋರ್ಟು ಹೇಗೆ ಸರ್ವಾನುಮತದಿಂದ ಒಪ್ಪಿಗೆಯಾಗತಕ್ಕದ್ದಿರುತ್ತದೆಂಬದನ್ನು ನೋಡಿದರೆ ಇದು ಪ್ರಶಂಸನೀಯವಾಗಿದೆ. ಸರ್ವ ಗುಣ ಪೂರ್ಣವಿದ್ದಲ್ಲ, ಇದು ಉತ್ತಮೋತ್ತಮವಾದ ರಿಪೋರ್ಟು ಆಗಿ ಸಂಘಟನಾತ್ಮಕ ಸ್ವರಾಜ್ಯಕ್ಕೆ ಮಾರ್ಗದರ್ಶಿಯಾಗುವದು.

ಶ್ರೀ ಸೇನಗುಪ್ತ:— ಅಲ್ಲಲ್ಲಿ ಕುಂದು ತಿದ್ದಿದ ಬಳಿಕ ಈ ರಿಪೋರ್ಟು ಆಲ ಇಂಡಿಯಾ ಕಾಂಗ್ರೆಸ ಕಮೀಟಿಯಿಂದ ಪಾಸ ಮಾಡಲ್ಪಡುವದೆಂಬ ನಂಬಿಗೆಯುಂಟು. ಹಿಂದುಸ್ಥಾನ ವಿಷಯಕವಾಗಿ ಅಜ್ಞಾನರಾಗಿದ್ದಾರೆಂದು ಸರ್ವಸಾಮಾನ್ಯವಾಗಿ ಒಪ್ಪಿಗೆಯಾದಂಥ ಸಾಯಮನ್ನ ಸಪ್ತಕರ ರಿಪೋರ್ಟು ಒಪ್ಪಿಗೆಯಾಗುವದೋ? ಹಿಂದೀ ಜನರು ಅನುಭವದಿಂದ ಬರೆದ ಸ್ವರಾಜ್ಯ ಯೋಜನೆಯು ಹಿಂದೀ ಜನರಿಗೆ ಒಪ್ಪಿಗೆಯಾಗುವದೋ ಎಂಬ ಪ್ರಶ್ನವು ಸಹಜವಾಗಿ ಹುಟ್ಟುತ್ತದೆ. ಹಿಂದುಸ್ಥಾನವು ಸರ್ವಾನುಮತವೆನಿಸುವಂಥ ಸ್ವರಾಜ್ಯ ಯೋಜನೆ ಬರೆಯಲಾರದೆಂದು ಇಂಗ್ಲಂಡವು ಸವಾಲು ಹಾಕುತ್ತಿತ್ತು. ಈಗ ಅದೇ ಇಂಗ್ಲಂಡವು ಸಾಯಮನ್ನ ಕಮೀಶನವನ್ನು ಹಿಂದಕ್ಕೆ ಕರಿಸಿಕೊಳ್ಳುವದೇನು?

ಸರ ಶಂಕರನಾಯರ:— ರಿಪೋರ್ಟು ಸಾಯಮನ್ನ ಕಮೀಶನದ ಸಾಕ್ಷಿ ಪುರಾವೆಗಳ ಮೇಲೆ ಬಹುವಾಗಿ ಪರಿಣಾಮವನ್ನುಂಟು ಮಾಡುವದು. ಜಾತಿ ಜಾತಿಗಳ ಸ್ಪರ್ಧೆ ಮತ್ತು ಜಗಳಗಳ ವಿಷಯವಾಗಿ ಕಮೀಟಿಯು ಮಾಡಿದ ಸೂಚನೆಗಳು ನನಗೆ ಮಾನ್ಯವಾಗಿವೆ. ಮಿತ್ರ ಜನಾವಣೆ ಮತ್ತು ವಯಸ್ಸಿಗೆ ಬಂದವರೆಲ್ಲರಿಗೂ ವೋಟು ಕೊಡುವ ಅಧಿಕಾರವೂ ಸಮ್ಮತವಾಗಿದೆ. ಕೆಲವು ಪ್ರಶ್ನಗಳ ಬಗ್ಗೆ ಊಹಾಪೋಹವಾಗತಕ್ಕದ್ದಿದ್ದು, ಆ ಬುದ್ಧಿಶ್ಯವಾಗಿಯೇ ನಾನು ಲಖನೌದಲ್ಲಿ ಕೂಡುವ ಆಲ ಇಂಡಿಯಾ ಕಾಂಗ್ರೆಸ ಕಮೀಟಿಗೆ ಹೋಗುವೆನು.

ಶ್ರೀ. ಎನ್ನ ಎಮ. ಜೋಶಿ:— ಇವರು ಕೂಲಿಕಾರರ ಮುಂದಾಳು. ಕೂಲಿಕಾರರು ಬಂಡವಲಗಾರರ ಕೂಡ ಸಂಘಶಕ್ತಿಯಿಂದ ತಮ್ಮ ದುಃಖಿತಾವಗಳ ವಸೆಯಿಂದ ಅನಿವಾರ್ಯವಾಗಿ ಮುರಿಯುವ ಕಾರಣವು ಗೈರಕಾಯದೇಶೀರವಾಗಬಾರದೆಂದು ರಿಪೋರ್ಟಿನಲ್ಲಿ ಬರೆದದ್ದು ಇವರಿಗೆ ವಿಶೇಷವಾಗಿ ಆನಂದವಾಗಿರುತ್ತದೆ.

ನ್ಯೂ ಇಂಡಿಯಾ:— ಹಿಂದುಸ್ಥಾನದ ರಾಷ್ಟ್ರೀಯ ಸ್ವಾತಂತ್ರ್ಯದ ಜಗಳದಲ್ಲಿ ಈ ಹೊತ್ತಿಗೆಯು ಮಹತ್ವದ ಭಾಗತಕೊಳ್ಳುವದು. ಹಿಂದೀ ರಾಜಕಾರಣಪಟುಗಳಿಗೆ ಬುದ್ಧಿಯೇ ಸೂಚಿಸುವದಿಲ್ಲೆಂದು ಗೌರಕಾಯಸ್ಥರು ಅನ್ನುತ್ತಿರುವದಕ್ಕೆ ಇದೊಂದು ನಿರುತ್ತರ ಮಾಡುವಂಥ ಗ್ರಂಥವಾಗಿದೆ.

ಸ್ವದೇಶ ಮಿತ್ರಂ:— ಜವಾಬದಾರ ಗೃಹಸ್ಥರು ಇದಕ್ಕೂ ಬೇರೆಯಾದಂಥ ಯಾವ ರಿಪೋರ್ಟನ್ನೂ ಬರೆಯಲಾರರು.

ಮದ್ರಾಸ ಮೇಲ:— ಬಹುಮಾನಪೂರ್ವಕವಾಗಿ ರಿಪೋರ್ಟನ್ನು ಆದರಿಸುತ್ತೇವೆ. ಇದು ಸಂಪೂರ್ಣ ಅಸಹಕಾರಿಗಳ ಸನಸೇ ಆದ ಕಾಲದಲ್ಲಿ ಇದನ್ನು ನಾವು ಬಹುವಾಗಿ ಆದರಿಸುತ್ತೇವೆ. ಇದು ಸಾಯಮನ ಕಮೀಶನಕ್ಕೆ ಮಾರ್ಗದರ್ಶಿಯಾಗುವಂಥ ಅತ್ಯಂತ ವಿಷಯ ಪೂರ್ಣವಾಗಿರುತ್ತದೆಂದು ಅಭಿಮಾನದಿಂದ ಹೇಳುತ್ತೇವೆ.

ಸ್ಟೇಟ್ಸಮನ್ನ:— ಇಂಗ್ಲಂಡದವರು ಲಕ್ಷ್ಯಪೂರ್ವಕವಾಗಿ ಚಿಕಿತ್ಸೆ ಮಾಡುವಂಥ ವಿಷಯವಾಗಿದೆ

ಅಮೃತ ಬಝಾರ:— ಯಾವದೊಂದು ಮಾತಿನ ಬಗ್ಗೆ ವಾದ ಹಾಕುವದು ಸುಲಭವು. ಆದರೆ ಉಪಾಯ ಹೇಳುವದು ಕಠಿಣವು. ಕೆಲವು ವಿಚಾರಗಳಲ್ಲಿ ಮತಭೇದವಾದರೂ ಸಾಯಮನ್ನ ಅಥವಾ ಪರದೇಶದಿಂದ ಬರುವ ಬೇರೊಂದು ಕಮೀಶನದ ತಲೆಯನ್ನು ಮೆಟ್ಟಿಹಾರುವಂತೆ ಈ ರಿಪೋರ್ಟು ಆಗಿದೆ.

—

ಕರ್ನಾಟಕ ಏಕೀಕರಣ ವಿಷಯವಾಗಿ ನೆಹರು ಕಮೀಟಿಯ ಮತವು.

ಕರ್ನಾಟಕ ಏಕೀಕರಣ ವಿಷಯವನ್ನು ಕವಿ ಸಭೆಯು ಮತ್ತು ಕ. ಪ್ರಾಂ. ಕಾ. ಕಮಿಟಿಯ ಪ್ರತಿನಿಧಿಗಳಾದವರೊಬ್ಬರು ನಮ್ಮ ಮುಂದೆ ಇಟ್ಟರು. ಐತಿಹಾಸಿಕ, ಸಾಂಸ್ಕೃತಿಕ ಮುಂತಾದ ವಿಷಯಗಳಿಂದ ತುಂಬಿದ ಮತ್ತು ಜನಗಣನೆ, ಉತ್ಪನ್ನ ಇವುಗಳ ಅಂಕೆಗಳನ್ನು ಕೊಡುವ ಒಂದು ಲೇಖವನ್ನು ನಮಗೆ ಕೊಟ್ಟು ನಾವು ಕೇಳಿದ ಎಲ್ಲ ಪ್ರಶ್ನೆಗಳಿಗೆ ಅತ್ಯಂತ ಸಮಾಧಾನಕಾರಕವಾದ ಉತ್ತರಗಳನ್ನು ಕೊಟ್ಟು ಅವರು ನಮ್ಮ ಮನವರಿಕೆ ಮಾಡಿದರು. ಈ ಬಗೆಯಿಂದ ಕರ್ನಾಟಕಕ್ಕೆ ಒಂದು ಪ್ರತ್ಯೇಕ ಪ್ರಾಂತವನ್ನು ಕೊಡುವದು ಯೋಗ್ಯವೆಂಬುದನ್ನು ಕರ್ನಾಟಕಸ್ಥರು ಪ್ರಸ್ಥಾಪಿಸಿರುವರೆಂದು ಹೇಳಬಹುದು.

ಇನ್ನು ಕರ್ನಾಟಕದ ಕೆಲಭಾಗಗಳು ವಿಶೇಷವಾಗಿ ಮೈಸೂರು ಇವು ಸಂಸ್ಥಾನಾಧಿಪತ್ಯಕ್ಕೆ ಸೇರಿರುವವು. ನೈಸಾಂಕ್ಕೆ ಸೇರಿದ್ದ ಸೇಲಂ ಕೊಯಮತ್ತೂರಿನಲ್ಲಿಯ ಭಾಗಗಳು ಬಹಳ ದೂರವಿರುವದರಿಂದ ಅವುಗಳನ್ನು ಈ ಪ್ರಾಂತಕ್ಕೆ ಸೇರಿಸುವದು ರಾಜ್ಯಕಾರಭಾರ ದೃಷ್ಟಿಯಿಂದ ಸುಲಭವಿಲ್ಲ. ಇವುಗಳನ್ನೆಲ್ಲವನ್ನೂ ಬಿಟ್ಟರೂ ಬ್ರಿಟಿಶ ಕರ್ನಾಟಕದ ಭಾಗವು ಒಂದು ಪ್ರಾಂತಕ್ಕೆ ಸಾಕಾಗುವಷ್ಟು ಉಳಿಯುವದು.

ಕರ್ನಾಟಕದಲ್ಲಿ ಹಿಂದೂ ಮುಸಲ್ಮಾನ ಪ್ರಶ್ನೆಯಿಲ್ಲ; ಬ್ರಾಹ್ಮಣ ಬ್ರಾಹ್ಮಣೇತರ ಪ್ರಶ್ನೆಯಿದೆ. ಆದರೆ ಈ ವಿಷಯದಲ್ಲಿ ಯಾವ ಮತಭೇದವೂ ಇಲ್ಲ. ಕೆಲ ಬ್ರಾಹ್ಮಣರ ಮನಸ್ಸಿನಲ್ಲಿ ಏಕೀಕರಣವಾಗಬಾರದೆಂದು ಇರಬಹುದು. ಕರ್ನಾಟಕದಲ್ಲಿಯ ಕೆಲ ಮಹಾರಾಷ್ಟ್ರೀಯರು ತಮ್ಮ ಭಾಷೆಗೆ ದಾಳಿಬರುವದೆಂದು ಅಂಜುತ್ತಿದ್ದರೂ ಹೀಗೆ ಇಗ್ಗ

ದಂತೆ ವ್ಯವಸ್ಥೆ ಮಾಡಲಿಕ್ಕೆ ಬಂದೀತು.

ಕಾಬೂಲ ಮತ್ತು ಅಂಗೋರಾದ ನಡುವೆ ಬೀಗತನವಾಗುವಂತೆ ಬಹುತೇಕವಾಗಿ ಗೊತ್ತಾಗಿದೆ. ಅಮೀರಸಾಹೇಬರು ಅಂಗೋರಾಕ್ಕೆ ಹೋದಾಗ, ಅಮೀರರ ತಂಗಿಯನ್ನು ಕೇಮಾಲ ಪಾಷ್ಯಾನಿಗೆ ಕೊಡಬೇಕೆಂದು ಮಾತು ಕಥೆ ನಡೆಯಿತು. ತಂಗಿಯನ್ನು ಕೇಳಿದ ಹೊರ್ತು ಅಮೀರರು ನಿಶ್ಚಯಪೂರ್ವಕವಾದ ವಚನ ಕೊಡುವಂತಿರಲಿಲ್ಲ. ಅಮೀರರು ಈಗ ಪಾಷೆಯವರಿಗೆ ಕಾಬೂಲಕ್ಕೆ ಬರುವಂತೆ ಆಮಂತ್ರಣ ಕಳಿಸಿದ್ದು ಇವರು ಬೇಗನೆ ಅಲ್ಲಿಗೆ ದಯಮಾಡಿಸತಕ್ಕವರಿದ್ದಾರೆ. ಕಾಬೂಲದಲ್ಲಿಯೇ ವಾಗ್ನಿಶ್ಚಯ ಅದರ ಕೂಡ ವಿವಾಹ ಸಮಾರಂಭವೂ ಆಗಬಹುದು. ಪಾಷೆ ಕೇಮಾಲ ಪಾಷ್ಯಾನು ಮುಸಲಮಾನ ಜನಾಂಗದಲ್ಲಿ ಸ್ವತಂತ್ರ ರಾಜ್ಯಸ್ಥಾಪಕನೆನಿಸಿಕೊಂಡಷ್ಟು ಶೂರನೂ, ಹೆಸರಾದ ಮುತ್ಸದ್ದಿಯೂ ಆಗಿರುವದರಿಂದ, ಅಮೀರ ಸಹೋದರಿಯು ಈತನನ್ನು ವರಿಸುವದು ಒಂದು ಪ್ರತಿಷ್ಠೆಯೆಂದೇ ತಿಳಿಯುವಳು. ಈ ಪ್ರಕಾರ ಇವೆರಡೂ ಮನೆತನಗಳ ಬೀಗತನವಾಗುವದು ಮುಸಲಮಾನ ಮಂಡಲದ ಬಲವನ್ನು ಹೆಚ್ಚಿಸುವಂತಾಗುವದೇ ಸರಿ.

ಎರಡು ಸಾರೆ ಓಟು ಕೊಡದಂತೆ ವ್ಯವಸ್ಥೆ.

—(೦)—

ಗ್ರೀಸ ದೇಶದಲ್ಲಿ ಪಾರ್ಲಮೆಂಟ ಸಭೆಯ ಚುನಾವಣೆಯಾಗತಕ್ಕದ್ದಿದೆ. ದೇಶ ಚಿಕ್ಕದಾದರೂ, ೧೦ ಲಕ್ಷ ಓಟರರಿದ್ದಾರೆ. ಹಳ್ಳಿಗಳಲ್ಲಿ ಸಹ ಓಟಿಂಗ ನಡೆಯುವದು. ಎಷ್ಟೋ ಜನರು ವೇಷ ಬದಲಿಸಿಕೊಂಡು ಎರಡೆರಡು ಸಾರೆ ಓಟು ಹಾಕುವರು. ಇದನ್ನು ತಪ್ಪಿಸಲು ಯಾವ ಹಂಚಿಕೆ ಮಾಡಬೇಕೆಂದು ಅಧ್ಯಕ್ಷ ವ್ಹೆನಿಝೂಲಾಸಾಹೇಬರೇ ಮೊದಲಾದ ಪ್ರಮುಖರು ತರ್ಕ ಹಾಕುತ್ತಿದ್ದಾರೆ. ಓಟರನ ಒಂದು ಬೆರಳನ್ನು ಯಾವದೊಂದು ಬಣ್ಣದಲ್ಲಿ ಎದ್ದಬೇಕು. ಅದು ಮೂರು ದಿವಸಗಳತನಕ ಹೋಗದಂತಿರಬೇಕೆಂದು ಕೆಲವರು ಸೂಚಿಸಿದ್ದಾರೆ. ಓಟರನ ಒಂದು ಮುಂಗಯ್ಯಿಯ ಕೂದಲುಗಳನ್ನು ಬೋಳಿಸಿ, ಆದರಿಂದ ಗುರ್ತು ಹಿಡಿಯಬೇಕೆಂದು ಕೆಲವರು ಸೂಚಿಸಿದ್ದಾರೆ. ಬಣ್ಣವನ್ನು ಪೂರಾ ತೊಳೆಯುವಂಥ ಯಾವದೊಂದು ರಸಾಯನ ಮಿಶ್ರ ಮಾಡಿದರೆ- ಪ್ರಯೋಜನವೇನೆಂದು ಕೆಲ ರಸಾಯನ ಶಾಸ್ತ್ರಜ್ಞರು ಸಂಶಯ ತೆಗೆದಿದ್ದಾರೆ. ಹೀಗೆ ಅವರು ಏನು ಮಾಡಿದರೆ- ಎರಡು ಸಾರೆ ಓಟು ಕೊಡುವದು ತಪ್ಪೀತೆಂಬ ಇತಿ-ಮಿತಿ ಜ್ಞಾನದಲ್ಲಿ ಬಿದ್ದಿದ್ದಾರೆ.

ಒಂದು ಮ್ಯುನಿಸಿಪಾಲಿಟಿಗೆ ಸಸ್ಪೆಂಡ.

—೦—

ಪುಣೆ ಜಿಲ್ಲೆಯಲ್ಲಿರುವ ಇಂದಾಪೂರ ಮ್ಯುನಿಸಿಪಾಲಿಟಿಯನ್ನು ಸರಕಾರದವರು ಎರಡು ವರ್ಷಗಳ ವರೆಗೆ ಸಸ್ಪೆಂಡ ಮಾಡಿದರು. ಅನಂತರ ಕಮೀಶನರ ರಿಪೋರ್ಟಿನ ಪ್ರಕಾರ ಮ್ಯುನಿಸಿಪಾಲಿಟಿಗೆ ಜೀವದಾನ ಕೊಡುವರು. ಇಲ್ಲವೆ ಅದನ್ನು ತೆಗೆದು ಹಾಕುವರು.

ಧಾರವಾಡದಲ್ಲಿ ಹಿಂದೀ ಪರೀಕ್ಷೆಗಳು.

—೦—

ಪ್ರತಿವರ್ಷದಂತೆ ಈ ಸಾರೆಯಾದರೂ, ದಕ್ಷಿಣಭಾರತ ಹಿಂದೀ ಪ್ರಚಾರ ಸಭೆಯ ಪರವಾಗಿ ಹಿಂದೀ ಭಾಷೆಯ ಪರೀಕ್ಷೆಗಳು ಬರುವ ಅಕ್ಟೋಬರ ೧೭ ನೇ ತಾರೀಖಿಗೆ ಜರುಗುವವು. ಕಾರಣ ಆ ಪರೀಕ್ಷೆಗಳಿಗೆ ಕೂಡ್ರಬಿಚ್ಛಿಸುವವರು ಇದೇ ಸಪ್ಟಂಬರ ೩ ನೇ ತಾರೀಖಿನೊಳಗಾಗಿ ಇಲ್ಲಿಯ ನ್ಯೂ ಇಂಗ್ಲಿಷಸ್ಕೂಲಿನ ಹಿಂದೀ ಶಿಕ್ಷಕರಾದ ಶ್ರೀ. ಡಿ. ಎಸ್. ಮುತಾಲಿಕದೇಸಾಯಿ ಇವರಿಗೆ ಭೆಟ್ಟಿಯಾಗಿ ಪರೀಕ್ಷೆ ಫಾರ್ಮುಗಳನ್ನು ತುಂಬಿಕೊಟ್ಟು ಹೋಗಬೇಕು. ಈ ಮೇಲೆ ಸಮಯ ಸಿಗಲಾರದು.

ಮೃತ್ಯು—

ಸಾಂಗಲಿಯ ಚೀಫರ ಮಾತೋಶ್ರೀಯವರಾದ ಶ್ರೀ ಮಾಯಿಸಾಹೇಬಂವರು ಆಲಂದಿಗೆ ಹೋದರು. ಅಲ್ಲಿ ಪರಲೋಕವಾಸಿಯಾದರು. ಶ್ರೀಮಂತರು ಆಗ ಡೇರಾಡೂನದಲ್ಲಿದ್ದರು. ಮೃತ್ಯುವಿನ ವರ್ತಮಾನ ಕೇಳಿ, ಸಾಂಗಲಿಗೆ ಬಂದರು. ಮಾಯಿಸಾಹೇಬರ ಮೃತ್ಯುವಿನ ದೆಸೆಯಿಂದ ಕಚೇರಿ, ಪೇಟೆಗಳೆಲ್ಲವೂ ಬಂದಾದವು. ನಾಗರಿಕರು ಸಭೆ ಮಾಡಿ, ದುಃಖಪ್ರದರ್ಶನ ಮಾಡಿದರು.

ಒಕ್ಕಲಿಗರೂ ಒಕ್ಕಲತನವೂ

ನಮ್ಮ ಮಾಸ ಪತ್ರಿಕೆಯು ಈಗ ಸುಮಾರು ೧೬ ವರ್ಷಗಳಿಂದ ದೇಶಾಭಿಮಾನಿಗಳ ಸೇವೆಯನ್ನು ಮಾಡಿ ಯಾವತ್ತು ಜನರ ಆದರಕ್ಕೆ ಪಾತ್ರವಾಗಿರುವದು. ಇತ್ತೀಚಿಗೆ ಒಕ್ಕಲತನದ ಬೆಳಗೆಯು ಸಮ್ಮಂಧಗಳಿಂದೊದಗೂಡಿದ ವಿಷಯಗಳೂ ಅಂಥವಾದ ಮುದ್ರಣವೂ ಇರುವದರಿಂದ ವಾಚಕರ ಮನಸ್ಸನ್ನು ತನ್ನ ಕಡೆಗೆ ಎಳೆಯದೆ ಎಂದೂ ಬಿಡದು. ಕೃಷಿಕರ್ಮವೇ ಶ್ರೇಷ್ಠವಾದದ್ದೆಂದು ಸರ್ವ ಸಮ್ಮತವಿರುವದರಿಂದ ಈ ವಿಷಯಕ್ಕೆ ಅನಾದರವನ್ನು ತೋರಿಸದೆ, ಇಂಥ ಮಾಸಪತ್ರಿಕೆಗಳನ್ನು ಆದರಿಸಬೇಕೆಂದು ನಮ್ಮ ಅಗ್ರಹಪೂರ್ವಕ ವಿನಂತಿ. ವಾರ್ಷಿಕ ಚಂದಾ ಅಂಚೆ ವೆಚ್ಚ ಸೇರಿ ೧-೩-೦

ಸಂಪಾದಕ

ಒಕ್ಕಲಿಗರೂ ಒಕ್ಕಲತನವೂ

ಧಾರವಾಡ

ಪುನರ್ವಿವಾಹವಾಗಲಪೇಕ್ಷಿಸುವ ಯುವತಿಯರಿಗೆ

ಸುಸಮಯ

ವಿ. ಆರ್. ಶ್ರೀನಿವಾಸಯ್ಯಂಗಾರ್, ಗೌರವ ಕಾರ್ಯದರ್ಶಿ, ವಿಧವಾ ವಿವಾಹ ಸಹಾಯಕ ಸಭಾ, (ಕೊಳ್ಳೇಗಾಲ ಬ್ರಾಂಚ್) ಕೊಳ್ಳೆಗಾಲ ಇವರಿಗೆ ಬರೆದು ತಿಳಿದುಕೊಳ್ಳಿರಿ.

ಚಂದಾದಾರರಿಗೆ ಸೂಚನೆ

ಆಗಸ್ಟ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗುವ ನಿಮಿತ್ತ ಮತ್ತು ವಾರ ಪತ್ರದ ಚಂದಾದಾರರ ಹೆಸರಿನಿಂದ ವ್ಹಿ. ಪಿ. ಯನ್ನು ಕಳಿಸುವೆವು. ಚಂದಾದಾರರು ವ್ಹಿ. ಪಿ. ಸ್ವೀಕರಿಸಿ ವಿಜಯವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಯು.

ಮ್ಯಾನೇಜರ ವಿಜಯ ಧಾರವಾಡ.

ನಕಲಿ ಮಾಲಿನ ಬಗ್ಗೆ ಎಚ್ಚರಾಗಿರಿ.

ನಮ್ಮ ಉಂಚೀ ಪವಿತ್ರ ಕಾಬೂಲೀ

ಹಿಂಗು

ಅವಶ್ಯ ಬೇಡಿರಿ.

ಇದು ದಿನಾಲು ಮನೆಯಲ್ಲಿ ಉಪಯೋಗವಾದದ್ದು ಅಡಿಗೆಯು ಇದರಿಂದ ರುಚಿಕರ ಮತ್ತು ಸ್ವಾದಿಷ್ಟವಾಗುವದು ಎಂಬದು ಎಲ್ಲರಿಗೂ ಖಾತ್ರಿಯಾಗಿರುವದು ನಾವು ನಮ್ಮ ಗುಮಾಸ್ತರನ್ನು ಕಾಬೂಲಕ್ಕೆ ಕಳುಹಿಸಿ ಉಂಚೀಮಾಲನ್ನು ಹೋಕಬಂದ ತೆಗೆದುಕೊಳ್ಳುವದರಿಂದ ನಮ್ಮ ಗಿರಾಕಿಗಳಿಗೆ ಬಹಳ ಸೋಯಿಸ್ಕರ ಬೆಲೆಯದಲ್ಲದೆ ಖಾತ್ರಿ ಮಾಲು ಸಿಗುವದು. ಈ ಹಿಂಗು ಬಾಜಾರಿ ಹಿಂಗಕ್ಕಿಂತಲೂ ಬಹಳ ತೀಕ್ಷ್ಣವಿದ್ದು ಸುವಾಸಿಕವಾಗಿರುವದರಿಂದ ನಮ್ಮ ಒಂದು ತೊಲಿ ಹಿಂಗು ಇತರ ಹತ್ತು ತೊಲಿ ಹಿಂಗಿಗಿಂತಲೂ ಮೇಲಾಗಿರುವದು. ಇದು ಔಷಧಿ ವಸ್ತುವಾಗಿರುವದರಿಂದ ಅಜೀರ್ಣ, ಜೀರ್ಣಜ್ವರ, ಹೊಟ್ಟೆಕುಟ್ಟು ಹಿಡಿಯೋಣ, ಮಲೇರಿಯಾ, ಕಾಲರಾ, ಇನ್ಫ್ಲುಎಂಝಾ, ಮುಂತಾದ ರೋಗಜಂತುಗಳ ಪ್ರತಿಬಂಧವಾಗಿರುವದು. ಉಪ್ಪಿನಕಾಯಿಯಲ್ಲಿ ಉಪಯೋಗಿಸಿದರೆ ಕ್ರಿಮಿಗಳಾಗುವ ಸಂಭವವಿಲ್ಲ. ಇದನ್ನು ಬೇಕಾದಷ್ಟು ಮುಚ್ಚಿಟ್ಟರೂ ವಾಸನೆಯು ಪಸರಿಸದೆ ಇರದು. ಇದನ್ನು ಸಂಗ್ರಹಿಸುವದು ಯೋಗ್ಯವಿದೆ

ಅರ್ಧಾ ಔಂಸಿನ ಕಿರಕೋಳ ವಿಕ್ರಿಗೆ ಸೋಯಿಸ್ಕರ ಫ್ಯಾನ್ಸಿ ಡಬ್ಬಿಗಳು:

ಇರಾಣಿ ಮ್ಯಾಸ್ಟರ ಹಿಂಗು

ಡಜನ ಒಂದಕ್ಕೆ ನಾಲ್ಕು ರೂಪಾಯಿ.

ಡಬ್ಬಿಯು ಒಂದು ಡಜನಕ್ಕಿಂತಲೂ ಕಡಿಮೆ ಹೆಚ್ಚು ಕೊಡೋಣವಿಲ್ಲಾ. ಎಲ್ಲರಿಗೂ ಪ್ಯಾಕಿಂಗ ಪೋಸ್ಟೇಜ ಮಾಫ ಹೆಚ್ಚು ಮಾಲು ಬೇಡಿಕೊಳ್ಳುವವರು ಪತ್ರವ್ಯವಹಾರ ಮಾಡಬೇಕು. ವ್ಯಾಪಾರಸ್ಥರಿಗೆ ಬೋನಸ ಪ್ರತ್ಯೇಕ ಸಿಗುವವು.

ಪತ್ತೆ— ಮೆಸರ್ಸ ಕುಲಗೋಡ ಬ್ರದರ್ಸ ತಾಲೂಕ ಗೋಕಾಕ.

---

೧೦೦ ಕ್ಕೆ ಒಂದು ವರ್ಷಕ್ಕೆ ಒಂದು ರೂಪಾಯಿ ಬಡ್ಡಿ ದರ.

ದಿ ಪಿಪಲ್ಸ ಓನ ಪ್ರಾವಿಡೆಂಟ ಆ್ಯಂಡ ಜನರಲ ಇನ್ಸುಅರನ್ಸ ಕಂಪನಿ, ಲಿಮಿಟೆಡ ಪುಣೆ.

(Life) ಜೀವವಿಮಾ- ಪ್ರೀಮಿಯಮ ದರ ತಿಂಗಳಿಗೆ ೩ ರೂ, ೧ ರೂ, ಮತ್ತು ೮ ಆಣೆ. ೧೦ ವರ್ಷಗಳ ಮೇಲೆ ಬೋನಸ ಮತ್ತು ಲಾಭ ಸಹಿತ ರಕಮ ಸಿಗುವದು.

Marriage ಲಗ್ನಶಾಖೆ- ದರ ತಿಂಗಳಿಗೆ ೨ ರೂಪಾಯಿಯಂತೆ ಪ್ರಿಮಿಯಮ ಕೊಡಬೇಕಾಗುವದು. ಲಗ್ನದ ವೇಳೆಗೆ ರೂಪಾಯಿ ಕೊಡಲಾಗುವದು.

(Loan) ಸಾಲದಶಾಖೆ- ೧೦೦ ಕ್ಕೆ ವರ್ಷಕ್ಕೆ ಒಂದೇ ರೂಪಾಯಿ ಬಡ್ಡಿ ದರದ ಮೇಲೆ ೫೦ ರಿಂದ ೫೦೦೦ ರೂಪಾಯಿಗಳ ವರೆಗೆ ಜಾಮೀನು ಇಲ್ಲದೆ ಸಾಲ ದೊರೆಯುವದು.

ಧಾರವಾಡ ಜಿಲ್ಲೆಯ ಎಲ್ಲ ತಾಲೂಕುಗಳಲ್ಲಿಯೂ ಏಜಂಟರು ಬೇಕಾಗಿದ್ದಾರೆ.

ಉತ್ಸಾಹೀ ಜನರಿಗೆ ಯೋಗ್ಯ ಕಮಿಶನ ದೊರೆಯುವದು.

ಪತ್ತೆ— ಡಾ| ಸೊಡಗೀರ ವ್ಹಿ. ಜಿ. (ಹೋಮಿಯೋ) ಎಮ್. ಬಿ. ಹಿರೇಕೆರೂರ ಜಿ| ಧಾರವಾಡ.

ಮಿ. ಎಮ್. ವ್ಹಿ. ಸಾಠೆಯವರ ನ್ಯೂ ಅಂಡ ಸೆಕಂಡ ಹ್ಯಾಂಡ

ಬುಕ್ಕಡಿಪೋ

ನಾವು ಹಳೇ ಪುಸ್ತಕಗಳನ್ನು ಯೋಗ್ಯದರದಿಂದ ಮಾರಲಿಕ್ಕೆ ತಕ್ಕೊಳ್ಳುತ್ತೇವೆ. ಮತ್ತು ಮಾರಲಿಕ್ಕೆ ಕೊಡುತ್ತೇವೆ. ನಮ್ಮ ಪುಸ್ತಕಾಲಯದಲ್ಲಿ ಶಾಲೆ ಕಾಲೇಜುಗಳಿಗೆ ಬೇಕಾಗುವ ಕ್ರಮಿಕ ಪುಸ್ತಕಗಳೂ ಬೇರೆ ಪುಸ್ತಕಗಳೂ ದೊರೆಯುತ್ತವೆ. ಪರಸ್ಥಳದವರಿಗೆ ವ್ಹಿ. ಪಿ. ಯಿಂದ ಕಳಿಸುವೆವು. ತೋಕ ಕೊಳ್ಳುವವರಿಗೆ ಯೋಗ್ಯ ಕಮಿಶನ ದೊರೆಯುವದು.

ಪ್ರೊಪ್ರಾಯಟರ,
ಎಮ್. ವಿ. ಸಾಠೆ.
ಗಾಂಧೀ ಚೌಕ, ಧಾರವಾಡ.

ಜಾಹೀರಾತಿನ ದರಗಳು.

ಒಂದು ಕಾಲಮಿನ ಪಂಕ್ತಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಸಾರೆಗೆ ಒಂದು ಆಣೆ ಇಂಗ್ಲೀಷ ಪತ್ರಿಯೊಂದು ಒಳಗೆ ಬರು ಅಕ್ಷರ ಕಾರಿ, ಮ್ಯುನಿಸಿಪಾಲಿಟಿ ಲೋಕಲಬೋರ್ಡ ಡಿಸ್ಟ್ರಿಕ್ಟ ಮುಂತಾದ ಸಾರ್ವಜನಿಕ ನೋಟೀಸುಗಳಿಗೆ [illegible] ಇಂಗ್ಲಿಷದಿಂದ ಅನುವಾದಿಸಿ ಕನ್ನಡದಲ್ಲಿ ಹಾಕುವದಿದ್ದರೆ [illegible] ಡಬಲ್ ಕಾಲಮಿನ ಒಳಗಳಿಗೆ [illegible] ಕಾಯಂ ಜಾಹಿರಾತುಗಳನ್ನು ಕೊಡುವವರು ಕಚೇರಿಯ ಸತ್ರೇಕ್ಯ ಪತ್ರವ್ಯವಹಾರ ಮಾಡಬಹುದು.

ಮ್ಯಾನೇಜರ ವಿಜಯ ಧಾರವಾಡ

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ನಮ್ಮ ವಿಜಯ ಮುದ್ರಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B. 1448

ವಿಜಯ

ನಿತ್ಯ ಪತ್ರ — ಬಿಡಿ ಅರ್ಧ ಆಣೆ

ಸಂಪಾದಕರು:— ಆನಂದ ಶಿವರಾವ ಬಾಳಾಚಾರ್ಯ ಹೊಸಕೇರಿ.

ವರ್ಷ ೯) ಧಾರವಾಡ ಗುರುವಾರ ತಾರೀಖು ೨೩ ನೇ ಆಗಸ್ಟ ೧೯೨೮ (ಸಂಚಿಕೆ ೧೯೧

ದಿ ಜಯಲಕ್ಷ್ಮಿ ಬ್ಯಾಂಕ ಲಿಮಿಟೆಡ್, ಧಾರವಾಡ.

ಸ್ಥಳ— ಮಂಗಳವಾರಪೇಟೆ, ದಿವಳೆ ವಕೀಲ ಪಾಂಡುರಂಗರಾಯರ ಮನೆ.

೧ ಈ ಬ್ಯಾಂಕಿನಲ್ಲಿ ದಾಗೀನೆಗಳ ಮೇಲೆ ಸೋಯಿ ದರದಿಂದ ಕುಸು ಮತ್ತು ಒಪಳ ಮುದ್ದತಿಯ ಕನಕ ಸಣ್ಣ ರಕಮಿನಿಂದ ಬೇಕಾದಷ್ಟು ದೊಡ್ಡ ರಕಮಿನ ಕನಕ ಸಾಲ ದೊರೆಯುವದು. ಬಡ್ಡಿಯ ದರ ಸುಲಭ ಸಮಕ್ಷಮ ತಿಳಕೊಳ್ಳಬೇಕು.

೨ ಸರಕಾರಿ ಪ್ರಾಮಿಸರಿ ನೋಟುಗಳ ಖರೀದಿ, ವಿಕ್ರಿ ನಡೆಯುವದು. ಅವುಗಳ ಮೇಲೆ ಸಾಲ ದೊರೆಯುವದು. ಮತ್ತು ಯೋಗ್ಯ ಕಮಿಶನ ತಕ್ಕೊಂಡು ಗಿರಾಕಿಗಳಿಗೆ ಲಾಭಕರವಾಗಿ ಅವು ಗಳ ಮರಾಟೆ ಮಾಡಿ ಕೊಡಲ್ಪಡುವದು.

೩ ಮುದ್ದತಿ ಠೇವಿನ ಹಣವನ್ನು ಇಟ್ಟುಕೊಳ್ಳಲಾಗುವದು. ಸ್ವಲ್ಪ ರಕಮಿನಿಂದ ದೊಡ್ಡ ರಕಮಿನ ಕನಕ ಇಟ್ಟುಕೊಳ್ಳಲಾಗುವದು. ಬಡ್ಡಿಯ ದರವನ್ನು ಸಮಕ್ಷಮ ಅಥವಾ ಪತ್ರವ್ಯವಹಾರದಿಂದ ತಿಳಕೊಳ್ಳಬೇಕು.

೪ ಈ ಬ್ಯಾಂಕಿನ ಶೇರುಗಳು ಮಾರಾಟಕ್ಕೆ ದೊರೆಯುವವು.

೫ ಬ್ಯಾಂಕಿಗೆ ಸಂಬಂಧಿಸಿದ ಚಾಲತಿ ವ್ಯವಹಾರ ಮೊದಲಾದ ಎಲ್ಲ ಕೆಲಸಗಳು ನಡೆಯುವವು. ವಿಶೇಷ ಸಂಗತಿಗಳನ್ನು ಆಫೀಸಿನ ವೇಳೆಯಲ್ಲಿ ಸಮಕ್ಷಮ ಅಥವಾ ಪತ್ರವ್ಯವಹಾರದಿಂದ ತಿಳಕೊಳ್ಳಬೇಕು.

ಕೃಷ್ಣರಾವ ವೆಂಕಟರಾವ ಭಂಡಿವಾಡ.
ಮ್ಯಾನೇಜಿಂಗ ಏಜಂಟ.

—॥ ಶ್ರೀ ಗುರು ಪ್ರಸನ್ನ ॥—

ಪ್ರತಿಯೊಬ್ಬ ಕುಟುಂಬಕನು ಅವಶ್ಯ ಸಂಗ್ರಹ ಮಾಡತಕ್ಕ ಒಂದೇ ಔಷಧ.

ಭಾಸ್ಕರ ಚೂರ್ಣ.

ಸುಪ್ರಸಿದ್ಧ ವನಸ್ಪತಿ ಶಾಸ್ತ್ರಜ್ಞರ ಸೂಚನೆಯ ಮೇರೆಗೆ ಈ ಚೂರ್ಣವು ತಯಾರಿಸಲ್ಪಟ್ಟಿದ್ದು ಇದರ ಸೇವನೆಯಿಂದ ನಾಲ್ಕು ತರದ ಸ್ವಯರೋಗಗಳು ತ್ವರಿತದಲ್ಲಿಯೇ ನಾಶಹೊಂದುವವು. ಅಜೀರ್ಣ ಅಪಚನ, ಅಪಾಂತ, ಅಗ್ನಿಮಾಂದ್ಯ ಸಾಂಗ್ರಹಿಣಿ, ಹೊಟ್ಟೆಶೂಲೆ, ಹೊಟ್ಟೆನೋವು ಮತ್ತು ಇವುಗಳಂ ತಹ ತರದ ಧಾತುವಿಕಾರಗಳ ಮೇಲೆ ಇದೊಂದೇ ರಾಮಬಾಣ ಔಷಧವಿರುವದು. ಒಂದು ಚಿಮುಟಿ ಗೆಯಷ್ಟು ಈ ಚೂರ್ಣವನ್ನು ಬಾಯಿಯಲ್ಲಿ ಹಾಕಿಕೊಂಡರೆ ನಾಲ್ಕು ಘಟಕ ಅರ್ಧತಾಸಿನಲ್ಲಿಯೇ ಹಸಿವೆ ಯಾಗುವದು. ಜೇನಿನಿಂದ ಗುಣವಾಗಿದ್ದ ಅಶಕ್ತ ಮನುಷ್ಯರು ಎರಡನೆ ಶಕ್ತಿವರ್ಧಕ ಔಷಧ ತೆಗೆ ದುಕೊಳ್ಳುವ ಕಾರಣವೇ ಇಲ್ಲ. ಹಳ್ಳಿಗಳಲ್ಲಿಯೂ ಜನರು ಒಂದು ಭಾಸ್ಕರ ಚೂರ್ಣದ ಡಬ್ಬಿಯನ್ನು ತ ಮ್ಮ ಹತ್ತರ ಇಟ್ಟುಕೊಂಡರೆ ನಾನಾ ರೋಗಗಳಿಗೆ ಉಪಯೋಗವಾಗುವದು. ಎಷ್ಟು ದಿ ವಸದ ಅಜೀರ್ಣವಿದ್ದರೂ ಮೂರೇ ದಿವಸಗಳಲ್ಲಿ ಗುಣವಾಗುವದು. ಕೇವಲ ವನಸ್ಪತಿಯಿಂದಲೇ ತಯಾರಿ ಸಿದ್ದ ಈ ಗಿಷ್ಟಾ ಔಷಧವನ್ನು ಪ್ರತಿಒಬ್ಬನೂ ಅವಶ್ಯ ಸಂಗ್ರಹಮಾಡತಕ್ಕದ್ದು ಒಂದು ಡಬ್ಬಿಯ ಕಿಮ್ಮತ್ತು ೧೦ ಆ. ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು. ಪೋಸ್ಟೇಜ ಬೇರೆ ಸ್ಯಾ. ಪಾ. ೧ ಆಣೆ.

ಸ್ಟಾಕಿಸ್ಟ— ಪಿ. ಬಿ. ಟಿಕಾರೆ ಲೈಂದ ಸನ್ಸ್, ಮಾರ್ಕೆಟರೋಡ ಧಾರವಾಡ.

ದಿ ಧಾರವಾಡ ಅರ್ಬನ ಕೋ ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಬಂಡಿಗೆಯು ಏಳು ಲಕ್ಷದ ಮೇಲುಂಟು. ಚೆಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರ ನಡೆಸಲ್ಪಡುವದು. ಕ್ಯಾಶಿಯು ಮತ್ತು ಸೇರಿ ಕರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದ ರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಹಾಗಿ,
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್
ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರ ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಠೇವಾಣಿ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಮತ್ತೇ ಇ ಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಬೀಳುತ್ತದೆ.

ಎ. ಕೆ. ಶೆಟ್ಟಿ
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣೀ ದರ.

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	೧೨—೮—೦ ರೂ.
೬ ,,	೭—೦—೦
೪ ,,	೪—೦—೦
ವಾರ ಪತ್ರಕ್ಕೆ ೧ ವರ್ಷಕ್ಕೆ	೩—೧೨—೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ

ಮ್ಯಾ. ವಿಜಯ ಧಾರವಾಡ

ವಿಜಯ.

ಧಾರವಾಡ ತಾ-೨೩-೮-೨೮ ನೇ ಇಸ್ವಿ

ಶ್ರೀ.

ಆ ವಿಜಯಂ ಶ್ರೀಶಪ್ರಿಯ |
ನೀ ವಸುಮತಿಯು ನಲಿಸಿರೆ ಸುಹಿತಚರಿತೆಗಳಿಂ ||
ದೀ " ವಿಜಯಂ " ಶ್ರೀಶಕರುಣ |
ಸಾ ವಿಹಿತಂಗಳ ವಿವರಿಸಲಿಪ್ಪುದು ಸಾಜಂ ||೧||

ಕೆಂಪು ಬಣ್ಣದ ಸಾಹೇಬರು ಕರೀ ಮೋರೆಯವರ ಕೈ ಮುಟ್ಟಿದರು.

ಅಮೇರಿಕೆಯಲ್ಲಿ ನಿಗ್ರೋ ಎಂಬ ಮೂಲನಿವಾಸಿಗಳಿದ್ದಾರೆ. ಅಲ್ಲಿ ವಸಾಹತು ಮಾಡಲಿಕ್ಕೆ ಹೋಗಿ, ತಮ್ಮದೇ ಸಾಮ್ರಾಜ್ಯ ಮಾಡಿಕೊಂಡಂಥ ಗೌರಕಾಯಸ್ಥರು ಆ ನಿಗ್ರೋ ಜನರನ್ನು ದರಬಾರಗಳಲ್ಲಿ ಮುಟ್ಟುವದಿಲ್ಲ. ಮನೆಯಲ್ಲಿ ಇವರೇ ದುಡಿಯುವ ಆಳಾಗಿರುವದರಿಂದ, ಬೇಕೆಂದು ಅಥವಾ ಅಪ್ಪಿ ತಪ್ಪಿ ಮುಟ್ಟಿದರೆ- ಅದು ಸಾರ್ವಜನಿಕ ಅಪರಾಧವಾಗುವದಿಲ್ಲ. ಆದರೆ ದರಬಾರದಲ್ಲಿ ಮುಟ್ಟುವದೆಂದರೆ— ಪಂಚಮಹಾಪಾತಕವಾಗುತ್ತದೆ. ಹಿಂದಕ್ಕೆ ಆ ದೇಶದ ಅಧ್ಯಕ್ಷರಾಗಿದ್ದ ಒಬ್ಬ ಸಾಹೇಬರು ದರಬಾರದಲ್ಲಿ ಒಬ್ಬ ನಿಗ್ರೋನಿಗೆ ಹಸ್ತಸ್ಪರ್ಶದ ಬಹುಮಾನ ಮಾಡಿದರು. ಇದನ್ನು ನೋಡಿ, ಅಮೇರಿಕೆಯವರು ಸಾಹೇಬರನ್ನು ಪಂಚಮಪಾತಕಿಯಲ್ಲಿ ಎಣಿಸಿದರು.

ದಕ್ಷಿಣ ಅಫ್ರಿಕೆಯಲ್ಲಿ ಲಕ್ಷಾವಧಿ ಹಿಂದೀ ಜನರಿದ್ದಾರೆ. ಇವರು ನಿಗ್ರೋಗಳಂತೆ ಬರೇ ಸೇವಕರಾಗಿ ನಿಲ್ಲುವಂಥವರಲ್ಲ. ಗರ್ಭ ಶ್ರೀಮಂತರಿದ್ದಾರೆ. ವಕೀಲ ಬ್ಯಾರಿಸ್ಟರರಿದ್ದಾರೆ. ತಮ್ಮ ಉದ್ಯೋಗ ಸಾಹಸದಿಂದ ಧನಾಢ್ಯರಾದಂಥವರಿದ್ದಾರೆ. ಸುಶಿಕ್ಷಿತರಿದ್ದಾರೆ. ಆದರೂ ಮಂತ್ರಿಮಂಡಳದವರು ಇವರನ್ನು ಮೂರು ಮೊಳದ ಅಂತರದ ಮೇಲೆ ನಿಲ್ಲಿಸುವರು. ಶೇಖಹ್ಯಾಂಡದ ಹೆಸರನ್ನಂತೂ ಬಿಟ್ಟೆಯಿತು.

ನಾಮದಾರ ಶ್ರೀನಿವಾಸಶಾಸ್ತ್ರಿಯವರು ಅಲ್ಲಿಗೆ ರಾಯಭಾರಿ ಕಮೀಶನರರಾಗಿ ಹೋಗಿದ್ದಾರಷ್ಟೇ; ಇವರು ಹೋದ ನಂತರ ಕರೀ ಮತ್ತು ಕೆಂಪ ಶಾಸಕಾರರ ಪ್ರತ್ಯಕ್ಷ ಸಂಬಂಧವುಂಟಾಯಿತು. ಜಪಾನದ ರಾಯಭಾರಿಯು ಪಡೆದಿರುವಂಥ ಯೋಗ್ಯತೆ ಪಡೆದವರು. ಅಂದಬಳಿಕ ಅಲ್ಲಿಯ ಹಿಂದೂ ದ್ವೇಷಿ ಮಂತ್ರಿಗಳು ಇವರಿಂದ ಮೂರು ಮೊಳ ಸರಿದು ನಿಲ್ಲುವದು ಅಶಕ್ಯವಾಯಿತು.

ಹೋದ ವಾರದಲ್ಲಿ ನಾತಾಳ ಪ್ರಾಂತದಲ್ಲಿ ಹಿಂದೀ ಜನರ ಕಾಂಗ್ರೆಸ ಸಭೆಯು ಕೂಡಿತ್ತು. ಅದೇ ಸಮಯದಲ್ಲಿ ಅಧ್ಯಕ್ಷರಾದ ಹರ್ಟಜೋಗಸಾಹೇಬರು ಅಲ್ಲಿಗೆ ಪ್ರಯಾಣ ಬೆಳೆಸಿದರು. ರಾಯಭಾರಿ ಕಮೀಶನರರಾದ ನಾಮದಾರ ಶಾಸ್ತ್ರಿಯವರು ಕಾಂಗ್ರೆಸದಿಂದ ಇವರಿಗೊಂದು ಮಾನಪತ್ರ ಕೊಡಿಸಿದರು. ಇದಕ್ಕೆ ಉತ್ತರವಾಗಿ ಸಾಹೇಬರು ಹಿಂದೀ ಜನರ ರಾಜಕೀಯ ಮತ್ತು ಔದ್ಯೋಗಿಕ ಮಹತ್ವಾಕಾಂಕ್ಷೆಗಳ ಬಗ್ಗೆ ಬಹಳವಾಗಿ ಸಹಾನುಭೂತಿಯ ಉದ್ಗಾರ ತೆಗೆದದ್ದಲ್ಲದೆ, ಪ್ರಮುಖರಾದ ೨೦ ಜನರ ಕೂಡ ಶೇಖಹ್ಯಾಂಡ ಮಾಡಿ, ಅವರನ್ನು ಬಹುಮಾನಿಸಿದರು. ಹಿಂದೀ ಜನರು ಆ ದೇಶಕ್ಕೆ ಹೋಗಿ ನೂರು ವರ್ಷವಾಯಿತು, ಅಧ್ಯಕ್ಷರಿಂದ ಶೇಖಹ್ಯಾಂಡಿನ ಸನ್ಮಾನ ಹೊಂದಿದ್ದು ಇದೇ ಮೊದಲು!!

ಒಬ್ಬ ಹಿಂದೀ ಗೃಹಸ್ಥರು ಹಿಂದುಸ್ಥಾನ ಸರಕಾರದ ಪತಿಯಿಂದ ಹಾಯಕಮೀಶನರ ಅಥವಾ ರಾಯಭಾರಿಯಾಗಿ ಹೋಗಿದ್ದರಿಂದಲೇ ಹಿಂದೀ ಜನರ ಗೌರವ ಹೆಚ್ಚಿತು. ಒಬ್ಬ ಯುರೋಪಿಯನ್ನ ಸಾಹೇಬನು ಈ ಅಧಿಕಾರದಲ್ಲಿದ್ದರೆ- ಹಿಂದೀ ಜನರ ವಿಷಯವಾಗಿ ಅಲ್ಲಿಯ ಸಾಹೇಬರಲ್ಲಿ ಇಷ್ಟು ಆದರ ಹುಟ್ಟಲು ಕಾರಣವೇ ಉಂಟಾಗುತ್ತಿದ್ದಿಲ್ಲ. ನಾಮದಾರ ಶಾಸ್ತ್ರಿಯವರ ಜನಮಾನ್ಯವಾಗುವಂಥ ಕೆಲಸ ನೋಡಿ, ಇವರೇ ಇನ್ನೂ ಕೆಲವು ವರ್ಷ ಹಾಯಕಮೀಶನರರಾಗಿರಬೇಕೆಂದು ಹಿಂದೀ ಜನರನ್ನು ಅಸ್ಪೃಶ್ಯ ಮಾಡಿದ ಸಾಹೇಬರೇ ಈಗೆನ್ನುತ್ತಲಿದ್ದಾರೆ.

ಪ್ರತಿವರ್ಷ ವಿಲಾಯತಿಯಲ್ಲಿ ಕೂಡುವ ರಾಷ್ಟ್ರಸಂಘದ ಪರಿಷತ್ತಿಗೆ ಒಬ್ಬ ಸಾಹೇಬನನ್ನು ಹಿರಿಯನಾಗಿ ಮಾಡಿ, ಹಿಂದೀ ಜನರನ್ನು ಈತನ ಹಿಮ್ಮೇಳವಾಗಿ ಪುಡಿಯಾಳು ಮಾಡಿ ಕಳಿಸುವರು. ಹಿಂದೀ ಗೃಹಸ್ಥನೇ ಮುಖ್ಯ ನಾಯಕನಾಗಿ ಹೋಗಬೇಕೆಂದು ಅಸೆಂಬ್ಲಿಯಲ್ಲಿ ಠರಾವು ಕೂಡ ಬಂದು ಹೋಗಿದೆ. ಆದರೂ ಅಧಿಕಾರಸ್ಥರು ಕೆಂಪು ಟೊಪ್ಪಿಗೆಯ ಸಾಹೇಬನನ್ನೇ ಮುಂದೆ ಮಾಡುತ್ತಾರೆ. ದಕ್ಷಿಣ ಅಫ್ರಿಕೆಯಲ್ಲಿ ಹಿಂದೀ ಜನಾಂಗದ ಹೆಚ್ಚಳವಾಗಲಿಕ್ಕೆ ಹಿಂದೀ ಹಾಯಕಮೀಶನರನೇ ಕಾರಣವಾದಂತೆ ಜಗತ್ತಿನಲ್ಲಿ ಹಿಂದೀ ಜನರ ಗೌರವ ಪ್ರತಿಷ್ಠೆ ಹೆಚ್ಚಾಗಬೇಕಾದರೆ- ಪ್ರತಿಯೊಂದು ದರಬಾರದಲ್ಲಿಯೂ ಯುರೋಪಿಯನ್ನನ ಬದಲಾಗಿ ಹಿಂದೀ ಪ್ರತಿನಿಧಿಯೇ ಇರಬೇಕಾಗುತ್ತದೆ. ಇಂಥ ಅಧಿಕಾರವು ಸಾಯಮನ್ನ ಕಮೀಶನದಿಂದ ದೊರೆಯಲಾರದು. ಪಂಡಿತ ಮೋತಿಲಾಲರ ಸ್ವರಾಜ್ಯ ಯೋಜನೆಯಿಂದ ದೊರೆಯುವದುಂಟು. ಆದುದರಿಂದ ಭಾರತೀಯರು ಇದೇ ವಿಚಾರವಾಗಿ ತಮ್ಮ ರಾಜಕೀಯ ಧ್ಯೇಯವಿಟ್ಟುಕೊಂಡು, ಜಗತ್ತಿನಲ್ಲಿ ಹೆಚ್ಚಳ ಪಡೆಯತಕ್ಕದ್ದಲ್ಲವೇ?

—— ——

ಸಂಪೂರ್ಣ ಸ್ವಾತಂತ್ರ್ಯವೋ? ವಸಾಹಾತಿನ ಸ್ವರಾಜ್ಯ ಸ್ವಾತಂತ್ರ್ಯವೋ?

——(೦)——

ಕಾಂಗ್ರೆಸದ ಧ್ಯೇಯವು ಹಿಂದುಸ್ಥಾನವು ಬ್ರಿಟಿಶ ಸಂಬಂಧರಹಿತವಾಗಿ ಸಂಪೂರ್ಣ ಸ್ವಾತಂತ್ರ್ಯದ್ದಾಗಬೇಕೆಂದಿರುತ್ತದೆ. ಆದರೆ- ನೆಹರು ಕಮೀಟಿಯು ವಸಾಹಾತಿನ ಸ್ವರಾಜ್ಯವು ತನ್ನ ಧ್ಯೇಯವೆಂಬ ವ್ಯಾಖ್ಯೆ ಹೇಳುತ್ತದೆ. ಸ್ವತಃ ಪಂಡಿತ ಮೋತಿಲಾಲ, ಚಿರಂಜೀವ ಜವಾಹಿರಲಾಲರು ಸಂಪೂರ್ಣ ಸ್ವಾತಂತ್ರ್ಯಪ್ರಿಯರಾಗಿದ್ದಾರೆ. ಮದ್ರಾಸದ ಕಾಂಗ್ರೆಸದಲ್ಲಿ ಈ ತರದ ಠರಾವು ಪಾಸಾಗಿದ್ದು, ಇದಕ್ಕೆ ಇವರು ಕೈಯೆತ್ತಿದ್ದಾರೆ. ಆದರೂ ತಮ್ಮ ಸ್ವರಾಜ್ಯಯೋಜನೆಯಲ್ಲಿ ಬ್ರಿಟಿಶ ಸಾಮ್ರಾಜ್ಯಾಂತರ್ಗತವಾದ ವಸಾಹಾತಿನ ಸ್ವರಾಜ್ಯ ದೊರೆತರೆ- ಸಾಕೆಂದು ಹೇಳಿದ್ದಾರೆ. ಪಂಡಿತ ಮೋತಿಲಾಲರಂಥವರು ಹೀಗೇಕೆ ಎರಡು ಬುದ್ಧಿಯವರಾದರೆಂಬ ಸಹಜವಾದ ಪ್ರಶ್ನೆ ಹೊರಡುತ್ತದೆ. ಪಂಡಿತರು ಸ್ವತಃ ಸಂಪೂರ್ಣ ಸ್ವಾತಂತ್ರ್ಯವಾದಿಗಳಾದರೂ, ತಮ್ಮ ಸುತ್ತಲು ಕೂತಂಥ ಬೇರೆ ಬೇರೆ ರಾಜಕೀಯ ಪಕ್ಷ ವಿಪಕ್ಷಗಳ ದೆಸೆಯಿಂದ, ಸದ್ಯ ತಮಗೆ ವಸಾಹಾತಿನ ಸ್ವರಾಜ್ಯ ದೊರೆತರೂ ಸಾಕೆಂದಿದ್ದಾರೆ. ಇದಕ್ಕೆ ಮುಂದೆ ಓಡುವದಾಗಿ ಜಗತ್ತಿನಲ್ಲಿ ಯಾರೂ ಅಡ್ಡಿ ಮಾಡಲಾರರು. ಅದೇ ಪ್ರಕಾರ ಪಂಜಾಬದ ಕಾಂಗ್ರೆಸ ಕಮೀಟಿಯವರು ಬಿಗತ ಕೊಟ್ಟಿದ್ದಾರೆ. ಕಾಂಗ್ರೆಸ ಧ್ಯೇಯವು ಸಂಪೂರ್ಣ ಸ್ವರಾಜ್ಯವಿರಬೇಕಲ್ಲದೆ, ಯಾವ ಕಾರಣದಿಂದಲೂ ಜಾತಿ ಜಾತಿಗಳಿಗೆ ಸ್ವತಂತ್ರ ಚುನಾವಣೆ ಇರಬಾರದು; ಇದರಿಂದ ರಾಷ್ಟ್ರೀಯ ನಾಶವೇ ಇರುತ್ತದೆಂಬ ಠರಾವು ಪಾಸ ಮಾಡಿದ್ದಾರೆ. ಪಂಜಾಬದಂತೆ ಈ ಮೊದಲೇ ಆಂಧ್ರ, ತಮಿಳ ಮತ್ತು ಬಂಗಾಲದ ಪ್ರಾಂತಿಕ ಸಭೆಗಳಲ್ಲಿ ಠರಾವು ಪಾಸಾಗಿರುತ್ತದೆ. ನೆಹರು ಕಮೀಟಿಯು ಒಂದು ಹಾವಳಿಗೆ ಎಂದೂ, ಹಿಂದುಸ್ಥಾನದ ಧ್ಯೇಯವು ಸಂಪೂರ್ಣ ಸ್ವಾತಂತ್ರ್ಯವೇ ಎಂದೂ ಕಲಕತ್ತೆಯಲ್ಲಿ ಕೂಡುವ ರಾಷ್ಟ್ರೀಯ ಸಭೆಯಲ್ಲಿ ಠರಾವು ಪಾಸಾಗುವದೆಂದು ಸಹಜವಾದ [illegible].

ಮೈಸೂರ ದರಬಾರದವರು ಬೆಂಗಳೂರಿನ ಸಂಪಿನ ವೇಳೆಯಲ್ಲಿ ಸಸ್ಪೆಂಡ ಮಾಡಿದಂಥ ವರ್ತಮಾನಪತ್ರಗಳಿಗೆ ಪುನಃ ಪತ್ರ ಮುದ್ರಿಸುವ ಅಪ್ಪಣೆ ಕೊಟ್ಟಿದ್ದಾರೆ.

ಹಸರತ ಮೋಹನಿಯವರ ಮತವು-

ಪಂಡಿತ ನೆಹರು ಕಮಿಟಿಯ ಬಗ್ಗೆ ಮೌಲಾನಾ ಹಸರತ ಮೋಹನಿಯವರು ತಮ್ಮ ಮತವನ್ನು ಜಾಹೀರ ಮಾಡಿದ್ದಾರೆ. ಇವರು ಸಂಪೂರ್ಣ ಸ್ವಾತಂತ್ರ್ಯವಾದಿಗಳು. ಲಾರ್ಡ ಬರ್ಕನಹೆಡ್ಡಸಾಹೇಬರು ತಮ್ಮ ಕಾರಸ್ಥಾನದಲ್ಲಿ ಗೆದ್ದರು. ಏಕೆಂದರೆ- ಹಿಂದುಸ್ಥಾನ ಮತ್ತು ಇಂಗ್ಲಂಡದ ಸಂಬಂಧ ತಪ್ಪಬಾರದೆಂಬ ಅವರ ಮತಕ್ಕೆ ಯಶಬಂತು. ಖಂಡದಾಗಿ ಹೇಳಿದ್ದಾರೆ.

ಮೌ. ಶೌಕತಲ್ಲಿ-

ರಾಜಕೀಯ ಕ್ಷೇತ್ರದಲ್ಲಿ ಇಂಗ್ರೇಜಿ ಜನರನ್ನು ಪೂರಾ ತೆಗೆದರೇ ನಮ್ಮ ರಾಜಕೀಯ ಸಂಘಟನೆ ಮಾಡಿಕೊಳ್ಳತಕ್ಕದ್ದು. ಮುದ್ರಾಸದಲ್ಲಾದ ಠರಾವಿನ ಪ್ರಕಾರ ಹಿಂದೂ ಮುಸಲಮಾನ ರಾಜಕೀಯ ಐಕ್ಯವು ಸುಲಭಸಾಧ್ಯವಾಗಿರುತ್ತದೆ. ಪಂಜಾಬ, ಬಲೂಚಿಸ್ತಾನ, ವಾಯುವ್ಯ ಸರಹದ್ದು ಮತ್ತು ಸಿಂಧವನ್ನು ಒಂದು ಇಲಾಖೆ ಮಾಡಬೇಕೆಂಬ ವಿಚಾರವು ಸ್ತುತ್ಯವಾಗಿರುತ್ತದೆ.

ಹಿಂದೂ ಮುಸಲಮಾನ ವಿವಾಹ.

—(೦)—

ಪುಣೆಯಲ್ಲಿ ಖಾಸ- ಮಾಲಿನಿಯ ಮದುವೆಯು ಕದ್ದು ಮುಚ್ಚಿಯಾಯಿತು. ಪುಣೆಯ ನಾಗರಿಕರು ಮದುವೆಯ ವಿರುದ್ಧ ದೊಡ್ಡ ಗೊಂದಲವೆಬ್ಬಿಸಿದರು. ಇದಕ್ಕೆ ತೀರ ವಿರುದ್ಧವಾಗಿ ಮುದ್ರಾಸದಲ್ಲಿ ಅನಿಬಿಜಂಟಮ್ಮನವರ ಆಶ್ರಮ ಮತ್ತು ಆಶ್ರಯದಲ್ಲಿ ಬ್ರಾಹ್ಮಣ ಮತ್ತು ಮುಸಲಮಾನ ವಿವಾಹವಾಯಿತು. ಈ ಮೊದಲು ಹೇಳಿದಂತೆ ಮದುಮಗಳು ಮೆಡಿಕಲ ಕಾಲೇಜದಲ್ಲಿ ಓದುತ್ತಿದ್ದಾಳೆ. ಮದುಮಗನಾದ ಮುಸಲಮಾನ ಗೃಹಸ್ಥನು ಫಾರೆಸ್ಟ ಆಫೀಸರನಾಗಿದ್ದಾನೆ. ವಧುವಿನ ತಂದೆಯು ಸ್ವತಃ ಕನ್ಯಾದಾನ ಮಾಡಿಕೊಟ್ಟನು. ಮದುವೆಗೆ ನೂರಾರು ಗೃಹಸ್ಥರು ಹೋಗಿದ್ದರು. ಹಾಯಕೋರ್ಟಿನ ವಕೀಲರಾದ ವಿ. ಶೇಷಾಚಾರ್ಯರು ವಧುವರರು ಸಾಮಾಜಿಕ ಸುಧಾರಣೆಯಲ್ಲಿ ಮುಂದೆ ಹೆಜ್ಜೆಯಿಟ್ಟ ಬಗ್ಗೆ ಅಭಿನಂದನ ಮಾಡಿದರು. ಪಂಡಿತ ಸಂಜೀವಶಾಸ್ತ್ರಿಯವರು ಪುರೋಹಿತರಾಗಿ ಎಲ್ಲ ವಿಧಿಗಳನ್ನು ಮಾಡಿಸಿದರು. ಮದುವೆಯಾದ ಬಳಿಕ, ಹಿಂದೂ ಮುಸಲಮಾನ, ಕ್ರಿಶ್ಚನ್ನ ಮೊದಲಾದ ನೂರಾರು ಜನರ ಪ್ರೀತಿ ಭೋಜನವಾಯಿತು.

ಹಾಯಕೋರ್ಟಿನ ಚಮತ್ಕಾರದ ತೀರ್ಪು.

—೦—

ಮಾಯಾವರದಲ್ಲಿ ಒಬ್ಬನು ೧೭ ವರ್ಷದ ಮದುವೆಯಾದ ಓರ್ವ ತರುಣಿಯನ್ನು ಓಡಿಸಿಕೊಂಡು ಹೋದನೆಂಬ ಆರೋಪಕ್ಕಾಗಿ ಒಂದು ತಿಂಗಳ ಶಿಕ್ಷೆಗೆ ಗುರಿಯಾದನು. ಇದರ ಮೇಲೆ ಈತನು ಹಾಯಕೋರ್ಟಿಗೆ ಅಪೀಲು ಮಾಡಿದನು. ಹೆಂಡತಿಯ ಪರಿಯಿಂದ ಗಂಡನು ಫಿರ್ಯಾದಿ ಮಾಡತಕ್ಕದ್ದು. ತಂದೆ ಮಾಡಿದ್ದಾನೆ. ಗಂಡನು ಗೈರಹಾಜರಿದ್ದನೆಂದು ಪುರಾವೆಯಾಗಿಲ್ಲ. ಮೇಲಾಗಿ ತಂದೆಯು ಕೋರ್ಟಿನ ಅಪ್ಪಣೆ ಪಡೆಕೊಂಡು ಫಿರ್ಯಾದಿ ಕೊಟ್ಟಿಲ್ಲೆಂದು ಆರೋಪಿಯ ವಕೀಲನು ತಕರಾರು ಮಾಡಿದನು. ನ್ಯಾಯಮೂರ್ತಿಗಳು ಈ ಮತ್ತು ಬೇರೆ ಕಾರಣಗಳನ್ನು ಒಪ್ಪಿ, ಆರೋಪಿಯನ್ನು ದೋಷ ಮಾಡಿದರು.

ಅಸೆಂಬ್ಲಿಯಲ್ಲಿ ಸ್ವರಾಜ್ಯ ಠರಾವು.

—೦—

ಪಂಡಿತ ಮೋತಿಲಾಲ ಕಮಿಟಿಯ ಸ್ವರಾಜ್ಯಯೋಜನೆಯ ಪ್ರಕಾರ ಹಿಂದುಸ್ಥಾನಕ್ಕೆ ವಸಾಹತಿಕ ಸ್ವರಾಜ್ಯ ಬೇಕು; ಅದಕ್ಕೂ ಕೆಳಪ್ರತಿಯ ರಾಜಕೀಯ ಹಕ್ಕು ಸ್ವಾತಂತ್ರ್ಯ ತಮಗೆ ಬೇಕಾಗಿಲ್ಲ. ಮತ್ತು ರಾಷ್ಟ್ರಸಂಘದ ಪರಿಷತ್ತಿನ ಪ್ರತಿನಿಧಿಯು ಹಿಂದೀ ಗೃಹಸ್ಥರೇ ಇರಬೇಕು. ಅವರು ಅಸೆಂಬ್ಲಿಯಿಂದ ಆರಿಸಲ್ಪಟ್ಟಂಥವರಿರಬೇಕೆಂದು ಲಾಲಾ ಲಜಪತರಾಯರು ಅಸೆಂಬ್ಲಿಯಲ್ಲಿ ಠರಾವು ತರತಕ್ಕವರಿದ್ದಾರೆ.

ನಾಗಪೂರದಲ್ಲಿ ಒಬ್ಬ ಮಂತ್ರಿಯ ರಾಜೀನಾಮೆ.

—(೦)—

ಇನ್ನೊಬ್ಬ ಮಂತ್ರಿಯ ಮೇಲೆ ಗದೆ.

—೦—

ನಾಗಪೂರ ಇಲಾಖೆಯಲ್ಲಿ ಪ್ರತಿಯೋಗಿ ಸಹಕಾರ ಪಕ್ಷ ನಿರ್ಮಾಣವಾಗಿ ಬ್ರಾಹ್ಮಣೇತರರಾದ ಬ್ಯಾರಿಸ್ಟರ ದೇಶಮುಖರೂ, ಜಬಲಪೂರದ ಶ್ರೀ ರಾಘವೇಂದ್ರರಾಯರೂ ದಿವಾನರಾದರು. ಪ್ರತಿಯೋಗಿ ಸಹಕಾರ ಸಂಘದಲ್ಲಿ ತಾವು ಉಳಿಯದ್ದರಿಂದ ಬಣಾಯೊಡೆಯಿತು. ಮೇಲೆ ಸಾಯಮನ್ನ ಕಮಿಶನವೂ ಭೋಗ ಕಂಡಿತು. ಈ ಮೂಲಕ ಬ್ಯಾರಿಸ್ಟರ ದೇಶಮುಖರು ರಾಜೀನಾಮೆ ಕೊಟ್ಟರು. ಅದನ್ನು ಗವರ್ನರಸಾಹೇಬರು ಸ್ವೀಕರಿಸಿದ್ದಾರೆ. ಶ್ರೀ ರಾಘವೇಂದ್ರರಾಯರಲ್ಲಿಯೂ ವಿಶ್ವಾಸವಿಲ್ಲೆಂಬ ಠರಾವನ್ನು ಕೌನ್ಸಿಲದಲ್ಲಿ ತಂದರು. ಆದರೆ ಈ ಸೂಚನೆಗೆ ೪೭ ಬದಲಾಗಿ ೩೧ ಮತಗಳು ಬಿದ್ದವು. ವರ್‍ಹಾಡದ ಮೆಂಬರರು ಎದ್ದು ನಿಲ್ಲಲಿಲ್ಲ. ಹೀಗಾಗಿ ಸದ್ಯ ರಾಘವೇಂದ್ರರಾಯರು ಶುಕ್ತ್ರ ದಾಟಿದ್ದಾರೆ. ಆದರೂ ಅವರ ತಲೆಯ ಮೇಲೆ ಜರಾಸಂಧನ ಗದೆಯು ಯಾವಾಗ ಬಿದ್ದೀತೆಂಬ ನಿಯಮವಿಲ್ಲದಾಗಿದೆ. ರಾಯರು ಪ್ರತಿಯೋಗಿ ಸಹಕಾರದ ಬದಲು ಸ್ವತಂತ್ರ ಪಕ್ಷವನ್ನು ನಿರ್ಮಾಣ ಮಾಡಬೇಕೆಂದಿದ್ದಾರೆ.

ಮೋಟಾರಿನಿಂದ ಕಾಲು ಮುರಿದದ್ದಕ್ಕೆ

೪೨ ಸಾವಿರದ ಗಳಿಕೆ.

—೦—

ಮುಂಬಯಿಯಲ್ಲಿ ವಿಜಯಸಿಂಗ ದ್ವಾರಕಾದಾಸನೆಂಬ ೧೩ ವರ್ಷದ ಹುಡುಗನ ಮೇಲೆ ಮೊಗುಲಾಮಲ್ಲಿ ಎಂಬ ಹೆಸರಿನ ಸಾಹುಕಾರ ಮತ್ತು ವಕೀಲರ ಮೋಟಾರ ಹಾದು, ಹುಡುಗನ ಕಾಲು ಮುರಿಯಿತು. ಪಾಲಕರು ಗುಲಾಮಲ್ಲಿಯವರ ಮೇಲೆ ಲಕ್ಷ ರೂಪಾಯದ ದಾವೆ ಮಾಡಿದರು. ವಾದಿ ಪ್ರತಿವಾದಿಗಳಿಬ್ಬರೂ ರಾಜಿಯಾಗಿ ಹುಡುಗನಿಗೆ ೪೦ ಸಾವಿರ ರೂಪಾಯಿ ಕೊಡಬೇಕೆಂದು ಠೀಕ ಮಾಡಿಕೊಂಡರು.

ವಿಜಾಪೂರದ ಡಿ॥ ಲೋ॥ ಬೋರ್ಡಿನ

ಮೇಲೆ ದಾವೆ.

—(೦)—

ವಿಜಾಪೂರದ ಡಿಸ್ಟ್ರಿಕ್ಟ ಲೋಕಲಬೋರ್ಡಿನಲ್ಲಿ ಇಂಜನಿಯರರನ್ನು ತೆಗೆದ ಸುದ್ದಿಯನ್ನು ಈ ಮೊದಲು ಬರೆದಿದ್ದೇವೆ. ಮೊದಲಿನ ಇಂಜನಿಯರರಾದ ಮಿ. ಬೆಳವಡಿಯವರನ್ನು ಕೆಲಸದಿಂದ ತೆಗೆಯುವದು ಕಾಯದೆಶೀರವಲ್ಲೆಂದೂ, ಅದನ್ನು ಅಮಲಿನಲ್ಲಿ ತರದಂತೆ ಬೋರ್ಡಿಗೆ ತಾಕೀದಿ ಹುಕುಮ ಮಾಡಬೇಕೆಂದೂ ಬೋರ್ಡಿನ ಒಬ್ಬ ಮೆಂಬರರಾದ ಶ್ರೀ. ರಘೂತ್ತಮಾಚಾರ್ಯರು ದಿವಾಣಿ ಕೋರ್ಟಿನಲ್ಲಿ ದಾವೆ ಮಾಡಿದ್ದು, ದಾವೆಯಲ್ಲಿ ಬೇಡಿಕೊಂಡ ಮೇರೆಗೆ ಮುನಸಫರು ಇಂಜಂಕ್ಶನ ಕೊಟ್ಟಿದ್ದಾರೆ.

ಸ್ವಿಟ್ಝರ್ಲಂಡದ ಜನಸಂಖ್ಯೆ ೩೦-೪೦ ಲಕ್ಷ ಇಲ್ಲ. ವಾಚ ಮಾಡುವ ಕಾರಖಾನೆಗಳು ಐನೂರು ಉಂಟು. ಆದರೆ ಒಂದೂ ಕಾರಖಾನೆಯಲ್ಲಿ ಹಿಂದೂ ಉಮೇದವಾರರನ್ನು ಕಲಿಸಲಿಕ್ಕೆ ತಕೊಳ್ಳಲಿಲ್ಲ. ಸ್ವಿಟ್ಝರ್ಲಂಡದಂತೆ ಫ್ರಾನ್ಸದಲ್ಲಿ ಗಡಿಯಾರ ಮಾಡುವ ಕಾರಖಾನೆಗಳುಂಟು. ಇಲ್ಲಿಯವರೆಗೆ ಮಾತ್ರ ಪುಣೆಯಿಂದ ಹೋದ ಶ್ರೀ. ಸಹಸ್ರಬುದ್ಧೆ ಎಂಬವರಿಗೆ ಈ ವಿದ್ಯೆ ಕಲಿಸಿದರಲ್ಲದೆ, ಇಂಗ್ಲಂಡ ಅಮೇರಿಕೆಗೆ ಹೋಗುವದರ ಬದಲಾಗಿ ಹಿಂದೀ ತರುಣರು ಫ್ರಾನ್ಸಕ್ಕೆ ಬಂದು, ತಮಗೆ ಬೇಕಾದ ವಿದ್ಯಾಸಂಪಾದನೆ ಮಾಡಬೇಕೆಂಬ ಕುತೂಹಲವನ್ನು ತೋರಿಸಿದ್ದಾರೆ. ಇಲ್ಲಿ ಒಬ್ಬನಿಗೆ ತಿಂಗಳಿಗೆ ೭೦ ರೂಪಾಯಿ ವೆಚ್ಚ ಬರುತ್ತದೆ.

ಶ್ರೀ ಹರಿ ಸರ್ವೋತ್ತಮರಾಯರು ಮದ್ರಾಸದ ಕೌನ್ಸಿಲದಲ್ಲಿ ತರತಕ್ಕವರಿದ್ದಾರೆ.

ನೋಟೀಸು

ಮಿಯ್ಯಾಸಾಬ ವ ಜಬರಸಾಬ ಕರೇಕ್ಯಾತನಹಳ್ಳಿ ಸಾಕೀನ ಕೂಸನೂರ ತಾಲೂಕ ಹಾನಗಲ್ಲ ಇವರಿಗೆ—

ಕುಲಸುಂಬಿ ಕೋಮ ಮಿಯ್ಯಾಸಾಬ ಕರೇಕ್ಯಾತನಹಳ್ಳಿ ಸಾ| ಕೂಸನೂರ ತಾ| ಹಾನಗಲ್ಲ ಹಾಲಿವಸ್ತಿ ದಿಡಗೂರ ತಾ| ಕರ್ಜಗಿ ಈ ನೋಟೀಸಿನಿಂದಾ ತಿಳಿಸೋದೇನಂದರೆ- ನೀನು ನನ್ನ ಲಗ್ನದ ಗಂಡನಿದ್ದು ಲಗ್ನವಾಗಿ ಅಜಮಾಸ ೧೦-೧೨ ವರ್ಷವಾಯಿತು ಲಗ್ನವಾದ ನಂತರ ನಮ್ಮ ಜಾತಿ ರಿವಾಜ ಪ್ರಕಾರ ಎಲ್ಲ ಕೆಲಸಗಳು ಮುಗಿದನಂತರ ೮-೬ ವರ್ಷ ಯೋಗ್ಯ ರೀತಿಯಿಂದಾ ಬಾಳ್ವೆ ಮಾಡಿದೆನು ಅಷ್ಟರಲ್ಲಿಯೇ ವಂದು ಹೆಣ್ಣು ಹಡಿದೆನು ನಂತರಾ ಹಡಿಯಲಿಕ್ಕೆ ಅಂತಾ ವ ಮಾಡತಕ್ಕವರು ಯಾರೂ ಇಲ್ಲಾ ಅಂತಾ ನೀನು ನನ್ನ ತವರ ಮನಿಯಾದ ಚನ್ನಾಪೂರ ಗ್ರಾಮಕ್ಕೆ ಕಳಿಸಿದಿ ಆ ಪ್ರಕಾರ ನಾನು ಗಂಡು ಹುಡುಗನನ್ನು ಹಡಿದೆನು ಹಡಿದು ೭-೮ ತಿಂಗಳ ಮೇಲೆ ಕರಕೊಂಡು ಹೋಗಲಿಕ್ಕೆ ಹೇಳಿ ಕಳಿಸಿದರೂ ಇಂದು ನಾಳೆ ಅಂತಾ ದಿನಮೋಕ ಮಾಡಲಿಕ್ಕೆ ಹತ್ತಿ ಈಗ ಬರುವದು ಸಹಾ ೩-೪ ವರ್ಷದಿಂದಾ ಬಿಟ್ಟಿರುತ್ತಿದಿ ಹಾಗೂ ನನ್ನ ತವರ ಮನಿಯವರು ಬಹಳ ಬಡವರು ಇರುವದರಿಂದಾ ನನ್ನ ಹೊಟ್ಟಿದಕಿಂದಾ ವ ಹುಡುಗರ ಹೊಟ್ಟಿದಕಿಂದಾ ಈಗ ೪-೫ ವರ್ಷಗಳಿಂದಾ ೪೦೦ ರೂಪಾಯಿ ಸಾಲಾ ಮಾಡಿದ್ದು ಆ ಸಾಲದ ತಾಪ್ರಸ ನನಗೆ ಬಹಳ ಆದ್ದರಿಂದಾ ಈಗ ನಾನು ನನ್ನ ತಂಗಿಯ ಮನೆಯಲ್ಲಿ ಇರುತ್ತೇನೆ ಈಗ್ಯೆ ಈ ನೋಟೀಸ ಮುಟ್ಟಿದ ಎಂಟು ದಿವಸಗಳಲ್ಲಿ ನಾನು ಹೊಟ್ಟಿಗಿಂದಾ ಮಾಡಿದ ದೇಣೆ ತೀರಿಸಿ ಕರಕೊಂಡು ಹೋಗಬೇಕು ವ ಯೋಗ್ಯ ರೀತಿಯಿಂದಾ ಬಾಳ್ವೆ ಮಾಡಬೇಕು ಇಲ್ಲದೆ ಇದ್ದರೆ- ನಾನು ಯುವಡನೇ ಕಡಿಗೆ ಉಡಿಕಿ ಮಾಡಿಕೊಂಡು ಹೋಗುತ್ತೇನೆ ಈನಂತರಾ ನನ್ನ ಮೇಲೆ ವ ಉಡಿಕಿ ಗಂಡನ ಮೇಲೆ ಸಹಾ ಏನೂ ತಕರಾರು ನಡಿಯಲಿಕ್ಕಿಲ್ಲಾ ಇದೇ ತಪ್ಪೆರ ನೋಟೀಸ ಕಡೇ ನೋಟೀಸ ಅಂತಾ ತಿಳಿಯತಕ್ಕದ್ದು ಅಂತಾ ಬರಕೊಟ್ಟ ನೋಟೀಸ

ತಾ| ೨೦—೮—೧೯೩೮ ನೇ ಇಸ್ವಿ

ಈ ಎಡಗೈ ಹೆಬ್ಬೆರಳಿನ ಗುರ್ತ ಕುಲಸುಂಬಿ ಕೋಂ ಮಿಯ್ಯಾಸಾಬ ಕರೇಕ್ಯಾತನಹಳ್ಳಿ ಸಾಕೀನ ಕೂಸನೂರ ಹಾಲವಸ್ತಿ ದಿಡಗೂರ ಈಕಿ ಮಾಡಿದ್ದು

ನಕಲಿ ಮಾಲಿನ ಬಗ್ಗೆ ಎಚ್ಚರಾಗಿರಿ.

ನಮ್ಮ ಉಂಚೇ ಪವಿತ್ರ ಡಬ್ಬಿಯಲ್ಲಿ

ಹಿರಾ ಇಂಗು

ಅವಶ್ಯ ಬೇಡಿರಿ.

ಇದು ದಿನಾಲು ಮನೆಯಲ್ಲಿ ಉಪಯೋಗವಾದದ್ದು ಆಡಿಗೆಯು ಇದರಿಂದ ರುಚಿಕರ ಮತ್ತು ಸ್ವಾದಿಷ್ಟವಾಗುವದು ಎಂಬದು ಎಲ್ಲರಿಗೂ ಖಾತ್ರಿಯಾಗಿರುವದು ನಾವು ನಮ್ಮ ಗುಮಾಸ್ತರನ್ನು ಇರಾಣ ದೇಶಕ್ಕೆ ಕಳುಹಿಸಿ ಉಂಚೇಮಾಲನ್ನು ರೋಕಡಿಂದ ತೆಗೆದುಕೊಳ್ಳುವದರಿಂದ ನಮ್ಮ ಗಿರಾಕಿಗಳಿಗೆ ಬದಲ ನೋಡಿಸ್ಕರ ಬೀಳುವದಲ್ಲದೆ ಖಾತ್ರಿ ಮಾಲು ಸಿಗುವದು. ಈ ಇಂಗು ಬಾಜಾರಿ ಇಂಗಕ್ಕಿಂತ ಬಹಳ ತೀಕ್ಷ್ಣವಿದ್ದು ಸುವಾಸಿಕವಾಗಿರುವದರಿಂದ ನಮ್ಮ ಒಂದು ತೊಲಿ ಇಂಗು ಇತರ ಮೂರು ತೊಲಿ ಇಂಗಿಗಿಂತಲೂ ಮೇಲಾಗಿರುವದು. ಇದು ಔಷಧಿ ವಸ್ತುವಾಗಿರುವದರಿಂದ ಅಜೀರ್ಣ, ಜೀರ್ಣಜ್ವರ, ಹೊಟ್ಟೆಕುಟ್ಟು ಹಿಡಿಯೋಣ, ಮಲೇರಿಯಾ, ಕಾಲರಾ, ಇನ್ಫ್ಲುಯೆಂಝಾ, ಮುಂತಾದ ರೋಗಜಂತುಗಳ ಪ್ರತಿಬಂಧವಾಗಿರುವದು. ಉಪ್ಪಿನಕಾಯಿಯಲ್ಲಿ ಉಪಯೋಗಿಸಿದರೆ ಕ್ರಿಮಿಗಳಾಗುವ ಸಂಭವವಿಲ್ಲ. ಇದನ್ನು ಬೇಕಾದಷ್ಟು ಮುಚ್ಚಿಟ್ಟರೂ ವಾಸನೆಯು ಪಸರಿಸದೆ ಇರದು. ಇದನ್ನು ಸಂಗ್ರಹಿಸುವದು ಯೋಗ್ಯವದೆ

ಆರ್ಧಾ ಔಂಸಿನ ಕಿರಕೋಳ ವಿಕ್ರಿಗೆ ಸೊಯಿಸ್ಕರ ಫ್ಯಾನ್ಸಿ ಡಬ್ಬಿಗಳು.

ಇರಾಣಿ ಮ್ಯಾಸ್ಟರ್ ಇಂಗು.

ಡಜನ ಒಂದಕ್ಕೆ ನಾಲ್ಕು ರೂಪಾಯಿ.

ಡಬ್ಬಿಯು ಒಂದು ಡಜನಕ್ಕಿಂತಲೂ ಕಡಿಮೇ ಹೆಚ್ಚು ಕೊಡೋಣವಿಲ್ಲಾ ಎಲ್ಲರಿಗೂ ಪ್ಯಾಕಿಂಗ ಪೋಸ್ಟೇಜ ಮಾಫ ಹೆಚ್ಚು ಮಾಲು ಬೇಡಿಕೊಳ್ಳುವವರು ಪತ್ರವ್ಯವಹಾರ ಮಾಡಬೇಕು. ವ್ಯಾಪಾರಸ್ಥರಿಗೆ ಬೋರ್ಡ ಫುಕಟ ಸಿಗುವವು.

ಪತ್ತೆ— ಮೆಸರ್ಸ ಕುಲಗೋಡ ಬ್ರದರ್ಸ ತಾಲೂಕ ಗೋಕಾಕ.

---

೧೦೦ ಕ್ಕೆ ಒಂದು ವರ್ಷಕ್ಕೆ ಒಂಬತು ರೂಪಾಯಿ ಬಡ್ಡಿ ದರ.

ದಿ ಪಿಪಲ್ಸ ಓನ ಪ್ರಾವಿಡೆಂಟ ಅ್ಯಾಂಡ ಜನರಲ ಇನ್ಸುಆರನ್ಸ ಕಂಪನಿ, ಲಿಮಿಟೆಡ ಪುಣೆ.

(Life) ಜೀವವಿಮಾ- ಪ್ರೀಮಿಯಮ ದರ ತಿಂಗಳಿಗೆ ೨ ರೂ, ೧ ರೂ, ಮತ್ತು ೮ ಆಣೆ. ೧೦ ವರ್ಷಗಳ ಮೇಲೆ ಬೋನಸ ಮತ್ತು ಲಾಭ ಸಹಿತ ರಕಮು ಸಿಗುವದು.

Marriage ಲಗ್ನಶಾಖೆ- ದರ ತಿಂಗಳಿಗೆ ೨ ರೂಪಾಯಿಯಂತೆ ಪ್ರಿಮಿಯಮ ಕೊಡಬೇಕಾಗುವದು ಲಗ್ನದ ವೇಳೆಗೆ ರೂಪಾಯಿ ಕೊಡಲಾಗುವದು.

(Loan) ಸಾಲದಶಾಖೆ- ೧೦೦ ಕ್ಕೆ ವರ್ಷಕ್ಕೆ ಒಂಬತ್ತೇ ರೂಪಾಯಿ ಬಡ್ಡಿ ದರದ ಮೇಲೆ ೫೦ ರಿಂದ ೫೦೦೦ ರೂಪಾಯಿಗಳ ವರಿಗೆ ಜಾಮೀನು ಇಲ್ಲದೆ ಸಾಲ ದೊರೆಯುವದು.

ಧಾರವಾಡ ಜಿಲ್ಹೆಯ ಎಲ್ಲ ತಾಲೂಕುಗಳಲ್ಲಿಯೂ ಏಜಂಟರು ಬೇಕಾಗಿದ್ದಾರೆ.

ಉತ್ಸಾಹೀ ಜನರಿಗೆ ಯೋಗ್ಯ ಕಮೀಶನ ದೊರೆಯುವದು.

ಪತ್ತೆ— ಡಾ| ನಾಡಗೀರ ವ್ಹಿ. ಜೆ (ಹೋಮಿಯೋ) ಎಸ್. ಬಿ.
ಹಿರೇಕೆರೂರ ರಿ| ಧಾರವಾಡ.

ವಿ. ಎಮ. ವ್ಹಿ. ಸಾರೆಯವರ
ನ್ಯೂ ಅಂಡ ಸೇಕಂಡ ಹ್ಯಾಂಡ

ಬುಕ್ಕ ಡಿಪೋ

ನಾವು ಹಳೇ ಪುಸ್ತಕಗಳನ್ನು ಯೋಗ್ಯದರದಿಂದ ಖರೀದಿಸುತ್ತೇವೆ. ಮತ್ತು ಮಾರಲಿಕ್ಕೆ ಕೊಡುತ್ತೇವೆ. ನಮ್ಮ ಪುಸ್ತಕಾಲಯದಲ್ಲಿ ಶಾಲೆ ಕಾಲೇಜುಗಳಿಗೆ ಬೇಕಾಗುವ ಕ್ರಮಿಕ ಪುಸ್ತಕಗಳೂ ಬೇರೆ ಪುಸ್ತಕಗಳೂ ದೊರೆಯುತ್ತವೆ. ಪರಸ್ಥಳದವರಿಗೆ ವ್ಹಿ. ಪಿ. ಯಿಂದ ಕಳಿಸುವೆವು. ಕೊಳ್ಳುವವರಿಗೆ ಯೋಗ್ಯ ಕಮೀಶನ ದೊರೆಯುವದು.

ಪ್ರೊಪ್ರಾಯಿಟರ,
ಎಮ. ವಿ. ಸಾರೆ.
ಗಾಂಧಿ ಚೌಕ, ಧಾರವಾಡ.

ನೋಟೀಸಿನ ದರಗಳು.

ಸಿಂಗಲ ಕಾಲಮಿನ ಒತ್ತು ಪಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಪಳಿಗೆ ಒಂದು ಆಣೆ ಇಂಗ್ಲಿಷ ಪತಿಯೊಂದು ಒಳಿಗೆ ಐದು ಆಣೆ ಸರಕಾರಿ, ಮ್ಯುನಿಸಿಪಾಲಿಟಿ ಲೋಕಲಬೋರ್ಡ ಡಿಸ್ಟ್ರಿಕ್ಟ ಬ್ಯಾಂಕ ಮುಂತಾದ ಸಾರ್ವಜನಿಕ ನೋಟೀಸುಗಳು ಸ- ಲಿ ಗೆ ಮೂ ೦೨ ಸ— ಇಂಗ್ಲಿಷದಿಂದ ಅವತರಿಸಿ ಕನ್ನಡದಲ್ಲಿ ಹಾಕುವದಾದರೆ ಆ ಆಕ ಡಬಲ ಕಾಲಮಿನ ಒಳಿಗಳಿಗೆ ಇಮ್ಮಡಿ ಚಾರ್ಜ ಕಾಯಂ ಜಾಹಿರಾತುಗಳನ್ನು ಕೊಡುವವರು ಕೆಳಗಿನ ಒತ್ತೇಕ್ಕೆ ಪತ್ರವ್ಯವಹಾರ ಮಾಡಬಹುದು

ಮ್ಯಾನೇಜರ ವಿಜಯ ಧಾರವಾಡ

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B. 1443

ನಿತ್ಯ ಪತ್ರ **ವಿಜಯ** ಬೆಲೆ ಅರ್ಧ ಆಣೆ

ಸಂಪಾದಕರು:- ಅನಂತಾಚಾರ್ಯ ಬಾಳಾಚಾರ್ಯ ಹೊಸಕೇರಿ

ವರ್ಷ ೯) ಧಾರವಾಡ ಶುಕ್ರವಾರ ತಾರೀಖು ೨೪ ನೇ ಅಗಸ್ಟ ೧೯೩೪ (ಸಂಖ್ಯೆ ೧೯೨

ದಿ ಜಯಲಕ್ಷ್ಮೀ ಬ್ಯಾಂಕ ಲಿಮಿಟೆಡ, ಧಾರವಾಡ-

ಸ್ಥಳ- ಮಂಗಳವಾರಪೇಟೆ, ಲಕಮಲೆ ವಕೀಲ ಹಾದಿಮನಿಯವರ ಮನೆ.

೧ ಈ ಬ್ಯಾಂಕಿನಲ್ಲಿ ದಾಗಿನೆಗಳ ಮೇಲೆ ಸಾಲವು ದರದಿಂದ ತಾಸು ಮತ್ತು ಒಪಳ ಮುದ್ಧತಿಯ ಕಸಳ ಸಣ್ಣ ರಕಮಿನಿಂದ ಬೇಕಾದಷ್ಟು ದೊಡ್ಡ ರಕಮಿನ ತನಕ ಸಾಲ ದೊರೆಯುವದು. ಬಡ್ಡಿಯ ದರ ಸುಲಭ ಸಮಕ್ಷಮ ತಿಳಕೊಳ್ಳಬೇಕು.

೨ ಸರಕಾರಿ ಪ್ರಾಮಿಸರಿ ನೋಟುಗಳ ಖರೀದಿ, ವಿಕ್ರಿ ನಡೆಯುವದು. ಅವುಗಳ ಮೇಲೆ ಸಾಲ ದೊರೆಯುವದು. ಮತ್ತು ಯೋಗ್ಯ ಕಮೀಶನ ತಕ್ಕೊಂಡು ಗಿರಾಕಿಗಳಿಗೆ ಲಾಭಕರವಾಗಿ ಅವುಗಳ ಮುರಾಟ ಮಾಡಿ ಕೊಡಲ್ಪಡುವದು.

೩ ಮುದ್ದತಿ ಠೇವಿನ ಹಣವನ್ನು ಇಟ್ಟುಕೊಳ್ಳಲಾಗುವದು. ಸ್ವಲ್ಪ ರಕಮಿನಿಂದ ದೊಡ್ಡ ರಕಮಿನ ತನಕ ಇಟ್ಟುಕೊಳ್ಳಲಾಗುವದು. ಬಡ್ಡಿಯ ದರವನ್ನು ಸಮಕ್ಷಮ ಅಥವಾ ಪತ್ರವ್ಯವಹಾರದಿಂದ ತಿಳಕೊಳ್ಳಬೇಕು.

೪ ಈ ಬ್ಯಾಂಕಿನ ಶೇರುಗಳು ಮಾರಾಟಕ್ಕೆ ದೊರೆಯುವವು.

೫ ಬ್ಯಾಂಕಿಗೆ ಸಂಬಂಧಿಸಿದ ಚಾಲತಿ ವ್ಯವಹಾರ ಮೊದಲಾದ ಎಲ್ಲ ಕೆಲಸಗಳು ನಡೆಯುವವು. ವಿಶೇಷ ಸಂಗತಿಗಳನ್ನು ಆಫೀಸಿನ ವೇಳೆಯಲ್ಲಿ ಸಮಕ್ಷಮ ಅಥವಾ ಪತ್ರವ್ಯವಹಾರದಿಂದ ತಿಳಕೊಳ್ಳಬೇಕು.

ಕೃಷ್ಣರಾವ ವೆಂಕಟರಾವ ಧಂಡಿವಾಡ
ಮ್ಯಾನೇಜಿಂಗ ಏಜಂಟ.

—ಃ ಶ್ರೀ ಗುರು ಪ್ರಸನ್ನ ಃ—

ಪ್ರತಿಯೊಬ್ಬ ಕುಟುಂಬಿಕನು ಆವಶ್ಯ ಸಂಗ್ರಹದಲ್ಲಿಡತಕ್ಕ ಒಂದೇ ಔಷಧ.

ಭಾಸ್ಕರ ಚೂರ್ಣ-

ಸುಪ್ರಸಿದ್ಧ ವನಸ್ಪತಿ ಶಾಸ್ತ್ರಜ್ಞರ ಸೂಚನೆಯ ಮೇರೆಗೆ ಈ ಚೂರ್ಣವು ತಯಾರಿಸಲ್ಪಟ್ಟಿದ್ದು ಇದರ ಸೇವನೆಯಿಂದ ನಾಲ್ಕು ತರದ ವ್ಯಾಧಿಗಳು ಸ್ವಲ್ಪದರಲ್ಲಿಯೇ ನಾಶಹೊಂದುವವು. ಅಜೀರ್ಣ ಅಪಚನ, ಅಮಾಂಶ, ಅಗ್ನಿಮಾಂದ್ಯ ಸಂಗ್ರಹಣಿ, ಹೊಟ್ಟೆಶೂಲಿ, ಹೊಟ್ಟೆನೋವು ಮತ್ತು ಯಾವ ತರದ ರೋಗವಿಕಾರಗಳ ಮೇಲೆ ಇದೊಂದೇ ರಾಮಬಾಣ ಔಷಧವಿರುವದು. ಒಂದು ಚಿಮಟಿಗಿಂತಷ್ಟು ಈ ಚೂರ್ಣವನ್ನು ಬಾಯಿಯಲ್ಲಿ ಹಾಕಿಕೊಂಡರೆ ನಾಲ್ಕು ಘಟಕ ಅರ್ಧತಾಸಿನಲ್ಲಿಯೇ ಹಸಿವೆ ಆಗುವದು. ಜೇನಿನಿಂದ ಗುಣವಾಗದ್ದ ಅಶಕ್ತ ಮನುಷ್ಯರು ಎರಡನೆ ಶಕ್ತಿವರ್ಧಕ ಔಷಧ ತೆಗೆದುಕೊಳ್ಳುವ ಕಾರಣವೇ ಇಲ್ಲ. ಪಳ್ಳಿಗಳಲ್ಲಿಯ ಜನರು ಒಂದು ಭಾಸ್ಕರ ಚೂರ್ಣದ ಡಬ್ಬಿಯನ್ನು ತಮ್ಮ ಹತ್ತಿರ ಇಟ್ಟುಕೊಂಡರೆ ನಾನಾ ರೀತಿಯ ಬೇನೆಗಳಿಗೆ ಉಪಯೋಗವಾಗುವದು. ಎಷ್ಟು ದಿವಸದ ಅಜೀರ್ಣವಿದ್ದರೂ ಮೂರೇ ದಿವಸಗಳಲ್ಲಿ ಗುಣವಾಗುವದು. ಕೇವಲ ವನಸ್ಪತಿಯಿಂದಲೇ ತಯಾರಿಸಿದ್ದ ಈ ಔಷಧವನ್ನು ಪ್ರತಿಯೊಬ್ಬನೂ ಅವಶ್ಯ ಸಂಗ್ರಹದಲ್ಲಿಡತಕ್ಕದ್ದು. ಒಂದು ಡಬ್ಬಿಯ ಕಿಮ್ಮತ್ತು ೧೦ ಆ. [illegible] ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು. ಪೋಸ್ಟೇಜ ಬೇರೆ ಸ್ಯಾ. ನಾ. ೧ ಆಣೆ.

ಏಜಂಟ— ಬಿ. ಪಿ. ಟಿಕಾರೆ ಲ್ಯಾಂಡ ಸರ್ವೆ, ಮಾರ್ಕೆಟರೋಡ ಧಾರವಾಡ.

ದಿ ಧಾರವಾಡ ಅರ್ಬನ ಕೋ ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಿಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ವಂತಿಗೆಯು ಏಳು ಲಕ್ಷದ ಮೇಲುಂಟು. ಚಕ್ಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರ ನಡೆಯಲ್ಪಡುವದು. ಕ್ಯಾಶೀವು ಮತ್ತು ಬೇರೆ ತರದ ಡಿಪಾಜಿಟುಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಕಾತಿ,
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್ ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ಆರು, ಒಂಬತ್ತು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಠೇವಿ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಿರುತ್ತದೆ.

ಎ. ಕೆ. ಅಟ್ಟಿ
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣೀ ದರ.

ನಿತ್ಯ ಪತ್ರಕ್ಕೆ	
೧೨ ತಿಂಗಳಿಗೆ	೧೨-೮-೦ ರೂ.
೬ ,,	೭-೦-೦
೪ ,,	೪-೦-೦
ವಾರ ಪತ್ರಕ್ಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಸಂಗತಿ ಕೆಳಗಿನ ವಿಳಾಸಕ್ಕೆ

ಮ್ಯಾ. ವಿಜಯ ಧಾರವಾಡ

ವಿಜಯ.

ಧಾರವಾಡ ತಾ ೨೪-೮-೨೮ ನೇ ಇಸ್ವಿ

ಶ್ರೀ.

ಆ ವಿಜಯಂ ಶ್ರೀಕಪ್ರಿಯು |
ನೀ ವಸುಮತಿಯು ನಲಿಸಿರೆ ಸುಹಿತ ಚರಿತೆಗಳಿಂ ||
ದೀ "ವಿಜಯಂ" ಶ್ರೀಕರುಣ |
ನಾ ವಿಹಿತಂಗಳ ವಿವರಿಸಿನಲಿವುದು ಸಾಜಂ ||೧||

ಸ್ವರ್ಗವಾಸಿ ವಕೀಲ ಗುರುನಾಥರಾಯರು.

ಶ್ರೀ. ಗುರುನಾಥರಾವ ಘಾಟಗೆ ವಕೀಲರವರು ನಿನ್ನಿನ ದಿವಸ ಸ್ವರ್ಗಸ್ಥರಾದ ಸುದ್ದಿಯನ್ನು ಬರೆಯುವದಕ್ಕೆ ವಿಷಾದಿಸುತ್ತೇವೆ. ಸ್ವ ಗುರುನಾಥರಾಯರ ಹೆಸರು ಕೇಳದ ಸುಶಿಕ್ಷಿತ ಮತ್ತು ಅಶಿಕ್ಷಿತರು ಇರುವದೇ ಇಲ್ಲ. ಇವರು ವಕೀಲಿಯಲ್ಲಿ ಹೆಸರಾದಂತೆ ಸಾರ್ವಜನಿಕ ಕೆಲಸದಲ್ಲಿಯೂ ಪ್ರಸಿದ್ಧರಾದಂಥವರು. ಇವರ ವಕೀಲಿಯ ಧಂಘರಾಟಿಯಲ್ಲಿ ದೊಡ್ಡ ದೊಡ್ಡ ಪ್ರಕರಣಗಳು ಇವರನ್ನು ಬಿಟ್ಟು ಮುಂದೆ ಹೋಗುತ್ತಿದ್ದಿಲ್ಲ, ಅದರಂತೆ ಧಾರವಾಡದ ಯಾವದೊಂದು ಸಾರ್ವಜನಿಕ ಕೆಲಸವು ಇವರನ್ನು ಬಿಟ್ಟು ಆಗುತ್ತಲೇ ಇದ್ದಿಲ್ಲ. ಇವರು ಮರಾಠಿಗರಾದರೂ ಕನ್ನಡಿಗರಾಗಿ, ಕನ್ನಡಿನ ಅಭಿಮಾನಿಗಳಾಗಿದ್ದರು. ಕೆಲಕಾಲ ಸಂಘದ ಅಧ್ಯಕ್ಷರೂ ಆಗಿದ್ದರು ಸಂಸ್ಕೃತದಲ್ಲಂತೂ ಪೂರ್ಣ ಅಭಿಮಾನಿಗಳು ಸ್ವತಃ ಈ ಭಾಷೆಯ ಉಚ್ಚ ಶಾಸ್ತ್ರಗಳ ಮತ್ತು ವೇದಾಂತದ ಅಧ್ಯಯನ ಮಾಡಿದವರು. ಶ್ರೀ ಜಗದ್ಗುರು ಶಂಕರಾಚಾರ್ಯರ ಸಂಸ್ಕೃತಪಾಠಶಾಲೆಯು ಇವರ ಈ ದೇವಭಾಷೆಯ ಅಭಿಮಾನದ ಸ್ಮಾರಕವಾಗಿರುತ್ತದೆ. ಪಾಠಶಾಲೆ ಇರುವ ತನಕ ಇವರ ಹೆಸರು ಮರೆಯದು. ದುಡ್ಡು ಧಾರಾಣಿಯಿಂದ ದ್ರವ್ಯ ಕೂಡಿಸುತ್ತಾ ೩೦ ಸಾವಿರ ರೂಪಾಯಿ ಮಾಡಿ, ಧಾರವಾಡಕ್ಕೆ ಮಾತ್ರವಲ್ಲ, ಉತ್ತರಕರ್ನಾಟಕಕ್ಕೆ ಭೂಷಣವೆನಿಸುವಂಥ ಸುಂದರವಾದ ಪಾಠಶಾಲೆಯನ್ನು ಕಟ್ಟಿಸಿದ್ದಾರೆ ಅದೇ ಪ್ರಕಾರ ಕರ್ನಾಟಕ ವಿದ್ಯಾವರ್ಧಕ ಸಂಘದ ಕಟ್ಟಡವೂ ಇವರ ದೇಖರೇಖಿಯಲ್ಲಿಯೇ ಆಗಿರುತ್ತದೆ.

ಇವರ ವಾಚನವು ದೊಡ್ಡದು. ಇವರು ಅದಕ್ಕಾಗಿ ಒಂದು ಸಂಸ್ಥೆಯನ್ನೇ ನಿರ್ಮಾಣ ಮಾಡಿ, ಪ್ರಾಚ್ಯ ಮತ್ತು ಪಾಶ್ಚಿಮಾತ್ಯ ಭಾಷೆಗಳಲ್ಲಿ ಪ್ರಸಿದ್ಧವಾಗುವ ಮಹತ್ವದ ಪುಸ್ತಕಗಳನ್ನು ತರಿಸಿ, ಓದುವರು. ಮತ್ತು ಇಂಥಿಂಥ ಭಾಗಗಳು ಮಹತ್ವವಾಗಿವೆ; ಅವನ್ನು ಓದಿರೆಂದು ಬೇರೆಯವರಿಗೆ ಹೇಳುವರು. ರಾಯರಿಗೆ ಅರ್ಧಾಂಗವಾಯುವಾಗಿ ೨೦ ವರ್ಷವಾಯಿತು. ಆದರೂ ಅವರು ನೆಲ ಹಿಡಿದು, ಕರ್ತವ್ಯಹೀನರಾಗಿ ಕೂಡ್ರಲಿಲ್ಲ. ಸಾರ್ವಜನಿಕ ಹಿತಕಾರ್ಯಗಳಲ್ಲಿ ಮನಸ್ಸು ಹಾಕುವರು. ಪುಸ್ತಕ ಮತ್ತು ವರ್ತಮಾನ ಪತ್ರಗಳನ್ನು ಓದುವರು. ತಮ್ಮ ಅಭಿಪ್ರಾಯ ಕೇಳಲಿಕ್ಕೆ ಬಂದವರಿಗೆ ಕಾಯಿದೆ, ಧರ್ಮ ಮತ್ತು ವಿವಿಧ ವಿಷಯಗಳಲ್ಲಿ ಯೋಗ್ಯ ಅಭಿಪ್ರಾಯ ಹೇಳುವರು. ರಾಯರು ನಿಗರ್ವಿ, ನಿಸ್ಪೃಹಿ ಮತ್ತು ಸತ್ಯಸಂಧರಾಗಿದ್ದರು. ರಾಜಕೀಯ ವಿಚಾರದಲ್ಲಿ ರಾಷ್ಟ್ರೀಯರೂ, ಸ್ವಾತಂತ್ರ್ಯಪ್ರಿಯರೂ ಆಗಿದ್ದರು.

ರಾಯರ ನಿಯಮಿತತನವು ಬಹಳ ದೊಡ್ಡದು. ಹೊಗಳುವಂಥಾದ್ದು ಮೋಜವಾನಿ ಮುಂತಾದ ಪ್ರಸಂಗಗಳಲ್ಲಿಕೂಡ ಗಡಿಯಾರ ಹಚ್ಚಿ ಹೊತ್ತು ಕಾಯುವರು. ತಮ್ಮಿಂದ ಯಾರಿಗೂ ತೊಂದರೆಯಾಗಬಾರದೆಂದು ಯಾವಾಗಲು ಜಾಗರೂಕರಾಗುವರು. ವಾರ ಕಾಲೆಗೆ ಯಾರಾದರೂ ಇಷ್ಟೊತ್ತಿಗೆ ಬಂದು ಕೊಡುತ್ತೇವೆಂದು ಹೇಳಿದರೆ- ಆ ಹೊತ್ತಿಗೆ ಅವರ ಬಾಗಿಲ ಮುಂದೆ ನಿಲ್ಲುವರು. ಆಗ ಬಿಸಿಲು ಮಳೆ, ಗಾಳಿ ಅಥವಾ ಬೇರೆ ಉಪಾಧಿಯನ್ನು ಲಕ್ಷಿಸುತ್ತಿದ್ದಿಲ್ಲ. ಇವರೊಬ್ಬರು ಆದರ್ಶ ಗೃಹಸ್ಥರಾಗಿದ್ದರು. ಆ ಡಿದಂತೆ ನಡೆಯುವಂಥವರು. ಮರಣ ಸಮಯದಲ್ಲಿ ೭೮ ವರ್ಷದವರಾಗಿದ್ದರು. ಸ್ಮಶಾನಯಾತ್ರೆಗೆ ನೂರಾರು ಜನರು ಹೋಗಿದ್ದರು. ಅಲ್ಲಿ ಶ್ರೀ. ಜೋಶಿ, ದಿವಾನಬಹಾದ್ದೂರ ರೊದ್ದ ಬಿಂದುರಾವ ಮುತಾಲಿಕ ದೇಸಾಯಿ ಮತ್ತು ನಾಗೇಶಶಾಸ್ತ್ರಿಗಳ ಭಾಷಣವಾಯಿತು. ದೇವರು ಇವರ ಆತ್ಮಕ್ಕೆ ಶಾಂತಿಯನ್ನು ಕೊಡಲೆಂದು ಪ್ರಾರ್ಥಿಸುತ್ತೇವೆ

ಬೆಂಗಳೂರ ದಂಗೆಯ ವಿಚಾರಣಾ ಕಮಿಟಿಯು.

ದಿವಾನರು ಬೆಂಗಳೂರ ಮಾತ್ರವಲ್ಲ; ಮೈಸೂರ ಪ್ರಾಂತದ ಅನೇಕ ಪ್ರಮುಖರದೊಂದು ಕಮಿಟಿ ಕೂಡಿಸಿ. ವಿದ್ಯಾರ್ಥಿಗಳ ಸಂಘ ಮತ್ತು ಮುಸಲಮಾನರ ದಂಗೆಯ ವಿಷಯವಾಗಿ ವಾದವಿವಾದ ಮಾಡಿದರು. ಅನೇಕ ಮಂಡಳರು ಅಧಿಕಾರಸ್ಥರ ತಪ್ಪುಗಳನ್ನು ಅವರ ಉಡಿಯಲ್ಲಿ ಹಾಕಿದರು ಆದರೂ ಅಧಿಕಾರಸ್ಥರು ತಮ್ಮದೇ ವಿಟವೆಂಬ ಆತ್ಮ ಸಮರ್ಥನೆ ಮಾಡಿಕೊಳ್ಳಲು ಹಿಂಜರಿಯಲಿಲ್ಲ. ಕಮಿಟಿಯ ಚರ್ಚೆ ಮುಗಿದ ಬಳಿಕ ಸಾರ್ವಜನಿಕ ವಿಚಾರಣಾ ಕಮಿಟಿಯ ಅಧ್ಯಕ್ಷಸ್ಥಾನವನ್ನು ಸರ ಶ್ರೀಶೈಲೇಶ್ವರಯ್ಯನವರು ಸ್ವೀಕರಿಸುವರಂತೆಯೂ, ಇವರಿಗೆ ಸಹಾಯವಾಗಿ ಚೀಫಕೋರ್ಟಿನ ಒಬ್ಬ ಜಡ್ಜರೂ ಬೇರೆ ಕೆಲ ಗೃಹಸ್ಥರೂ ನೇಮಿಸಲ್ಪಡುವರೆಂದು ಜಾಹೀರ ಮಾಡಿದರು.

ಮೌ, ಜಾಫರಲ್ಲಿಯವರು ಇಜಿಪ್ತದಲ್ಲಿ ನೋಡಿದ ಮತ್ತು ಅನುಭವಗೊಂಡ ಲಷ್ಕರೀ ಅಮಲು.

ಲಾಹೋರಿನ ಸುಪ್ರಸಿದ್ಧ ಕಾಂಗ್ರೆಸ ಭಕ್ತರಾದ ಮೌ. ಜಾಫರಲ್ಲಿಯವರು ಮಕ್ಕಾದ ಯಾತ್ರೆಗೆ ಹೋಗಿದ್ದರು. ಅಲ್ಲಿಂದ ಇಜಿಪ್ತ ದೇಶಾವಲೋಕನಕ್ಕೆ ಹೋದರು. ಇವರು ಹೋಗುವ ಮುನ್ನಾ ದಿವಸವೇ ಸುಲ್ತಾನರ ಹೆಸರಿನಿಂದ ಪಾರ್ಲಮೆಂಟ ಸಭೆಯು ಬಂದಾಗಿ, ಸುಲ್ತಾನಶಾಹಿಯು ನೆಲೆಗೊಂಡಿತ್ತು. ರಾಷ್ಟ್ರೀಯ ಮತ್ತು ಸ್ವಾತಂತ್ರ್ಯಪಕ್ಷದವನಾದ ನಾಹಾಸ ಪಾಶಾನು ಪಾರ್ಲಮೆಂಟದ ಎಡಬದಿಯಲ್ಲಿ ಸಭೆಕೂಡಿಸಬಾರದೆಂದು ಸಭಾಮಂದಿರದ ಸುತ್ತಲು ಆರು ಸಾವಿರ ಪೋಲಿಸರ ಕಾವಲಿಟ್ಟ ದಿವಸ ಇವರು ಅಲ್ಲಿ ಸೇರಿದರು. ಇವರು ಸುಮ್ಮನೆ ಹೋಗಿ, ಹಿಂದಿರಿಗಿದ್ದರೆ- ಇವರನ್ನಾರೂ ತಡೆಯುತ್ತಿದ್ದಿಲ್ಲ. ಹುಲಿಯು ಗದ್ದರಿಸಿದರೇ- ಅದು ಇಂಥಲ್ಲದೆಯೆಂದು ತಿಳಿಯುವದು. ಮೌ. ಜಾಫರಖಾನರು ಅಲ್ಲಾದ ಒಂದು ಅರ್ಧಮರ್ಧ ರಾಜಕೀಯ ಸಭೆಯಲ್ಲಿ ಇಜಿಪ್ತದ ಆಪತ್ತಿಯ ಬಗ್ಗೆ ಪಂಜಾಬ ಕಾಂಗ್ರೆಸ ಕಮಿಟಿಯು ಸಹಾನುಭೂತಿಯುಳ್ಳದ್ದಾಗಿದೆಂದು " ಭಾಷಣ ಮಾಡಿದರು. ಈ ಭಾಷಣವು ಅಲ್ಲಿಯ ಇಂಗ್ಲಿಷ ಪೋಲೀಸರಿಗೆ ತೀರ ಒರಣಾಸವಾಯಿತು ಪೋಲಿಸಸಾಹೇಬರು ಅನೇಕ ದೂತರನ್ನು ಕಳಿಸಿ, ಇವರನ್ನು ತಮ್ಮ ಅರಮನೆಯಂತೊಪ್ಪುವ ಆಫೀಸಿಗೆ ಕರಿಸಿಕೊಂಡರು ಆಗ ಉಭಯತರಿಗೂ ಕೆಳಗೆ ಕೊಟ್ಟಂತೆ ಪ್ರಶ್ನೋತ್ತರಗಳಾದವು.

ಸಾಹೇಬ- ನಿಮಗೆ ಇಂಗ್ಲಿಷ ಬರುತ್ತದೆಯೋ?

ಜಾಫರ- ಹೌದು ಬರುತ್ತದೆ.

ಸಾಹೇಬ- ನೀವು ನಮಗೆ ಪೀಡೆಯಾಗಿದ್ದೀರಿ ನಿಮ್ಮ ಚಟುವಟಿಕೆಗಳನ್ನು ನಿಲ್ಲಿಸಿದರೆ- ಕ್ಷೇಮ

ಜಾಫರ- ಸಾಹೇಬರೇ ತಾವು ಇಂಗ್ಲಿಷ ಗೃಹಸ್ಥರೇ-

ಸಾಹೇಬ- ಹಾಯಿ ಮಂಚ್

ಈ ಪ್ರಕಾರ ಪ್ರಶ್ನೋತ್ತರಗಳಾಗುವಾಗ ಸಾಹೇಬರು ಗುರುಗುಟ್ಟುತ್ತಲೇ ಅಹಂಕಾರಭಾವದಿಂದ ಪ್ರಶ್ನೆ ಮಾಡುತ್ತಿದ್ದರು ಸಾಹೇಬರಿಗೆ ಇವರನ್ನು ದಂಡಿಸುವದು ತಪ್ಪಿದಂತಾಗಿದ್ದು, ಕೊಡು ಬಂದು ಇವರ ಜಗನ್ನೇವ ತನಕ ಇವರ ಮೇಲೆ ದೃಷ್ಟಿ ಇಡಬೇಕೆಂದು ಕೈಕೆಳಗಿನ ಉಪಧಿಕಾರಿಗಳಿಗೆ ಹುಕುಮು ಮಾಡಿದರು ಮೌ. ಜಾಫರಖಾನರು ಪಂಜಾಬದ ಲಷ್ಕರೀ ಅಮಲನ್ನು ನೋಡಿದ್ದರಿಂದ, ಅವರಿಗೆ ಸಾಹೇಬರಿಗೆ ಬೆದರಿಸುವಿಕೆಯಿಂದ ಭಯ ಹುಟ್ಟಲಿಲ್ಲ. ಅಲ್ಲಿಂದ ತೆರಳುವಾಗ ಹಿಂದುಸ್ಥಾನ ಮತ್ತು ಇಜಿಪ್ತವು ಸ್ವತಂತ್ರವಾಗಬೇಕೆಂದೂ, ಭಾಷಣ ಮಾ

ಡಿ-ರು. ನಾಹಾಷವಾಲ್ಲಾ ಮತ್ತು ಅವನ ಬಣದವರು ಇಜಿಪ್ತವು ಸಂಪೂರ್ಣ ಸ್ವತಂತ್ರವಾಗುವದಕ್ಕೆ ಅವಶ್ಯವಾದ ಎಲ್ಲ ಕರ್ತವ್ಯಗಳನ್ನು ಮಾಡುವರು. ಸ್ವಾರ್ಥತ್ಯಾಗ ಆತ್ಮತ್ಯಾಗ ಮಾಡಲು ಸಿದ್ಧರಿದ್ದಾರೆ. ರೈತರಿಂದಲೇ ಈ ಕಾರ್ಯವಾಗಬೇಕಾದ್ದರಿಂದ ಅವರನ್ನು ಎಚ್ಚರಿಸುವ ಉದ್ಯೋಗ ನಡಿಸಿದ್ದಾರೆ. ರೈತನು ಒಮ್ಮೆ ಹುರಿದುಂಬಿದನೆಂದರೆ- ಯಾರೂ ಸ್ವಾತಂತ್ರ್ಯವನ್ನು ವಿರೋಧಿಸರೆಂದು ಇವರ ಮತವಾಗಿದೆ. ಬೇರೆ ದೇಶಗಳಲ್ಲಿ ಇದೇ ಅನುಭವ ಬಂದಿದೆ.

ಒಬ್ಬ ಸಾಹೇಬರ ವಿಚಿತ್ರ ಮತವು.

—(೧)—

ಪಾರ್ಲಮೆಂಟಿನ ಮೆಂಬರರಾದ ಟಾಮ ಜಾನಸನನೆಂಬವರು ಹಿಂದುಸ್ಥಾನದ ಸ್ವರಾಜ್ಯ ವಿಷಯವಾಗಿ ಮುಂದೆ ಕೊಟ್ಟಂತೆ ಅನ್ನುತ್ತಾರೆ-

ಅಜ್ಞಾನ ಮತ್ತು ದರಿದ್ರತನ ಹೋಗಲಿಕ್ಕೆ ಸ್ವರಾಜ್ಯವೇ ರಾಮಬಾಣ ಉಪಾಯವೆಂದು ಹೇಳುವದು ತೀರ ನಗೆಗೇಡು. ಅಮೇರಿಕೆಯಲ್ಲಿ ಸ್ವರಾಜ್ಯವುಂಟು. ಆದರೆ- ಅಲ್ಲಿ ನಿಗ್ರೋ ಜನರ ಹಿಂಸೆ ನಡೆದಿದೆ. ಇಂಗ್ಲಂಡದಲ್ಲಿ ಸ್ವರಾಜ್ಯವುಂಟು. ಆದರೆ- ಎಷ್ಟೋ ಜನರು ಕೂಳು ಕಾಣುವದಿಲ್ಲ. ಹಿಂದುಸ್ಥಾನಕ್ಕೆ ಸ್ವರಾಜ್ಯ ದೊರೆತ ಕೂಡಲೆ ಜಮೀನದಾರ, ಸಂಸ್ಥಾನಿಕ ಮತ್ತು ಬಂಗಾಲಿ ಬಾಬುಗಳ ಚಂಜೀವರು ದಂಡಿನಲ್ಲಿ ಹುದ್ದೇದಾರರಾಗುವರು; ಪಂಡಿತರು ಸರ್ವಾಧಿಪತಿಗಳ ಗಾದಿಯ ಮೇಲೆ ಮಲಗುವರು. ಮತ್ತು ಆಕ್ಷಣವೇ ಹಿಂದುಸ್ಥಾನದ ದಾರಿದ್ರ್ಯವೆಂಬ ಪಕ್ಷಿಯು ತನ್ನ ಪಕ್ಕಗಳನ್ನು ಹಾರಿಸುತ್ತ ಹಿಂದುಸ್ಥಾನದಿಂದ ಹಾರಿ ಹೋಗುವದೆಂದು ಲಾಲಾ ಲಜಪತರಾಯರು ಭ್ರಮೆಗೊಂಡಿದ್ದಾರೆ. ಈ ಪ್ರಕಾರ ರಾಜಕೀಯ ಶಿಕ್ಷಣ ಶಾಲೆಯಲ್ಲಿ ರ, ಟ, ಫ ಕಲಿಯುವಂಥ ಹುಡುಗರು ಭ್ರಮೆಗೊಳ್ಳಬೇಕು. ದಾರಿದ್ರ್ಯ ತೊಲಗುವದಕ್ಕೆ ಸ್ವರಾಜ್ಯವು ಮದ್ದಲ್ಲ. ಜಮೀನದಾರರ ಪ್ರಸ್ಥ ಕಡಿಮೆಯಾಗಬೇಕ ; ಬಂಡವಲಗಾರರ ಮಿತ ಹೋಗಬೇಕು. ಪರಾಣ ಒಡ್ಡಿಯ ವ್ಯವಹಾರ ಒಂದಾಗಬೇಕು; ಮತ್ತು ಎಲ್ಲರಲ್ಲಿಯೂ ಸರಿಸಮಾನಸ್ಕಂದ ಭಾವವುಟ್ಟಬೇಕು; ಅಂದರೇ ಭಾರತಭೂಮಿಯ ಬಡತನ ಹಿಂಗುವದು.

ರಂಗೂನದಲ್ಲಿ ಹತ್ತು ರೂಪಾಯಿಗಳ ಕೃತಕವಾದಂಥ ಲಕ್ಷ್ಯಾವಧಿ ನೋಟುಗಳು ಪೋಲೀಸರಿಗೆ ಸಿಕ್ಕವು. ಇವನ್ನು ಮಾಡುವ ಸಾಮಾನ ಸಹಿತವಾಗಿ ಪೋಲೀಸರು ಐವರನ್ನು ಹಿಡಿದಿದ್ದಾರೆ. ಈ ನೋಟುಗಳು ಹಿಂದುಸ್ಥಾನದಲ್ಲಿ ಪ್ರಸಾರವಾಗಿರುತ್ತವೆಂದು ವರ್ತಮಾನ ಪ್ರಸಿದ್ಧವಾಗಿದೆ.

ಶ್ರೀ. ರಾಘವೇಂದ್ರರಾಯರ ರಾಜೀನಾಮೆ.

—(೦)—

ನಾಗಪೂರದ ಇನ್ನೋರ್ವ ಮಂತ್ರಿಯಾದ ಶ್ರೀ. ರಾಘವೇಂದ್ರರಾಯರ ನೆತ್ತಿಯ ಮೇಲೆ ರಾಜೀನಾಮೆಯ ಗದೆಯು ಯಾವಾಗ ಬಿದ್ದೀತೆಂಬ ನಿಯಮವಿಲ್ಲದಾಗಿದೆಂದು ನಿನ್ನಿನ ಸಂಚಿಕೆಯಲ್ಲಿ ಬರೆದಿದ್ದು ನಿಜವಾಯಿತು. ರಾಯರು ಸೋಮವಾರದ ದಿವಸ ಕೌನ್ಸಿಲದಲ್ಲಿ ಮಂತ್ರಿಗಳು ಕೂಡುವಲ್ಲಿ ಕೂಡ್ರದೆ, ಮೆಂಬರರು ಕೂಡ್ರುವಲ್ಲಿ ಕೂತರು. ಮತ್ತು ಅಧ್ಯಕ್ಷರು ಇವರು ರಾಜೀನಾಮೆ ಕೊಟ್ಟಂತೆಯೂ, ಗವ್ಹರನಸಾಹೇಬರು ಅದನ್ನು ಅಂಗೀಕರಿಸಿದಂತೆಯೂ ಜಾಹೀರ ಮಾಡಿದರು.

ಸ್ವತಂತ್ರ ಪಕ್ಷವು—

ಮಿ. ರಾಘವೇಂದ್ರರಾಯರು ದಿವಾನಗಿರಿಗೆ ರಾಜೀನಾಮೆ ಕೊಟ್ಟ ಬಳಿಕ ಒಂದು ಸ್ವತಂತ್ರ ಪಕ್ಷವನ್ನು ನಿರ್ಮಾಣ ಮಾಡಿದರು. ಇದರಲ್ಲಿ ೨೪ ಜನ ಮೆಂಬರರಿದ್ದಾರೆ. ತಾವು ಸ್ವತಃ ಅಧ್ಯಕ್ಷರಾಗಿದ್ದಾರೆ. ಇದರಲ್ಲಿ ಬ್ರಾಹ್ಮಣ- ಬ್ರಾಹ್ಮಣೇತರ ಮುಸಲಮಾನ, ಅಂತ್ಯಜ ಎಲ್ಲ ಜಾತಿಯವರೂ ಸೇರಿದ್ದಾರೆ.

ರಾಜೀನಾಮೆಗೆ ಕಾರಣ-

ಬ್ಯಾರಿಸ್ಟರ ದೇಶಮುಖರು ರಾಜೀನಾಮೆಯ ಕಾರಣವನ್ನು ಜಾಹೀರ ಮಾಡಿದ್ದಾರೆ. ಶ್ರೀ ರಾಘವೇಂದ್ರರಾಯರಿಗೆ ಪಬ್ಲಿಕ ವರ್ಕ್ಸ ಖಾತೆಯು ಬೇಕಾಯಿತು. ಅದನ್ನು ಬ್ಯಾರಿಸ್ಟರ ದೇಶಮುಖರು ಕೊಡಲೊಪ್ಪಲಿಲ್ಲ. ಮ್ಯುನಿಸಿಪಾಲಿಟಿ ಮತ್ತು ಲೋಕಲಬೋರ್ಡುಗಳಲ್ಲಿ ನಾಮಿನೇಶದ ವಿಷಯವಾಗಿಯೂ ಉಭಯತರ ನಡುವೆ ಮನಸ್ತಾಪವಾಯಿತು. ಮಂತ್ರಿಗಳು ಕೂಡಿ ನಡೆದರೆ- ಚಂದ; ಇಲ್ಲವಾದರೆ ನೆಟ್ಟಗಲ್ಲೆಂದು ತಮಗೆ ರಾಜೀನಾಮೆ ಕೊಡಬೇಕಾಯಿತೆಂದು ಇವರು ಹೇಳಿದ್ದಾರೆ.

ಗುಪ್ತ ಮಾತು-

ಶ್ರೀ ರಾಘವೇಂದ್ರರಾಯರು ತಮ್ಮ ರಾಜೀನಾಮೆಯ ಕಾರಣವನ್ನು ಗುಪ್ತವಿಟ್ಟಿದ್ದಾರೆ. ಇವರ ಮೇಲೆ ಅವಿಶ್ವಾಸದ ೧೧ ಠರಾವುಗಳು ಸಿದ್ಧವಾಗಿದ್ದವು ರಾಜೀನಾಮೆ ಕೊಟ್ಟದ್ದರಿಂದ ಇವೆಲ್ಲ ತಮ್ಮಷ್ಟಕ್ಕೆ ತಾವೇ ಬಯಲಾದವು. ಅಂತೂ ಅಲ್ಲಿಯ ದರಬಾರವು ಮಂತ್ರಿಗಳಿಲ್ಲದಂತಾಯಿತು.

ಜಳಗಾಂವಿಯ ಮ್ಯುನಿಸಿಪಾಲಿಟಿಯವರು ಸಕ್ತಿಯ ಶಿಕ್ಷಣ ಪ್ರಾರಂಭಿಸಿದ್ದಲ್ಲದೆ, ನೂಲುವ ವರ್ಗವನ್ನೂ ತೆರೆದಿದ್ದಾರೆ.

ಜಪಾನ ಸರಕಿನ ಮೇಲೆ ಚೀನರ ಬಹಿಷ್ಕಾರ.

—೦—

ಯುದ್ಧವಿಲ್ಲದೆ, ರಕ್ತದ ಒಂದು ಹನಿ ಕೆಡವದೆ, ಬಲಾತ್ಕರಿಸುವಂಥ ಚೀನ ದೇಶವನ್ನು ಹಣ್ಣಿಗೆ ತರಬೇಕೆಂದು ಚೀನರು ಕರ್ತವ್ಯನಿರತರಾಗಿ, ಜಪಾನರ ಯಾವ ಸರಕನ್ನೂ ಕೊಳ್ಳಬಾರದೆಂದು ಹರತಾಳ ಮಾಡಿ, ಜಪಾನ ಸರಕಿಗೆ ಸಾರ್ವತ್ರಿಕ ಬಹಿಷ್ಕಾರ ಹಾಕಿದ್ದಾರೆ. ಜಪಾನರು ಈ ಬಹಿಷ್ಕಾರಕ್ಕೆ ಹೆದರಿ ಮೂರು ತಿಂಗಳನಂತರ ಮಂಚೂರಿಯಾದಿಂದ ತಮ್ಮ ನಿಶಾನಿ ಎಬ್ಬಿಸುವಂತೆ ವಚನ ಕೊಟ್ಟಿದ್ದಾರೆ. ಇಷ್ಟೇ ಅಲ್ಲ; ಎಲ್ಲ ಕನಿಷ್ಠ ಮತ್ತು ಅಪಮಾನಕಾರಕವೆನಿಸುವಂಥ ಹಿಂದಿನ ಒಡಂಬಡಿಕೆಯನ್ನು ರದ್ದು ಮಾಡಿ, ಎರಡೂ ದೇಶಗಳು ಒಂದೇ ತರಗತಿಯವೆಂದು ಹೊಸ ಒಡಂಬಡಿಕೆಯಾಗುವತನಕ ಬಹಿಷ್ಕಾರ ನಡೆಯುವದೆಂದು ಚೀನೀ ಮಂತ್ರಿಯಾದ ಕಾವಹೂಯಾಸಾಹೇಬನು ಸಡ್ಡು ಹೊಡೆದು ಹೇಳಿದ್ದಾನೆ.

ವಿವಿಧ ವರ್ತಮಾನಗಳು

ನಿಜಾಮ ರೇಲ್ವೆಯ ವರ್ಕಶಾಪಗಳ ಕೂಲಿಕಾರರು ಸಂಪು ಮಾಡಿದ್ದಾರೆ. ೧೫೦೦೦ ಜನರು ಸಂಪಿನಲ್ಲಿ ಸೇರಿದ್ದಾರೆ. ಸಂಪಿನ ಸಂಕಟವು ವಾಡಿ ಜಂಕ್ಶನ ತನಕ ಬಂದಿದೆ. ಕಂಪನಿಯವರು ಹಾಗೂ ಹೀಗೂ ಪ್ರಯಾಣಿಕರ ಬಂಡಿಗಳನ್ನು ಬಿಡುವರು. ಗೂಡ್ಸ ಬಂಡಿಗಳು ಅಲ್ಲಲ್ಲಿ ಬಕಧ್ಯಾನ ಮಾಡುತ್ತಾ ನಿಂತವೆ.

ದಿಲ್ಲಿಯು ಸ್ವತಂತ್ರ ಪ್ರಾಂತವಾಗಿದೆ ಅದಕ್ಕೂ ವಸಾಹತಿನ ಸ್ವರಾಜ್ಯದಂಥ ಸ್ವತಂತ್ರಾಧಿಕಾರಬೇಕೆಂದು ಕಾಂಗ್ರೆಸ ಕಮಿಟಿಯವರು ಅನ್ನುತ್ತಾರೆ

ಪಂಜಾಬದಲ್ಲಿ ಹತ್ತು ಲಕ್ಷ ಬಂಡವಲ ಹಾಕಿ, ಸಕ್ಕರೆ ಮಾಡುವ ಒಂದು ಕಂಪನಿಯು ಹೊರಟಿರುತ್ತದೆ.

ಕಲಕತ್ತೆಯ ಒಂದು ಭಾಗವಾದ ಹಾವರಾದ ಮ್ಯುನಿಸಿಪಾಲಿಟಿಯಲ್ಲಿ ಅಧ್ಯಕ್ಷ ಮತ್ತು ಉಪಾಧ್ಯಕ್ಷರಾಗಿ ಸ್ವರಾಜ್ಯ ಪಕ್ಷೀಯರೇ ಆರಿಸಲ್ಪಟ್ಟರು.

ಸರಕಾರದವರು ಯಾವದೊಂದು ಕರ- ಕಂದಾಯ ಕೂಡಿಸುವಾಗ ಪ್ರಜರು ವಿರೋಧವನ್ನೆಂಟು ಮಾಡಿದರೆ- ಆ ಬಗ್ಗೆ ವಿಚಾರ ಮಾಡಲು ಸರಕಾರದವರು ಒಂದು ಕಮಿಟಿ ನೇಮಿಸಬೇಕು. ತಮ್ಮದೇ ಖರೆಯುತ್ತ ನಡಿಸಬಾರದೆಂಬ ಠರಾವನ್ನು

ದ್ದಾಗ ಅವರ ಅಗ್ರಹವಿತ್ತು. ಬಹು ಜನರ ಆಗ್ರಹದ ಮೂಲಕ ಚಿತೆಯ ಮೇಲೆ ಕೂಡಿಸಿ, ಫೋಟೋ ತೆಗೆಯಲ್ಪಟ್ಟಿತು.

ಊರೊಳಗಿನ ಎಲ್ಲ ಪ್ರಾಥಮಿಕ ಶಾಲೆಗಳೂ ಕರ್ನಾಟಕ ಹಾಯಸ್ಕೂಲು ಮತ್ತು ನ್ಯೂ ಇಂಗ್ಲಿಷಸ್ಕೂಲೂ ಬಂದಾದವು ಧಾರವಾಡ ಬ್ಯಾಂಕು ಬಂದು ಮಾಡಲ್ಪಟ್ಟಿತು.

ಶಾಂತೇಶ ಲಾಯಬ್ರರಿ ಮತ್ತು ಕರ್ನಾಟಕ ವಿದ್ಯಾವರ್ಧಕ ಸಂಘಗಳಲ್ಲಿ ಸಭೆಯಾಗಿ ದುಃಖ ಪ್ರದರ್ಶನ ಮಾಡಲ್ಪಟ್ಟಿತು. ಇವರ ಸ್ಮಾರಕವಾದ ಸಂಸ್ಕೃತ ಪಾಠಶಾಲೆಯು ಬಂದಾಗಿ, ವಿದ್ಯಾರ್ಥಿಗಳು ಘಜಸ್ಥಾನದಲ್ಲಿ ಸೇರಿದ್ದರೆಂದು ಹೇಳುವ ಅಗತ್ಯವೇ ಇಲ್ಲ.

ಮುನಸಿಪ ಕೋರ್ಟಿನಲ್ಲಿ ಮಿ. ಕೆ. ಜಿ. ಕುಲಕರ್ಣಿಯವರು ರಾಯರ ಮೃತ್ಯುವಿನ ದೆಸೆಯಿಂದ ಖೇದಪ್ರದರ್ಶನ ಮಾಡಿ, ಅಂತಃಕರಣ ದ್ರವಿಸುವಂಥ ಭಾಷಣ ಮಾಡಿದರು.

ಬೆಳಗಾವಿಯಲ್ಲಿ ಶಳಕವಾಡಿಯಲ್ಲಿ ಒಂದು ಪ್ಲೇಗಿನ ಮರಣವಾಯಿತು.

ಒಕ್ಕಲಿಗರೂ ಒಕ್ಕಲತನವೂ

ನಮ್ಮ ಮಾಸ ಪತ್ರಿಕೆಯು ಈಗ ಸುಮಾರು ೧೬ ವರ್ಷಗಳಿಂದ ದೇಶಾಭಿಮಾನಿಗಳ ಸೇವೆಯನ್ನು ಮಾಡಿ ಯಾವತ್ತು ಜನರ ಆದರಕ್ಕೆ ಪಾತ್ರವಾಗಿರುವದು. ಇತ್ತೀಚೆಗೆ ಒಕ್ಕಲತನದ ಬೆಳಗೆಯ ಸಮ್ಮಂಧಗಳಿಂದೊಡಗೂಡಿದ ವಿಷಯಗಳೂ ಅಂದವಾದ ಮುದ್ರಣವೂ ಇರುವದರಿಂದ ವಾಚಕರ ಮನಸ್ಸನ್ನು ತನ್ನ ಕಡೆಗೆ ಎಳೆಯದೆ ಎಂದೂ ಬಿಡದು. ಕೃಷಿಕರ್ಮವೇ ಶ್ರೇಷ್ಠವಾದದ್ದೆಂದು ಸರ್ವ ಸಮ್ಮತವಿರುವದರಿಂದ ಈ ವಿಷಯಕ್ಕೆ ಅನಾದರವನ್ನು ತೋರಿಸದೆ, ಇಂಥ ಮಾಸಪತ್ರಿಕೆಗಳನ್ನು ಆದರಿಸಬೇಕೆಂದು ನಮ್ಮ ಆಗ್ರಹಪೂರ್ವಕ ವಿನಂತಿ. ವಾರ್ಷಿಕವರ್ಗಣಿ ಅಂಚೆ ವೆಚ್ಚ ಸಹಿತ ೧-೨-೦

ಸಂಪಾದಕ

ಒಕ್ಕಲಿಗರೂ ಒಕ್ಕಲತನವೂ

ಧಾರವಾಡ

---

೧೦೦ ಕ್ಕೆ ಒಂದು ವರ್ಷಕ್ಕೆ ಒಂದು ರೂಪಾಯಿ ಬಡ್ಡಿ ದರ.

ದಿ ಪಿಪಲ್ಸ ಓನ ಪ್ರಾವಿಡೆಂಟ ಆ್ಯಂಡ ಜನರಲ ಇನ್ಸುರನ್ಸ ಕಂಪನಿ, ಲಿಮಿಟೆಡ ಪುಣೆ.

(Life) ಜೀವವಿಮಾ- ಪ್ರೀಮಿಯಮು ದರ ತಿಂಗಳಿಗೆ ೨ ರೂ, ೧ ರೂ, ಮತ್ತು ೮ ಆಣೆ. ೧೫ ವರ್ಷಗಳ ಮೇಲೆ ಬೋನಸ ಮತ್ತು ಲಾಭ ಸಹಿತ ರಕಮು ಸಿಗುವದು.

Marriage ಲಗ್ನಶಾಖೆ- ದರ ತಿಂಗಳಿಗೆ ೨ ರೂಪಾಯಿಯಂತೆ ಪ್ರೀಮಿಯಮು ಕೊಡಬೇಕಾಗುವದು. ಲಗ್ನದ ವೇಳೆಗೆ ರೂಪಾಯಿ ಕೊಡಲಾಗುವದು.

(Loan) ಸಾಲದಶಾಖೆ- ೧೦೦ ಕ್ಕೆ ವರ್ಷಕ್ಕೆ ಒಂದೇ ರೂಪಾಯಿ ಬಡ್ಡಿ ದರದ ಮೇಲೆ ೫೦ ರಿಂದ ೫೦೦೦ ರೂಪಾಯಿಗಳ ವರೆಗೆ ಜಾಮೀನು ಇಲ್ಲದೆ ಸಾಲ ದೊರೆಯುವದು.

ಧಾರವಾಡ ಜಿಲ್ಹೆಯ ಎಲ್ಲ ತಾಲೂಕುಗಳಲ್ಲಿಯೂ ಏಜಂಟರು ಬೇಕಾಗಿದ್ದಾರೆ.
ಉತ್ಸಾಹೀ ಜನರಿಗೆ ಯೋಗ್ಯ ಕಮೀಶನ ದೊರೆಯುವದು.

ಪತ್ತೆ— ಡಾ| ನಾಡಗೀರ ವ್ಹಿ. ಜೆ (ಹೋಮಿಯೋ) ಎಮ್ ಬಿ
ಹಿರೇಕೆರೂರ ದಿ| ಧಾರವಾಡ.

ನಕಲಿ ಮಾಲಿನ ಬಗ್ಗೆ ಎಚ್ಚರಾಗಿರಿ.

ನಮ್ಮ ಉಂಚೀ ಪವಿತ್ರ ಕಾಬೂಲೀ

ಹಿರಾ ಇಂಗು

ಅವಶ್ಯ ಬೇಡಿರಿ.

ಇದು ದಿನಾಲು ಮನೆಯಲ್ಲಿ ಉಪಯೋಗವಾದದ್ದು ಅಡಿಗೆಯು ಇದರಿಂದ ರುಚಿಕರ ಮತ್ತು ಸ್ವಾದಿಷ್ಟವಾಗುವದು ಎಂಬದು ಎಲ್ಲರಿಗೂ ಖಾತ್ರಿಯಾಗಿರುವದು ನಾವು ನಮ್ಮ ಗುಮಾಸ್ತರನ್ನು ಕಾಬೂಲಕ್ಕೆ ಕಳುಹಿಸಿ ಉಂಚೀಮಾಲನ್ನು ಶೋಧಿಸಿ ತೆಗೆದುಕೊಳ್ಳುವದರಿಂದ ನಮ್ಮ ಗಿರಾಕಿಗಳಿಗೆ ಬಹಳ ಸೋಯಿಸ್ಕರ ಬೀಳುವದಲ್ಲದೆ ಖಾತ್ರಿ ಮಾಲು ಸಿಗುವದು. ಈ ಇಂಗು ಬಾಜಾರಿ ಇಂಗಕ್ಕಿಂತಲೂ ಬಹಳ ತೀಕ್ಷ್ಣವಿದ್ದು ಸುವಾಸಿಕವಾಗಿರುವದರಿಂದ ನಮ್ಮ 'ಒಂದು ತೊಲಿ ಇಂಗು ಇತರ ಹತ್ತು ತೊಲಿ ಇಂಗಿಗಿಂತಲೂ ಮೇಲಾಗಿರುವದು. ಇದು ಔಷಧಿ ವಸ್ತುವಾಗಿರುವದರಿಂದ ಅಜೀರ್ಣ, ಜೀರ್ಣಜ್ವರ, ಹೊಟ್ಟೆಕುಟ್ಟು ಹಿಡಿಯೋಣ, ಮಲೇರಿಯಾ, ಕಾಲರಾ, ಇನ್ಫ್ಲುಎಂಝಾ, ಮುಂತಾದ ರೋಗಜಂತುಗಳ ಪ್ರತಿಬಂಧವಾಗಿರುವದು. ಉಪ್ಪಿನಕಾಯಿಯಲ್ಲಿ ಉಪಯೋಗಿಸಿದರೆ ಕ್ರಿಮಿಗಳಾಗುವ ಸಂಭವವಿಲ್ಲ. ಇದನ್ನು ಬೇಕಾದಷ್ಟು ಮುಚ್ಚಿಟ್ಟರೂ ವಾಸನೆಯು ಪಸರಿಸದೆ ಇರದು. ಇದನ್ನು ಸಂಗ್ರಹಿಸುವದು ಯೋಗ್ಯವದೆ.

ಅರ್ಧಾ ಔಂಸಿನ ಕಿರಕೋಳ ವಿಕ್ರಿಗೆ ಸೋಯಿಸ್ಕರ ಫ್ಯಾನ್ಸಿ ಡಬ್ಬಿಗಳು.

ಇರಾಣಿ ಮ್ಯಾಸ್ಟಿಕ ಇಂಗು.

ಡಜನ ಒಂದಕ್ಕೆ ನಾಲ್ಕು ರೂಪಾಯಿ.

ಡಬ್ಬಿಯು ಒಂದು ಡಜನಕ್ಕಿಂತಲೂ ಕಡಿಮೇ ಹೆಚ್ಚು ಕೊಡೋಣವಿಲ್ಲಾ. ಎಲ್ಲರಿಗೂ ಪ್ಯಾಕಿಂಗ ಪೋಸ್ಟೇಜ ಮಾಫ ಹೆಚ್ಚು ಮಾಲು ಬೇಡಿಕೊಳ್ಳುವವರು ಪತ್ರವ್ಯವಹಾರ ಮಾಡಬೇಕು. ವ್ಯಾಪಾರಸ್ಥರಿಗೆ ಬೋರ್ಡ ಪ್ಲೇಟ ಸಿಗುವವು.

ಪತ್ತೆ— ಮೆಸರ್ಸ ಕುಲಗೋಡ ಬ್ರದರ್ಸ ತಾಲೂಕ ಗೋಕಾಕ.

ಮಿ. ಎಮ್. ವ್ಹಿ. ಸಾಠೆಯವರ
ನ್ಯೂ ಅಂಡ ಸೆಕಂಡ ಹ್ಯಾಂಡ

ಬುಕ್ ಡಿಪೋ

ನಾವು ಹಳೇ ಪುಸ್ತಕಗಳನ್ನು ಯೋಗ್ಯದರದಿಂದ ಮಾರಲಿಕ್ಕೆ ತಕ್ಕೊಳ್ಳುತ್ತೇವೆ. ಮತ್ತು ಮಾರಲಿಕ್ಕೆ ಕೊಡುತ್ತೇವೆ. ನಮ್ಮ ಪುಸ್ತಕಾಲಯದಲ್ಲಿ ಶಾಲೆ ಕಾಲೇಜುಗಳಿಗೆ ಬೇಕಾಗುವ ಕ್ರಮಿಕ ಪುಸ್ತಕಗಳೂ ಬೇರೆ ಪುಸ್ತಕಗಳೂ ದೊರೆಯುತ್ತವೆ. ಪರಸ್ಥಳದವರಿಗೆ ವ್ಹಿ. ಪಿ. ಯಿಂದಲೂ ಕಳಿಸುವೆವು. ಕೊಳ್ಳುವವರಿಗೆ ಯೋಗ್ಯ ಕಮೀಶನ ದೊರೆಯುವದು.

ಪ್ರೊಪ್ರಾಯಿಟರ,
ಎಮ್. ವಿ. ಸಾಠೆ.
ಗಾಂಧಿ ಚೌಕ, ಧಾರವಾಡ.

ನೋಟೀಸಿನ ದರಗಳು.

ಸಿಂಗಲ ಕಾಲಮಿನ ಹತ್ತು ವಳಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ವಳಿಗೆ ಒಂದುವರಿ ಆಣೆ ಇಂಗ್ಲಿಷ ಪತ್ರಿಕೆಯಿಂದು ಒಳಗೆ ಐದು ಆಣೆ ಸರಕಾರಿ, ಮ್ಯುನಿಸಿಪಾಲಿಟಿ ಲೋಕಲಬೋರ್ಡ ರೇಲ್ವೆ ಬ್ಯಾಂಕ ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಿಂಗಲ ಕಾಲಮಿನ ... ಇಂಗ್ಲಿಷದಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ... ಡಬಲ ಕಾಲಮಿನ ಒಳಗಳಿಗೆ ಇನ್ನು ಚಾರ್ಜ ಕಾಯಂ ಜಾಹಿರಾತುಗಳನ್ನು ಕೊಡುವವರು ಕಳಿಸಿ ಪತ್ರೇಕ್ಕೆ ಪತ್ರವ್ಯವಹಾರ ಮಾಡಬಹುದು

ಮ್ಯಾನೇಜರ ವಿಜಯ ಧಾರವಾಡ

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಾಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B. 1449

ವಿಜಯ

ನಿತ್ಯ ಪತ್ರ — ಬೆಲೆ ಅರ್ಧ ಆಣೆ

ಸಂಪಾದಕರು:- ಆಚಾರ್ಯ ಬಾಳಾಚಾರ್ಯ ಹೊಸಕೇರಿ

ವರ್ಷ ೯) ಧಾರವಾಡ ಶನಿವಾರ ತಾರೀಖು ೨೫ ನೇ ಅಗಸ್ಟ ೧೯೨೮ (ಸಂಚಿಕೆ ೧೯೩

ದಿ ಜಯಲಕ್ಷ್ಮಿ ಬ್ಯಾಂಕ ಲಿಮಿಟೆಡ, ಧಾರವಾಡ.

ಸ್ಥಳ- ಮಂಗಳವಾರಪೇಟೆ, ದಿವಂಗತ ವಕೀಲ ಪಾಂಡುರಂಗರಾಯರ ಮನೆ.

೧ ಈ ಬ್ಯಾಂಕಿನಲ್ಲಿ ದಾಗೀನೆಗಳ ಮೇಲೆ ಸಾಲವು ದರದಿಂದ ತಾನು ಮತ್ತು ಒಪ್ಪಿದ ಮುದ್ದತಿಯ ಕಡಕ ಸಣ್ಣ ರಕಮಿನಿಂದ ಬೇಕಾದಷ್ಟು ದೊಡ್ಡ ರಕಮಿನ ಕಡಕ ಸಾಲ ದೊರೆಯುವದು. ಬಡ್ಡಿಯ ದರ ಸಂಬಂಧ ಸಮಕ್ಷಮ ತಿಳಕೊಳ್ಳಬೇಕು.

೨ ಸರಕಾರಿ ಪ್ರಾಮಿಸರಿ ನೋಟುಗಳ ಖರೀದಿ, ವಿಕ್ರಿ ನಡೆಯುವದು. ಅವುಗಳ ಮೇಲೆ ಸಾಲ ದೊರೆಯುವದು. ಮತ್ತು ಯೋಗ್ಯ ಕಮಿಶನ ತಕ್ಕೊಂಡು ಗಿರಾಕಿಗಳಿಗೆ ಅನುಕೂಲವಾಗಿ ಅವುಗಳ ಮುರಾಟ ಮಾಡಿ ಕೊಡಲ್ಪಡುವದು.

೩ ಮುದ್ದತಿ ಠೇವಿನ ಹಣವನ್ನು ಇಟ್ಟುಕೊಳ್ಳಲಾಗುವದು. ಸ್ವಲ್ಪ ರಕಮಿನಿಂದ ದೊಡ್ಡ ರಕಮಿನ ಕಡಕ ಇಟ್ಟುಕೊಳ್ಳಲಾಗುವದು. ಬಡ್ಡಿಯ ದರವನ್ನು ಸಮಕ್ಷಮ ಅಥವಾ ಪತ್ರವ್ಯವಹಾರದಿಂದ ತಿಳಕೊಳ್ಳಬೇಕು.

೪ ಈ ಬ್ಯಾಂಕಿನ ಶೇರುಗಳು ಮಾರಾಟಕ್ಕೆ ದೊರೆಯುವವು.

೫ ಬ್ಯಾಂಕಿಗೆ ಸಂಬಂಧಿಸಿದ ಬಾಕಿ ವ್ಯವಹಾರ ಮೊದಲಾದ ಎಲ್ಲ ಕೆಲಸಗಳು ನಡೆಯುವವು. ವಿಶೇಷ ಸಂಗತಿಗಳನ್ನು ಆಫೀಸಿನ ವೇಳೆಯಲ್ಲಿ ಸಮಕ್ಷಮ ಅಥವಾ ಪತ್ರವ್ಯವಹಾರದಿಂದ ತಿಳಕೊಳ್ಳಬೇಕು.

ಕೃಷ್ಣರಾವ ವೆಂಕಟರಾವ ಭಂಡಿವಾಡ.
ಮ್ಯಾನೇಜಿಂಗ ಏಜಂಟ.

—॥ ಶ್ರೀ ಗುರು ಪ್ರಸನ್ನ ॥—

ಪ್ರತಿಯೊಬ್ಬ ಕುಟುಂಬಿಕನು ಅವಶ್ಯ ಸಂಗ್ರಹದಲ್ಲಿಡತಕ್ಕ ಒಂದೇ ಔಷಧ.

ಭಾಸ್ಕರ ಚೂರ್ಣ.

ಸುಪ್ರಸಿದ್ಧ ವನಸ್ಪತಿ ಶಾಸ್ತ್ರಜ್ಞರ ಸೂಚನೆಯ ಮೇರೆಗೆ ಈ ಚೂರ್ಣವು ತಯಾರಿಸಲ್ಪಟ್ಟಿದ್ದು ಇದರ ಸೇವನೆಯಿಂದ ನಾಲ್ಕು ತರದ ವ್ಯಾಧಿಗಳು ಸ್ವಲ್ಪದರಲ್ಲಿಯೇ ನಾಶಹೊಂದುವವು. ಅಜೀರ್ಣ ಅಪಚನ, ಅಮಾಂಶ, ಅಗ್ನಿಮಾಂದ್ಯ ಸಂಗ್ರಹಣಿ, ಹೊಟ್ಟೆಶೂಲೆ, ಹೊಟ್ಟೆನೋವು ಮತ್ತು ಧಾತು ಕ್ಷಯ ತರದ ಧಾತುವಿಕಾರಗಳ ಮೇಲೆ ಇದೊಂದೇ ರಾಮಬಾಣ ಔಷಧವಿರುವದು. ಒಂದು ಚಿಮಟಿಗಿಯಷ್ಟು ಈ ಚೂರ್ಣವನ್ನು ಬಾಯಿಯಲ್ಲಿ ಹಾಕಿಕೊಂಡರೆ ಸಾಕು ಕ್ಷಣ ಅರ್ಧತಾಸಿನಲ್ಲಿಯೇ ಹಸಿವೆ ಹಾಗುವದು. ಬೇನೆಯಿಂದ ಗುಣವಾಗಿದ್ದ ಅಶಕ್ತ ಮನುಷ್ಯರು ಎವಡನೆ ಶಕ್ತಿವರ್ಧಕ ಔಷಧ ತೆಗೆದುಕೊಳ್ಳುವ ಕಾರಣವೇ ಇಲ್ಲ. ಪಕ್ಕಾಗಳಲ್ಲಿಯ ಜನರು ಒಂದು ಭಾಸ್ಕರ ಚೂರ್ಣದ ಡಬ್ಬಿಯನ್ನು ತಮ್ಮ ಹತ್ತರ ಇಟ್ಟುಕೊಂಡರೆ ಸಾಕು ಅನಾಯಾಸವಾಗಿ ಬೇನೆಗಳಿಗೆ ಉಪಯೋಗವಾಗುವದು. ಎಷ್ಟು ದಿವಸದ ಅಜೀರ್ಣವಿದ್ದರೂ ಮೂರೇ ದಿವಸಗಳಲ್ಲಿ ಗುಣವಾಗುವದು. ಕೇವಲ ವನಸ್ಪತಿಯಿಂದಲೇ ತಯಾರಿಸಿದ್ದ ಈ ಸಿದ್ಧೌಷಧವನ್ನು ಪ್ರತಿಯೊಬ್ಬನೂ ಅವಶ್ಯ ಸಂಗ್ರಹದಲ್ಲಿಡತಕ್ಕದ್ದು ಒಂದು ಡಬ್ಬಿಯ ಕಿಮ್ಮತ್ತು ೧೦ ಆ. ಬೇಕಾದವರು ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು. ಪೋಸ್ಟೇಜ ಬೇರೆ ನ್ಯಾ. ನಾ. ೧ ಆ.

ಏಜಂಟ— ಬಿ. ಬಿ. ಟಿಕಾರೆ ಭ್ಯಾಂಡ ನಂ, ಮಾರ್ಕೆಟರೋಡ ಧಾರವಾಡ.

ದಿ ಧಾರವಾಡ ಅರ್ಬನ ಕೋಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಬಂಡಿಗೆಯು ಏಳು ಲಕ್ಷದ ಮೇಲುಂಟು. ಚೆಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರ ನಡೆಸಲ್ಪಡುವದು. ಠೇವಿಗೆ ಮತ್ತು ಬೇರೆ ತರದ ಠೇವಣಿಗಳಿಗೆ ಹೆಚ್ಚಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮಾಧವರಾವ ಬ. ಜಕಾತಿ,
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಬ್ಯಾಂಕಿನಲ್ಲಿ ಮೂರು, ನಾಲ್ಕು ವರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಠೇವಣಿ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಪತ್ತೇ ಇಟ್ಟುಕೊಳ್ಳುವ ಬಡ್ಡಿಯ ಮಾಫ ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯುಂತಿರುತ್ತದೆ.

ಎ. ಕೆ. ಶೆಟ್ಟಿ
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣೀ ದರ.

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	೧೨–೮–೦ ರೂ.
೬ ,,	೬–೦–೦
೪ ,,	೪–೦–೦
ವಾರ ಪತ್ರಕ್ಕೆ ೧ ವರ್ಷಕ್ಕೆ	೨–೧೨–೦

ವಿಶೇಷ ಸೂಚನೆ ಕೆಳಗಿನ ವಿಳಾಸಕ್ಕೆ

ಮ್ಯಾ. ವಿಜಯ ಧಾರವಾಡ

ವಿಜಯ.

ಧಾರವಾಡ ತಾ- ೨೫-೮-೨೮ ನೇ ಇಸ್ವಿ

ಶ್ರೀ.

ಆ ವಿಜಯಂ ಶ್ರೀಶಪ್ರಿಯ |
ನೀ ವಸುಮತಿಯು ನಲಿಸಿರೆ ಸುಹಿತಚರಿತೆಗಳಿಂ ||
ದೀ " ವಿಜಯಂ " ಶ್ರೀಶಕರುಣ |
ನಾ ವಿಹಿತಂಗಳ ವಿಮಾಚನವಿಪ್ಪುದು ಸಾಜಂ ||೧||

ಧಾರವಾಡ ಡಿಸ್ಟ್ರಿಕ್ಟ-ಲೋಕಲಬೋರ್ಡಿನಲ್ಲಿ ಪುನಃ ಸ್ಕೂಲಬೋರ್ಡಿನ ಅ್ಯಡಮಿನಿಸ್ಟ್ರೆಟರರನ್ನು ಆರಿಸುವ ವಿಚಾರ.

ಹೋದ ಆಚೆಯ ರವಿವಾರ ಗತಿಸಿಯ ತಾರೀಖಿನ ದಿವಸ ಇಲ್ಲಿಯ ಡಿಸ್ಟ್ರಿಕ್ಟ ಲೋಕಲಬೋರ್ಡಿನ ಜನರಲ ಕಮಿಟಿಯು ಕೂಡಿ, ಸ್ಕೂಲ ಕಮೀಟಿಗಾಗಿ ಒಬ್ಬ ಅ್ಯಡಮಿನಿಸ್ಟ್ರೇಟರನ್ನು ನೇಮಿಸುವ ವಿಷಯ ಪುನಃ ಹೊರಟಿತು. ನ್ಯಾಯಿಕ ಪ್ರೆಸಿಡೆಂಟರಾದ ಶ್ರೀ. ದ್ಯಾವನಗೌಡಾ ಪಾಟೀಲರು ಅಧ್ಯಕ್ಷಸ್ಥಾನವನ್ನು ಸ್ವೀಕರಿಸಿದ್ದರು. ಈ ವಿಷಯವು ಸಾಮಾನ್ಯವಾದುದಲ್ಲ. ಒಮ್ಮೆ ಕೈಕೊಂಡಿಸಿ ಅವಲಕ್ಷಣ ಮಾಡಿಕೊಂಡದ್ದು. ಅದೇ ಪ್ರಕಾರದ ಅವಲಕ್ಷಣ ಅಪಹಾಸ್ಯವನ್ನು ಈಗಲಾದರು ಬೋರ್ಡಿನವರು ಮಾಡಿಕೊಳ್ಳಲಾರರೆಂದು ನಾಗರಿಕರು ಭಾವಿಸಿದ್ದರು. ಆದರೆ- ವೀರಶೈವರು ಬಹುಮತದ ಬಲದಿಂದ ಅವಲಕ್ಷಣ ಮತ್ತು ಅಪಹಾಸ್ಯದ ಮೊಟ್ಟೆಯನ್ನು ತಲೆಯ ಮೇಲೆ ಹೊತ್ತುಕೊಂಡರೆಂದು ನಿಶ್ಶಂಕೆಯಿಂದ ಬರೆಯಬೇಕಾಗಿದೆ.

ಸ್ಕೂಲ ಬೋರ್ಡಿನವರು ತಮ್ಮ ಕಡೆಗೆ ಬಂದಿದ್ದ ೫೦-೬೦ ಅರ್ಜಿಗಳನ್ನು ಸಾರಣಿಗೆಯಲ್ಲಿ ಹಾಕಿ, ಮೇಲೆ ಗಟ್ಟಿ ಕಾಳಾಗಿ ಉಳಿದ ಎಂಟು ಜನರ ಹೆಸರನ್ನು ಡಿಸ್ಟ್ರಿಕ್ಟ ಲೋಕಲಬೋರ್ಡಿಗೆ ಕಳಿಸಿದರ, ಇವರಲ್ಲಿ ಮಿ. ಹಂಚಿನಾಳ ಇವರ ಹೆಸರೇ ಇರಲಿಲ್ಲ !! ಏಕೆಂದರೆ- ಇವರಿಗೆ ಅ್ಯಡಮಿನಿಸ್ಟ್ರೇಟರಾಗುವಂಥ ಅರ್ಹತೆ ಇದ್ದಿಲ್ಲ. ಅಂಥ ಯೋಗ್ಯತೆಯುಂಟೆಂಬ ಆತ್ಮವಿಶ್ವಾಸವೂ ಅಗಿರಲಿಲ್ಲ. ಆದ್ದರಿಂದಲೇ ಅವರು ಕಳೆದ ಮೂರು ವರ್ಷಗಳಲ್ಲಿ ಅರ್ಜಿ ಮಾಡಲಿಲ್ಲೆಂದು ತಾನಾಗಿ ಹೇಳುವಂತಾಗುತ್ತದೆ. ವೀರಶೈವರಲ್ಲಿ ಬೇರೆ ಉಮೇದವಾರರಿದ್ದರೂ, ಅವರನ್ನು ಮೂಲೆಗೊತ್ತುವ ವಿಚಾರವನ್ನು ಬಹುಮತವುಳ್ಳ ವೀರಶೈವರು ಮಾಡಿ, ಮಿ. ಹಂಚಿನಾಳರ ರೊಟ್ಟಿಯು ತುಪ್ಪದಲ್ಲಿ ಬೀಳಬೇಕೆಂದು ಅವರ ಮೇಲೆ ಪ್ರಸನ್ನರಾಗಿ, ಅವರಿಂದ ಪರಭಾರೆ ಡಿಸ್ಟ್ರಿಕ್ಟ ಬೋರ್ಡಿಗೆ ಅರ್ಜಿ ಕೊಡಿಸಿದರು. ಅಥವಾ ಕೊಡುವಂತೆ ಮಾಡಿದರು. ಈ ಪ್ರಕಾರ ಅರ್ಜಿ ತಕೊಂಡದ್ದು ಸ್ಕೂಲ ಕಮೀಟಿಯ ಅಪಮಾನ ಮಾಡಿದಂತಾಗುವದಿಲ್ಲವೇ? ಸ್ವಾಭಿಮಾನವುಳ್ಳ ಯಾವ ಕಮಿಟಿಯೂ ತನಗೆ ತಿಳಿಯದೆ ಆಗುವ ಕಾರಭಾರದ ದೆಸೆಯಿಂದ ಸಂತಾಪಗೊಂಡು, ಡಿಸ್ಟ್ರಿಕ್ಟ ಲೋಕಲ ಬೋರ್ಡಿನ ಕೃತ್ಯವನ್ನು ನಿಷೇಧಿಸುವದಲ್ಲದೆ, ಅದರ ಮುಖಾಂತರವಾಗಿ ಬರುವ ಅ್ಯಡಮಿನಿಸ್ಟ್ರೇಟರನನ್ನು ಅಂಗೀಕರಿಸಲಾರದು. ಆದರೆ-ಬೆಲ್ಲದ್ದೇ ಗಣಪತಿ, ಬೆಲ್ಲದ್ದೇ ನೈವೇದ್ಯವಾಗಿರುವದರಿಂದ, ಸ್ಕೂಲಬೋರ್ಡ ಸುಮ್ಮನಿರುವದು. ಮತ್ತು ಹಿರಿಯಬೋರ್ಡಿನ ವಿರುದ್ಧ ತಕರಾರು ಮಾಡಿದರೆ- ತನ್ನ ತೊಡೆ ತೋರಿಸಿ, ತಾನೇ ಅಪಮಾನ ಮಾಡಿಕೊಳ್ಳುವಂತಿರುವದು.

ಬೋರ್ಡಿನ ಮೆಂಬರರು ಸ್ಕೂಲಬೋರ್ಡಿನ ಅಧಿಕಾರವನ್ನು ಬದಿಗೊತ್ತಿದಂತೆ ಕಮೀಟಿಯಲ್ಲಿ ನಡೆದ ಸಂಗತಿಗಳನ್ನು ಮುಚ್ಚಿಗೊತ್ತಿತು. ವ್ಯವಹಾರಜ್ಞಾನ ಅಥವಾ ಕೌಶಲ್ಯವೆಂಬುದು ಎಷ್ಟೂ ಇರಲಿಲ್ಲ. ಇದರ ಪ್ರದರ್ಶನವನ್ನು ತಂತಮ್ಮೊಳಗೇ ಮಾಡಿಕೊಳ್ಳಲಿಲ್ಲ. ಹೊರಗೆ ಡಂಗುರ ಸಾರಿದಂತೆ ಮಾಡಿಕೊಂಡರು. ವಿದ್ಯಾಖಾತೆಯ ಇನ್ಸಪೇಕ್ಟರರಾದ ಮೆ. ಖಾದ್ರಿಸಾಹೇಬರು, ದಿವಾನಬಹಾದ್ದೂರ ರೊದ್ದ ಶ್ರೀನಿವಾಸರಾಯರು ಮತ್ತು ಬೇರೆ ಪ್ರೇಕ್ಷಕರ ಮುಂದೆ ಮಾಡಿಕೊಂಡರು. ಅ್ಯಡಮಿನಿಸ್ಟ್ರೇಟರರ ವಿಷಯ ಕೊಂಡತಕ್ಕದ್ದದೆ. ಅಗ್ಗಿ ತಾವು ಅಗತ್ಯವಾಗಿ ಬಂದು, ತಮ್ಮ ಯೋಗ್ಯ ಸಲಹೆ ಹೇಳಬೇಕೆಂದು ಬೋರ್ಡಿನವರು ಮುಂದಾಗಿ ಮೆ. ಖಾದ್ರಿಸಾಹೇಬರಿಗೆ ಆಮಂತ್ರಣ ಪತ್ರ ಕಳಿಸಿದ್ದರು. ಆ ಪ್ರಕಾರ ಸಾಹೇಬರು ಅಂದು ಬೆಳಗಾವಿಯಿಂದ ಸ್ಪೇಶಲ್ಲಾಗಿ ಸಭೆಗೆ ಬಂದರು. ಮೂರು ವರ್ಷವಾಯಿತು. ಅ್ಯಡಮಿನಿಸ್ಟ್ರೇಟರರನ್ನು ನೇಮಿಸಿಲ್ಲ. ಎರಡು ತಿಂಗಳಲ್ಲಿ ನೇಮಿಸಲಿಕ್ಕೆಬೇಕೆಂದು ಮೆ. ಡಾಯರೆಕ್ಟರಸಾಹೇಬರು ಬೋರ್ಡಿಗೆ ತಾಕೀತು ಕೊಟ್ಟಿದ್ದರು. ಆ ಪ್ರಕಾರ ಯಾವನೊಬ್ಬನನ್ನು ನೇಮಿಸುವದು ಬೋರ್ಡಿಗೆ ಅಂದು ಅನಿವಾರ್ಯವಾಗಿತ್ತು. ಅಧ್ಯಕ್ಷರಾದ ಶ್ರೀ. ದ್ಯಾವನಗೌಡಾ ಪಾಟೀಲರು ಈ ಸಂಗತಿಯನ್ನು ಕಮಿಟಿಯ ಮೆಂಬರರ ಮುಂದೆ ಒತ್ತಿ ಹೇಳಿದನಂತರ ಮೆ. ಖಾದ್ರಿಸಾಹೇಬರಿಗೆ ಇದೇ ವಿಷಯವಾಗಿ ನಾಲ್ಕು ಮಾತುಗಳನ್ನು ಹೇಳುವಂತೆ ವಿನಂತಿ ಮಾಡಿಕೊಂಡರು. ಸಾಹೇಬರು ಮೊದಲನೆಯ ವಾಕ್ಯದಲ್ಲಿಯೇ ಸ್ಕೂಲ ಬೋರ್ಡಿಗೆ ಬಹುಮಾನದ ಶಾಲುಜೋಡು ಕೊಟ್ಟರು. ಸ್ಕೂಲಬೋರ್ಡಿನ ಆಡಳಿತೆಯು ದಿನದಿನಕ್ಕೆ ಹೆಚ್ಚೆಚ್ಚು (bad to worse) ಕೆಡುತ್ತಾ ನಡೆದದೆ. ಆದ್ದರಿಂದ ಅನುಭವಿಕರಾದಂಥವರನ್ನೇ ನೇಮಿಸಿರೆಂಬ ಉಪದೇಶ ಮಾಡಿದರು. ಇಷ್ಟು ಸರ್ಟಿಫಿಕೇಟು ದೊರೆತರೂ ಮಿ. ಹಂಚಿನಾಳರನ್ನೇ ನೇಮಿಸಿಕೊಳ್ಳಬೇಕೆಂಬ ಬಹುಮತದ ಬಲವುಳ್ಳ ವೀರಶೈವರ ಪೂರ್ವ ನಿಶ್ಚಯದಲ್ಲಿ ಕಿಂಚಿತ್ತಾದರೂ ಬದಲಾಗಲಿಲ್ಲ. ಬೇರೆ ಉಮೇದವಾರರ ಯೋಗ್ಯತೆಯ ಪರೀಕ್ಷೆ ಮಾಡಬೇಕೆಂಬ ದ್ರವವೂ ಕಿಂಚಿತ್ತಾದರೂ ಹುಟ್ಟಲಿಲ್ಲ. ಇರಲಿ; ಮೆ. ಖಾದ್ರಿಸಾಹೇಬರು ಮೇಲಿನ ಸರ್ಟಿಫಿಕೇಟು ಕೊಟ್ಟು ಒಳ್ಳೆ ಸರಳರೀ ಕಾಮದಾರರನ್ನು ನೇಮಿಸಿಕೊಂಡರೆ- ನಿಮಗೆ ಆತನ ಪೂರ್ಣ ಸಂಬಳ ದೊರೆಯುವದು. ಕೆಲವುಟ್ಟಿಗೆ ಬೋರ್ಡಿನ ಭಾರ ಕಡಿಮೆಯಾಗುವದೆಂದು ಎರಡನೇ ಸೂಚನೆ ಮಾಡಿದರು. ಆಗಿಂದಾಗ ಈ ಸೂಚನೆಯು ಕಮೀಟಿಯ ಮುಂದೆ ಬಾಂಬಿನಂತೆ ಬೀಳಲಿಲ್ಲ. ಅಧ್ಯಕ್ಷರಾಗಿದ್ದ ಮಿ. ಮುಲಕೋಟಿಯವರೇ ಈ ಪ್ರಕಾರ ವಿದ್ಯಾಖಾತೆಯ ಅಧಿಕಾರಿಗಳ ಕಡೆಗೆ ಬರೆದು ಕಳಿಸಿದ್ದರು. ವಿದ್ಯಾಖಾತೆಯಿಂದ ಬರುವ ಅನುಭವಿಕ ಗೃಹಸ್ಥರ ಸಂಬಳವು ೨೫೦ ಆಗುವದು. ಈಗ ನೀವು ಕೊಡುವ ಸಂಬಳವು ಮೂರು ನೂರು ಆಗಿದೆ. ಕಾರಣ ಸದ್ಯ ಈ ವಿಚಾರವನ್ನು ರಹಿತ ಮಾಡಬೇಕು. ಸಪ್ಟಂಬರದ ಕೊನೆಯ ತನಕ ಮುದ್ದತ್ತುಂಟು. ಅಷ್ಟರೊಳಗಾಗಿ ವಿದ್ಯಾಖಾತೆಯವರ ಅರ್ಜಿಗಳನ್ನು ತರಿಸಿಕೊಳ್ಳಬಹುದೆಂದೂ ಈಗಿನ ಕಮೀಟಿಯನ್ನು ತಹಕೂಬ ಮಾಡಬೇಕೆಂದೂ ಮೆ. ಖಾದ್ರಿಸಾಹೇಬರು ಹೇಳಿದ್ದನ್ನು ದಿವಾನಬಹಾದ್ದೂರ ರೊದ್ದರಾಯರು ಠರಾವಿನ ರೂಪದಿಂದ ಕಮೀಟಿಯ ಮುಂದಿಟ್ಟರು. ಧಾರವಾಡ ಮ್ಯುನಿಸಿಪಾಲಿಟಿಯ ಅಧ್ಯಕ್ಷರಾದ ಶ್ರೀ. ಹನಮಂತರಾವ ದೇಸಾಯಿಯವರಂಥ ದೊಡ್ಡ ಮನುಷ್ಯರು ಅದನ್ನು ಅನುಮೋದಿಸಿದರು. ಆದರೆ ಯಾವದೊಂದು ಪೂರ್ವ ಗ್ರಹ ಮಾಡಿಕೊಂಡಿದ್ದಂಥ ಮೆಂಬರರ ಮೇಲೆ ಈ ಠರಾವಿನ ಪರಿಣಾಮವೇನೂ ಆಗಲಿಲ್ಲ. ಅದು ಬಹುಮತದಿಂದ ನಾಪಾಸಾಯಿತು. ಸ್ಕೂಲಬೋರ್ಡಿನ ಚೇರಮನ್ನರಾದ ಮಿ. ಹೊಸಮನಿಯವರು ಅ್ಯಮಿನಿಸ್ಟ್ರೇಟರ ನೇಮಣೂಕಿಯ ಘಸ್ಸಿನ ಫಜೀತಿಯನ್ನು ತಪ್ಪಿಸಿಕೊಳ್ಳಬೇಕೆಂದು ಸ್ಕೂಲ ಬೋರ್ಡಿನ ಶಿಫಾರಸ್ಸಿನ ಪ್ರಕಾರ ಮೊದಲನೆಯ ನಂಬರದಲ್ಲಿದ್ದ ಬೆಂಗಳೂರಿನ ಮಿ. ರಾಮಚಂದ್ರನ್ನ ಹಾಗು ಮಿ. ಹಂಚಿನಾಳ ಈ ಎರಡೂ ಹೆಸರನ್ನು ಡಾಯರೆಕ್ಟರ ಸಾಹೇಬ ಕಡೆಗೆ ಕಳಿಸಬೇಕು. ಅವರು ಬೇಕಾದವರನ್ನು ನೇಮಿಸಿಕೊಳ್ಳಲೆಂದು ಠರಾವನ್ನು ತೈ-

ಗೆವರು. ಇದೂ ರಾ. ಬ. ಕಂಬಳಿ ಮೊದಲಾಗಿ ಪ್ರಧಾನ ವೀರಶೈವ ಗೃಹಸ್ಥರಿಗೆ ಒಪ್ಪಿಗೆಯಾಗಲಿಲ್ಲ. ಆ ಬಳಿಕ, ಸ್ಕೂಲಬೋರ್ಡಿನ ವ್ಹಾಯಿಸ ಚೇರಮನ್ನರಾದ ಮಿ. ಗಿರಿಮಲ್ಲಪ್ಪಾ ನಲವಡಿಯವರು ಮಿ. ಹಂಚಿನಾಳರನ್ನು ಅ್ಯಡಮಿನಿಸ್ಟ್ರೇಟರರಾಗಿ ನೇಮಿಸಬೇಕೆಂಬ ಠರಾವು ತಂದರು. ಹುಳಕೇರಿಯ ಮಿ. ನಾಗಪ್ಪ ಗುಂಡಪ್ಪ ಇನಾಮತಿಯವರು ಅನುಮೋದನ ಕೊಟ್ಟರು. ಈ ಠರಾವು ಸಹಜವಾಗಿ ಪಾಸಾಯಿತು. ಹೋಟು ಕೊಟ್ಟವರಲ್ಲಿ [illegible] ಜನರು ವೀರಶೈವರೇ ಇದ್ದಾರೆ.

ಈ ಪ್ರಕಾರ ಆದ ನೇಮಣೂಕಿಯ ಫಾರ್ಸನ್ನು ನೋಡಿ, ಮೆ. ಶಾದ್ರಿಸಾಹೇಬರು ಚಕಿತರಾಗಿರಬಹುದು. ರಾ. ಬ. ಕಂಬಳಿ ಪ್ರಭೃತಿಗಳು ಬ್ರಾಹ್ಮಣೇತರ ಪಕ್ಷ [illegible] ದು ಡಂಗೆ ಹೊಡೆಯುತ್ತಿದ್ದರೂ, ಬ್ರಾಹ್ಮಣೇ[illegible]ರಲ್ಲಿ ಮೊದಲು ಸ್ವಜಾತಿಯ ಅಭಿಮಾನ ನೆ[illegible]ತ್ತಾರೆಂದು ಮೆ. ಶಾದ್ರಿಸಾಹೇಬರಿಗೆ ಪ್ರ[illegible] ಪ್ರಮಾಣವಾಗಿ ಕಂಡುಬಂದಿರಬಹುದು. [illegible]ರರಲ್ಲಿ ಒಬ್ಬ ಮುಸಲಮಾನ ಗೃಹಸ್ಥ[illegible] ಇದ್ದಾರೆ. ಇವರ ಹೆಸರೇ ಕೊರಡ ಲಿಲ್ಲ. [illegible] ಒಂದು ಅವರಿಗೆ ವಿಷಾದವೆನಿಸದೆ ಹೋಗಲಿಕ್ಕಿ[illegible]. ಈ ಚುನಾವಣೆಯು ಯೋಗ್ಯವೋ? ಅಯೋಗ್ಯವೋ? ಎಂಬ ವಿಷಯವಾಗಿ ನಾವು ಈ ಮೊದಲ[illegible] ಒಂದು ಸಪ್ರಮಾಣ ಲೇಖ ಬರೆದಿದ್ದೇವೆ. [illegible] ಲೇಖದ ಪ್ರತಿಯೊಂದು ಶಬ್ದವು ಸತ್ಯವಾಗಿರುತ್ತ[illegible]ಂದು ಈಗ ಅವರಿಗೆ ಅನಿಸಿದರೆ ಸಾಕು.

—

ಇದೇ ಬೋರ್ಡಿನಲ್ಲಿ, ಅದೇ ವೇಳೆಯಲ್ಲಿ ನಡೆದ ಇನ್ನೊಂದು ಚಮತ್ಕಾರ

ಮಿ. ಹಂಚಿನಾಳರನ್ನು ಬಹುಮತದಿಂದ ಅ್ಯಡಮಿನಿಸ್ಟ್ರೇಟರ ಮಾಡುವಾಗ, ಬೆಂಗಳೂರಿನ ಮಿ. ಕಾಮಚಂದ್ರನ್ನರನ್ನೂ ನೇಮಿಸಬೇಕೆಂಬ ಠರಾವು ಬಂತು. ಆದರೆ ಅದು ವೀರಶೈವರ ಹಾಗೂ ಅವರ ಹಿಮ್ಮೇಳರಾಗಿರುವಂಥವರ ಮತಗಳಿಂದ ಪಾಸಾಗಲಿಲ್ಲವೆಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಮಿ. ಹಂಚಿನಾಳರನ್ನು ಅ್ಯಡಮಿನಿಸ್ಟ್ರೇಟರರಾಗಿ ನೇಮಿಸಬೇಕೆಂಬ ಠರಾವು ಪಾಸಾದ ಕೂಡಲೆ ಮಿ. ಗಿರಿಮಲ್ಲಪ್ಪಾ ನಲವಡಿಯವರು ಇನ್ನೊಂದು ಠರಾವ ಮಾಡಿದರು. ಬೋರ್ಡಿನಲ್ಲಿ ಠರಾವಾದರೂ, ಮಂಜೂರ ಮಾಡುವದು ಡಾಯರೆಕ್ಟರ ಮುಖಾಂತರ ಮಂತ್ರಿಯ ಕೆಲಸವಷ್ಟೇ; ಹಿಂದಿನವರಾದ ಮಿ. ಬೆಟಗೇರಿಯವರಂತೆ ಮಿ. ಹಂಚಿನಾಳರಿಗೂ ಸ್ಕೈಗೆ ಬಂದ ತುತ್ತು ಬಾಯಿಗೆ ಬಂದಂತಾಗಬಾರದೆಂಬ ಹೆದರಿಕೆಯಿಂದ ಆ ಠರಾವನ್ನು ತಂದರು. ಈಗಿನ ಪ್ರೆಸಿಡೆಂಟರಾದ ಮಿ. ದ್ಯಾವನಗೌಡಾ ಪಾಟೀಲರು ಕಳಿಸಬಾರದೆಂದೂ, ಹೊಸ ಪ್ರೆಸಿಡೆಂಟರ ಚುನಾವಣೆಯಾದ ಬಳಿಕ, ಅವರು ಡಾಯರೆಕ್ಟರರ ಕಡಿಗೆ ಕಳಿಸಬೇಕೆಂದೂ ಠರಾವು ತಂದರು. ಪ್ರೆಸಿಡೆಂಟರಾಗತಕ್ಕವರು ವೀರಶೈವರೇ? ರಾ. ಬ. ಕಂಬಳಿಯಾಗಬಹುದು. ಅಥವಾ ಮಿ. ಹೊಸಮನಿಯಾಗಬಹುದು. ಇಬ್ಬರೂ ಮಿ. ಹಂಚಿನಾಳರನ್ನು ಉಬ್ಬಿಸಿದ ಸಿದ್ಧಾಂತದ ಪಕ್ಷ[illegible]ವರು, ಠರಾವು ಕಳಿಸುವರು. ಅದು ತಾನಾಗಿ ಸಹಜವಾಗಿ ಒಪ್ಪಿಗೆಯಾಗುವದು. ಈಗಿನ ಪ್ರೆಸಿಡೆಂಟರು ಕೈಗಂಟು ಹಾಕಿದ್ದರೂ, ಕಮೀಟಿಯಲ್ಲಿ ಮೆ. ಶಾದ್ರಿಸಾಹೇಬ[illegible] ಮುಂದೆ ನಡೆದದ್ದನ್ನು ಠರಾವೂಪದಿಂದ ಬರೆದು ಕಳಿಸಬಹುದು. ಆದರಿಂದ ತನ್ನ ಭಟ್ಟಿಯು ಕೆಟ್ಟು ಹೋಗುವದೆಂದು ಮಿ. ಗಿರಿಮಲ್ಲಪ್ಪನವರಿಗೆ ಆಗ ಹೊಳೆದು, ಮೇಲೆ ಹೇಳಿದಂಥ ಕುಚೋದ್ಯದ ಠರಾವು ತಂದರು. ಮಿ. ಗಿರಿಮಲ್ಲಪ್ಪನವರು ಸದ್ಯದಲ್ಲಿ ಸ್ಕೂಲಕಮೀಟಿಯ ವ್ಹಾಯಿಸ ಚೇರಮನ್ನರಿದ್ದಾರೆ. ಎಷ್ಟೋ ಪ್ರಸಂಗಗಳಲ್ಲಿ ಚೇರಮನ್ನರ ಗೈರ ಹಾಜರಿಯಲ್ಲಿ ತಾವು ಚೇರಮನ್ನರಾಗಿ ಕೆಲಸ ನಡಿಸುವರು. ಆ ಕಾಗದಪತ್ರಗಳನ್ನು ಚೇರಮನ್ನರು ಬರುವ ತನಕ ತಡೆಯುವರೇ? ಕಾಯದೆ ಪ್ರಕಾರ ನಡೆಯುವ ಯಾವತೊಂದು ವಿಷಯದಲ್ಲಿ ಕೂಡ ವ್ಯವಹಾರ ಅಥವಾ ಬುದ್ಧಿಶೂನ್ಯತೆ ಲಕ್ಷಣವೆನಿಸುವಂಥ ಕೃತ್ಯ ಮಾಡಿ, ಮಿ. ಗಿರಿಮಲ್ಲಪ್ಪನವರು ಮೆ. ಶಾದ್ರಿಸಾಹೇಬರಂಥ [illegible] ಅಧಿಕಾರಸ್ಥರ ಮುಂದೆ ಉಪಹಾಸ ಮಾಡಿಕೊಂಡದ್ದು ನಮಗಂತೂ ಸಮಂಜಸವೆನಿಸಲಿಲ್ಲ. ಅಧ್ಯಕ್ಷರಾದ ಮಿ. ದ್ಯಾವನಗೌಡರು ಈ ಹುಚ್ಚ ಠರಾವನ್ನು ಕಮೀಟಿಯ ಮುಂದೆ ತರಗೊಡಲಿಲ್ಲ. ಶ್ರೀ ಗೌಡರು ಈ ಸಮಯದಲ್ಲಿ ಯೋಗ್ಯ ಕರ್ತವ್ಯ ಮಾಡಿದರೆಂತಲೇ ತಿಳಿಯುತ್ತೇವೆ. ಮಿ. ಗಿರಿಮಲ್ಲಪ್ಪನವರು ಶ್ರೀ. ಪಾಟೀಲರಿಗೆ ಹೆದರುವದಕ್ಕಿಂತ ಮೆ. ಶಾದ್ರಿಸಾಹೇಬರಿಗೆ ಹೆದರಿ ಯೋಗ್ಯ ಮನುಷ್ಯನನ್ನೇ ಅ್ಯಡಮಿನಿಸ್ಟ್ರೇಟರರಾಗಿ ಆರಿಸಬೇಕಾಗಿತ್ತು. ಮಿ. ಪಾಟೀಲರ ರಿಪೋರ್ಟಿಗಿಂತ ಮೆ. ಶಾದ್ರಿ ಸಾಹೇಬರ ರಿಪೋರ್ಟೇ ತಮ್ಮ ಠರಾವಿಗೆ ಪ್ರಾಣಾಂತಿಕವಾಗುವದೆಂದು ತಿಳಿಯಬಹುದಾಗಿತ್ತು. ಪಕ್ಷಾಂಧರಾದಂಥವರಿಗೆ ವಿವೇಕ ಜ್ಞಾನವಾಗುವದು ಹೇಗೆ?

ಮ್ಯುನಿಸಿಪಾಲಿಟಿಯ ವೆಚ್ಚವನ್ನು ಹೇಗೆ ಕಡಿಮೆ ಮಾಡಬೇಕು; ಹೊಸ ಕರವನ್ನು ಹೇಗೆ ಕೂಡಿಸಬೇಕು; ವ್ಯಾಪಾರ ಉನ್ನತಿ ಮಗೆ ಕೊಂಡರೆ ಬರದಂತೆ ಹೊಸದಾಗಿ ದ್ರವ್ಯಾರ್ಜನೆ ಹೇಗೆ ಮಾಡಬೇಕೆಂದು ನಿಬಂಧ ಬರೆಯಬೇಕು. ಉತ್ತಮ ಪ್ರತಿಯ ನಿಬಂಧಕ್ಕೆ ೩೦೦ ರೂಪಾಯಿ ಇನಾಮು ದೊರೆಯುವದೆಂದು ದಿಲ್ಲಿಯ ಮ್ಯುನಿಸಿಪಾಲಿಟಿಯವರು ನೋಟೀಸು ಪ್ರಸಿದ್ಧ ಮಾಡಿದ್ದಾರೆ.

ನಾಯಕನಾನಿಗೆ ಮೊದಲ ಕೊಟ್ಟ ಬಗ್ಗೆ ಶಿಕ್ಷಕನಿಗೆ ಬರತರ್ಫ.

ಜಾರಾಮತಿಯಲ್ಲಿ [illegible] ಸಮಾರಂಭವು [illegible] ಗಾಯನವಾಯಿತು. ಅಲ್ಲಿಯ ಶಿಕ್ಷಕ ಸಂಘ[illegible]ರು ಇವಳ ಗಾಯನ[illegible] ಅಭಿನಯಕ್ಕೆ ಪ್ರಶಂಸೆ ಮೆಚ್ಚಿ, ಮ್ಯುಡಲಾಗಿ [illegible] ಒಂದು ಬಂಗಾರದ ಪದಕವನ್ನು ಬಹುಮಾನವಾಗಿ ಕೊಟ್ಟರು. [illegible]ಮತಿಯ ಶಿಕ್ಷಕ ಸಂಘದವರು ಬಹುಮಾನಸ್ವರೂಪವಾಗಿ ಕೊಟ್ಟಿಂತ ಪದಕ ಒಂದು ಅದರ ಮೇಲೆ ಬರೆದಿದ್ದರು. ಈ ಸಮಾರಂಭವಾದ ಬಳಿಕ, ಮ್ಯುನಿಸಿಪಾಲಿಟಿಯ ಅಧ್ಯಕ್ಷರು ಸ್ಕೂಲ[illegible]ರಮನ್ನರ ವಿದ್ಯಮಾನ ಮೊದಲಿನ [illegible] ಕೊಡುವ ಇವರಿಂದ [illegible] ಮತ್ತು [illegible]ದ ಕೃತ್ಯವಾಯಿತೆಂದು [illegible] ಶಿಕ್ಷಕರಿಗೆ ಎರಡೆರಡು ರೂಪಾಯಿ ದಂಡ ಮಾಡಿ, [illegible] ಕ್ಷಮೆ ಬರಿಸಿಕೊಂಡರು. [illegible] ಮಾಸ್ತರರು ಮೊದಲು [illegible] [illegible], ಅದು ಬಲಾತ್ಕಾರದಿಂದ [illegible], ಸ್ಕೂಲಬೋರ್ಡಿಗೆ ಬೇಕಾಯದೆಶೀರ[illegible] ಅದಕ್ಕೆ ಸಸ್ಪೆಂಡ, ಮತ್ತು ದಂಡ ಮಾಡುವ ಅಧಿಕಾರವಿಲ್ಲೆಂದು ಪ್ರತಿಯಾಗಿ ವಾದಿಸಿದರು. ಬೋರ್ಡಿನವರು ಇದು ಉದ್ಧಾಮ[illegible] ವರ್ತನವೆಂದು ಆರೋಪಿಸಿ, ಇವರನ್ನು ಬರತರ್ಫ ಮಾಡಿದರು. ಬರತರ್ಫ ಮಾಡಿದ ಬಗ್ಗೆ ಕಾಸಿಟಕರರು ದಿವಾಣಿ ಕೋರ್ಟಿನಲ್ಲಿ ದಾವೆ ತಂದರು. ಅಲ್ಲಿ ಬೋರ್ಡಿನ ಅಸ್ತಿತ್ವದ ಬಗ್ಗೆ ನಂಶಯ ಬಂದು, ಬೋರ್ಡಿಗೆ ಕಾಸಿಟಕರನ್ನು ಬರತರ್ಫ ಮಾಡುವ ಅಧಿಕಾರವಿಲ್ಲೆಂದು ತೀರ್ಪು ಹೇಳಲ್ಪಟ್ಟಿತು. ಇವರ ಮೇಲೆ ಬೋರ್ಡಿನವರು ಅಪೀಲು ಮಾಡಿದರು. ಮೊದಲಿನ ಬೋರ್ಡು ಅಕ್ರಮವಾಗಿದ್ದರೂ, ಕಾಯದೆ ಪ್ರಕಾರ ಆದಂಥ ಎರಡನೆಯ ಬೋರ್ಡು ಬರತರ್ಫಿನ ಠರಾವನ್ನು ಪುನಃ ಪಾಸ ಮಾಡಿದ್ದರಿಂದ, ಕಾಸಿಟಕರರಿಗೆ ಬರತರ್ಫದಿದ್ದೇ ಯೋಗ್ಯವೆಂದು ಜಡ್ಜರು ತೀರ್ಪು ಹೇಳಿದ್ದಾರೆ.

—

ಸ್ವರ್ಗವಾಸಿ ಗುರುನಾಥರಾಯರ ನಿಧನ.

ಕೆಲವು ಮಹತ್ವದ ಸಂಗತಿಗಳು.

—(೦)—

ಸ್ವರ್ಗವಾಸಿ ಗುರುನಾಥರಾಯರ ನಿಧನವಾದ ನಂತರ ಸ್ಮಶಾನಯಾತ್ರೆಗೆ ಹೊರಟಾಗ ಭಜನೆ ನಡೆಯಿತು. ದಾರಿಗುಂಟ ಜನರು ಪುಷ್ಪವೃಷ್ಟಿ ಮಾಡಿದರು.

—

ರುದ್ರಭೂಮಿಯಲ್ಲಿ ಛಾಯಾಪಟ ತಕ್ಕೊಂಡರು ತಮ್ಮ ಫೋಟೋ ತೆಗೆಯಬಾರದೆಂದು ಜೀವಂತವಿ

ಧಾರವಾಡ—

ಮಂತ್ರಾಲಯದಲ್ಲಿ ಮಳೆಯು ಉತ್ತಮವಿದೆ. ಯಾವ ರೋಗಬಾಧೆಯೂ ಇಲ್ಲ. ಭಾವಿಕರು ಅವಶ್ಯ ಬರಬೇಕೆಂದು ಅಲ್ಲಿಂದ ಈಯೂರ ಶ್ರೀ ನಾಮ ಶೇಷಯರಿಗೆ ಪತ್ರ ಬಂದಿರುತ್ತದೆ.

—

ನಿನ್ನೆ ಸಾಯಂಕಾಲದಲ್ಲಿ ಇಲ್ಲಿಯ ಸದರ್ನ ಮರಾಠಾ ಬ್ಯಾಂಕಿನ ಆಟ್ಟದ ಮೇಲೆ ಸಾರ್ವಜನಿಕ [illegible] ಸ್ವರ್ಗವಾಸಿ ಗುರುನಾಥರಾಯರ ವ್ಯಕ್ತಿಯ [illegible] ದುಃಖಪ್ರದರ್ಶನ ಮಾಡಲ್ಪಟ್ಟಿತು.

—

ಒಕ್ಕಲಿಗರೂ ಒಕ್ಕಲತನವೂ

ನಮ್ಮ ಮಾಸ ಪತ್ರಿಕೆಯು ಈಗ ಸುಮಾರು ೧೬ ವರ್ಷಗಳಿಂದ ದೇಶ ಭಿಮಾನಿಗಳ ಸೇವೆಯನ್ನು ಮಾಡಿ ಯಾವತ್ತು ಜನರ ಆದರಕ್ಕೆ ಪಾತ್ರವಾಗಿರುವದು. ಇತ್ತೀಚೆಗೆ ಒಕ್ಕಲತನದ ಬೆಳೆಯು ನಮ್ಮ [illegible] ವಿಷಯಗಳೂ ಅಂದವಾದ ಮುದ್ರಣವೂ ಇರುವದರಿಂದ ವಾಚಕರ ಮನಸ್ಸನ್ನು ತನ್ನ ಕಡೆಗೆ ಎಳೆಯುವೆ ಎಂದೂ ಬಿಡದು. ಕೃಷಿಕರ್ಮವೇ ಶ್ರೇಷ್ಠವಾದದ್ದೆಂದು ಸರ್ವ ಸಮ್ಮತವಿರುವದರಿಂದ ಈ ವಿಷಯಕ್ಕೆ ಅನಾದರವನ್ನು ತೋರಿಸದೆ, ಇಂಥ ಮಾಸಪತ್ರಿಕೆಗಳನ್ನು ಆದರಿಸಬೇಕೆಂದು ನಮ್ಮ ಅಗ್ರಹಪೂರ್ವಕ ವಿನಂತಿ. ವಾರ್ಷಿಕ ಚಂದಾ [illegible] ೧-೨-೦

ಸಂಪಾದಕ
ಒಕ್ಕಲಿಗರೂ ಒಕ್ಕಲತನವೂ
ಧಾರವಾಡ

—

ಪುನರ್ವಿವಾಹವಾಗಲಪೇಕ್ಷಿಸುವ ಯುವತಿಯರಿಗೆ

ಸುಸಮಯ

ವಿ. ಆರ್. ಶ್ರೀನಿವಾಸಯ್ಯಂಗಾರ್, ಗೌರವ ಕಾರ್ಯದರ್ಶಿ, ವಿಧವಾ ವಿವಾಹ ಸಹಾಯಕ ಸಭಾ, (ಕೊಳ್ಳೇಗಾಲ ಬ್ರಾಂಚ್) ಕೊಳ್ಳೆಗಾಲ ಇವರಿಗೆ ಬರೆದು ತಿಳಿದುಕೊಳ್ಳಿರಿ.

—

ಚಂದಾದಾರರಿಗೆ ಸೂಚನೆ

